www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ವಿದೇಶಿ ಭಾಷೆ ಕಲಿಕೆ ಯಾಕೆ?



ಆಳ-ಅಗಲ
ಪ್ಯಾನ್ 2.0: ತೆರಿಗೆದಾರರ ನೋಂದಣಿ ಸೇವೆಗಳ ಹೊಸ ರೂಪ

ಆರು ತಿಂಗಳಲ್ಲಿ 29 ಬಾಣಂತಿ, 322 ಶಿಶುಗಳ ಸಾವು 6

‘ದೆಹಲಿ ಚಲೋ’ಗೆ ಪೊಲೀಸರಿಂದ ಮತ್ತೆ ಅಡ್ಡಿ 7

ಕಸಾಪ ಸ್ಪಂದಿಸದಿದ್ದರೆ ಮನೆಗೊಂದು ಕೋಳಿ ಸಂಗ್ರಹಿಸುವ ಅಭಿಯಾನ

‘ನಾವೇ ಬಾಡೂಟ ಹಾಕಿಸ್ತೀವಿ’ 5

ಲಾಭಾಂಶದ ಮೇಲೆ ಸರ್ಕಾರದ ಕಣ್ಣು

ಉದ್ದಿಮೆಗಳ ಶೇ 30 ವಿಶೇಷ ಲಾಭಾಂಶಕ್ಕೆ ಒತ್ತಡ • ಶೇ 12ರಿಂದ 30ಕ್ಕೆ ಏರಿಸಿದ್ದ ಬಿಜೆಪಿ ಸರ್ಕಾರ

• ಎಸ್.ರವಿಪ್ರಕಾಶ್

ಬೆಂಗಳೂರು: ಸಾರ್ವಜನಿಕ ಉದ್ದಿಮೆಗಳು ತಮ್ಮ ಉಳಿತಾಯದ ಠೇವಣಿಗಳಿಂದ ವಿಶೇಷ ಲಾಭಾಂಶ ಎಂದು ಶೇ 30ರಷ್ಟು ಮೊತ್ತವನ್ನು ಖಜಾನೆಗೆ ವರ್ಗಾಯಿಸಬೇಕು ಎಂದು ರಾಜ್ಯ ಸರ್ಕಾರ ಸುತ್ತೋಲೆ ಹೊರಡಿಸಿದ್ದು, ಇದು ಉದ್ದಿಮೆಗಳನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಲಾಭದಲ್ಲಿರುವ ಸಾರ್ವಜನಿಕ ಉದ್ದಿಮೆಗಳು ನಷ್ಟದಲ್ಲಿರುವ ಸಾರ್ವಜನಿಕ ವಲಯದ ಉದ್ದಿಮೆಗಳಿಗೆ ಸಾಲದ ರೂಪದಲ್ಲಿ ಹಣ ನೀಡಬೇಕು. ಅದಕ್ಕೆ ಬಡ್ಡಿ ನೀಡಲಾಗುವುದು ಎಂದು ಸಚಿವ ಸಂಪುಟ ಸಭೆ ಇತ್ತೀಚೆಗೆ ತೀರ್ಮಾನ ತೆಗೆದುಕೊಂಡಿದೆ. ಅದರ ಬೆನ್ನಲ್ಲೇ, ವಿಶೇಷ ಲಾಭಾಂಶದ ರೂಪದಲ್ಲಿ ಮತ್ತಷ್ಟು ಮೊತ್ತವನ್ನು ಕಸಿಯುವ ಸರ್ಕಾರದ ಸುತ್ತೋಲೆ ಉದ್ದಿಮೆಗಳನ್ನು ಅಡಕತ್ತರಿಯಲ್ಲಿ ಸಿಲುಕಿಸಿದೆ.

ಸಾರ್ವಜನಿಕ ವಲಯದ ಉದ್ದಿಮೆಗಳು ವಾರ್ಷಿಕ ಶೇ 30 ಲಾಭಾಂಶ (ಡಿವಿಡೆಂಡ್) ಪಾವತಿಸುತ್ತಿವೆ. ಹಿಂದೆ ಇದು ಶೇ 12 ಇತ್ತು. ಅದನ್ನು ಬಿಜೆಪಿ ಸರ್ಕಾರವಿದ್ದಾಗ 2022ರಲ್ಲಿ ಶೇ 30ಕ್ಕೆ ಏರಿಸಲಾಗಿದೆ.

‘ರಾಜ್ಯದಲ್ಲಿಒಟ್ಟು 140 ರಾಜ್ಯ ಸರ್ಕಾರಿ ಸ್ವಾಮ್ಯದ ಉದ್ದಿಮೆಗಳಿವೆ. ಈ ಪೈಕಿ 19 ಲಾಭದಲ್ಲಿ ನಡೆಯುತ್ತಿವೆ’ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

‘ಸರ್ಕಾರದ ಸುತ್ತೋಲೆ ಕಂಪನಿಗಳ ವಿಸ್ತರಣಾ ಚಟುವಟಿಕೆ ಮೇಲೆ ಪರಿಣಾಮ ಬೀರುತ್ತದೆ. ಕಾಲ- ಕಾಲಕ್ಕೆ ಈ ಕಂಪನಿಗಳು ಆಧುನೀಕರಣಕ್ಕೆ ಒಗ್ಗಿಕೊಳ್ಳದೇ ಹೋದರೆ ಕಂಪನಿಗಳು ನಷ್ಟಕ್ಕೀಡಾಗುವುದು ನಿಶ್ಚಿತ. ಹಲವು ಸಂಸ್ಥೆಗಳಲ್ಲಿ ಸಿಬ್ಬಂದಿ ವೇತನ, ಪಿಂಚಣಿ ಪಾವತಿಗೂ ಕಷ್ಟವಾಗಿರುವುದರಿಂದ ಈ ಕಂಪನಿಗಳು ಸರ್ಕಾರಕ್ಕೆ ಎಲ್ಲಿಂದ ಹಣ ಕೊಡಬೇಕು’ ಎಂದು ಅವರು ಪ್ರಶ್ನಿಸಿದರು.

‘ಬಹುಪಾಲು ಸಾರ್ವಜನಿಕ ಉದ್ದಿಮೆಗಳು ತಮ್ಮ ಸಂಪನ್ಮೂಲದಿಂದಲೇ ವೇತನ, ಪಿಂಚಣಿ ಇತ್ಯಾದಿ ಪಾವತಿಸಬೇಕು. ಇದಕ್ಕಾಗಿ ಬ್ಯಾಂಕ್‌ಗಳ ವಿವಿಧ ಖಾತೆಗಳಲ್ಲಿ ಹಣವನ್ನು ಠೇವಣಿ ರೂಪದಲ್ಲಿ ಇಡಲಾಗುತ್ತದೆ. ಹಲವು ವರ್ಷಗಳಿಂದ ಜಮೆ ಮಾಡಿದ ಮೊತ್ತ ದೊಡ್ಡ ಇಡುಗಂಟಾಗಿ ಗೋಚರಿಸುತ್ತದೆ. ಹೀಗಾಗಿ ಇದರ ಮೇಲೆ ಕಣ್ಣು ಬಿದ್ದಿದೆ’ ಎಂದೂ ಅವರು ಹೇಳಿದರು.

ಲಾಭಾಂಶ ನೀಡಲು ನಕಾರ: ಸರ್ಕಾರ ಪಾವತಿಗೆ ಗಡುವು ನೀಡಿ, ಎರಡು ತಿಂಗಳು ಕಳೆದರೂ ಯಾವುದೇ ಕಂಪನಿ ಶೇ 30 ವಿಶೇಷ ಲಾಭಾಂಶ ಪಾವತಿಸಿಲ್ಲ. ಸೆಪ್ಟೆಂಬರ್‌ನಿಂದ ಒತ್ತಡ ಹೇರುತ್ತಿದ್ದರೂ ಯಾವುದೇ ಸಂಸ್ಥೆ ವಿಶೇಷ ಲಾಭಾಂಶ ವರ್ಗಾಯಿಸಲು ಮುಂದಾಗಿಲ್ಲ ಎಂದು ಗೊತ್ತಾಗಿದೆ.

140	19	121
ಒಟ್ಟು ಉದ್ದಿಮೆಗಳು	ಲಾಭದಲ್ಲಿರುವ ಉದ್ದಿಮೆಗಳು	ನಷ್ಟದಲ್ಲಿರುವ ಉದ್ದಿಮೆಗಳು

ಸುತ್ತೋಲೆಯಲ್ಲಿ ಏನಿದೆ?

‘ಸಾರ್ವಜನಿಕ ಉದ್ದಿಮೆಗಳು 2024ರ ಮಾರ್ಚ್ ಅಂತ್ಯಕ್ಕೆ ಅನ್ವಯಿಸುವ ಲೆಕ್ಕಪತ್ರಗಳ ಪ್ರಕಾರ ಮತ್ತು ಎಲ್ಲ ಬ್ಯಾಂಕ್ ಖಾತೆಗಳಲ್ಲಿನ ನಿಯಮಿತ/ನಿಶ್ಚಿತ ಠೇವಣಿಗಳನ್ನು ಒಳಗೊಂಡಂತೆ ನಗದು ಮತ್ತು ನಗದೇತರ ಉಳಿತಾಯದ ಕನಿಷ್ಠ ಶೇ 30 ಮಧ್ಯಂತರ ಲಾಭಾಂಶವನ್ನು 2023-24 ಆರ್ಥಿಕದ ವಿಶೇಷ ಲಾಭಾಂಶವೆಂದು ಪಾವತಿಸಬೇಕು. ಪಾವತಿಸದೇ ಇದ್ದರೆ, ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯಕಾರ್ಯ ನಿರ್ವಹಣಾಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗುವುದು’ ಎಂದು ಆರ್ಥಿಕ ಇಲಾಖೆ ಉಪಕಾರ್ಯದರ್ಶಿ ಇಕ್ರಂ ಷರೀಫ್ ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ಸೆಪ್ಟೆಂಬರ್‌ನಲ್ಲಿ ಸುತ್ತೋಲೆ ಹೊರಡಿಸಲಾಗಿತ್ತು. ಉದ್ದಿಮೆಗಳು ಸ್ಪಂದಿಸದ ಕಾರಣ ಅಕ್ಟೋಬರ್ ಮತ್ತು ನವೆಂಬರ್‌ನಲ್ಲೂ ಜ್ಞಾಪನಾಪತ್ರಗಳನ್ನು ಕಳುಹಿಸಲಾಗಿದೆ.

ಔಷಧ ಖರೀದಿ ತನಿಖೆಗೆ ತಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಟೆಂಡರ್ ಮೂಲಕ ಔಷಧಗಳ ಖರೀದಿ ಮತ್ತು ಎಂಪ್ಯಾನಲ್ಡ್ ಪ್ರಯೋಗಾಲಯಗಳಲ್ಲಿ ಔಷಧಗಳ ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸುವಾಗ ಕರ್ನಾಟಕ ರಾಜ್ಯ ವೈದ್ಯಕೀಯ ಸರಬರಾಜು ನಿಗಮದಲ್ಲಿ (ಕೆಎಸ್‌ಎಂಎಸ್‌ಸಿಎಲ್) ಆಗಿರುವ ಲೋಪಗಳ ಕುರಿತು ಪರಿಶೀಲಿಸಿ ವರದಿ ನೀಡಲು ಕರ್ನಾಟಕ ಕೌಶಲ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ಎಂ. ಕನಗವಲ್ಲಿ ನೇತೃತ್ವದ ಪರಿಶೀಲನಾ ತಂಡವನ್ನು ರಾಜ್ಯ ಸರ್ಕಾರ ರಚಿಸಿದೆ.

ತಂಡದಲ್ಲಿ ಔಷಧ ನಿಯಂತ್ರಣ ಇಲಾಖೆಯ ಕೇಂದ್ರ ಕಚೇರಿಯ ಸಹಾಯಕ ಔಷಧ ನಿಯಂತ್ರಕ ವೆಂಕಟೇಶ್, ಬೆಂಗಳೂರು ವೈದ್ಯಕೀಯ ಕಾಲೇಜಿನ ಮೈಕ್ರೊ ಬಯೋಲಜಿಸ್ಟ್ ಡಾ.ಅಸೀಮಾ ಬಾನು, ರಾಜೀವ್ ಗಾಂಧಿ ಆರೋಗ್ಯ ವಿಶ್ವವಿದ್ಯಾಲಯದ ಕುಲಪತಿಯಿಂದ ನಾಮನಿರ್ದೇಶಿತರಾದ ಹಿರಿಯ ಫಾರ್ಮಾಲಜಿ ಪ್ರಾಧ್ಯಾಪಕರು ಇರಲಿದ್ದಾರೆ. ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯೂ ಆದ ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯ ಸಮಿತಿಗೆ ಐದು ದಿನದಲ್ಲಿ ವರದಿ ಸಲ್ಲಿಸಲು ಆರೋಗ್ಯ ಇಲಾಖೆ ಸೂಚಿಸಿದೆ.

ಬಳ್ಳಾರಿಯಲ್ಲಿ ಬಾಣಂತಿಯರು ಮೃತಪಟ್ಟ ಪ್ರಕರಣದಲ್ಲಿ ಕೆಎಸ್‌ಎಂಎಸ್‌ಸಿಎಲ್ ಅಧಿಕಾರಿಗಳ ಪಾತ್ರ ಮತ್ತು ಲೋಪ ಎಸಗಿದ ಅಧಿಕಾರಿಗಳ ಮೇಲೆ ಜವಾಬ್ದಾರಿಗಳನ್ನು ನಿಗದಿಪಡಿಸುವ ಬಗ್ಗೆ ಮತ್ತು ಕೆಎಸ್‌ಎಂಎಸ್‌ಸಿಎಲ್‌ನ ಈಗಿನ ವ್ಯವಸ್ಥೆಗಳ ಬಗ್ಗೆಯೂ ಪರಿಶೀಲಿಸಿ ತಂಡ ವರದಿ ನೀಡಬೇಕಿದೆ.

ಬಳ್ಳಾರಿ ಘಟನೆಗೆ ಕಾರಣವಾಗಿದೆ ಎನ್ನಲಾದ ರಿಂಗರ್ ಲ್ಯಾಕ್ಟೇಟ್ ದ್ರಾವಣ ವನ್ನು ಪಶ್ಚಿಮ್ ಬಂಗಾ ಫಾರ್ಮಾ-ಸ್ಯುಟಿಕಲ್ಸ್ ಕಂಪನಿಯಿಂದ ಖರೀದಿಸಲಾಗಿದೆ. ನ. 30ರವರೆಗೆ 196 ಬ್ಯಾಚ್‌ಗಳಲ್ಲಿ ಈ ದ್ರಾವಣವನ್ನು ಕೆಎಸ್‌ಎಂಎಸ್‌ಸಿಎಲ್ ಖರೀದಿಸಿದೆ. ಇದರಲ್ಲಿ ಲೋಪಗಳು ಆಗಿವೆಯೇ ಎಂಬ ಬಗ್ಗೆಯೂ ತನಿಖೆ ನಡೆಸಬೇಕು ಎಂದು ಆದೇಶದಲ್ಲಿ ಸೂಚಿಸಲಾಗಿದೆ.

ಔಷಧಗಳನ್ನು ಪರೀಕ್ಷೆಗೆ ಒಳಪಡಿಸಲು ಕೆಎಸ್‌ಎಂಎಸ್‌ಸಿಎಲ್ ಸದ್ಯ ಅನುಸರಿಸುತ್ತಿರುವ ಕ್ರಮ, ಗುಣಮಟ್ಟ ಪರೀಕ್ಷೆಗೆ ಎಂಪ್ಯಾನಲ್ಡ್ ಪ್ರಯೋಗಾಲಯಗಳನ್ನು ಗುರುತಿಸುವುದು, ಮಾದರಿಗಳ ಪರೀಕ್ಷೆ, ಪ್ರಮಾಣಿತ ಗುಣಮಟ್ಟ (ಎನ್‌ಎಸ್‌ಕ್ಯೂ) ಆಧರಿಸಿ ಔಷಧ ಮಾದರಿಗಳನ್ನು ತಿರಸ್ಕರಿಸುವ ಬಗ್ಗೆಯೂ ವರದಿ ನೀಡಬೇಕು ಎಂದೂ ಆದೇಶದಲ್ಲಿ ವಿವರಿಸಲಾಗಿದೆ.

₹5 ಲಕ್ಷ ಪರಿಹಾರ

ಬಳ್ಳಾರಿ: ಬಳ್ಳಾರಿ ಜಿಲ್ಲಾ ಆಸ್ಪತ್ರೆಯಲ್ಲಿ ಮೃತಪಟ್ಟ ಐವರು ಬಾಣಂತಿಯರಿಗೆ ಸರ್ಕಾರ ₹5 ಲಕ್ಷ ಪರಿಹಾರ ನೀಡಲು ನಿರ್ಧರಿಸಿದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಿಸಿದರು.

ಸಂಡೂರು ವಿಧಾನಸಭಾ ಕ್ಷೇತ್ರದಲ್ಲಿ ಭಾನುವಾರ ನಡೆದ ಮತದಾರರಿಗೆ ಅಭಿನಂದನಾ ಸಮಾವೇಶ ಉದ್ಘಾಟಿಸಿ ಅವರು ಮಾತನಾಡಿದರು. ಮೃತ ಬಾಣಂತಿಯರ ಕುಟುಂಬಗಳಿಗೆ ಈ ಮೊದಲು ₹2 ಲಕ್ಷ ಪರಿಹಾರ ಘೋಷಿಸಲಾಗಿತ್ತು. ಈ ಮೊತ್ತವನ್ನು 5 ಲಕ್ಷಕ್ಕೆ ಏರಿಸಲಾಗಿದೆ’ ಎಂದು ಹೇಳಿದರು.

ಸಿರಿಯಾ: ಬಶರ್ ಸರ್ಕಾರ ಪತನ

ಅಮ್ಮಾನ್/ಬೈರೂತ್/ಕೈರೊ, ಡಮಾಸ್ಕಸ್ (ರಾಯಿಟರ್ಸ್/ಎಪಿ): ಸಿರಿಯಾ ಸರ್ಕಾರವು ಪತನಗೊಂಡಿದೆ. ‘ನಾಗರಿಕ ದಂಗೆ’ ಯಶಸ್ಸು ಕಂಡಿದ್ದು, ಅಧ್ಯಕ್ಷ ಬಶರ್ ಅಸಾದ್ ಕುಟುಂಬದ ಐದು ದಶಕಗಳ ಆಡಳಿತ ಕೊನೆಗೊಂಡಿದೆ. ಈ ಮೂಲಕ 14 ವರ್ಷಗಳಿಂದ ನಡೆದಿದ್ದ ಸಂಘರ್ಷವು ತಾರ್ಕಿಕ ಅಂತ್ಯಕಂಡಿದೆ.

ಪ್ರತಿಭಟನಕಾರರು ಭಾನುವಾರ ಮುಂಜಾನೆ ಮಿಂಚಿನ ಕಾರ್ಯಾಚರಣೆ ನಡೆಸಿದರು. ಆಡಳಿತದ ಮೇಲೆ ಹಿಡಿತ ಸಾಧಿಸಿದರು. ಪದಚ್ಯುತ ಅಧ್ಯಕ್ಷ ಬಶರ್ ಅಸಾದ್ ದೇಶ ತೊರೆದು ರಷ್ಯಾದಲ್ಲಿ ಆಶ್ರಯ ಪಡೆದಿದ್ದಾರೆ.

ಬಶರ್ ಸರ್ಕಾರವು ಪತನಗೊಂಡಿದೆ ಮತ್ತು ಎಲ್ಲ ಕೈದಿಗಳನ್ನು ಬಿಡುಗಡೆ ಮಾಡಲಾಗಿದೆ ಎಂದು ಜನರ ಒಂದು ಗುಂಪು ಘೋಷಣೆ ಕೂಗಿದ್ದ ವಿಡಿಯೊವನ್ನು ಸಿರಿಯಾದ ಸರ್ಕಾರಿ ಸ್ವಾಮ್ಯದ ಸುದ್ದಿ ವಾಹಿನಿಯು ಪ್ರಸಾರ ಮಾಡಿತು.

ಈ ಪ್ರದೇಶದಲ್ಲಿ ರಷ್ಯಾ ಮತ್ತು ಇರಾನ್ ಹೊಂದಿದ್ದ ಪ್ರಭಾವಕ್ಕೆ ಭಾರಿ ಏಟು ಬಿದ್ದಂತಾಗಿದೆ. ಸಂಘರ್ಷದ ಉದ್ದಕ್ಕೂ ಬಶರ್‌ಗೆ ಈ ಎರಡೂ ದೇಶಗಳು ಬೆಂಬಲ ನೀಡಿದ್ದವು. ಆದರೆ, ಈಗ ತಮ್ಮ ದೇಶವೇ ಎದುರಿಸುತ್ತಿರುವ ಬಿಕ್ಕಟ್ಟಿನಿಂದಾಗಿ ದೂರ ಇದ್ದವು. ಡಮಾಸ್ಕಸ್‌ಗೆ ಬಂದಾಗ ಸೇನೆ ನಿಯೋಜನೆಯನ್ನು ಎಲ್ಲಿಯೂ ಕಂಡಿಲ್ಲ ಎಂದು ಹೋರಾಟಗಾರರು ಹೇಳಿದ್ದಾರೆ. ಸಾವಿರಾರು ಜನರು ಕಾರುಗಳಲ್ಲಿ ಮತ್ತು ಕಾಲ್ನಡಿಗೆಯಲ್ಲಿ ಡಮಾಸ್ಕಸ್‌ನ ಮುಖ್ಯ ಚೌಕದಲ್ಲಿ ಸೇರಿದರು. ‘ಬಶರ್ ಕುಟುಂಬದ ಅರ್ಧ ಶತಮಾನದ ಆಳ್ವಿಕೆಯಿಂದ ಸ್ವಾತಂತ್ರ್ಯ,’ ಎಂದು ಘೋಷಣೆಗಳನ್ನು ಕೂಗಿದರು.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಗುಕೇಶ್‌ಗೆ ಮುನ್ನಡೆ



ಸಿಂಗಪುರ (ಪಿಟಿಐ): ಭಾರತದ ಗ್ರ್ಯಾಂಡ್‌ಮಾಸ್ಟರ್ ಡಿ.ಗುಕೇಶ್ ಅವರು ವಿಶ್ವ ಚೆಸ್ ಚಾಂಪಿಯನ್‌ಷಿಪ್‌ನ 11ನೇ ಪಂದ್ಯದಲ್ಲಿ ಭಾನುವಾರ ಗೆಲುವು ಸಾಧಿಸುವ ಮೂಲಕ ಅತಿ ಕಿರಿಯ ವಿಶ್ವ ಚಾಂಪಿಯನ್ ಎನಿಸುವ ಹಾದಿಯಲ್ಲಿ ದಿಟ್ಟ ಹೆಜ್ಜೆಯಿಟ್ಟರು. ಹಾಲಿ ಚಾಂಪಿಯನ್ ಡಿಂಗ್ ಲಿರೆನ್ ಅವರನ್ನು 29 ನಡೆಗಳಲ್ಲಿ ಮಣಿಸಿದರು.

14 ಸುತ್ತಿನ ಪಂದ್ಯಗಳಿರುವ ಫೈನಲ್‌ನಲ್ಲಿ ಗುಕೇಶ್ ಮೊದಲ ಬಾರಿ ಮುನ್ನಡೆ ಸಾಧಿಸಿದರು. ಇನ್ನು ಮೂರು ಪಂದ್ಯಗಳು ಬಾಕಿಯಿರುವಂತೆ 6-5ರಲ್ಲಿ ಮುಂದೆ ಸಾಗಿದರು.



ಅಮೇಜ್ ಕಾರು ಬಿಡುಗಡೆ

ಬೆಂಗಳೂರಿನ ವೈಟ್‌ಫೀಲ್ಡ್‌ನಲ್ಲಿರುವ ಹೋಂಡಾ ಷೋರೂಂನಲ್ಲಿ ಹೊಸ ಮಾದರಿಯ ಹೋಂಡಾ ಅಮೇಜ್ ಕಾರುಗಳನ್ನು ಕಂಪನಿಯು ಬಿಡುಗಡೆ ಮಾಡಿತು. ಜೀವಿಕಾ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಶ್ರೀಧರ್, ವೈಟ್‌ಫೀಲ್ಡ್‌ನ ಹೋಂಡಾ ನಿರ್ದೇಶಕ ಆರ್ಯನ್ ಬಹದೂರ್, ಪ್ರಧಾನ ವ್ಯವಸ್ಥಾಪಕ ರಾಮ್‌ದಾಸ್ ಮತ್ತು ಹೋಂಡಾದ ಮಾರಾಟ ಗುಣಮಟ್ಟ ವ್ಯವಸ್ಥಾಪಕ ರಮೇಶ್ ಹಾಜರಿದ್ದರು

‘ಕೆಲ ಬೇಡಿಕೆ ಈಡೇರಿಕೆಗೆ ಕ್ರಮ’

ಸಾರಿಗೆ ನೌಕರರ ಸಂಘಟನೆಗಳ ಮುಖಂಡರಿಗೆ ಅಧಿಕಾರಿಗಳಿಂದ ಮಾಹಿತಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಅನಾರೋಗ್ಯ ಕಾರಣದಿಂದ ಸಾರಿಗೆ ಸಚಿವರು ಸಭೆಗೆ ಗೈರು
- ವಿ. ಅನ್ಬುಕುಮಾರ್ ನೇತೃತ್ವದಲ್ಲಿ ಮುಖಂಡರೊಂದಿಗೆ ಸಭೆ
- 10,000 ಸಿಬ್ಬಂದಿ ನೇಮಕಾತಿಗೆ ಕ್ರಮ

ಬೆಂಗಳೂರು: ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ನೌಕರರ ಸಂಘಟನೆಗಳ ಕೆಲವು ಬೇಡಿಕೆಗಳನ್ನು ಈಡೇರಿಸಲು ಕ್ರಮ ಕೈಗೊಳ್ಳಲಾಗಿದೆ. ಈ ಬಗ್ಗೆ ಸಂಘಟನೆಗಳ ಮುಖಂಡರಿಗೆ ಮಾಹಿತಿ ನೀಡಲಾಗಿದೆ ಎಂದು ನಿಗಮದ ಅಧಿಕಾರಿಗಳು ತಿಳಿಸಿದ್ದಾರೆ.

ಅನಾರೋಗ್ಯ ಕಾರಣದಿಂದ ಸಾರಿಗೆ ಸಚಿವರು ಸಭೆಯಲ್ಲಿ ಭಾಗವಹಿಸಿಲ್ಲ. ಅವರ ಸೂಚನೆಯಂತೆ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ವಿ. ಅನ್ಬುಕುಮಾರ್ ನೇತೃತ್ವದಲ್ಲಿ ಮುಖಂಡರೊಂದಿಗೆ ಮಾತುಕತೆ ನಡೆಸಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಪರಿಷ್ಕೃತ ವೇತನ ಶ್ರೇಣಿಯಲ್ಲಿ ಸೇವಾ ವಿಮುಕ್ತಿ ಹೊಂದಿದ ನೌಕರರ ಉಪಧನ ಮತ್ತು ಗಳಿಕೆ ರಜೆ ನಗದೀಕರಣ ವ್ಯತ್ಯಾಸದ ಮೊತ್ತ ಪಾವತಿಸಲು ₹224 ಕೋಟಿ ನೀಡಲು ಸರ್ಕಾರವು ಡಿ. 7 ರಂದು ಆದೇಶವನ್ನು ಹೊರಡಿಸಿದೆ. ಅಧಿವೇಶನದ ನಂತರ ಹಣ ಬಿಡುಗಡೆಯಾಗಲಿದೆ.

ಸಿಬ್ಬಂದಿಯ ಅಂತರ ನಿಗಮ ವರ್ಗಾವಣೆಯ ಪಟ್ಟಿ ಬಿಡುಗಡೆ ಮಾಡಲಾಗಿದೆ. ಭವಿಷ್ಯನಿಧಿ ಮತ್ತು ಡೀಸೆಲ್ ಬಾಕಿ ಹಣ ಪಾವತಿಗಾಗಿ ಸರ್ಕಾರವೇ ಗ್ಯಾರಂಟಿ ನೀಡಿ ₹2000 ಕೋಟಿ ಸಾಲ ನೀಡಿದೆ.

5,800 ಹೊಸ ಬಸ್‌ಗಳ ಸೇರ್ಪಡೆ ಮಾಡಲಾಗಿದೆ. 10,000 ಸಿಬ್ಬಂದಿ ನೇಮಕಾತಿಗೆ ಕ್ರಮ ಕೈಗೊಳ್ಳಲಾಗಿದೆ. ಹಲವು ಕಾರ್ಮಿಕ ಕಲ್ಯಾಣ ಉಪಕ್ರಮ-ಗಳನ್ನು ಜಾರಿಗೆ ತರಲಾಗಿದೆ. ನಗದು ರಹಿತ ಆರೋಗ್ಯ ಸೇವೆಗೆ ಶೀಘ್ರದಲ್ಲಿಯೇ ಚಾಲನೆ ನೀಡಲಾಗುವುದು. ಹಿಂದಿನ ಸರ್ಕಾರದ ಅವಧಿಯಲ್ಲಿ ಭವಿಷ್ಯನಿಧಿ, ಡೀಸೆಲ್ ಬಾಕಿ, ಉಪಧನ, ನಿವೃತ್ತ ನೌಕರರ ಬಾಕಿ ಎಲ್ಲ ಸೇರಿ ₹5,900 ಕೋಟಿ ಸಾಲ ಬಾಕಿ ಉಳಿದಿರುವ ಕಾರಣ ಸಾರಿಗೆ ಸಂಸ್ಥೆಗಳನ್ನು ಸಹಜ ಸ್ಥಿತಿಗೆ ತರಲು ಕಾಲಾವಕಾಶದ ಅಗತ್ಯ ಇದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕೆಎಸ್‌ಆರ್‌ಟಿಸಿ ಆಫೀಸರ್ಸ್ ವೆಲ್‌ಫೇರ್ ಅಸೋಸಿಯೇಶನ್ (ಕೆಒಡಬ್ಲ್ಯುಎ), ಸೂಪರ್‌ವೈಸರಿ ಸ್ಟಾಫ್ ಅಸೋಸಿಯೇಶನ್ಸ್ ಸಂಘಟನೆಗಳು ಬೆಳಗಾವಿ ಚಲೋದಲ್ಲಿ ಕೈ ಜೋಡಿಸಿಲ್ಲ. ಇಂಥ ಸಂದರ್ಭದಲ್ಲಿ ಬೆಳಗಾವಿ ಚಲೊ, ಮುಷ್ಕರ ನಡೆಸುವುದಾಗಿ ಹೇಳುವುದು ಸೂಕ್ತವಲ್ಲ. ಸಾರಿಗೆ ಸಚಿವರ ಆರೋಗ್ಯ ಸುಧಾರಣೆ ಆದ ಬಳಿಕ ಮಾತುಕತೆ ನಡೆಸಲಾಗುವುದು ಎಂದು ಅಧಿಕಾರಿಗಳು ಹೇಳಿದ್ದಾರೆ.

ಸುದ್ದಿ 2 ನಿಮಿಷ

ಇ-ಖಾತಾ ಸಮಸ್ಯೆ ಸಹಾಯವಾಣಿ ಆರಂಭ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯಲ್ಲಿ ನಾಗರಿಕರಿಗೆ ಇ-ಖಾತಾ ಪಡೆಯಲು ಅನುಕೂಲವಾಗುವ ನಿಟ್ಟಿನಲ್ಲಿ, ವೃತ್ತಿಪರ, ಏಕ ಇ-ಖಾತಾ ನಾಗರಿಕ ಸಹಾಯವಾಣಿ 9480683695 ಪ್ರಾರಂಭಿಸಲಾಗಿದೆ.

ಅಧಿಕಾರಿಗಳು ಸೇರಿದಂತೆ ಯಾರಾದರೂ ಲಂಚ ಕೇಳಿದರೆ, ಖಾತಾ ಮಾಡುವುದನ್ನು ವಿಳಂಬ ಮಾಡಿದರೆ ಸಹಾಯವಾಣಿಗೆ ಕರೆ ಮಾಡಿ ದೂರು ನೀಡಬಹುದು. ಇದಲ್ಲದೇ ನಾಗರಿಕರು ಸ್ವತಃ ಆನ್‌ಲೈನ್ ಮೂಲಕ (https://BBMPeAasthi.karnataka.gov.in) ಇ-ಖಾತಾ ಮಾಡಿಕೊಳ್ಳಬಹುದು.

ಸುಗಮವಾಗಿ ಇ-ಖಾತಾ ನೀಡಲು ಸಹಾಯಕ ಕಂದಾಯ ಅಧಿಕಾರಿ ಕಚೇರಿಗಳಿಗೂ ವಿಸ್ತರಿಸಲಾಗಿದೆ. 1000ಕ್ಕೂ ಅಧಿಕ ಹೆಚ್ಚುವರಿ ಕೇಸ್ ವರ್ಕರ್ ಲಾಗಿನ್‌ಗಳನ್ನು ನೀಡಲಾಗಿದೆ. 200ಕ್ಕೂ ಅಧಿಕ ಹೆಚ್ಚುವರಿ ಸಹಾಯಕ ಕಂದಾಯ ಅಧಿಕಾರಿಗಳನ್ನು ನಿಯೋಜಿಸಲಾಗಿದೆ. ಅನಗತ್ಯ ವಿಳಂಬವಾದಲ್ಲಿ ಪಾಲಿಕೆಯು ಕ್ರಮ ಕೈಗೊಳ್ಳಲಿದೆ. ನಾಗರಿಕರು ಬದಲಿ ಸಹಾಯಕ ಕಂದಾಯ ಅಧಿಕಾರಿ, ಕೇಸ್ ವರ್ಕರ್‌ಗಳನ್ನು ಕೂಡಾ ಭೇಟಿ ನೀಡಬಹುದು ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದ್ದಾರೆ.



ಜಿಆರ್‌ಟಿ ಜ್ಯುವೆಲರ್ಸ್‌ನಿಂದ ಹವಳ, ಪಚ್ಚೆ ಆಭರಣ ಮೇಳ

ಬೆಂಗಳೂರು: ಜಿಆರ್‌ಟಿ ಜ್ಯುವೆಲರ್ಸ್‌ನಿಂದ ಹವಳ ಮತ್ತು ಪಚ್ಚೆ ಆಭರಣ ಮೇಳ ಆರಂಭಿಸಲಾಗಿದೆ.

ಈ ಹೊಸ ಸಂಗ್ರಹದಲ್ಲಿ ಚಿನ್ನದ ಆಭರಣಗಳ ಮೇಲೆ ಪ್ರತಿ ಗ್ರಾಂಗೆ ₹50 ರಿಯಾಯಿತಿ ದೊರೆಯಲಿದೆ. ಹಳೆಯ ಚಿನ್ನದ ಆಭರಣಗಳ ವಿನಿಮಯದಲ್ಲಿ ಪ್ರತಿ ಗ್ರಾಂಗೆ ₹50 ಹೆಚ್ಚುವರಿ ರಿಯಾಯಿತಿ ದೊರೆಯಲಿದೆ.

ರೂಬಿ ಮತ್ತು ಎಮರಾಲ್ಡ್ ಸ್ಟೋನ್ ಮೌಲ್ಯದ ಮೇಲೆ ಶೇ 20ರಷ್ಟು ರಿಯಾಯಿತಿ ಇದೆ. ಈ ವಿಶೇಷ ಕೊಡುಗೆಯು ಕರ್ನಾಟಕ, ಆಂಧ್ರಪ್ರದೇಶ ಮತ್ತು ತೆಲಂಗಾಣದಲ್ಲಿರುವ ಮಳಿಗೆಗಳಿಗೆ ಮಾತ್ರ ಅನ್ವಯಿಸಲಿದೆ. ಗ್ರಾಹಕರು ಮಳಿಗೆಗೆ ಭೇಟಿ ನೀಡಿ ಇದರ ಪ್ರಯೋಜನ ಪಡೆಯಬಹುದಾಗಿದೆ ಎಂದು ಕಂಪನಿ ತಿಳಿಸಿದೆ.

‘ಹೊಸ ಮಾಣಿಕ್ಯ ಮತ್ತು ಪಚ್ಚೆ ಆಭರಣಗಳನ್ನು ಗ್ರಾಹಕರಿಗೆ ಪರಿಚಯಿಸಲು ಉತ್ಸುಕರಾಗಿದ್ದೇವೆ. ಪ್ರತಿ ಆಭರಣವು ನಮ್ಮ ಕುಶಲಕರ್ಮಿಗಳ ಕಾಳಜಿ ಮತ್ತು ಕೌಶಲವನ್ನು ಪ್ರತಿಬಿಂಬಿಸುತ್ತದೆ. ಗ್ರಾಹಕರ ಅಭಿರುಚಿಗೆ ತಕ್ಕಂತೆ ತಯಾರಿಸಿದ್ದೇವೆ’ ಎಂದು ಜಿಆರ್‌ಟಿ ಜ್ಯುವೆಲರ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಜಿ.ಆರ್. ಆನಂದ್ ಅನಂತ್ ಪದ್ಮನಾಭನ್ ಮತ್ತು ಜಿ.ಆರ್. ರಾಧಾಕೃಷ್ಣನ್ ತಿಳಿಸಿದ್ದಾರೆ.

ನಿಧನ ವಾರ್ತೆ

ಯಲ್ಲಪ್ಪ



ನೆಲಮಂಗಲ: ಪಟ್ಟಣದ ಲೋಹಿತ್ ನಗರ ನಿವಾಸಿ ಯಲ್ಲಪ್ಪ (70) ವಯೋಸಹಜ ಅನಾರೋಗ್ಯದಿಂದ ಭಾನುವಾರ ಬೆಳಿಗ್ಗೆ ನಿಧನರಾದರು. ಇವರಿಗೆ ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು ಇದ್ದಾರೆ. ಸೋಮವಾರ ಮಧ್ಯಾಹ್ನ 1.30ಕ್ಕೆ ರೇಣುಕಾನಗರದ ಸ್ಮಶಾನದಲ್ಲಿ ಅಂತ್ಯಕ್ರಿಯೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹಿರಿಯ ಲೇಖಕಿಯರ ಕೃತಿ ಮರುಮುದ್ರಣಗೊಳ್ಳಲಿ

ಅನುಪಮಾ, ಎಚ್‌.ವಿ. ಸಾವಿತ್ರಮ್ಮ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಹೇಮಲತಾ ಮಹಿಷಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೇಖಕಿಯರ ಚರಿತ್ರೆಯನ್ನು ಪ್ರಕಟಿಸಬೇಕು. ಅದರ ಜೊತೆಗೆ ಎಲ್ಲ ಹಿರಿಯ ಲೇಖಕಿಯರ ಕೃತಿಗಳನ್ನು ಮರುಮುದ್ರಣ ಮಾಡಬೇಕು ಎಂದು ಲೇಖಕಿ ಹೇಮಲತಾ ಮಹಿಷಿ ತಿಳಿಸಿದರು.

ಕರ್ನಾಟಕ ಲೇಖಕಿಯರ ಸಂಘ ಭಾನುವಾರ ಹಮ್ಮಿಕೊಂಡಿದ್ದ ಅನುಪಮಾ ಮತ್ತು ಎಚ್‌.ವಿ. ಸಾವಿತ್ರಮ್ಮ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಬಹಳಷ್ಟು ಲೇಖಕಿಯರ ಕೃತಿಗಳು ಈಗ ಸಿಗುತ್ತಿಲ್ಲ. ಅವರ ಕೃತಿಗಳನ್ನು ಮರುಮುದ್ರಣ ಮಾಡಬೇಕು ಎಂದು ಸಾಹಿತ್ಯ ಪರಿಷತ್ತಿಗೂ ಹೇಳಿದ್ದೆ. ಆದರೆ, ಅದು ಕಾರ್ಯಗತಗೊಂಡಿಲ್ಲ. ಲೇಖಕಿಯರ ಸಂಘ ಈ ನಿಟ್ಟಿನಲ್ಲಿ ಮುಂದಡಿ ಇಡಬೇಕು. ಸರ್ಕಾರವು ತಾನೇ ಕನ್ನಡ ಮತ್ತು ಸಂಸ್ಕೃತಿಯ ರಕ್ಷಕ ಎಂದು ಹೇಳಿಕೊಳ್ಳುವುದನ್ನು ಬದಿಗಿಟ್ಟು ಇಂಥ ಸಂಘಗಳಿಗೆ ಪ್ರೋತ್ಸಾಹ ನೀಡಬೇಕು ಎಂದು ಆಗ್ರಹಿಸಿದರು.

ಲೇಖಕಿಯರು ಸ್ವತಂತ್ರ ಕೃತಿಗಳನ್ನು ರಚಿಸುವುದರ ಜೊತೆಗೆ ಬೇರೆ ಬೇರೆ ಭಾಷೆಗಳ ಕೃತಿಗಳನ್ನು ಅನುವಾದ ಮಾಡಲು ಮುಂದಾಗಬೇಕು. ಆಗ ಬರೆಯಲು ಹೊಸ ವಸ್ತು, ಹೊಸ ದೃಷ್ಟಿಕೋನ ದೊರೆಯುತ್ತದೆ ಎಂದರು.

ಸಂಸ್ಕೃತಿ ಚಿಂತಕ ಬಂಜಗೆರೆ ಜಯಪ್ರಕಾಶ್ ಮಾತನಾಡಿ, ‘ಮಹಿಳೆಯರ ಸಾಹಿತ್ಯವನ್ನು ಅಡುಗೆಮನೆ ಸಾಹಿತ್ಯ ಎಂದು ಹಿಂದಿನ ಪುರುಷ ವಿಮರ್ಶಕರು ಬದಿಗಿಟ್ಟರು. ವಿಮರ್ಶಕರ ದೃಷ್ಟಿಕೋನದ ಸಮಸ್ಯೆ, ಸಂವೇದನೆಯಲ್ಲಿನ ತಪ್ಪಿನ ಪರಿಣಾಮ 80–90ರ ದಶಕದಲ್ಲಿ ಬಂಡಾಯ, ದಲಿತ ಬಂಡಾಯ ಸಾಹಿತಿಗಳು ಕೂಡ ಕೇರಳದ ಕಮಲಾದಾಸ್, ಕೋಲ್ಕತ್ತದ ಮಹಾಶ್ವೇತಾದೇವಿ, ಇತಿಹಾಸಕ್ಕೆ ಸಂಬಂಧಿಸಿದಂತೆ ರೊಮಿಲಾ ಥಾಪರ್ ಅವರ ಕೃತಿಗಳನ್ನು ಓದಿದರೇ ಹೊರತು ನಮ್ಮಲ್ಲೇ ಇದ್ದಾರಾ ಎಂದು ಹುಡುಕಲಿಲ್ಲ. ಇದರಿಂದಾಗಿ ಲೇಖಕಿಯರಿಗೆ ಸಿಗಬೇಕಾದ ಪ್ರೋತ್ಸಾಹ ಸಿಗಲಿಲ್ಲ’ ಎಂದು ಹೇಳಿದರು.



ಕರ್ನಾಟಕ ಲೇಖಕಿಯರ ಸಂಘದಿಂದ ‘ಅನುಪಮಾ’ ಪ್ರಶಸ್ತಿಯನ್ನು ವಿಜಯ ಸುಬ್ಬರಾಜ್, ವಸುಂಧರಾ ಭೂಪತಿ, ಸಬಿಹಾ ಭೂಮಿಗೌಡ, ಕೆ.ಆರ್. ಸಂಧ್ಯಾರೆಡ್ಡಿ ಮತ್ತು ಲತಾ ಗುತ್ತಿ ಅವರಿಗೆ ನೀಡಿ ಗೌರವಿಸಲಾಯಿತು —ಪ್ರಜಾವಾಣಿ ಚಿತ್ರ

ಸರ್ಕಾರವು ಅನೇಕ ಖಾಸಗಿ ಸಂಸ್ಥೆಗಳಿಗೆ ಅನುದಾನ ನೀಡಿ ಪ್ರೋತ್ಸಾಹಿಸುತ್ತಿದೆ. ಅದೇ ರೀತಿ ಸಾರ್ವಜನಿಕ ಕಾರ್ಯದಲ್ಲಿ ತೊಡಗಿಕೊಂಡಿರುವ ಲೇಖಕಿಯರ ಸಂಘಕ್ಕೂ ಇಡುಗಂಟು ನೀಡಬೇಕು. ಅನುದಾನ ಒದಗಿಸಬೇಕು ಎಂದು ಒತ್ತಾಯಿಸಿದರು.

ಲೇಖಕಿಯರಾದ ವಿಜಯಾ ಸುಬ್ಬರಾಜ್, ವಸುಂಧರಾ ಭೂಪತಿ, ಸಬಿಹಾ ಭೂಮಿಗೌಡ, ಕೆ.ಆರ್. ಸಂಧ್ಯಾರೆಡ್ಡಿ, ಲತಾ ಗುತ್ತಿ ಅವರಿಗೆ 2020ರಿಂದ 2024ರವರೆಗಿನ ಐದು ವರ್ಷಗಳ 'ಅನುಪಮಾ ಪ್ರಶಸ್ತಿ' ನೀಡಿ ಗೌರವಿಸಲಾಯಿತು. ಅಲಕಾ ಕಟ್ಟೆಮನೆ, ಎಲ್.ವಿ. ಶಾಂತಕುಮಾರಿ, ಎಚ್‌.ಆರ್. ಸುಜಾತಾ, ಅನುಪಮಾ ಪ್ರಸಾದ್ ಅವರಿಗೆ 2020ರಿಂದ 2023ರವರೆಗಿನ ಎಚ್‌.ವಿ. ಸಾವಿತ್ರಮ್ಮ ಪ್ರಶಸ್ತಿ ನೀಡಿ ಪುರಸ್ಕರಿಸಲಾಯಿತು. ಸಂಘದ ಅಧ್ಯಕ್ಷೆ ಎಚ್.ಎಲ್. ಪುಷ್ಪಾ ಅಧ್ಯಕ್ಷತೆ ವಹಿಸಿದ್ದರು. ಲೇಖಕ ದೇವು ಪತ್ತಾರ್, ಸಂಘದ ಕಾರ್ಯದರ್ಶಿ ಭಾರತಿ ಹೆಗಡೆ, ಖಜಾಂಚಿ ಮಂಜುಳಾ ಶಿವಾನಂದ, ಸಹಕಾರ್ಯದರ್ಶಿ ಸುಮಾ ಸತೀಶ್ ಉಪಸ್ಥಿತರಿದ್ದರು.



ಶಿಲ್ಪಿ ಕೃಷ್ಣ ನಾಯ್ಕಗೆ ಜಾಮೀನು

ಕಾರ್ಕಳ: ತಾಲ್ಲೂಕಿನ ಬೈಲೂರು ಉಮಿಕಲ್ ಬೆಟ್ಟದ ಪರಶುರಾಮ ಥೀಮ್ ಪಾರ್ಕ್‌ನಲ್ಲಿ ಸ್ಥಾಪಿಸಿದ್ದ ಪರಶುರಾಮ ಮೂರ್ತಿಯ ಶಿಲ್ಪಿ ಬೆಂಗಳೂರು ಕೃಷ್ ಆರ್ಟ್ ವರ್ಲ್ಡ್‌ನ ಕೃಷ್ಣ ನಾಯ್ಕ ಅವರಿಗೆ ಉಡುಪಿಯ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯವು ಜಾಮೀನು ಮಂಜೂರು ಮಾಡಿದೆ.

‘ಬರಹದ ಮೂಲಕ ಜನರ ಎಚ್ಚರಿಸಿದ್ದ ಕುವೆಂಪು’

ವಿಚಾರಕ್ರಾಂತಿಯಲ್ಲಿ ರವಿಕುಮಾರ್ ಬಾಗಿ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕುವೆಂಪು ಅವರು ತಮ್ಮ ಬರಹಗಳ ಉದ್ದಕ್ಕೂ ಮೌಢ್ಯತೆ, ಪುರೋಹಿತಶಾಹಿ ವ್ಯವಸ್ಥೆ, ಅರ್ಥವಿಲ್ಲದ ಆಚರಣೆಗಳ ಬಗ್ಗೆ ನಾಡಿನ ಜನರನ್ನು ಎಚ್ಚರಿಸಿದ್ದಾರೆ. ಇದರಿಂದಾಗಿಯೇ ಹೊಸ ತಲೆಮಾರಿನವರನ್ನು ಮತ್ತೆ ಮತ್ತೆ ಪ್ರಭಾವಿಸಿದವರಲ್ಲಿ ಅವರು ಮುಂಚೂಣಿಯಲ್ಲಿ ನಿಲ್ಲುತ್ತಾರೆ’ ಎಂದು ಪ್ರಾಧ್ಯಾಪಕ ರವಿಕುಮಾರ್ ಬಾಗಿ ಹೇಳಿದರು.

ಜಂಗಮ ಕಲೆಕ್ಟಿವ್ ಬೆಂಗಳೂರು ತಂಡವು ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ‘ಕುವೆಂಪು ಸಾಹಿತ್ಯದ ಪ್ರಸ್ತುತತೆ’ ವಿಚಾರಕ್ರಾಂತಿ ಕಾರ್ಯಕ್ರಮದಲ್ಲಿ ಕುವೆಂಪು ಅವರ ವೈಚಾರಿಕತೆಯ ಬಗ್ಗೆ ಮಾತನಾಡಿದರು. ‘ಸಮಾಜದಲ್ಲಿದ್ದ ಮೌಢ್ಯ, ಪುರೋಹಿತಶಾಹಿ, ಜಾತೀಯತೆಯನ್ನು ಸ್ವತಃ ಅವರು ಎದುರಿಸಿದ್ದರು. ಮುಂದೆ ಅವುಗಳ ಬಗ್ಗೆಯೇ ಬರೆಯುವ ಮೂಲಕ ಸಮಾಜವನ್ನು ಎಚ್ಚರಿಸಿದ್ದರು. ಸಮಾಜದಲ್ಲಿನ ಲೋಪದೋಷ-ಗಳನ್ನು ವಿರೋಧಿಸುತ್ತಲೇ, ಮನುಷ್ಯ ಪರ ನಿಲುವು ತಳೆದರು. 20ನೇ ಶತಮಾನದಲ್ಲಿ ಅವರಷ್ಟು ಬೇರಾವ ಲೇಖಕರೂ ಪ್ರಭಾವಿಸಿಲ್ಲ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

‘ಇವತ್ತಿನ ರಾಜಕಾರಣದ ಬಗ್ಗೆ ಕುವೆಂಪು ಅವರು ಅಂದೇ ಮಾತನಾಡಿದ್ದರು. ಬೆಂಗಳೂರು ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಾರಂಭದಲ್ಲಿ ಮಾತನಾಡುತ್ತಾ, ‘ಸ್ನಾತಕೋತ್ತರ ಪದವೀಧರರೇ ನಿರ್ಲಜ್ಜೆಯಿಂದ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ’ ಎಂದು ಬೇಸರ ವ್ಯಕ್ತಪಡಿಸಿದ್ದರು. ಪ್ರಜಾಪ್ರಭುತ್ವ ವ್ಯವಸ್ಥೆ ಸಾಗುತ್ತಿರುವ ಬಗ್ಗೆಯೂ ಅಸಮಾಧಾನ ವ್ಯಕ್ತಪಡಿಸಿ, ‘ಚುನಾವಣೆ ಎನ್ನುವುದು ಜಾತಿ ಮತ್ತು ಹಣದ ಹಿಂದೆ ಬಿದ್ದಿದೆ. ಇದನ್ನು ವಿರೋಧಿಸದಿದ್ದರೆ ಪ್ರಜಾಪ್ರಭುತ್ವಕ್ಕೆ ಗಂಡಾಂತರ ಬರಬಹುದು’ ಎಂದು ಹೇಳಿದ್ದರು. ಅವರು ದೂರದೃಷ್ಟಿ ಹೊಂದಿದ್ದರು. ಶೋಷಣಾ ರಹಿತ ಸಮಾಜ ಕಟ್ಟುವ ಕನಸನ್ನು ಹೊಂದಿದ್ದರು’ ಎಂದು ಸ್ಮರಿಸಿಕೊಂಡರು.



ಕಾರ್ಯಕ್ರಮದಲ್ಲಿ ರವಿಕುಮಾರ್ ಬಾಗಿ ಮಾತನಾಡಿದರು. ಅಕ್ಷತಾ ಹುಂಚದಕಟ್ಟೆ ಹಾಗೂ ವಿ.ಎಲ್. ನರಸಿಂಹಮೂರ್ತಿ ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

‘ಕುವೆಂಪು ಕವಿತೆ ಮತ್ತು ಆತ್ಮಕತೆ’ ಬಗ್ಗೆ ಮಾತನಾಡಿದ ಪ್ರಕಾಶಕಿ ಅಕ್ಷತಾ ಹುಂಚದಕಟ್ಟೆ, ‘ಸಂಪ್ರದಾಯದ ಜಾಡಿನಲ್ಲಿ ಬಂದಿದ್ದ ಕುವೆಂಪು ಅವರಿಗೆ, ಒಂದು ಘಟ್ಟ ತಲುಪಿದ ಬಳಿಕ ತಾನು ಸಾಗುತ್ತಿರುವ ಮಾರ್ಗ ಸರಿಯಿಲ್ಲ ಅನ್ನುವುದು ಅರಿವಿಗೆ ಬಂದಿತು. ಆ ನಂತರ ಅವರು ನಿಜವಾದ ಬರಹಗಾರನಾಗಿ ರೂಪುಗೊಂಡರು’ ಎಂದರು.

ವಿಚಾರಗೋಷ್ಠಿ ಸಂಯೋಜಕರಾಗಿದ್ದ ಪ್ರಾಧ್ಯಾಪಕ ವಿ.ಎಲ್. ನರಸಿಂಹಮೂರ್ತಿ ಉಪಸ್ಥಿತರಿದ್ದರು. ಇದಕ್ಕೂ ಮೊದಲು ಮೈಸೂರಿನ ಮಾಯ್ಕಾರ ತಂಡದಿಂದ ಕುವೆಂಪು ಕಾವ್ಯ ಗಾಯನ ನಡೆಯಿತು.

ಡಾ. ಶೋಭಾ ‘ಫನಾ’ ಅಧ್ಯಕ್ಷೆ

ಪ್ರಜಾವಾಣಿ ವಾರ್ತೆ



ಡಾ. ಶೋಭಾ ಪ್ರಕಾಶ್

ಬೆಂಗಳೂರು: ಖಾಸಗಿ ಆಸ್ಪತ್ರೆಗಳು ಮತ್ತು ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್‌ನ (ಫನಾ) ನೂತನ ಅಧ್ಯಕ್ಷರಾಗಿ ಡಾ. ಶೋಭಾ ಪ್ರಕಾಶ್ ಆಯ್ಕೆಯಾಗಿದ್ದಾರೆ.

ಅಸೋಸಿಯೇಷನ್ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ 4ನೇ ರಾಷ್ಟ್ರೀಯ ಆರೋಗ್ಯ ಶೃಂಗದಲ್ಲಿ ನೂತನ ಪದಾಧಿಕಾರಿಗಳ ಆಯ್ಕೆ ನಡೆಯಿತು. ನಿಯೋಜಿತ ಅಧ್ಯಕ್ಷರಾಗಿ (ಚುನಾಯಿತ) ಡಾ. ರಮೇಶ್ ಸೋಮಯಾಜಿ, ಉಪಾಧ್ಯಕ್ಷರಾಗಿ ಡಾ.ಎಂ.ಎಲ್. ಗಿರಿಧರ್, ಕಾರ್ಯದರ್ಶಿಯಾಗಿ ಡಾ. ಸಂತೋಷ್ ಸಕ್ಲೇಚಾ, ಜಂಟಿ ಕಾರ್ಯದರ್ಶಿ-ಯಾಗಿ ಡಾ. ರಾಜೇಶ್ ಮೂರ್ತಿ, ಖಜಾಂಚಿಯಾಗಿ ಡಾ. ಶ್ರೀಹರಿ ಎಂ. ಹಾಗೂ ವೈಜ್ಞಾನಿಕ ಉಪಸಮಿತಿ ಅಧ್ಯಕ್ಷೆಯಾಗಿ ಡಾ.ಜಿ.ವಿ. ದಿವಾಕರ್ ಆಯ್ಕೆಯಾಗಿದ್ದಾರೆ. ಈ ಕಾರ್ಯಕಾರಿ ಸಮಿತಿಯ ಅಧಿಕಾರ ಅವಧಿ ಎರಡು ವರ್ಷಗಳಾಗಿದ್ದು, 2027ರವರೆಗೆ ಕಾರ್ಯನಿರ್ವಹಿಸಲಿದೆ.

ಡಾ. ಶೋಭಾ ಪ್ರಕಾಶ್ ಅವರು ಫನಾದ ಪ್ರಥಮ ಮಹಿಳಾ ಅಧ್ಯಕ್ಷರಾಗಿದ್ದಾರೆ. ಸ್ತ್ರೀರೋಗ ತಜ್ಞರಾಗಿರುವ ಅವರು, ಯಲಹಂಕದ ನೇಹಾ ಪ್ರಕಾಶ್ ಆಸ್ಪತ್ರೆಯ ಮುಖ್ಯಸ್ಥರಾಗಿದ್ದಾರೆ. ಅವರಿಗೆ ಹಾಲಿ ಅಧ್ಯಕ್ಷ ಡಾ. ಗೋವಿಂದಯ್ಯ ಯತೀಶ್ ಅಧಿಕಾರ ಹಸ್ತಾಂತರಿಸಿದರು. ವೈದ್ಯಕೀಯ ಕ್ಷೇತ್ರದ ಸಾಧನೆಗೆ ಅಪೊಲೊ ಆಸ್ಪತ್ರೆ ಸಂಸ್ಥಾಪನಾಧ್ಯಕ್ಷ ಡಾ. ಪ್ರತಾಪ್ ಸಿ. ರೆಡ್ಡಿ, ಫನಾದ ಮಾಜಿ ಅಧ್ಯಕ್ಷ ಡಾ. ಪ್ರಸನ್ನ ಎಚ್‌.ಎಂ., ಟ್ರಿನಿಟಿ ಹಾರ್ಟ್ ಸೆಂಟರ್‌ನ ಡಾ.ಬಿ.ಎಂ. ಮುರಳೀಧರ, ವಿಜಯನಗರ ಆಸ್ಪತ್ರೆಯ ಡಾ.ವಿ.ಎಸ್. ರಾಜು, ಸಂತೋಷ್ ಆಸ್ಪತ್ರೆಯ ಡಾ.ಬಿಕಮ್‌ಚಂದ್ ಸಕ್ಲೇಚ ಹಾಗೂ ಮಂಗಳೂರಿನ ಎಜೆ ಆಸ್ಪತ್ರೆಯ ಡಾ. ಪ್ರಶಾಂತ್ ಮರ್ಲ ಅವರನ್ನು ಶೃಂಗದಲ್ಲಿ ಗೌರವಿಸಲಾಯಿತು.

‘ನಿಷ್ಪಕ್ಷಪಾತ ಪತ್ರಿಕೋದ್ಯಮ ಬೋಗಸ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಿಷ್ಪಕ್ಷಪಾತ ಪತ್ರಿಕೋದ್ಯಮ ಎಂಬುದು ಬೋಗಸ್. ಹಾಗಾಗಿ ಪತ್ರಕರ್ತರು ನ್ಯಾಯ, ಸತ್ಯ, ನೊಂದವರ ಪರ ಪಕ್ಷಪಾತಿಗಳಾಗಬೇಕು’ ಎಂದು ಹೋರಾಟಗಾರ ಇಂದೂಧರ ಹೊನ್ನಾಪುರ ತಿಳಿಸಿದರು.

ಬಿಎಂಶ್ರೀ ಪ್ರತಿಷ್ಠಾನವು ಭಾನುವಾರ ಮೊಹರೆ ಹಣಮಂತರಾವ್ ದತ್ತಿ, ಅಮೀನ್ ಸಯಾನಿ ದತ್ತಿ, ಪಿ. ರಾಮಯ್ಯ ದತ್ತಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಪತ್ರಿಕೋದ್ಯಮ ಕುರಿತ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಅನ್ಯಾಯದ ವಿರುದ್ಧದ ಬಂಡಾಯಗಾರ ಹೃದಯದಲ್ಲಿದ್ದರೆ ಮಾತ್ರ ನೈಜ ಪತ್ರಕರ್ತನಾಗಲು ಸಾಧ್ಯ. ತತ್ವನಿಷ್ಠ, ಬದುಕಿಗೆ ನಿಷ್ಠರಾದವರಿಂದ ಮಾತ್ರ ವಸ್ತುನಿಷ್ಠ ಪತ್ರಿಕೋದ್ಯಮ ಮಾಡಲು ಸಾಧ್ಯ ಎಂದರು.

ತಳಸಮುದಾಯಗಳಿಂದ ಬರುವ ಪತ್ರಕರ್ತರಲ್ಲಿ ಆತ್ಮವಿಶ್ವಾಸ ಬಹಳ ಮುಖ್ಯ. ಶ್ರದ್ಧೆಯಿಂದ ಕೆಲಸ ಮಾಡಿದರೆ ಎಲ್ಲರನ್ನೂ ಮೀರಿ ಬೆಳೆಯಲು ಸಾಧ್ಯ. ನಾವೆಲ್ಲ ಚಳವಳಿಯ ಮುಂದುವರಿದ ಭಾಗವಾಗಿ ಪತ್ರಿಕೋದ್ಯಮಕ್ಕೆ ಬಂದಿದ್ದೇ ಹೊರತು ಹೊಟ್ಟೆಪಾಡಿಗಾಗಿ ಅಲ್ಲ. ಪತ್ರಕರ್ತರಾಗಲು ಕೌಶಲಬೇಕು. ಆದರೆ, ಅದೇ ಮುಖ್ಯವಲ್ಲ. ಸಮಾಜದ ಬಗ್ಗೆ ತುಡಿತ, ನ್ಯಾಯನಿಷ್ಠೆ ಮುಖ್ಯ’ ಎಂದು ಪ್ರತಿಪಾದಿಸಿದರು.

ದತ್ತಿ ಸ್ಥಾಪಕರಾದ ಮೋಹನ್‌ದೇವ್ ಆಳ್ವ ಮಾತನಾಡಿ, ‘ಪತ್ರಿಕೋದ್ಯಮಕ್ಕೆ ಸಂಬಂಧಿಸಿದಂತೆ ವಿಚಾರಸಂಕಿರಣಗಳು ಹೆಚ್ಚಾಗಬೇಕು. ಅದು ವಿದ್ಯಾರ್ಥಿಗಳನ್ನು ಕ್ರಿಯಾಶೀಲರನ್ನಾಗಿ ಮಾಡಲು ಉಪಯೋಗ ಆಗಲಿದೆ’ ಎಂದು ತಿಳಿಸಿದರು.

ಸಂಯುಕ್ತ ಕರ್ನಾಟಕ ಸಮೂಹ ಸಂಪಾದಕ ಹುಣಸವಾಡಿ ರಾಜನ್ ಮಾತನಾಡಿ, ‘ಇಂದಿನ ಮಾಧ್ಯಮ ರಂಗ ತತ್ವಾದರ್ಶಗಳನ್ನು ಕಳೆದುಕೊಳ್ಳುತ್ತಾ ಸಾಗಿದೆ. ಮಾಧ್ಯಮಗಳು ಉದ್ಯಮಗಳಾಗಿ ಮಗ್ಗುಲು ಬದಲಾಯಿಸಿವೆ. ಮೌಲ್ಯಗಳು ಬದಲಾಗಿದ್ದು, ವ್ಯಾಪಾರವೇ ಧ್ಯೇಯವಾಗಿದ್ದು, ಮನರಂಜನೆಯೇ ಯಶಸ್ವಿ ಮಾರ್ಗದಂತೆ ಕಾಣತೊಡಗಿದೆ’ ಎಂದು ವಿಷಾದಿಸಿದರು.

ಪ್ರತಿಷ್ಠಾನದ ಅಧ್ಯಕ್ಷ ಬೈರಮಂಗಲ ರಾಮೇಗೌಡ, ಗೌರವಾಧ್ಯಕ್ಷ ಪಿ.ವಿ. ನಾರಾಯಣ, ಗೌರವ ಕಾರ್ಯದರ್ಶಿ ಶಾಂತರಾಜು, ಅಂಕಣಕಾರ ರವೀಂದ್ರ ರೇಷ್ಮೆ, ಪತ್ರಕರ್ತೆ ಮಾಲತಿ ಭಟ್ ಭಾಗವಹಿಸಿದ್ದರು.

ಬೆಂಗಳೂರಿನಲ್ಲಿರುವ ಸೊರಬ ನಿವಾಸಿಗಳ ಸಮ್ಮಿಲನದಲ್ಲಿ ಮಧು ಬಂಗಾರಪ್ಪ

‘ಅಭಿವೃದ್ಧಿ ಕಾರ್ಯಕ್ಕೆ ಶೀಘ್ರ ಚಾಲನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಜ್ಯ ಸರ್ಕಾರ ಸೊರಬ ತಾಲ್ಲೂಕಿನ ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಸುಮಾರು ₹250 ಕೋಟಿ ಬಿಡುಗಡೆ ಮಾಡಿದೆ. ಅಭಿವೃದ್ಧಿ ಕಾರ್ಯಗಳಿಗೆ ಸದ್ಯದಲ್ಲೇ ಚಾಲನೆ ನೀಡಲಾಗುವುದು’ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಭರವಸೆ ನೀಡಿದರು.

ನಗರದ ಅರಮನೆ ಮೈದಾನದಲ್ಲಿ ಭಾನುವಾರ ನಡೆದ ಶಿವಮೊಗ್ಗ ಜಿಲ್ಲೆಯ ಸೊರಬ ವಿಧಾನಸಭಾ ಕ್ಷೇತ್ರದ ಬೆಂಗಳೂರು ನಿವಾಸಿಗಳ ‘ಸಮ್ಮಿಲನ 2024’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಶಿಕ್ಷಣ ಇಲಾಖೆಯನ್ನು ಸಮರ್ಥವಾಗಿ ಮುನ್ನಡೆಸುತ್ತಿದ್ದೇನೆ, ಸಾಮಾಜಿಕ ಜಾಲತಾಣಗಳಲ್ಲಿ ಬರುವ ಟ್ರೋಲ್‌ಗಳ ಬಗ್ಗೆ ಯಾರೂ ತಲೆಕೆಡಿಸಿಕೊಳ್ಳಬೇಕಿಲ್ಲ’ ಎಂದು ಹೇಳಿದರು.

‘ನಟ ಶಿವರಾಜ್‌ಕುಮಾರ್ ಅವರು ಆರೋಗ್ಯವಾಗಿದ್ದಾರೆ. ಸಣ್ಣ ಆರೋಗ್ಯದ ಸಮಸ್ಯೆಗಾಗಿ ಚಿಕಿತ್ಸೆ ಪಡೆಯಲು ಅವರು ಅಮೆರಿಕಕ್ಕೆ ತೆರಳಲಿದ್ದಾರೆ. ಒಂದು ವಾರ ನಾನು ಅವರ ಜೊತೆಯಲ್ಲಿರುತ್ತೇನೆ’ ಎಂದು ತಿಳಿಸಿದರು.

ಮಾಜಿ ಮುಖ್ಯಮಂತ್ರಿ ಎಸ್. ಬಂಗಾರಪ್ಪ ಅವರ ಪುತ್ರಿ ಸುಜಾತಾ ತಿಲಕ್ ಕುಮಾರ್ ಮಾತನಾಡಿ, ‘ಸಂಬಂಧಗಳನ್ನು ಬೆಸೆಯುವ ಇಂತಹ ಸಮ್ಮಿಲನ ಕಾರ್ಯಕ್ರಮಗಳು ನಡೆಯುತ್ತಿರಬೇಕು. ವಿಶೇಷವಾಗಿ ಮಲೆನಾಡಿನ ಕೊಟ್ಟೆ ಕಡಬು, ತೊಡೆದೊಳಗಿ, ಕಜ್ಜಾಯ, ಕೋಳಿಸಾರಿನಂತಹ ವಿವಿಧ ತಿನಿಸುಗಳನ್ನು ಬೆಂಗಳೂರು ಜನರಿಗೆ ಪರಿಚಯಿಸಬೇಕು’ ಎಂದರು.

ಬೆಂಗಳೂರಿನಲ್ಲಿರುವ ಸೊರಬ ನಿವಾಸಿಗಳ ಪೋಷಕರ ಮಕ್ಕಳು ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಟ್ಟರು. ಸಮ್ಮಿಲನ 2024ರ ಕಾರ್ಯಕ್ರಮದ ಸಂಚಾಲಕ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ನಿರ್ದೇಶಕ ಏಕಾಂತಪ್ಪ, ವಕೀಲರಾದ ಕೇಶವಮೂರ್ತಿ ಹಾಲಗಳಲೆ, ಕುಮಾರಸ್ವಾಮಿ ಹೊಸೂರು, ದಯಾನಂದ ಬಿದರಗೆರೆ, ಮುಕುಂದ ಹಿರೇಇಡಗೋಡು, ಅನಿಲ್, ಗಣಪತಿ ಹಳೇಸೊರಬ ಭಾಗವಹಿಸಿದ್ದರು.



‘ಸಮ್ಮಿಲನ 2024’ ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನೀಡಿದ ಸೊರಬ ನಿವಾಸಿಗಳ ಪೋಷಕರ ಮಕ್ಕಳನ್ನು ಸನ್ಮಾನಿಸಲಾಯಿತು. ಸಚಿವ ಮಧು ಬಂಗಾರಪ್ಪ ಅವರ ಪತ್ನಿ ಅನಿತಾ, ಮಧುಬಂಗಾರಪ್ಪ, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿಮಿಟೆಡ್‌ನ ಜಂಟಿ ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ತಿಲಕ್ ಕುಮಾರ್, ಸುಜಾತಾ ತಿಲಕ್ ಕುಮಾರ್ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು

‘ನಗರೇಶ್ವರ ನಾಗೇನಹಳ್ಳಿಗೆ ಕಾವೇರಿ ನೀರು’

ಮತ್ತಷ್ಟು ಹಳ್ಳಿಗಳಿಗೆ ಹಂತಹಂತವಾಗಿ ನೀರು ಪೂರೈಕೆ: ಶಾಸಕ ಬೈರತಿ ಬಸವರಾಜ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಸಮೀಪದ ನಗರೇಶ್ವರ ನಾಗೇನಹಳ್ಳಿಯಲ್ಲಿ ಜಲಮಂಡಳಿ ವತಿಯಿಂದ ಮನೆಮನೆಗೆ ಕಾವೇರಿ ನೀರು ಪೂರೈಸುವ ಕಾರ್ಯಕ್ರಮಕ್ಕೆ ಶಾಸಕ ಬೈರತಿ ಬಸವರಾಜ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಬಿಬಿಎಂಪಿ ವ್ಯಾಪ್ತಿಯ 110 ಹಳ್ಳಿಗಳಿಗೆ ಕುಡಿಯುವ ನೀರು ಒದಗಿಸುವ ಯೋಜನೆ ವ್ಯಾಪ್ತಿಗೆ ಕೆ.ಆರ್.ಪುರದ ಹನ್ನೊಂದು ಹಳ್ಳಿಗಳು ಒಳಗೊಂಡಿದ್ದು ನಗರೇಶ್ವರ ನಾಗೇನಹಳ್ಳಿಯೂ ಸೇರಿದೆ. ಇಲ್ಲಿನ ಸುತ್ತಮುತ್ತಲಿನ ಪ್ರದೇಶಗಳಲ್ಲಿ ನೀರಿನ ಬವಣೆ ವ್ಯಾಪಕವಾಗಿತ್ತು. ಕೊಳವೆ ಬಾವಿ ಕೊರೆಸಿದರೂ ನೀರು ದೊರಕುತ್ತಿರಲಿಲ್ಲ. ನೀರಿನ ಹಾಹಾಕಾರ ಹೆಚ್ಚಾಗಿತ್ತು. ಬೇಸಿಗೆಯಲ್ಲಂತೂ ಟ್ಯಾಂಕರ್ ಮೊರೆ ಹೋಗುವ ಪರಿಸ್ಥಿತಿ ಇತ್ತು. ಇದನ್ನೆಲ್ಲ ಮನಗಂಡು ಜಲಮಂಡಳಿ ಅಧಿಕಾರಿಗಳೊಂದಿಗೆ ನಿರಂತರ ಸಭೆಗಳನ್ನು ಮಾಡಿ ಸಂಪರ್ಕ ಸಾಧಿಸಿ ನೀರಿನ ಬವಣೆ ತೀರಿಸಲು ಸಂಕಲ್ಪ ಮಾಡಿದ್ದೆ. ಈಗ ಸಮಸ್ಯೆಗೆ ಮುಕ್ತಿ ಸಿಕ್ಕಿದೆ’ ಎಂದರು.

‘ಮುಂದಿನ ದಿನಗಳಲ್ಲಿ ಹಂತ ಹಂತವಾಗಿ ಇನ್ನುಳಿದ ಹಳ್ಳಿಗಳಿಗೆ ನೀರು ಪೂರೈಕೆ ಆಗಲಿದೆ’ ಎಂದರು.

ಕ್ಷೇತ್ರದ ಬಿಜೆಪಿ ಪ್ರಧಾನ ಕಾರ್ಯದರ್ಶಿ ನಾಗೇನಹಳ್ಳಿ ಲೋಕೇಶ್, ಬೈರತಿ ಗಣೇಶ್, ಶ್ರೀನಿವಾಸ್ ಗೌಡ, ಗಣೇಶ್ ರೆಡ್ಡಿ, ಕೃಷ್ಣಮೂರ್ತಿ, ಮಹೇಶ್, ರಾಮೇಗೌಡ, ಸತೀಶ್, ರಾಮಚಂದ್ರ, ವೆಂಕಟೇಶ್ ರೆಡ್ಡಿ, ಪಿ.ಗೌಡ, ರಾಜಶೇಖರ್ ರೆಡ್ಡಿ, ಪ್ರಕಾಶ್ ಇದ್ದರು.



ಶಾಸಕ ಬೈರತಿ ಬಸವರಾಜ ಅವರು ಕೊಳಾಯಿಗಳಿಗೆ ಪೂಜೆ ಸಲ್ಲಿಸಿ ನೀರು ಹರಿಸಿದರು

ಕುಂದು ಕೊರತೆ | ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ವಾಟ್ಸ್ ಆ್ಯಪ್ ಮಾಡಿ **9606038256**

‘ಬಾಗಿದ ಮರ ತೆರವುಗೊಳಿಸಿ’



ಸುಣಕನಪಾಳ್ಯ ಮುನೇಶ್ವರ ದೇವಸ್ಥಾನದ ಬಳಿ ಇರುವ ಮರ ರಸ್ತೆಗೆ ಬಾಗಿರುವುದು.


ಸುಣಕನಪಾಳ್ಯ ಮುನೇಶ್ವರ ಸ್ವಾಮಿ ದೇವಸ್ಥಾನದ ಬಳಿ ಇರುವ ಆಲದ ಮರವೊಂದು ರಸ್ತೆಯ ಮೇಲೆ ಬಾಗಿದೆ. ಈ ಮರದ ಬೇರು ಮೇಲೆ ಬಂದಿದ್ದು, ರಸ್ತೆಯ ಮೇಲೆ ಬೀಳುವ ಆತಂಕವಿದೆ. ಅನಾಹುತವಾಗುವ ಮುನ್ನ ಇದನ್ನು ತೆರವುಗೊಳಿಸಬೇಕು. ಈ ಬಗ್ಗೆ ಬಿಬಿಎಂಪಿಗೆ ಮನವಿ ಸಲ್ಲಿಸಿದರೂ, ಅಧಿಕಾರಿಗಳು ಸ್ಪಂದಿಸುತ್ತಿಲ್ಲ. ಕೂಡಲೇ ಇಲ್ಲಿನ ಮರ ತೆರವುಗೊಳಿಸಲು ಕ್ರಮ ಕೈಗೊಳ್ಳಬೇಕು.

ಸುಕನ್ಯಾ, ಸುಣಕನಪಾಳ್ಯ

‘ಪಾದಚಾರಿ ಮಾರ್ಗ ದುರಸ್ತಿಗೊಳಿಸಿ’

ರಾಜಾಜಿನಗರದ ಆರನೇ ಮುಖ್ಯರಸ್ತೆಯ ನಾಲ್ಕನೇ ವಿಭಾಗದ ಚರಂಡಿಗೆ ಹಾಕಿದ್ದ ಸಿಮೆಂಟ್ ಸ್ಲ್ಯಾಬ್‌ಗಳನ್ನು ಕಿತ್ತು ಹೂಳು ತೆಗೆಯಲಾಗಿದೆ. ಹೂಳು ಎತ್ತುವ ಕೆಲಸವಾದ ನಂತರ ಚರಂಡಿಗೆ ಹಾಕಿದ್ದ ಸ್ಲ್ಯಾಬ್‌ಗಳನ್ನು ಸರಿಯಾಗಿ ಮುಚ್ಚಿಲ್ಲ. ಈ ಮಾರ್ಗದಲ್ಲಿ ಪಾದಚಾರಿಗಳ ಓಡಾಟಕ್ಕೆ ಸಮಸ್ಯೆ ಆಗಿದೆ. ಈಗಾಗಲೇ ಹಿರಿಯ ನಾಗರಿಕರು ಹಾಗೂ ಮಕ್ಕಳು ಬಿದ್ದು ಗಾಯ ಮಾಡಿಕೊಂಡಿದ್ದಾರೆ. ಬಿಬಿಎಂಪಿ ಸಿಬ್ಬಂದಿ ಕೂಡಲೇ ಇಲ್ಲಿ ಹಾಕಿರುವ ಸ್ಲ್ಯಾಬ್‌ಗಳನ್ನು ಸರಿಯಾಗಿ ಜೋಡಿಸಿ ಈ ಮಾರ್ಗವನ್ನು ಸರಿಪಡಿಸಬೇಕು.

ಚಿನಕುರಳಿ ಎಸ್ ಶ್ರೀನಿವಾಸ, ರಾಜಾಜಿನಗರ



ರಾಜಾಜಿನಗರದ ಪಾದಚಾರಿ ಮಾರ್ಗದ ದುಃಸ್ಥಿತಿ

‘ಪಾದಚಾರಿ ಮಾರ್ಗದಲ್ಲಿ ಬೆಳೆದ ಗಿಡ–ಗಂಟಿಗಳು’

ಚಾಮರಾಜಪೇಟೆಯ ಎರಡನೇ ಮುಖ್ಯರಸ್ತೆ ಮೊದಲಿಯಾರ್ ಕಾಂಪೌಂಡ್‌ನ ಪಾದಚಾರಿ ಮಾರ್ಗದಲ್ಲಿ ಗಿಡ–ಗಂಟಿಗಳು ಬೆಳೆದುಕೊಂಡಿದ್ದು, ಹುಳ–ಹುಪ್ಪಟ್ಟೆಗಳ ವಾಸಸ್ಥಾನವಾಗಿ ಮಾರ್ಪಟ್ಟಿದೆ. ಸಾರ್ವಜನಿಕರು ಈ ಪಾದಚಾರಿ ಮಾರ್ಗದಲ್ಲಿ ಓಡಾಡಲು ಭಯಪಡುತ್ತಿದ್ದಾರೆ. ಬಿಬಿಎಂಪಿ ನಿರ್ವಹಣೆಯ ಕೊರತೆಯಿಂದ ಪಾದಚಾರಿ ಮಾರ್ಗದಲ್ಲಿ ಗಿಡ–ಗಂಟಿಗಳು ಬೆಳೆದುಕೊಂಡಿವೆ. ಸ್ಥಳೀಯ ನಿವಾಸಿಗಳು ತಮ್ಮ ಮನೆಯಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಇಲ್ಲಿಗೆ ತಂದು ಎಸೆಯುತ್ತಿದ್ದಾರೆ. ಕೂಡಲೇ ಬಿಬಿಎಂಪಿ ಸಿಬ್ಬಂದಿ ಈ ರಸ್ತೆಯ ದುರಸ್ತಿಗೆ ಆದ್ಯತೆ ನೀಡಬೇಕು.

ಚಂದ್ರಶೇಖರ ಪುಟ್ಟಪ್ಪ, ಚಾಮರಾಜಪೇಟೆ



ಪಾದಚಾರಿ ಮಾರ್ಗದಲ್ಲಿ ಬೆಳೆದಿರುವ ಗಿಡ–ಗಂಟಿಗಳು

‘ತಿಪ್ಪೆಗುಂಡಿಯಾದ ಪಾದಚಾರಿ ಮಾರ್ಗ’



ಕೆಂಪೇಗೌಡ ರಸ್ತೆಯ ಮೂರನೇ ಅಡ್ಡರಸ್ತೆಯ ಪಾದಚಾರಿ ಮಾರ್ಗದಲ್ಲಿ ಕಸ ರಾಶಿ

ಮೆಜೆಸ್ಟಿಕ್‌ಗೆ ಸಂಪರ್ಕ ಕಲ್ಪಿಸುವ ಕೆಂಪೇಗೌಡ ರಸ್ತೆಯ ಮೇನಕ ಚಿತ್ರಮಂದಿರದ ಮೂರನೇ ಅಡ್ಡರಸ್ತೆಯ ಪಾದಚಾರಿ ಮಾರ್ಗದಲ್ಲಿ ಕಸ ರಾಶಿ ಬಿದ್ದಿದ್ದು, ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದೆ. ಕಸದ ರಾಶಿಯಲ್ಲಿ ಬೈಕ್‌ವೊಂದನ್ನು ತಂದು ಎಸೆಯಲಾಗಿದೆ. ಇಲ್ಲಿನ ಕಸ ವಿಲೇವಾರಿ ಮಾಡುವಂತೆ ಈಗಾಗಲೇ ಬಿಬಿಎಂಪಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ.

ಶಿವಪ್ರಸಾದ್, ಚಿಕ್ಕಪೇಟೆ

‘ಮಾರುಕಟ್ಟೆ ರಸ್ತೆ ಅಭಿವೃದ್ಧಿಪಡಿಸಿ’



ಮಡಿವಾಳದ ತರಕಾರಿ ಮಾರುಕಟ್ಟೆ ರಸ್ತೆ ಕೆಸರು ಗದ್ದೆಯಂತಾಗಿದೆ

ಮಡಿವಾಳದಲ್ಲಿರುವ ತರಕಾರಿ ಮಾರುಕಟ್ಟೆಗೆ ಸಂಪರ್ಕಿಸುವ ರಸ್ತೆ ಸಂಪೂರ್ಣ ಹಾಳಾಗಿದೆ. ಮಳೆಯಾದರೆ ರಸ್ತೆಯು ಕೆಸರು ಗದ್ದೆಯಾಗಿ ಮಾರ್ಪಡುತ್ತದೆ. ಪ್ರತಿನಿತ್ಯ ಈ ಮಾರುಕಟ್ಟೆಗೆ ಸಾವಿರಾರು ಗ್ರಾಹಕರು ತರಕಾರಿ, ಹೂವು, ಹಣ್ಣುಗಳನ್ನು ಖರೀದಿಸಲು ಬರುತ್ತಾರೆ. ರಸ್ತೆಯ ಎರಡೂ ಬದಿಯಲ್ಲಿ ಅಂಗಡಿಗಳಿದ್ದು, ಅವುಗಳ ಮಧ್ಯದಲ್ಲಿ ಕಿರಿದಾದ ರಸ್ತೆ ಕೆಸರಿನಿಂದ ತುಂಬಿಕೊಂಡಿರುತ್ತದೆ. ಬಿಬಿಎಂಪಿ ಕೂಡಲೇ ಈ ರಸ್ತೆ ದುರಸ್ತಿಗೆ ಕ್ರಮ ಕೈಗೊಳ್ಳಬೇಕು.

ಎಚ್.ವಿ. ಶ್ರೀಧರ್, ಎಚ್‌ಎಸ್‌ಆರ್ ಲೇಔಟ್

‘ಜನಗಣತಿಯೊಂದಿಗೆ ಜಾತಿಗಣತಿಯೂ ನಡೆಯಲಿ’

ಬೆಂಗಳೂರು: ‘ಕೇಂದ್ರ ಸರ್ಕಾರದ ರಾಷ್ಟ್ರೀಯ ಜನಗಣತಿ ಆಯುಕ್ತರ ಕಚೇರಿಯು 2021ರಲ್ಲಿ ನಡೆಸಬೇಕಿದ್ದ ಜನಗಣತಿಯನ್ನು 2025ರಲ್ಲಿ ನಡೆಸುವ ಮಾಹಿತಿ ಬಂದಿದ್ದು, ಆಗ ಜನಗಣತಿ ಜತೆ ಜಾತಿ ಗಣತಿಯನ್ನೂ ಮಾಡಬೇಕು’ ಎಂದು ‘ಅಹಿಂದ–ಚಳವಳಿ’ ಸಂಘಟನೆ ಸಭೆಯಲ್ಲಿ ಒತ್ತಾಯ ಮಾಡಲಾಗಿದೆ.

ಸಂಘಟನೆಯ ರಾಜ್ಯ ಮುಖ್ಯ ಸಂಚಾಲಕ ಎಸ್. ಮೂರ್ತಿ ನೇತೃತ್ವದಲ್ಲಿ ಶಾಸಕರ ಭವನದಲ್ಲಿ ಭಾನುವಾರ ನಡೆದ ಸಭೆಯಲ್ಲಿ, ಜನಗಣತಿಯ ನಮೂನೆಗಳಲ್ಲಿ ಜಾತಿ ಮತ್ತು ಒಳಜಾತಿಗಳ ಕಲಂ ಅಳವಡಿಸಬೇಕು. ಅದಕ್ಕಾಗಿ ರಾಜ್ಯ ವ್ಯಾಪಿ ಆಂದೋಲನ ನಡೆಸಲು ನಿರ್ಧರಿಸಲಾಯಿತು.

ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳ ಅಂಗ ಸಂಸ್ಥೆಗಳಲ್ಲಿ ನೇರ ನೇಮಕಾತಿ ಬದಲು ಗುತ್ತಿಗೆ ಆಧಾರದ ನೇಮಕ ಮಾಡುತ್ತಿರುವುದು ಉದ್ಯೋಗ ಮೀಸಲಾತಿ ಆಶಯಗಳಿಗೆ ವಿರುದ್ಧವಾಗಿದೆ. ಅಲ್ಪಸಂಖ್ಯಾತರ, ಹಿಂದುಳಿದ ವರ್ಗಗಳ, ದಲಿತರ ಉದ್ಯೋಗ ಮೀಸಲಾತಿ ಹಕ್ಕುಗಳನ್ನು ಕಸಿದುಕೊಂಡಂತಾಗಿದೆ. ಇದನ್ನು ಕೈಬಿಟ್ಟು ನೇರ ನೇಮಕಾತಿ ವ್ಯವಸ್ಥೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳನ್ನು ಒತ್ತಾಯಿಸಲು, ಜನಾಂದೋಲನ ನಡೆಸಲು ತೀರ್ಮಾನಿಸಲಾಯಿತು. ಕಾಂತರಾಜ್ ನೇತೃತ್ವದ ವರದಿ ಬಿಡುಗಡೆ ಮಾಡಲು, ಪರಿಶಿಷ್ಟ ಜಾತಿ ಮತ್ತು ಪಂಗಡಗಳಲ್ಲಿ ಒಳಮೀಸಲಾತಿ ಅನುಷ್ಠಾನಗೊಳಿಸಲು ಒತ್ತಾಯಿಸಿ ರಾಜ್ಯವ್ಯಾಪಿ ಆಂದೋಲನ ನಡೆಸಲು ನಿರ್ಧರಿಸಲಾಯಿತು.

ನಗರದಲ್ಲಿ ಇಂದು

ಪೌರಾಣಿಕ ರಂಗ ತರಬೇತಿ ಶಿಬಿರ: ಉದ್ಘಾಟನೆ: ಧರಣಿದೇವಿ ಮಾಲಗತ್ತಿ, ಅಧ್ಯಕ್ಷತೆ: ಕೆ.ವಿ. ನಾಗರಾಜಮೂರ್ತಿ, ಉಪಸ್ಥಿತಿ: ರಂಗಶ್ರೀ ರಂಗಸ್ವಾಮಿ, ರಾಮಕೃಷ್ಣಯ್ಯ, ಕಲ್ಲೂರು ಶ್ರೀನಿವಾಸ್, ಎಸ್.ಎಲ್.ಎನ್. ಸ್ವಾಮಿ, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ಸ್ಥಳ: ನಯನ ರಂಗಮಂದಿರ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 11.30

ಚಾಂಪಿಯೆನಿಂಗ್ ಡಿಸೆಬಿಲಿಟಿ ಲೀಡರ್‌ಶಿಪ್ ಫಾರ್ ಎ ಸಸ್ಟೇನೇಬಲ್ ಟುಮಾರೊ: ಆಯೋಜನೆ: ಐಡಿಪಿಡಿ, ಸ್ಥಳ: ಇಂಡಿಯಾ ಕ್ಯಾಂಪಸ್ ಕ್ರೂಸೇಡ್ ಫಾರ್ ಕ್ರೈಸ್ಟ್, ಹೆಣ್ಣೂರು ಮುಖ್ಯರಸ್ತೆ, ಕಾಚರಕನಹಳ್ಳಿ, ಬೆಳಿಗ್ಗೆ 10

ಗಿರಿಜನ ಜಾನಪದ ಪರಿಷತ್ತಿಗೆ 70 ವರ್ಷ,

ಹಿ.ಚಿ. ಬೋರಲಿಂಗಯ್ಯ ಅವರ ಸಾಕ್ಷ್ಯಚಿತ್ರದ ಮುಹೂರ್ತ: ಅತಿಥಿಗಳು: ಆರ್. ಅಶೋಕ, ಶರತ್ ಆರ್. ಅಶೋಕ, ವೇಮಗಲ್ ಡಿ. ನಾರಾಯಣಸ್ವಾಮಿ, ಎ.ಆರ್. ಗೋವಿಂದಸ್ವಾಮಿ, ಟಿ. ತಿಮ್ಮೇಶ್, ಆಯೋಜನೆ: ಜಾನಪದ ಸಿರಿ ಕನ್ನಡ, ಸ್ಥಳ: ಪ್ರಸನ್ನ ವಿನಾಯಕ ದೇವಸ್ಥಾನ ಇಸ್ರೊ ಬಡಾವಣೆ, ಬೆಳಿಗ್ಗೆ 10.30



ಹಿ.ಚಿ. ಬೋರಲಿಂಗಯ್ಯ

ಸಿ. ರಾಜಗೋಪಾಲಚಾರಿ ಸ್ಮರಣೆ: ಭಾಗವಹಿಸುವವರು: ಮೋಹನ್‌ಕುಮಾರ್ ಚಕ್ರವರ್ತಿ, ಎಲ್. ವೆಂಕಟಪ್ಪ, ಅಧ್ಯಕ್ಷತೆ: ಶ್ರೀರಾಮೇಗೌಡ, ಆಯೋಜನೆ ಮತ್ತು ಸ್ಥಳ: ಉದಯಭಾನು ಕಲಾಸಂಘದ ಸಭಾಂಗಣ, ಕೆಂಪೇಗೌಡನಗರ, ಸಂಜೆ 6

ಸಿಎಆರ್ ಕಚೇರಿಯಲ್ಲಿ ಅಧಿಕಾರ ದುರ್ಬಳಕೆ: ₹59.80 ಲಕ್ಷ ವಂಚನೆ • ಸಿಸಿಬಿ ಪೊಲೀಸರಿಗೆ ದೂರು

ಎಸ್‌ಡಿಎ ಸೇರಿ ಇಬ್ಬರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರ ಸಶಸ್ತ್ರ ಮೀಸಲು ಪೊಲೀಸ್(ಸಿಎಆರ್) ಪಡೆಯ ಕೇಂದ್ರ ಕಚೇರಿಯಲ್ಲಿ ಅಧಿಕಾರ ದುರ್ಬಳಕೆ ಮಾಡಿಕೊಂಡು ₹ 59.80 ಲಕ್ಷ ವಂಚನೆ ಮಾಡಲಾಗಿದೆ ಎಂದು ಆರೋಪಿಸಿ ಸಿಸಿಬಿ ಪೊಲೀಸರಿಗೆ ದೂರು ನೀಡಲಾಗಿದೆ.

ಸಿಎಆರ್‌ನ ಸಹಾಯಕ ಆಡಳಿತಾಧಿಕಾರಿ ಡಿ.ರಾಜಲಕ್ಷ್ಮಿ ಅವರು ನೀಡಿರುವ ದೂರಿನ ಮೇರೆಗೆ ಹಿಂದಿನ ದ್ವಿತೀಯ ದರ್ಜೆ ಸಹಾಯಕ ಡಿ.ಎಸ್. ಪ್ರಶಾಂತ್ ಹಾಗೂ ನಿವೃತ್ತ ಸಹಾಯಕ ಆಡಳಿತಾಧಿಕಾರಿ ಬಿ. ಸರೋಜಾ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.



‘2020ರಿಂದ 2023ರ ಅವಧಿಯ ನಡುವಿನ ಹಣದ ವ್ಯವಹಾರದ ಕುರಿತ ಲೆಕ್ಕಪತ್ರ ಪರಿಶೋಧನೆಯಲ್ಲಿ ₹59.80 ಲಕ್ಷ ಹಣದ ಕೊರತೆ ಕಂಡು ಬಂದಿದೆ. ‘ಡಿಸಿಪಿ ಸಿಎಆರ್' ಅವರ ಹೆಸರಿನ ಬ್ಯಾಂಕ್ ಖಾತೆಗೆ ಹಾಕಿದ್ದ ಲೆಂಟ್ ಗಾರ್ಡ್ ಚಾರ್ಜಸ್ ಮೊತ್ತದಲ್ಲಿ ಕೊರತೆಯಾಗಿದ್ದು, ಅನಧಿಕೃತ ವಹಿವಾಟು ನಡೆದ ಬಗ್ಗೆ ಮಹಾಲೇಖಪಾಲರು ವರದಿ ನೀಡಿದ್ದಾರೆ. ಆಗ ಸಹಾಯಕ ಆಡಳಿತಾಧಿಕಾರಿಯಾಗಿ ಸರೋಜಾ ಹಾಗೂ ನಗದು ಶಾಖೆಯ ವಿಶೇಷ ನಿರ್ವಾಹಕರಾಗಿ ಪ್ರಶಾಂತ್ ಕರ್ತವ್ಯ ನಿರ್ವಹಿಸುತ್ತಿದ್ದರು’ ಎಂದು ದೂರಿನಲ್ಲಿ ಆರೋಪಿಸಲಾಗಿದೆ.

‘ಪ್ರಶಾಂತ್ ಅವರು ಮಂಡಿಸುವ ಕಡತಕ್ಕೆ ಅನುಮೋದನೆ ನೀಡುವ ಅಧಿಕಾರ ಸರೋಜಾ ಅವರದ್ದಾಗಿತ್ತು. ಸಿಎಆರ್ ಕೇಂದ್ರ ಘಟಕದ ಇಲಾಖಾ ವಹಿವಾಟಿನ ನಿರ್ವಹಣೆ ಅಧಿಕಾರ ಪ್ರಶಾಂತ್ ಅವರಿಗಿದ್ದು, ಅವರು ವರ್ಗಾವಣೆಯಾದ ನಂತರ ಆ ಸ್ಥಾನಕ್ಕೆ ಬಂದವರಿಗೆ ಚಾರ್ಜ್ ನೀಡಿಲ್ಲ. ಅಲ್ಲದೆ, ಅಕ್ರಮ ವಹಿವಾಟಿನ ಬಗ್ಗೆ ಸಹಾಯಕ ಆಡಳಿತಾಧಿಕಾರಿ ಅವರು ಶಿಸ್ತು ಕ್ರಮ ಕೈಗೊಂಡಿಲ್ಲ. ಈ ಬಗ್ಗೆ ಇಲಾಖಾ ವಿಚಾರಣೆ ವೇಳೆ ಸೂಕ್ತ ಉತ್ತರ, ದಾಖಲೆಗಳನ್ನು ನೀಡಿಲ್ಲ’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

‘ಇಲಾಖೆಗೆ ವಂಚನೆ ಹಾಗೂ ನಂಬಿಕೆ ದ್ರೋಹ ಮಾಡಿ ಸರ್ಕಾರಕ್ಕೆ ₹59,80,839 ಪಾವತಿಸದಿರುವ ಇಬ್ಬರು ಅಧಿಕಾರಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದ್ದಾರೆ.

ಮೇ ತಿಂಗಳಲ್ಲಿ ಬಿ. ಸರೋಜಾ ಅವರು ನಿವೃತ್ತಿಯಾಗಿದ್ದು, ಪ್ರಶಾಂತ್ ಅವರು ಕರ್ತವ್ಯದಲ್ಲಿದ್ದಾರೆ. ಇಬ್ಬರಿಗೂ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು ಎಂದು ಸಿಸಿಬಿ ಪೊಲೀಸರು ತಿಳಿಸಿದ್ದಾರೆ.

ಅಪರಾಧ ಸುದ್ದಿಗಳು

ಡಿಸಿಎಂ ವಿಶೇಷ ಕರ್ತವ್ಯ ಅಧಿಕಾರಿ ಹೆಸರು ದುರ್ಬಳಕೆ

ಬೆಂಗಳೂರು: ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ವಿಶೇಷ ಕರ್ತವ್ಯ ಅಧಿಕಾರಿಯ ಹೆಸರು ಮತ್ತು ಲೆಟರ್ ಹೆಡ್ ದುರ್ಬಳಕೆ ಮಾಡಿಕೊಂಡು ಭೂಪರಿವರ್ತನೆ ಮಾಡಿಸಲು ಯತ್ನಿಸಲಾಗಿದೆ.

ವಿಶೇಷ ಕರ್ತವ್ಯ ಅಧಿಕಾರಿ ಎಸ್. ಶಿವಶಂಕರ್ ಅವರ ದೂರಿನಂತೆ ವಿಧಾನಸೌಧ ಠಾಣೆಯಲ್ಲಿ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

‘ಶಿವಶಂಕರ್ ಅವರ ಹೆಸರು ಮತ್ತು ಲೆಟರ್‌ಹೆಡ್ ಬಳಸಿಕೊಂಡಿರುವ ಅಪರಿಚಿತರು, ಮೈಸೂರಿನ ಕೆಸರೆ ಗ್ರಾಮದಲ್ಲಿರುವ 5 ಎಕರೆ 22 ಗುಂಟೆ ವ್ಯವಸಾಯದ ಭೂಮಿಯನ್ನು ವಸತಿ ಉದ್ದೇಶಕ್ಕಾಗಿ ಅನುಮೋದಿಸುವಂತೆ ನಗರಾಭಿವೃದ್ಧಿ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ. ಆ ಕಡತಕ್ಕೆ ಸಂಬಂಧಪಟ್ಟ ಜಮೀನಿನ ಮಾಲೀಕ ರಾಮಕೃಷ್ಣ ಅವರನ್ನು ವಿಚಾರಣೆ ನಡೆಸುವಂತೆ ಅವರು ಮನವಿ ಮಾಡಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

ನ್ಯಾಯಾಧೀಶರ ಮೊಬೈಲ್ ಕಿತ್ತುಕೊಂಡು ಪರಾರಿ

ಬೆಂಗಳೂರು: ರಸ್ತೆಯಲ್ಲಿ ವಾಯುವಿಹಾರ ಮಾಡುತ್ತಿದ್ದ ನ್ಯಾಯಾಧೀಶರ ಮೊಬೈಲ್ ಅನ್ನು ಅಪರಿಚಿತ ವ್ಯಕ್ತಿ ಕಿತ್ತುಕೊಂಡು ಪರಾರಿಯಾಗಿದ್ದು, ಈ ಸಂಬಂಧ ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡಿ.5ರಂದು ರಾತ್ರಿ 9.30ರಲ್ಲಿ ಸಿವಿಲ್ ನ್ಯಾಯಾಧೀಶ ಮಹಾಂತೇಶ ಮಠದ ಅವರು ಕ್ರೆಸೆಂಟ್ ರಸ್ತೆಯಲ್ಲಿರುವ ಸಚಿವ ಸತೀಶ್ ಜಾರಕಿಹೊಳಿ ನಿವಾಸದ ಮುಂದೆ ವಾಯುವಿಹಾರ ಮಾಡುವ ವೇಳೆ ದ್ವಿಚಕ್ರ ವಾಹನದಲ್ಲಿ ಬಂದ ಅಪರಿಚಿತ ವ್ಯಕ್ತಿ, ಅವರ ಕೈಯಲ್ಲಿದ್ದ ₹15 ಸಾವಿರ ಮೌಲ್ಯದ ಮೊಬೈಲ್ ಕಿತ್ತುಕೊಂಡು ಹೋಗಿದ್ದಾನೆ. ನ್ಯಾಯಾಧೀಶರ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಆರೋಪಿ ಪತ್ತೆ ಕಾರ್ಯ ಕೈಗೊಂಡಿದ್ದಾರೆ. ಘಟನೆ ನಡೆದ ಸುತ್ತಮುತ್ತಲ ಸಿಸಿಟಿವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಲಾಗುತ್ತಿದೆ ಎಂದು ತಿಳಿಸಿದ್ದಾರೆ.

ಕದ್ದ ಬೈಕ್‌ನಲ್ಲಿ ಪ್ರೇಯಸಿ ಜತೆ ಜಾಲಿ ರೈಡ್

ಬೆಂಗಳೂರು: ದ್ವಿಚಕ್ರ ವಾಹನವನ್ನು ಕಳವು ಮಾಡಿ ಪ್ರೇಯಸಿಯ ಜತೆ ಜಾಲಿ ರೈಡ್ ಹೋಗುತ್ತಿದ್ದ ಆರೋಪಿಯನ್ನು ಹಲಸೂರು ಗೇಟ್ ಪೊಲೀಸರು ಬಂಧಿಸಿದ್ದಾರೆ.

ಠಾಣಾ ವ್ಯಾಪ್ತಿಯ ನಿವಾಸಿ ಆಸಿಫ್ ಅವರನ್ನು ಬಂಧಿಸಿ, ವಿಚಾರಣೆ ನಡೆಸಲಾಗುತ್ತಿದೆ.

‘ಆರೋಪಿಯು ಕಳವು ಮಾಡಿದ ಬೈಕ್‌ನಲ್ಲಿ ಪ್ರೇಯಸಿಯನ್ನು ಜಾಲಿ ರೈಡ್‌ಗೆ ಕರೆದೊಯ್ಯುತ್ತಿದ್ದ. ಎಷ್ಟು ದ್ವಿಚಕ್ರ ವಾಹನಗಳ ಕಳ್ಳತನ ಪ್ರಕರಣದಲ್ಲಿ ಭಾಗಿಯಾಗಿದ್ದಾನೆ ಎಂಬುದರ ಬಗ್ಗೆ ತನಿಖೆ ನಡೆಯುತ್ತಿದೆ’ ಎಂದು ಪೊಲೀಸರು ತಿಳಿಸಿದರು.

‘ಆರೋಪಿ ವಿರುದ್ಧ ಬೈಕ್ ಕಳ್ಳತನ, ದರೋಡೆ, ಕೊಲೆ ಯತ್ನ ಸೇರಿ ಏಳು ಪ್ರಕರಣ ದಾಖಲಾಗಿವೆ. ಪೊಲೀಸರಿಗೆ ಸಿಗದೆ ತಲೆಮರೆಸಿಕೊಂಡಿದ್ದ. ಹದಿನಾಲ್ಕು ವರ್ಷದ ಬಳಿಕ ಆರೋಪಿಯನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಲಾರಿ ಡಿಕ್ಕಿ: ಸ್ಕೂಟರ್ ಸವಾರ ಸಾವು

ಬೆಂಗಳೂರು: ದೊಡ್ಡಮರದ ರಸ್ತೆಯ ಶಾಲೆ ಮುಂಭಾಗ ಲಾರಿಯೊಂದು ಸ್ಕೂಟರ್‌ಗೆ ಡಿಕ್ಕಿ ಹೊಡೆದ ಪರಿಣಾಮ ಕೇರಳ ನಿವಾಸಿ ಥಾಮಸ್ ಅಂಥೋನಿ (70) ಮೃತಪಟ್ಟಿರುವ ಘಟನೆ ಎಲೆಕ್ಟ್ರಾನಿಕ್ ಸಿಟಿ ಸಂಚಾರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

ಘಟನೆಯಲ್ಲಿ ಥಾಮಸ್ ಅವರ ಮೊಮ್ಮಗಳು ಗಾಯಗೊಂಡಿದ್ದು, ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ರಾಯಸಂದ್ರದಲ್ಲಿರುವ ಮಗಳ ಮನೆಗೆ ಥಾಮಸ್ ಬಂದಿದ್ದರು. ಮಧ್ಯಾಹ್ನ ಸುಮಾರು 1.30ರಲ್ಲಿ ಮೊಮ್ಮಗಳನ್ನು ಸ್ಕೂಟರ್‌ನಲ್ಲಿ ಕರೆದುಕೊಂಡು ಅಂಗಡಿಗೆ ಹೋಗಿ ವಾಪಸ್ ಬರುತ್ತಿದ್ದ ವೇಳೆ ವೇಗವಾಗಿ ಬಂದ ಲಾರಿ ಡಿಕ್ಕಿ ಹೊಡೆದಿದೆ. ಕೆಳಗೆ ಬಿದ್ದು ತೀವ್ರವಾಗಿ ಗಾಯಗೊಂಡ ಥಾಮಸ್ ಅವರನ್ನು ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ, ಚಿಕಿತ್ಸೆಗೆ ಸ್ಪಂದಿಸಲಿಲ್ಲ ಎಂದು ಪೊಲೀಸರು ಹೇಳಿದ್ದಾರೆ.

ರಸ್ತೆ ದಾಟುವಾಗ ವಾಹನ ಡಿಕ್ಕಿ: ಹೆಣ್ಣೂರು ಸಂಚಾರಿ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಅಪರಿಚಿತ ವಾಹನ ಡಿಕ್ಕಿ ಹೊಡೆದ ಪರಿಣಾಮ ಜಾರ್ಖಂಡ್ ರಾಜ್ಯದ ಕಿಶೋರ್ ಮಿರದ ಮೃತಪಟ್ಟಿದ್ದಾರೆ.

ಥಣಿಸಂದ್ರದಲ್ಲಿ ಕೂಲಿ ಕೆಲಸ ಮಾಡುತ್ತಿದ್ದ ಇವರು, ರಾತ್ರಿ 9 ಗಂಟೆ ಸಮಯದಲ್ಲಿ ಹೆಗಡೆನಗರ–ಥಣಿಸಂದ್ರ ಮುಖ್ಯರಸ್ತೆಯ ಕಲ್ಯಾಣ ಮಂಟಪದ ಸಮೀಪದ ರಸ್ತೆ ದಾಟುತ್ತಿದ್ದಾಗ ವಾಹನ ಡಿಕ್ಕಿ ಹೊಡೆದಿದೆ.

ಸುದ್ದಿ 2 ನಿಮಿಷ

ವರ್ತೂರು: ನಾಯಿ ಮರಿ ಮೇಲೆ ಕಾರು ಹರಿಸಿದ ಚಾಲಕ

ಬೆಂಗಳೂರು: ನಾಯಿ ಮರಿ ಮೇಲೆ ಕಾರಿನ ಚಕ್ರ ಹರಿಸಿರುವ ಘಟನೆ ನಗರದ ವರ್ತೂರಿನ ಬೆಳಗೆರೆಯ ಅಪಾರ್ಟ್‌ಮೆಂಟ್‌ನಲ್ಲಿ ನಡೆದಿದೆ.

ಅಪಾರ್ಟ್‌ಮೆಂಟ್‌ನ ಗೇಟ್ ಬಳಿ ನಿಂತಿದ್ದ ನಾಯಿ ಮರಿ ಮೇಲೆ ಚಾಲಕ ಕಾರು ಹತ್ತಿಸಿದ್ದು, ಡಿಸೆಂಬರ್ 4ರಂದು ನಡೆದ ಈ ಘಟನೆಯ ದೃಶ್ಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆ ಆಗಿದೆ.

ನಾಯಿ ಮರಿ ಒದ್ದಾಡುತ್ತಿದ್ದರೂ ವಾಹನ ನಿಲ್ಲಿಸಲಿಲ್ಲ. ಸಾರ್ವಜನಿಕರು ಸಿಸಿಟಿವಿ ಕ್ಯಾಮೆರಾದ ದೃಶ್ಯವನ್ನು ‘ಎಕ್ಸ್’ನಲ್ಲಿ ಅಪ್‌ಲೋಡ್ ಮಾಡಿ ನಗರ ಪೊಲೀಸರಿಗೆ ಟ್ಯಾಗ್ ಮಾಡುವ ಮೂಲಕ ಕ್ರಮಕ್ಕೆ ಆಗ್ರಹಿಸಿದ್ದಾರೆ.

ಕಾರಿನ ಮೇಲೆ ನಾಯಿಗಳು: ಕಾರಿನ ಮೇಲೆ ನಾಯಿಗಳನ್ನು ಕೂರಿಸಿಕೊಂಡು ಹೋಗಿದ್ದ ವ್ಯಕ್ತಿಯನ್ನು ಬಾಣಸವಾಡಿ ಪೊಲೀಸರು ಬಂಧಿಸಿದ್ದಾರೆ.

ಕಲ್ಯಾಣ ನಗರ ಸಮೀಪ ಹರೀಶ್ ಅವರು ತಮ್ಮ ಕಾರಿನ ಮೇಲೆ ಮೂರು ನಾಯಿಗಳನ್ನು ಕೂರಿಸಿಕೊಂಡು, ಅಡ್ಡಾದಿಡ್ಡಿ ಚಾಲನೆ ಮಾಡುತ್ತಿದ್ದರು. ಇದನ್ನು ಪ್ರಶ್ನಿಸಿದ ಸಾರ್ವಜನಿಕರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು.

ಸಾಮಾಜಿಕ ಜಾಲತಾಣದಲ್ಲಿ ವಿಡಿಯೊ ಹರಿದಾಡಿತ್ತು. ಘಟನೆ ಬಗ್ಗೆ ಪ್ರಾಣಿ ಪ್ರಿಯರು ಆಕ್ರೋಶ ವ್ಯಕ್ತಪಡಿಸಿದ್ದರು. ಬಾಣಸವಾಡಿ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ಆರೋಪಿಯನ್ನು ಬಂಧಿಸಿದ್ದಾರೆ.



ದುಪ್ಪಟ್ಟು ದರ ಕೇಳಿ ವಿದ್ಯಾರ್ಥಿಗೆ ಆಟೊ ಚಾಲಕನ ನಿಂದನೆ

ಬೆಂಗಳೂರು: ನಗರದಲ್ಲಿ ಆಟೊ ಚಾಲಕರೊಬ್ಬರು ದುಪ್ಪಟ್ಟು ಹಣ ನೀಡುವಂತೆ ವಿದ್ಯಾರ್ಥಿಗೆ ಬೆದರಿಕೆ ಹಾಕಿರುವ ಘಟನೆ ನಡೆದಿದೆ.

ಖಾಸಗಿ ಕಂಪನಿಯೊಂದರಲ್ಲಿ ಇಂಟರ್ನ್‌ಶಿಪ್ ಮುಗಿಸಿ ವಾಪಸ್ ಆಗುವ ವೇಳೆ ವಿದ್ಯಾರ್ಥಿಯು ‘ನಮ್ಮ ಯಾತ್ರಿ’ ಆ್ಯಪ್ ಮೂಲಕ ಬೆಳ್ಳಂದೂರಿನಿಂದ ಮೈಲಸಂದ್ರಕ್ಕೆ ಆಟೊ ಬುಕ್ ಮಾಡಿದ್ದರು. ಈ ವೇಳೆ ಆ್ಯಪ್‌ನಲ್ಲಿ ₹380 ತೋರಿಸಿದೆ. ಚಾಲಕ ₹50 ಹೆಚ್ಚು ನೀಡುವಂತೆ ಕೇಳಿದ್ದು ಅದಕ್ಕೆ ವಿದ್ಯಾರ್ಥಿ ಒಪ್ಪಿ, ಆಟೊದಲ್ಲಿ ಮನೆಗೆ ಬಂದಿದ್ದಾರೆ.

ವಿದ್ಯಾರ್ಥಿ ₹430 ನೀಡಲು ಮುಂದಾದಾಗ ಚಾಲಕ ₹ 500 ನೀಡುವಂತೆ ಒತ್ತಾಯಿಸಿದ್ದಾರೆ. ಇದಕ್ಕೆ ವಿದ್ಯಾರ್ಥಿ ನಿರಾಕರಿಸಿದ್ದರಿಂದ ಚಾಲಕ ಅವಾಚ್ಯ ಪದಗಳಿಂದ ನಿಂದಿಸಿ, ಹಲ್ಲೆ ಮಾಡಲು ಮುಂದಾಗಿದ್ದಾರೆ. ಇದರಿಂದ ಹೆದರಿದ ವಿದ್ಯಾರ್ಥಿ ₹500 ಕೊಟ್ಟಿದ್ದಾರೆ.

ಘಟನೆ ಬಗ್ಗೆ ವಿಡಿಯೊ ಮೂಲಕ ಸಾಮಾಜಿಕ ಜಾಲತಾಣದಲ್ಲಿ ವಿದ್ಯಾರ್ಥಿ ಹಂಚಿಕೊಂಡಿದ್ದಾರೆ.

ಯುವತಿ ಜತೆ ಅಸಭ್ಯ ವರ್ತನೆ: ಆರೋಪಿ ಬಂಧನ

ಬೆಂಗಳೂರು: ಮದ್ಯದ ಅಮಲಿನಲ್ಲಿ ಯುವತಿಯ ಮೇಲೆ ಹಲ್ಲೆ ಮಾಡಿ, ಅಸಭ್ಯವಾಗಿ ವರ್ತಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಸಂಜಯ ನಗರ ಠಾಣೆ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

ಪಶ್ಚಿಮ ಬಂಗಾಳ ಮೂಲದ 26 ವರ್ಷದ ಯುವತಿ ನೀಡಿರುವ ದೂರಿನ ಮೇರೆಗೆ ಪ್ಲಾನೆಟ್ ವಿಸ್ತಾ ಅಪಾರ್ಟ್‌ಮೆಂಟ್ ಮಾಲೀಕನ ಪುತ್ರ ಮಂಜುನಾಥ್ ಗೌಡ ಅವರನ್ನು ಪೊಲೀಸರು ಬಂಧಿಸಿದ್ದಾರೆ.

‘ಡಿಸೆಂಬರ್ 3ರಂದು ರಾತ್ರಿ 10.30ರಲ್ಲಿ ಪಾರ್ಸೆಲ್ ಪಡೆದುಕೊಳ್ಳಲು ಗೇಟ್ ಬಳಿ ಬಂದಾಗ ಸ್ಥಳದಲ್ಲಿದ್ದ ಆರೋಪಿ ಮಂಜುನಾಥ್ ಗೌಡ, ಅವಾಚ್ಯ ಶಬ್ದಗಳಿಂದ ನಿಂದಿಸಿ, ಕಪಾಳಕ್ಕೆ ಹೊಡೆದಿದ್ದ. ತಪ್ಪಿಸಿಕೊಂಡು ಓಡಿದಾಗ ಅಡ್ಡಗಟ್ಟಿ ಹಲ್ಲೆ ಮಾಡಿದ್ದ’ ಎಂದು ಯುವತಿ ದೂರು ನೀಡಿದ್ದರು.

‘ಯುವತಿಯ ಫ್ಲ್ಯಾಟ್‌ಗೆ ಅಪರಿಚಿತರು ಬರುತ್ತಿದ್ದರು. ಇದನ್ನು ಪ್ರಶ್ನಿಸಿದಕ್ಕೆ ಯುವತಿಯೇ ಗಲಾಟೆ ಮಾಡಿ, ಸ್ನೇಹಿತರ ಜತೆ ಸೇರಿ ನನ್ನ ಮೇಲೆ ಹಲ್ಲೆ ನಡೆಸಿದರು ಎಂದು ವಿಚಾರಣೆ ವೇಳೆ ಆರೋಪಿ ತಿಳಿಸಿದ್ದಾನೆ’ ಎಂದು ಪೊಲೀಸರು ತಿಳಿಸಿದರು.

ಈ ಹಿಂದೆ ಹೊಯ್ಸಳ ಸಿಬ್ಬಂದಿ ಕರ್ತವ್ಯಕ್ಕೆ ಅಡ್ಡಿಪಡಿಸಿದ ಆರೋಪಕ್ಕೆ ಸಂಬಂಧಿಸಿದಂತೆ ಮಂಜುನಾಥ ಗೌಡ ವಿರುದ್ಧ ಪ್ರಕರಣ ದಾಖಲಾಗಿ, ಬಂಧಿಸಲಾಗಿತ್ತು.

‘ಡಿ.3ರಂದು ರಾತ್ರಿ ಯುವತಿ ಪಾರ್ಸೆಲ್ ಪಡೆಯಲು ಬಂದಾಗ ಮೂವರು ಸ್ನೇಹಿತರು ಇದ್ದರು. ಅವರು ಗಲಾಟೆ ಮಾಡುತ್ತಿದ್ದರು. ಫ್ಲ್ಯಾಟ್ ಒಳಗೆ ಅವರನ್ನು ಕರೆದುಕೊಂಡು ಹೋಗಬೇಡಿ ಎಂದು ಮಗ ಮಂಜುನಾಥ್ ಗೌಡ ಹೇಳಿದ. ಈ ವಿಚಾರಕ್ಕೆ ಯುವತಿ ಆಕ್ರೋಶಗೊಂಡು ಜಗಳ ತೆಗೆದಳು. ಆಕೆ ಮತ್ತು ಸ್ನೇಹಿತರು ನನ್ನ ಮಗನ ಮೇಲೆಯೇ ಹಲ್ಲೆ ಮಾಡಿ, ಕೆಳಗೆ ಬೀಳಿಸಿದರು’ ಎಂದು ಪ್ಲಾನೆಟ್ ವಿಸ್ತಾ ಅಪಾರ್ಟ್‌ಮೆಂಟ್ ಮಾಲೀಕ ಕೆಂಪೇಗೌಡ ತಿಳಿಸಿದ್ದಾರೆ.

‘ಆರು ತಿಂಗಳಿಂದ ಫ್ಲ್ಯಾಟ್‌ನಲ್ಲಿ ಬಾಡಿಗೆಗಿರುವ ಯುವತಿ, ತನ್ನ ಸ್ನೇಹಿತರೊಂದಿಗೆ ತಡರಾತ್ರಿವರೆಗೂ ಮದ್ಯದ ಪಾರ್ಟಿ ಮಾಡಿ, ಕಿರುಚಾಡುತ್ತಿದ್ದರು. ಈ ಬಗ್ಗೆ ಅಕ್ಕಪಕ್ಕದ ನಿವಾಸಿಗಳು ದೂರು ನೀಡಿದ್ದರು. ಮನೆ ಖಾಲಿ ಮಾಡುವಂತೆ ನೋಟಿಸ್ ನೀಡಲಾಗಿತ್ತು. ಅದಕ್ಕಾಗಿ ಈ ರೀತಿ ಆರೋಪ ಮಾಡಿದ್ದಾಳೆ. ಈ ಸಂಬಂಧ ಯುವತಿ ವಿರುದ್ಧ ಪೊಲೀಸರಿಗೆ ದೂರು ನೀಡಲಾಗುವುದು’ ಎಂದಿದ್ದಾರೆ.

ದೂರು ನೀಡಿದ ನಂತರವೂ ಆರೋಪಿ ಮಂಜುನಾಥ್ ಗೌಡ ಬೆದರಿಕೆ ಹಾಕಿದ್ದಾನೆ ಎಂದು ಯುವತಿ ವಿಡಿಯೊ ಮೂಲಕ ಆರೋಪಿಸಿದ್ದಾಳೆ.



ಮತ್ತೇರಿಸುವ ಔಷಧ ನೀಡಿ ಅತ್ಯಾಚಾರ

ಬೆಂಗಳೂರು: ಯುವತಿಗೆ ಮತ್ತೇರಿಸುವ ಔಷಧ ನೀಡಿ ಅತ್ಯಾಚಾರ ಎಸಗಿ, ವಿಡಿಯೊ ಚಿತ್ರೀಕರಣ ಮಾಡಿಕೊಂಡು ಬೆದರಿಸಿ, ಜಾತಿ ನಿಂದನೆ ಮಾಡಿರುವ ಆರೋಪಕ್ಕೆ ಸಂಬಂಧಿಸಿದಂತೆ ಆಂಧ್ರಪ್ರದೇಶದ ಯುವಕನ ವಿರುದ್ಧ ಪ್ರಕರಣ ದಾಖಲಾಗಿದೆ.

26 ವರ್ಷದ ಯುವತಿ ನೀಡಿರುವ ದೂರಿನ ಮೇರೆಗೆ ಯುವಕ ಅಕ್ಕಿ ಲಕ್ಷ್ಮೀರೆಡ್ಡಿ ವಿರುದ್ಧ ಹೈಗ್ರೌಂಡ್ಸ್ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು, ಕೃತ್ಯ ನಡೆದ ಸ್ಥಳ ಜೆ.ಸಿ.ನಗರ ವ್ಯಾಪ್ತಿಗೆ ಬರುವುದರಿಂದ ತನಿಖೆಯನ್ನು ಜೆ.ಸಿ.ನಗರ ಉಪವಿಭಾಗಕ್ಕೆ ವರ್ಗಾಯಿಸಿದ್ದಾರೆ.

ನಗರದ ಖಾಸಗಿ ಆಸ್ಪತ್ರೆಯಲ್ಲಿ ಶುಶ್ರೂಷಕಿ ಆಗಿರುವ ಯುವತಿ, 2019ರಲ್ಲಿ ಆರ್.ಟಿ. ನಗರದ ಖಾಸಗಿ ಬ್ಯಾಂಕ್‌ವೊಂದರ ಕ್ರೆಡಿಟ್ ಕಾರ್ಡ್ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಆಗ ಲಕ್ಷ್ಮೀರೆಡ್ಡಿಯ ಪರಿಚಯವಾಗಿತ್ತು.

‘2019ರ ನವೆಂಬರ್‌ನಲ್ಲಿ ತನ್ನ ಸಹೋದರಿಯ ಹುಟ್ಟುಹಬ್ಬದ ಕಾರ್ಯಕ್ರಮವಿದೆ ಎಂದು ಆರ್.ಟಿ. ನಗರದ ರೆಸಿಡೆನ್ಸಿಯೊಂದಕ್ಕೆ ಆಹ್ವಾನಿಸಿದ್ದ ಆರೋಪಿ, ಚಹಾದಲ್ಲಿ ಮತ್ತು ಬರುವ ಔಷಧಿ ಬೆರೆಸಿ, ಕುಡಿಸಿ ಅತ್ಯಾಚಾರ ಮಾಡಿದ್ದಾನೆ. ಕೃತ್ಯದ ವಿಡಿಯೊ ಚಿತ್ರೀಕರಿಸಿಕೊಂಡು, ಬೆದರಿಸಿ ನಿರಂತರವಾಗಿ ಲೈಂಗಿಕ ಶೋಷಣೆ ಮಾಡಿದ್ದಾನೆ’ ಎಂದು ಯುವತಿ ದೂರಿನಲ್ಲಿ ಆರೋಪಿಸಿದ್ದಾರೆ.

‘ನನ್ನ ಜಾತಿ ಹಾಗೂ ತಾಯಿಯನ್ನು ನಿಂದಿಸಿದ್ದಾನೆ. ಮನೆಯಲ್ಲಿದ್ದ ಅಂಬೇಡ್ಕರ್ ಅವರ ಫೋಟೊ ತೆಗೆದುಹಾಕುವಂತೆ ಕಿರುಕುಳ ನೀಡಿದ್ದಾನೆ. ನವೆಂಬರ್‌ನಲ್ಲಿ ತನ್ನನ್ನು ಹೋಟೆಲ್‌ಗೆ ಕರೆದೊಯ್ದು ಮತ್ತೆ ಲೈಂಗಿಕ ದೌರ್ಜನ್ಯ ಎಸಗಿದ್ದಾನೆ’ ಎಂದು ಯುವತಿ ಆರೋಪಿಸಿದ್ದಾರೆ.

‘ಮತ್ತೆ ನವೆಂಬರ್ 30ರಂದು ನನ್ನನ್ನು ಭೇಟಿಯಾಗಿದ್ದ ಆರೋಪಿ, ಮೊಬೈಲ್ ವಾಲ್‌ಪೇಪರ್‌ನಲ್ಲಿದ್ದ ಅಂಬೇಡ್ಕರ್ ಅವರ ಫೋಟೊ ತೆಗೆದುಹಾಕುವಂತೆ ಬೆದರಿಸಿ ಮೊಬೈಲ್ ಒಡೆದು ಹಾಕಿದ್ದಾನೆ’ ಎಂದು ಯುವತಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಸಂತ್ರಸ್ತ ಯುವತಿ ದೂರು ನೀಡುತ್ತಿದ್ದಂತೆ ಆರೋಪಿ ಮೊಬೈಲ್ ಫೋನ್ ಸ್ವಿಚ್ ಆಫ್ ಮಾಡಿಕೊಂಡು ನಾಪತ್ತೆಯಾಗಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ಕಾಮಗಾರಿಗಳಿಗೆ ಶಾಸಕ ಚಾಲನೆ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿ ನಗರ: ಉದಿಪಾಳ್ಯ, ಬಾದೆಕಟ್ಟೆ,ಎಸ್. ರಮೇಶ್ ನಗರ, ಉತ್ತರಿ, ದಿಣ್ಣೆ ಪಾಳ್ಯದಲ್ಲಿ ಶಾಸಕರ ಅನುದಾನದ ₹10 ಕೋಟಿ ಮತ್ತು ಗ್ರಾಮ ಪಂಚಾಯಿತಿ ಅನುದಾನದ ₹8 ಕೋಟಿ ವೆಚ್ಚದಲ್ಲಿ ಕಗ್ಗಲೀಪುರ ಗ್ರಾಮ ಪಂಚಾಯಿತಿ ಕಟ್ಟಡ ನಿರ್ಮಾಣ ಮತ್ತು ಒಳಚರಂಡಿ ಕಾಮಗಾರಿಗೆ ಶಾಸಕ ಎಸ್.ಟಿ. ಸೋಮಶೇಖರ್ ಅವರು ಚಾಲನೆ ನೀಡಿದರು.

ನಂತರ ಮಾತನಾಡಿ, ‘ರಾಜ್ಯ ಸರ್ಕಾರ ಈ ವ್ಯಾಪ್ತಿಯ ಗ್ರಾಮಗಳಲ್ಲಿ ಒಳಚರಂಡಿ ಕಾಮಗಾರಿ ಕೈಗೊಳ್ಳಲು ₹25 ಕೋಟಿ ವಿಶೇಷ ಅನುದಾನ ನೀಡಲಿದೆ. ಉಳಿದ ಗ್ರಾಮಗಳಲ್ಲಿಯೂ ಹಂತ ಹಂತವಾಗಿ ಕಾಮಗಾರಿಗೆ ಚಾಲನೆ ನೀಡಲಾಗುವುದು’ ಎಂದರು.

ಕಗ್ಗಲೀಪುರ ಗ್ರಾಮ ಪಂಚಾಯಿತಿ ಅಧ್ಯಕ್ಷ ಕೆ.ಎಸ್.ಪರ್ವೀಜ್ ಮಾತನಾಡಿದರು.

ಚಿತ್ರಾವಳಿ



ಮಂಡ್ಯದ ಕೆ.ವಿ.ಶಂಕರಗೌಡ ರೈತ ಸಭಾಂಗಣದಲ್ಲಿ ಕರ್ನಾಟಕ ಸಂಘದಿಂದ ಭಾನುವಾರ ಆಯೋಜಿಸಿದ್ದ ಸಮಾರಂಭದಲ್ಲಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎಚ್.ಎನ್.ನಾಗಮೋಹನ್‌ದಾಸ್ ಅವರಿಗೆ ‘ಪ್ರಭಾವತಿ ಎಚ್. ಹನುಮೇಗೌಡ ಕಾನೂನು ಸೇವಾ ಪ್ರಶಸ್ತಿ’ಯನ್ನು (₹20 ಸಾವಿರ ನಗದು ಮತ್ತು ಫಲಕ) ಹೈಕೋರ್ಟ್ ನ್ಯಾಯಮೂರ್ತಿ ಟಿ.ಜಿ. ಶಿವಶಂಕರೇಗೌಡ ಪ್ರದಾನ ಮಾಡಿದರು. ಪ್ರೊ.ಎಂ.ಸಿ.ಬೋರೇಗೌಡ, ಪ್ರಗತಿಪರ ರೈತ ಮಹಿಳೆ ಬಿ.ಕೆ. ಪದ್ಮಾ, ವೈದ್ಯೆ ಅಂಬಿಕಾ, ಎಚ್.ಕೆ. ಶ್ರೀಕಂಠ, ಎಂ.ಎಚ್.ಹರೀಶ್, ಕರ್ನಾಟಕ ಸಂಘದ ಅಧ್ಯಕ್ಷ ಪ್ರೊ.ಜಯಪ್ರಕಾಶಗೌಡ, ಅನಿಲ್‌ಕುಮಾರ್, ಸೋಮಶೇಖರ್ ಪಾಲ್ಗೊಂಡಿದ್ದರು
– ಪ್ರಜಾವಾಣಿ ಚಿತ್ರ



ನಗರದ ಜ್ಞಾನಭಾರತಿ ಆವರಣದಲ್ಲಿರುವ ಕೇಂದ್ರ ಸಾಹಿತ್ಯ ಅಕಾಡೆಮಿಯಲ್ಲಿ ಭಾನುವಾರ ನಡೆದ ಕಾರ್ಯಕ್ರಮದಲ್ಲಿ ಚಂದ್ರಶೇಖರ ಕಂಬಾರ ಅವರಿಗೆ ‘ಕೇಂದ್ರ ಸಾಹಿತ್ಯ ಅಕಾಡೆಮಿಯ ಫೆಲೋಶಿಪ್’ ಪ್ರದಾನ ಮಾಡಲಾಯಿತು. ಅಕಾಡೆಮಿಯ ಅಧ್ಯಕ್ಷ ಮಾಧವ್ ಕೌಶಿಕ್, ಕಾರ್ಯದರ್ಶಿ ಕೆ. ಶ್ರೀನಿವಾಸರಾವ್ ಉಪಸ್ಥಿತರಿದ್ದರು
– ಪ್ರಜಾವಾಣಿ ಚಿತ್ರ



ತಾಯಿಂದಲೇ ಮೂರು ಹುಲಿ ಮರಿ ಸಾವು

ಕೋಲ್ಕತ್ತ (ಪಿಟಿಐ): ಹುಲಿಯೊಂದು ತನ್ನ ಮರಿಗಳನ್ನು ಬಾಯಿಯಲ್ಲಿ ಕಚ್ಚಿಕೊಂಡು ಬೇರೆಡೆಗೆ ಸ್ಥಳಾಂತರಿಸುವಾಗ, ಆಕಸ್ಮಿಕವಾಗಿ ಮರಿಗಳ ಕುತ್ತಿಗೆಗೆ ಗಾಯವಾಗಿ ಮೂರು ಹುಲಿ ಮರಿಗಳು ಮೃತಪಟ್ಟಿರುವ ಘಟನೆ ಪಶ್ಚಿಮ ಬಂಗಾಳದ ಮೃಗಾಲಯದಲ್ಲಿ ನಡೆದಿದೆ.

ರಾಜ್ಯದ ಸಿಲಿಗುರಿ ಮೃಗಾಲಯದಲ್ಲಿ ‘ರಿಕಾ’ ಎಂಬ ಹುಲಿ ಕಳೆದ ವಾರ ಮರಿಗಳಿಗೆ ಜನ್ಮ ನೀಡಿತ್ತು. ಹುಲಿಯು ಗುರುವಾರ ರಾತ್ರಿ ತನ್ನ ಮೂರು ಮರಿಗಳನ್ನು ಆಶ್ರಯ ತಾಣದೊಳಗೆ ಕರೆದೊಯ್ಯುವಾಗ ಅವುಗಳನ್ನು ಬಾಯಿಯಲ್ಲಿ ಕಚ್ಚಿ ಸ್ಥಳಾಂತರಿಸಿದೆ. ಆಗ ಆಕಸ್ಮಿಕವಾಗಿ ಮರಿಗಳ ಕುತ್ತಿಗೆಗೆ ತೀವ್ರ ಗಾಯವಾಗಿ, ಶ್ವಾಸನಾಳಕ್ಕೆ ಹಾನಿಯಾಗಿ, ಮೂರೂ ಮರಿಗಳು ಮೃತಪಟ್ಟಿವೆ ಎಂದು ಪಶ್ಚಿಮ ಬಂಗಾಳ ಮೃಗಾಲಯ ಪ್ರಾಧಿಕಾರ ಕಾರ್ಯದರ್ಶಿ ಸೌರವ್ ಚೌಧರಿ ತಿಳಿಸಿದರು.

ಎರಡು ಮರಿಗಳು ತಕ್ಷಣವೇ ಮೃತಪಟ್ಟವು. ಗಾಯಗೊಂಡಿದ್ದ ಮತ್ತೊಂದು ಮರಿಯು ಶುಕ್ರವಾರ ಮೃತಪಟ್ಟಿದೆ.

ಸಾಮಾನ್ಯವಾಗಿ ಪ್ರಾಣಿಗಳು ಇದೇ ರೀತಿ ತಮ್ಮ ಮರಿಗಳನ್ನು ಸ್ಥಳಾಂತರಿಸುತ್ತವೆ. ಆದರೆ ರಿಕಾ ಹುಲಿಯು ಮರ ಕುತ್ತಿಗೆಯ ಸೂಕ್ಷ್ಮ ಭಾಗದಲ್ಲಿ ಕಚ್ಚಿದ್ದರಿಂದ ಹೀಗಾಗಿದೆ


ಸೌರವ್ ಚೌಧರಿ, ಪಶ್ಚಿಮ ಬಂಗಾಳ ಮೃಗಾಲಯ ಪ್ರಾಧಿಕಾರ ಕಾರ್ಯದರ್ಶಿ

‘ಟ್ರ್ಯಾಕ್ಟರ್ ತಡೆದರೆ ನಡೆದೇ ಸೌಧಕ್ಕೆ ಮುತ್ತಿಗೆ’

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘2ಎ ಮೀಸಲಾತಿಗೆ ಆಗ್ರಹಿಸಿ ಡಿ.10ರಂದು ನಾವು ಮಾಡಲಿರುವ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಡಿ.9, 10ರಂದು ಬೆಳಗಾವಿ ಜಿಲ್ಲೆಯಿಂದ ಟ್ರ್ಯಾಕ್ಟರ್, ಕ್ರೂಸರ್ ವಾಹನಗಳು ಬರುವುದನ್ನು ನಿಷೇಧಿಸಿ ಜಿಲ್ಲಾಧಿಕಾರಿ ಆದೇಶ ಹೊರಡಿಸಿದ್ದಾರೆ. ಇದನ್ನು ಹಿಂಪಡೆಯದಿದ್ದರೆ, ಕಾಲ್ನಡಿಗೆ ಮೂಲಕವೇ ಸುವರ್ಣ ವಿಧಾನಸೌಧಕ್ಕೆ ಮುತ್ತಿಗೆ ಹಾಕುತ್ತೇವೆ’ ಎಂದು ಕೂಡಲ ಸಂಗಮದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಎಚ್ಚರಿಕೆ ಕೊಟ್ಟರು.

ಇಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘5 ಸಾವಿರ ಟ್ರ್ಯಾಕ್ಟರ್ ಮೆರವಣಿಗೆಯೊಂದಿಗೆ ನಾವು ಸೌಧಕ್ಕೆ ಮುತ್ತಿಗೆ ಹಾಕುತ್ತೇವೆ. ಯಾವುದೂ ಸಾಧ್ಯವಾಗದಿದ್ದರೆ ಸೌಧದ ಮುಂದೆ ಉಪವಾಸ ಸತ್ಯಾಗ್ರಹ ಮಾಡುತ್ತೇವೆ’ ಎಂದರು.



ಬಸವಜಯ ಮೃತ್ಯುಂಜಯ ಸ್ವಾಮೀಜಿ

‘ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಹಳೇ ಮೈಸೂರು ಭಾಗದವರು. ಅವರು ಉತ್ತರ ಕರ್ನಾಟಕದ ಜನಪರ ಹೋರಾಟ ಹತ್ತಿಕ್ಕುವ ಮೂಲಕ ಪ್ರಜಾಪ್ರಭುತ್ವದ ಕಗ್ಗೊಲೆ ಮಾಡುತ್ತಿದ್ದಾರೆ. ಇದನ್ನು ನೋಡಿದರೆ ನಾವು ಕರ್ನಾಟಕದಲ್ಲಿ ಜೀವನ ನಡೆಸುತ್ತಿದ್ದೇವೆಯೋ ಅಥವಾ ಜಮ್ಮು–ಕಾಶ್ಮೀರದಲ್ಲಿ ವಾಸಿಸುತ್ತಿದ್ದೇವೆಯೋ ಎಂಬ ಅನುಮಾನ ಮೂಡುತ್ತಿದೆ’ ಎಂದು ಆರೋಪಿಸಿದರು.

ವೃದ್ಧೆ ಮೇಲೆ ಬೀದಿ ನಾಯಿಗಳ ದಾಳಿ

ಠಾಣೆ (ಪಿಟಿಐ): ವೃದ್ಧೆಯೊಬ್ಬರನ್ನು ನಾಯಿಗಳು ಅಟ್ಟಿಸಿಕೊಂಡು ಹೋಗಿ ದಾಳಿ ನಡೆಸಿರುವ ಘಟನೆ ಠಾಣೆ ಜಿಲ್ಲೆಯ ಟಿಟ್ವಾಲದಲ್ಲಿ ನಡೆದಿದೆ.

ಸಮೀಪದ ಕಟ್ಟಡದಲ್ಲಿದ್ದ ವಾಚ್‌ಮನ್ ಒಬ್ಬರು ವೃದ್ಧೆಯನ್ನು ರಕ್ಷಿಸಿದ್ದಾರೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ.

ಶುಕ್ರವಾರ ರಾತ್ರಿ 2 ಗಂಟೆಗೆ ಘಟನೆ ನಡೆದಿದೆ. ನಾಯಿಗಳು ವೃದ್ಧೆ ಮೇಲೆ ದಾಳಿ ಮಾಡುವ ದೃಶ್ಯಗಳು ಜಾಲತಾಣಗಳಲ್ಲಿ ಹರಿದಾಡಿವೆ.

ಗಂಭೀರವಾಗಿ ಗಾಯಗೊಂಡಿರುವ ವೃದ್ಧೆ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ಅಸ್ಪೃಶ್ಯತೆ ನಿವಾರಣೆಗೆ ಜಾಗೃತಿ ಜಾಥಾ



ಪೂರ್ವ ತಾಲ್ಲೂಕು ತಹಶೀಲ್ದಾರ್ ರಾಜೀವ್ ಅವರು ಜಾಗೃತಿ ಜಾಥಾಕ್ಕೆ ಚಾಲನೆ ನೀಡಿದರು. ಡಾ.ಬಿ.ಆರ್.ಅಂಬೇಡ್ಕರ್ ಪ್ರಚಾರ ಸಮಿತಿ ಸಂಸ್ಥಾಪಕ ಅಧ್ಯಕ್ಷ ಡಾ.ಅರುಣ್ ಇದ್ದರು

ಕೆ.ಆರ್.ಪುರ: ಸಮಾಜ ಕಲ್ಯಾಣ ಇಲಾಖೆ ಆಶ್ರಯದಲ್ಲಿ ಡಾ.ಬಿ.ಆರ್ ಅಂಬೇಡ್ಕರ್ ಪ್ರಚಾರ ಸಮಿತಿ ವತಿಯಿಂದ ಎಸ್ಸಿ, ಎಸ್ಟಿ ಅಸ್ಪೃಶ್ಯತಾ ನಿವಾರಣೆ, ದೌರ್ಜನ್ಯ ತಡೆ ಕಾಯ್ದೆ, ಇಲಾಖೆಯ ಸೌಲಭ್ಯಗಳ ಕುರಿತು ಜಾಗೃತಿ ಜಾಥಾ ಹಮ್ಮಿಕೊಳ್ಳಲಾಯಿತು.

ಪೂರ್ವ ತಾಲ್ಲೂಕು ತಹಶೀಲ್ದಾರ್ ರಾಜೀವ್ ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿ, ‘ಯಾವುದೇ ಜಾತಿ ವಿರುದ್ಧ ದೌರ್ಜನ್ಯ ಎಸಗುವ ಅಧಿಕಾರ ಯಾರಿಗೂ ಇಲ್ಲ. ಅಸ್ಪೃಶ್ಯತೆ ಕಂಡು ಬಂದರೆ ಕಾನೂನಿನ ಚೌಕಟ್ಟಿನಲ್ಲಿ ಕಠಿಣ ಕ್ರಮ ಜರುಗಿಸಬೇಕಾಗುತ್ತದೆ’ ಎಂದರು.

ಡಾ.ಬಿ.ಆರ್..ಅಂಬೇಡ್ಕರ್ ಪ್ರಚಾರ ಸಮಿತಿ ಸಂಸ್ಥಾಪಕ ಅಧ್ಯಕ್ಷ ಅರುಣ್ ಮಾತನಾಡಿ, ‘ಹೆಚ್ಚುತ್ತಿರುವ ದೌರ್ಜನ್ಯಗಳ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಜಾಥಾ ಹಮ್ಮಿಕೊಳ್ಳಲಾಗಿದೆ. ಕೆ.ಆರ್.ಪುರದ ಪ್ರಮುಖ ಬೀದಿಗಳಲ್ಲಿ ಸಂಚರಿಸಲಿದೆ’ ಎಂದರು.

‘ಇಂದಿಗೂ ನಿಜದ ಭೌತವಿಜ್ಞಾನಿ ಬುದ್ಧ’

ಪ್ರಜಾವಾಣಿ ವಾರ್ತೆ

ಪೀಣ್ಯದಾಸರಹಳ್ಳಿ: ‘ಕ್ರಿಸ್ತಪೂರ್ವದಲ್ಲೇ ಅತ್ಯಂತ ಆಧುನಿಕವಾಗಿ, ಭೌತವಿಜ್ಞಾನಿಯಂತೆ ಯೋಚಿಸಿದ ಬುದ್ಧ ಇವತ್ತಿಗೂ ಒಬ್ಬ ದೊಡ್ಡ ದಾರ್ಶನಿಕನಂತೆ ಕಂಡುಬರುತ್ತಾನೆ’ ಎಂದು ಚಿಂತಕ ಮೂಡ್ನಾಕೂಡು ಚಿನ್ನಸ್ವಾಮಿ ಅವರು ಅಭಿಪ್ರಾಯಪಟ್ಟರು.



ಮೂಡ್ನಾಕೂಡು ಚಿನ್ನಸ್ವಾಮಿ

ಹೆಸರಘಟ್ಟ ಮುಖ್ಯ ರಸ್ತೆ ಹಾವನೂರು ಬಡಾವಣೆಯ ಭೂಮಿಕಾ ಸೇವಾ ಫೌಂಡೇಷನ್‌ನಲ್ಲಿ ‘ಪರಸ್ಪರ-ಎಂಟನೇ ಮೈಲಿ’ ಸಂಘಟನೆ ಏರ್ಪಡಿಸಿದ್ದ ‘ಸಿದ್ಧಾರ್ಥ ಬುದ್ಧನಾದ ಬಗೆ’ ಎಂಬ ವಿಷಯದ ಕುರಿತು ವಿಶೇಷ ಉಪನ್ಯಾಸ ನೀಡಿದರು.

ಸುಖದ ಲೋಲುಪತೆಯಲ್ಲಿ ತೇಲಾಡಬಹುದಾದ ಎಲ್ಲಾ ಅವಕಾಶಗಳಿದ್ದ ಬುದ್ಧ ಅವೆಲ್ಲವನ್ನೂ ನಿರಾಕರಿಸಿ ಮನುಕುಲದ ದುಃಖಗಳಿಗೆ ಕಾರಣಗಳನ್ನು ಅನ್ವೇಷಿಸಲು ತೊಡಗಿದ. ಆರು ವರ್ಷ ಕಠಿಣ ತಪಸ್ಸನ್ನು ಆಚರಿಸಿ ಆಸೆಯೇ ದುಃಖಕ್ಕೆ ಮೂಲ ಕಾರಣ ಎಂಬ ಸರಳ ಸೂತ್ರವನ್ನು ಕಂಡುಹಿಡಿದ ಎಂದು ವಿವರಿಸಿದರು.

‘ಆ ಕಾಲಕ್ಕೆ ಉಚ್ಛ್ರಾಯ ಸ್ಥಿತಿಯಲ್ಲಿದ್ದ ವೈದಿಕ ಧರ್ಮ ಮತ್ತು ಜೈನಧರ್ಮಗಳೆರಡರ ಎರಡು ವಿರುದ್ಧ ದಿಕ್ಕಿನ ಆಚರಣೆಗಳ ನಡುವೆ ಸಮನ್ವಯದ ಮಧ್ಯಮ ಮಾರ್ಗವನ್ನು ಅನ್ವೇಷಿಸಿದ ಮತ್ತು ಅದನ್ನೇ ತನ್ನ ಅನುಯಾಯಿಗಳಿಗೆ ಉಪದೇಶಿಸಿದ’ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪತ್ರಕರ್ತರಾದ ರಘುನಾಥ ಚ.ಹ, ಬಿ.ಎಂ. ಹನೀಫ್, ಕನ್ನಡ ಜಾನಪದ ಸಾಹಿತ್ಯ ಪರಿಷತ್‌ನ ದಾಸರಹಳ್ಳಿ ಕ್ಷೇತ್ರ ಘಟಕದ ಅಧ್ಯಕ್ಷ ವೈ.ಬಿ.ಎಚ್ ಜಯದೇವ್, ಸಾಹಿತಿಗಳಾದ ಕಂನಾಡಿಗಾ ನಾರಾಯಣ, ಸುರೇಶ್ ನಾಗಲಮಡಿಕೆ, ಟಿ.ಗೋವಿಂದರಾಜ್, ಮಂಜುಭಾಷಿಣಿ, ಲತಾ ಕುಂದರಗಿ, ರಾಜೇಂದ್ರ ಕೊಣ್ಣೂರ ಮತ್ತಿತರರು ಇದ್ದರು.

ನಿಧನ



ಪ್ರೊ (ನಿವೃತ್ತ) ಸುಜಾತಾ ಸೂರಪ್ಪ
(16-09-1957 - 08-12-2024)
ಶ್ರೀಮತಿ ಸುಜಾತಾ ಸೂರಪ್ಪ ಅವರು ಡಿಸೆಂಬರ್ 8, 2024 ರಂದು ನಿಧನರಾದರು ಎಂದು ತಿಳಿಸಲು ವಿಷಾದಿಸುತ್ತೇವೆ.
ಅಂತ್ಯ ಸಂಸ್ಕಾರ: ಸೋಮವಾರ, 9ನೇ ಡಿಸೆಂಬರ್, 2024 ಮಧ್ಯಾಹ್ನ 3 ಗಂಟೆಗೆ ಹೆಬ್ಬಾಳ ಚಿತಾಗಾರದಲ್ಲಿ ನಡೆಯಲಿದೆ.
ದುಃಖತಪ್ತರು: ಪ್ರೊ. ಎಂ ಕೆ ಸೂರಪ್ಪ ಸುಚರಿತಾ, ವಿನಯ್, ಇಶಾಂಕ, ಸುಶ್ರುತ, ಆಶ್ಲಿ, ಸಂಜಯ್ ಶ್ರೀಕಂಠಯ್ಯ, ದಿವ್ಯಶ್ರೀ, ಮಿರ್ಲೆ ಕಡ್ಡಿಪುಡಿ, ಬಿಟಿ ಕುಟುಂಬ ಮತ್ತು ಸ್ನೇಹಿತರು

ಎಚ್‌ಡಿಕೆ ಅಭಿನಂದನಾ ಸಮಾರಂಭ ಮುಂದಕ್ಕೆ

ಪ್ರಜಾವಾಣಿ ವಾರ್ತೆ

ಮದ್ದೂರು: ‘ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿಯವರ ಜನ್ಮದಿನದ ಅಂಗವಾಗಿ ಮಂಡ್ಯ ನಗರದಲ್ಲಿ ಡಿ.15ರಂದು ಹಮ್ಮಿಕೊಂಡಿದ್ದ ಅಭಿನಂದನಾ ಸಮಾರಂಭವನ್ನು ತಾತ್ಕಾಲಿಕವಾಗಿ ಮುಂದೂಡಲಾಗಿದೆ’ ಎಂದು ಮಾಜಿ ಸಚಿವ ಸಿ.ಎಸ್. ಪುಟ್ಟರಾಜು ತಿಳಿಸಿದರು.

ಇಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಮಂಡ್ಯದಲ್ಲಿ ಡಿ.20ರಿಂದ 22ರವರೆಗೆ ಕನ್ನಡ ಸಾಹಿತ್ಯ ಸಮ್ಮೇಳನ ನಡೆಯಲಿದೆ. ಹೀಗಿರುವಾಗ, ನಾವು ಅಭಿನಂದನಾ ಸಮಾರಂಭ ಮಾಡಿದರೆ ಗೊಂದಲ ಉಂಟಾಗುತ್ತದೆ. ಆದ್ದರಿಂದ ಮುಂದೂಡುವಂತೆ ಕುಮಾರಸ್ವಾಮಿಯವರೇ ಸೂಚಿಸಿದ ಮೇರೆಗೆ ಈ ನಿರ್ಧಾರ ಕೈಗೊಂಡಿದ್ದೇವೆ’ ಎಂದು ಅವರು ತಿಳಿಸಿದರು.

‘ಇದು, ಹಾಸನದಲ್ಲಿ ಕಾಂಗ್ರೆಸ್ ನಡೆಸಿದ ಸಮಾವೇಶಕ್ಕೆ ಪ್ರತಿಯಾಗಿ ಆಯೋಜಿತವಾಗಿರುವ ಜೆಡಿಎಸ್ ಶಕ್ತಿ ಪ್ರದರ್ಶನದ ಸಮಾವೇಶವಾಗಿದೆ’ ಎಂದು ಬಿಂಬಿತವಾಗಿತ್ತು. ‘ಸೋತ ಮಗನನ್ನು ಮುಂದಿಟ್ಟುಕೊಂಡು, ಕುಮಾರಸ್ವಾಮಿ ಯಾವ ಸಮಾವೇಶ ಮಾಡುತ್ತಾರೆ’ ಎಂದು ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಟೀಕಿಸಿದ್ದರು.

ಪ್ರೊ.ಎಸ್‌.ಜಿ.ಎಸ್‌–78 ಕಾರ್ಯಕ್ರಮದಲ್ಲಿ ಸಂಗೀತ ನಿರ್ದೇಶಕ ಹಂಸಲೇಖ ಅಭಿಮತ

‘ಅಧಿಕಾರ, ಹಣ ಬಯಸದ ಎಸ್‌ಜಿಎಸ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನೆಲಮೂಲದ ಕವಿಯಾಗಿರುವ ಎಸ್.ಜಿ. ಸಿದ್ಧರಾಮಯ್ಯ, ಅಧಿಕಾರ ಮತ್ತು ಹಣವನ್ನು ಬಯಸಿದವರಲ್ಲ’ ಎಂದು ಸಂಗೀತ ನಿರ್ದೇಶಕ ಹಂಸಲೇಖ ಹೇಳಿದರು.

ಭಾಗವತರು ಸಾಂಸ್ಕೃತಿಕ ಸಂಘಟನೆ ನಗರದಲ್ಲಿ ಭಾನುವಾರ ಹಮ್ಮಿಕೊಂಡಿದ್ದ ‘ಪ್ರೊ.ಎಸ್.ಜಿ.ಎಸ್.–78’ ಕಾರ್ಯಕ್ರಮ ಉದ್ಘಾಟಿಸಿ, ಮಾತನಾಡಿದರು.

‘ಎಸ್.ಜಿ. ಸಿದ್ಧರಾಮಯ್ಯ ಅವರು ಯಾವುದೇ ವಿಷಯ, ವಿಚಾರಕ್ಕೆ ರಾಜಿ ಮಾಡಿಕೊಂಡವರಲ್ಲ. ಸಮತ್ವ, ಸಿಂಧುತ್ವ ಇರುವ ಕಡೆಗೆ ಸಾಗುತ್ತಾರೆ. ಸಾಹಿತ್ಯದ ಪ್ರಪಂಚಕ್ಕೆ ನನ್ನ ಪ್ರವೇಶ ಅನಿರೀಕ್ಷಿತ. ಈ ಕ್ಷೇತ್ರದಲ್ಲಿ ನನ್ನದು ಬರೀ ಹುಡುಕಾಟ, ದುಡುಕಾಟವಾಗಿದೆ. ನನ್ನಂತಹವರು ಎಡುವುತ್ತಾ ಬೀಳುವುದು ಇವತ್ತಿನ ಸಮಾಜದಲ್ಲಿ ಸಹಜ. ನಾವು ಮಾಡುವ ತಪ್ಪುಗಳು ಅರ್ಥವಾಗುವ ಹೊತ್ತಿಗೆ ಅದೆಷ್ಟೋ ಅನರ್ಥಗಳಾಗಿರುತ್ತವೆ. ಈ ತಪ್ಪುಗಳನ್ನು ಸಮರ್ಥಿಸಿಕೊಳ್ಳಲು ಬರುವವರು ಎಸ್.ಜಿ. ಸಿದ್ಧರಾಮಯ್ಯ. ಹಲವು ಬಾರಿ ಅವರು ನಮ್ಮನ್ನು ಸಮರ್ಥಿಸಿಕೊಂಡಿದ್ದಾರೆ’ ಎಂದರು.



ಕಾರ್ಯಕ್ರಮದಲ್ಲಿ ಹಂಸಲೇಖ ಅವರು ‘ಎಸ್.ಜಿ.ಎಸ್ ಸಮಗ್ರ ನಾಟಕಗಳು’ ಹಾಗೂ ‘ಅನಾದಿಯ ಗೆಜ್ಜೆಧ್ವನಿ’ ಕವನ ಸಂಕಲನದ ಪ್ರತಿಯನ್ನು ಪ್ರೊ.ಎಸ್.ಜಿ. ಸಿದ್ಧರಾಮಯ್ಯ ಅವರಿಗೆ ನೀಡಿದರು. (ಎಡದಿಂದ) ಕೆ. ರೇವಣ್ಣ, ಎಲ್. ಹನುಮಂತಯ್ಯ ಹಾಗೂ ಅಗ್ರಹಾರ ಕೃಷ್ಣಮೂರ್ತಿ ಉಪಸ್ಥಿತರಿದ್ದರು
– ಪ್ರಜಾವಾಣಿ ಚಿತ್ರ

‘ಅವರು ತಮಗೆ ಹೊಳೆದದ್ದನ್ನ ಕವಿತೆಯ ಹೊಳೆಯಾಗಿಸಿ, ಮುಂಜಾನೆಯೇ ನಮಗೆ ಕಳಿಸುತ್ತಾರೆ. ಅವರ ಶಬ್ದ ಸಂಪತ್ತು, ಸಾಹಿತ್ಯ ಸಂಪತ್ತು ಬೇರೆ ಪ್ರಾದೇಶಿಕ ಭಾಷೆಗೆ ಹೋಲೆಯದಷ್ಟು ದೊಡ್ಡದಾಗಿದೆ’ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಮುಖ್ಯಾಂಶಗಳು
- ಸಿದ್ಧರಾಮಯ್ಯ ಅವರ ಬದುಕು, ಬರಹ, ವಿಚಾರಗಳ ಬಗ್ಗೆ ನಡೆದ ಗೋಷ್ಠಿ
- ‘ಎಸ್.ಜಿ.ಎಸ್. ಸಮಗ್ರ ನಾಟಕಗಳು’, ‘ಅನಾದಿಯ ಗೆಜ್ಜೆಧ್ವನಿ’ ಕವನ ಸಂಕಲನ ಬಿಡುಗಡೆ

ಕವಿ ಎಲ್.ಹನುಮಂತಯ್ಯ, ‘ಸಿದ್ಧರಾಮಯ್ಯನಂತವರು ಹೊಸ ತಲೆಮಾರಿನವರಿಗೆ ಮಾದರಿಯಾಗಿದ್ದಾರೆ. ಸಿದ್ಧರಾಮಯ್ಯ ಅವರ ಕಾವ್ಯದ ಮೂಲ ದ್ರವ್ಯ ದಟ್ಟವಾದ ಗ್ರಾಮೀಣ ಬದುಕು, ಜಾನಪದ ಕಾವ್ಯದ ಹರವು ಮತ್ತು ವೈಯಕ್ತಿಕ ಬದುಕಿನ ಶೋಧ. 78ನೇ ವಯಸ್ಸಿನಲ್ಲಿಯೂ ಅವರು ಬರವಣಿಗೆ ನಿಲ್ಲಿಸಲಿಲ್ಲ. ಜೀವನದ ಕೊನೆಯ ಕ್ಷಣದವರೆಗೆ ಕಾವ್ಯ ರಚಿಸುತ್ತೇನೆ ಎಂಬ ಅಚಲ ನಂಬಿಕೆ ಕವಿಯ ಬಹುಮುಖ್ಯ ಲಕ್ಷಣ’ ಎಂದರು.

ಸಾಹಿತಿ ಅಗ್ರಹಾರ ಕೃಷ್ಣಮೂರ್ತಿ, ‘ಸಿದ್ಧರಾಮಯ್ಯ ಅವರು ತುಮಕೂರಿನ ಪ್ರಾದೇಶಿಕ ನೆಲಗಟ್ಟನ್ನು ಹುಡುಕಿ, ಸಾಹಿತ್ಯ ಸೃಷ್ಟಿಸಿದರು. ನೆಲಮೂಲದ ಭಾಷೆಯನ್ನು ಶಿಷ್ಟ ಕನ್ನಡಕ್ಕೆ ತಂದು, ಭಾಷೆಯ ಶಬ್ದ ಸಂಪತ್ತನ್ನು ಸೂರೆ ಹೊಡೆದಿದ್ದಾರೆ. ಕಾವ್ಯಕ್ಕೆ ಹೊಸ ಬೆಳಕು ತಂದುಕೊಟ್ಟ ಅವರು, ಬಹುತ್ವ ಮತ್ತು ಪ್ರಜಾಪ್ರಭುತ್ವದ ರಕ್ಷಣೆಗೆ ಸದಾ ಯೋಚಿಸುತ್ತಾ ಇರುತ್ತಾರೆ’ ಎಂದರು.

ಪ್ರೊ.ಎಸ್.ಜಿ. ಸಿದ್ಧರಾಮಯ್ಯ ಹಾಗೂ ಭಾಗವತರು ಸಂಘಟನೆಯ ಅಧ್ಯಕ್ಷ ಕೆ. ರೇವಣ್ಣ ಉಪಸ್ಥಿತರಿದ್ದರು.

ಶಿಕ್ಷಣ



ವಿದೇಶಿ ಭಾಷೆ ಕಲಿಕೆ ಯಾಕೆ?



ಭಾಷೆಯೊಂದನ್ನು ಸ್ಪಷ್ಟವಾಗಿ, ಸುಲಲಿತವಾಗಿ ಕಲಿತರೆ ಅವಕಾಶಗಳ ದಿಡ್ಡಿಬಾಗಿಲು ತೆರೆದಂತೆಯೇ ಸರಿ. ಯಾವುದೇ ವೃತ್ತಿಯಲ್ಲಿದ್ದರೂ, ಆಸ್ಥೆಯಿಂದ ವಿದೇಶಿ ಭಾಷೆಗಳನ್ನು ಕಲಿಯಲು ಸ್ವಲ್ಪ ಬಿಡುವು ಮಾಡಿಕೊಂಡರೆ ಹೊಸ ಅವಕಾಶಗಳನ್ನು ಪಡೆಯಬಹುದು.

ಒಂದು ಭಾಷೆಯನ್ನು ಮೋಜಿಗೆಂದು ಕಲಿತರೂ ಅದರಿಂದಾಗುವ ಪ್ರಯೋಜನಗಳು ಹಲವಾರು. ಅಂಥಹುದರಲ್ಲಿ ವಿದೇಶಿ ಭಾಷೆಯನ್ನು ಕಲಿಯುವ ಸಲುವಾಗಿ ನಿಷ್ಠೆಯಿಂದ ಕೆಲವು ಗಂಟೆಗಳನ್ನು ವಿನಿಯೋಗಿಸಿದರೆ ವೃತ್ತಿ ಹಾಗೂ ವೈಯಕ್ತಿಕ ಬದುಕಿನಲ್ಲಿ ಹಲವು ಲಾಭಗಳನ್ನು ಪಡೆಯಬಹುದು.

ಉದ್ದಿಮೆ, ಕಾನೂನು, ತಂತ್ರಜ್ಞಾನ, ವೈದ್ಯಕೀಯ, ಶಿಕ್ಷಣ, ಮಾರ್ಕೆಟಿಂಗ್ ಹೀಗೆ ಯಾವುದೇ ಕ್ಷೇತ್ರಗಳಲ್ಲಿರುವವರೇ ಆಗಿದ್ದರೂ ವಿದೇಶಿ ಭಾಷೆಯೊಂದನ್ನು ಸ್ಪಷ್ಟವಾಗಿ ಕಲಿತಿದ್ದರೆ ಆ ದೇಶದಲ್ಲಿ ಹಲವು ರೀತಿಯ ಅವಕಾಶಗಳನ್ನು ಪಡೆಯಲು ಸಾಧ್ಯವಾಗುತ್ತದೆ. ಅದರಲ್ಲಿಯೂ ಬೆಂಗಳೂರು, ಮುಂಬೈ, ಹೈದರಾಬಾದ್‌ನಂಥ ಮಹಾನಗರಗಳಲ್ಲಿ ಜರ್ಮನಿ, ಜಪಾನ್, ಡಚ್, ಫ್ರಾನ್ಸ್ ಸೇರಿದಂತೆ ವಿದೇಶಿ ಮೂಲದ ಬಹುರಾಷ್ಟ್ರೀಯ ಕಂಪನಿಗಳು ಹೆಚ್ಚಾಗಿರುವುದರಿಂದ ಇಂಥ ಕಂಪನಿಗಳಲ್ಲಿ ಆಯಾ ದೇಶದ ಭಾಷೆ ಬಲ್ಲವರಿಗೆ ಆದ್ಯತೆ ಹೆಚ್ಚು.



ಜ್ಯೋತಿ ವೆಂಕಟೇಶ್

ವಿದೇಶಿ ಭಾಷೆಗಳನ್ನು ಕಲಿತರೆ ಆ ದೇಶದ ಸಂಸ್ಕೃತಿ, ಆಚರಣೆ ಹಾಗೂ ಮೌಲ್ಯಗಳ ಅರಿವು ಹೆಚ್ಚಾಗುತ್ತದೆ. ಇದರಿಂದ ಜಗತ್ತನ್ನು ನೋಡುವ ದೃಷ್ಟಿಕೋನವೂ ಬದಲಾಗುತ್ತದೆ. ಕಾಗ್ನಿಟಿವ್ ಹಾಗೂ ನೆಟ್‌ವರ್ಕಿಂಗ್ ಕೌಶಲ ಹೆಚ್ಚುತ್ತದೆ. ವಿವಿಧ ಪ್ಲಾಟ್‌ಫಾರಂಗಳಲ್ಲಿ ಲಭ್ಯವಿರುವ ಅನ್ಯದೇಶಗಳ ಸಾಧಕರೊಂದಿಗೆ ಸಂಪರ್ಕ ಸಾಧಿಸಬಹುದು. ವಿದೇಶಕ್ಕಾಗಿ ಪ್ರವಾಸ ಹೋಗುವವರಿಗೆ ಒಂದಕ್ಕಿಂತ ಹೆಚ್ಚು ವಿದೇಶಿ ಭಾಷೆ ಗೊತ್ತಿದ್ದರೆ, ಪ್ರಯಾಣ ಸುಲಭವಾಗುತ್ತದೆ.

ವಿದೇಶಿ ಭಾಷೆಗಳ ಕಲಿಕಾ ಕೋರ್ಸ್‌ಗೆ ಹೆಚ್ಚಿನ ಬೇಡಿಕೆ ಇದೆ. ಹಾಗಾಗಿಯೇ ಬೆಂಗಳೂರು ವಿಶ್ವವಿದ್ಯಾಲಯದ ಜಾಗತಿಕ ಭಾಷೆಗಳ ಅಧ್ಯಯನ ಕೇಂದ್ರವು ವಾರಾಂತ್ಯದಲ್ಲಿ ವಿದೇಶಿ ಭಾಷೆಗಳನ್ನು ಕಲಿಸುವ ತರಗತಿಗಳನ್ನು ನಡೆಸುತ್ತಿದೆ. ಅದಕ್ಕಾಗಿ ಡಿಪ್ಲೊಮಾ, ಪದವಿ ಹಾಗೂ ಸ್ನಾತಕೋತ್ತರ ಪದವಿಗಳನ್ನು ಕೋರ್ಸ್‌ಗಳನ್ನು ರೂಪಿಸಿದೆ.

ಯಾವೆಲ್ಲ ಭಾಷೆ ಕಲಿಯಬಹುದು?

ಫ್ರೆಂಚ್, ಜರ್ಮನ್, ಸ್ಪ್ಯಾನಿಷ್, ಜಪಾನಿ, ಕೊರಿಯನ್, ಚೈನೀಸ್, ಇಟಾಲಿಯನ್, ಪೋರ್ಚುಗೀಸ್ ಭಾಷಾ ತರಗತಿಗಳು ನಡೆಯುತ್ತವೆ.

ಕಲಿಕೆಯ ಹಂತಗಳು ಹೀಗಿರುತ್ತವೆ

ಸಾಮಾನ್ಯವಾಗಿ ಆಯಾ ಭಾಷೆಗೆ ಸಂಬಂಧಿಸಿದಂತೆ ಬೇಸಿಕ್ ಸರ್ಟಿಫಿಕೇಟ್ ಕೋರ್ಸ್ ಇರುತ್ತದೆ. ಇದು ಒಂದು ವರ್ಷದ ಕೋರ್ಸ್ ಆಗಿರುತ್ತದೆ. ಈ ಕೋರ್ಸ್‌ನಲ್ಲಿ ಎರಡು ಸೆಮಿಸ್ಟರ್ ಇರುತ್ತದೆ. A1 ಮತ್ತು A2 ಹಂತ ಎರಡನ್ನೂ ಒಳಗೊಂಡಿರುವ ಕೋರ್ಸ್ ಇದು. ಇದನ್ನು ಪೂರ್ಣಗೊಳಿಸಿದವರು ಯುಜಿ ಡಿಪ್ಲೊಮಾ ಕೋರ್ಸ್ ಮಾಡಬಹುದು. ಇದು B1 ಹಂತದ ಕೋರ್ಸಾಗಿದ್ದು, B1.1 ಮತ್ತು B1.2 ಹಂತಗಳು ಸೇರಿ ಬಿ1 ಆಗಿರುತ್ತದೆ. ಇದು ಎರಡನೆಯ ಹಂತ.

> ಮೋಜಿಗೆಂದು ಒಂದು ಭಾಷೆ ಕಲಿತರೂ ಅದರಿಂದಾಗುವ ಪ್ರಯೋಜನಗಳು ಹಲವಾರು. ವಿದೇಶಿ ಭಾಷೆಗಳ ಕಲಿಕೆ ವೃತ್ತಿಯಲ್ಲಿ ಹಲವು ಅವಕಾಶಗಳನ್ನು ಪಡೆಯಲು ನೆರವಾಗಬಲ್ಲದು.

ಇದಾದ ನಂತರ ಮೂರನೇ ಹಂತದಲ್ಲಿ ಪಿ.ಜಿ. ಡಿಪ್ಲೊಮಾ. B 2.1 ಮತ್ತು B 2.2 ಹಂತಗಳು ಇರುವ ಕೋರ್ಸ್ ಇದಾಗಿದ್ದು, ಇದು ಭಾಷೆಯ ಕಲಿಕೆಯಲ್ಲಿ ಅಡ್ವಾನ್ಸ್ಡ್ ಕೋರ್ಸ್ ಎಂದೇ ಹೇಳಬಹುದು. ಇದನ್ನು ಪೂರ್ಣಗೊಳಿಸಿದರೆ ಪದವಿಗೆ ಸಮನಾದಷ್ಟು ಭಾಷಾ ನೈಪುಣ್ಯವನ್ನು ಸಾಧಿಸಬಹುದು.

ಕೇವಲ ಪಿಯುಸಿ ಓದಿದವರೂ A1 ರಿಂದ B.2.2 ಹಂತಗಳನ್ನು ಪೂರ್ಣಗೊಳಿಸಿದರೆ, ಅವರಿಗೆ ನೇರವಾಗಿ ಯಾವುದೇ ಸ್ನಾತಕೋತ್ತರ ಪದವಿ ಕೋರ್ಸ್‌ಗೆ ಸೇರಬಹುದು. ಇವೆಲ್ಲವೂ ವಾರಾಂತ್ಯದಲ್ಲಿ ಕಲಿಸಲಾಗುತ್ತದೆ. ಶನಿವಾರ ಮಧ್ಯಾಹ್ನ 2 ರಿಂದ 6 ಗಂಟೆ, ಭಾನುವಾರ 9ರಿಂದ 12ರ ಅವಧಿಯಲ್ಲಿ ಕಲಿಯುವ ಅವಕಾಶ ಇರುತ್ತದೆ.

ಈ ಬಗ್ಗೆ ಅಧ್ಯಯನ ಕೇಂದ್ರದ ಮುಖ್ಯಸ್ಥೆ ಜ್ಯೋತಿ ವೆಂಕಟೇಶ್ ಹೇಳುವುದಿಷ್ಟು; ಇದರ ಜತೆಗೆ ವಿದೇಶಿ ಭಾಷೆಗೆ ಸಂಬಂಧಿಸಿದಂತೆ ನಾಲ್ಕು ಪಿ.ಜಿ.ಡಿಪ್ಲೊಮಾ ಕೋರ್ಸ್‌ಗಳನ್ನು ಕಲಿಸಲಾಗುತ್ತದೆ. ಫ್ರೆಂಚ್, ಜರ್ಮನ್, ಸ್ಪ್ಯಾನಿಷ್, ಜಪಾನಿ. ಇದಕ್ಕೆ ಉತ್ತಮ ಬೇಡಿಕೆ ಇದೆ. ಕಲಿತ ವಿದ್ಯಾರ್ಥಿಗಳಿಗೆ ಕೆಲಸದ ಅವಕಾಶಗಳ ಬಗ್ಗೆಯೂ ಮಾಹಿತಿ ನೀಡಲಾಗುತ್ತದೆ.

ಕಲಿತವರಿಗೆ ಅವಕಾಶಗಳು ಹೇಗಿವೆ?


ಆಯಾ ದೇಶದಲ್ಲಿ ಭಾಷಾತಜ್ಞರಾಗಿ ಅಷ್ಟೆ ಅಲ್ಲದೇ ವಿವಿಧ ಭಾಷಾ ಅಧ್ಯಯನ ಕೇಂದ್ರಗಳಲ್ಲಿ ಶಿಕ್ಷಕರಾಗಿಯೂ ಕೆಲಸ ಮಾಡಬಹುದು. ವಿದ್ಯಾರ್ಥಿಗಳು ಪೂರಕವಾಗಿ ಈ ಕೋರ್ಸ್ ಮಾಡಿದರೆ ವಿದೇಶದಲ್ಲಿ ಉನ್ನತ ವ್ಯಾಸಂಗ ಮಾಡಬಹುದು. ಬೇರೆ ಬೇರೆ ವೃತ್ತಿಯಲ್ಲಿರುವವರು ಈ ಕೋರ್ಸ್ ಮಾಡಿದರೆ, ಕಂಪನಿಯ ಪ್ರಾಜೆಕ್ಟ್ ಮೇಲೆ ಆಯಾ ದೇಶಗಳಲ್ಲಿ ಕೆಲಸ ಮಾಡುವಾಗ ನೆರವಿಗೆ ಬರುತ್ತದೆ. ಭಾಷೆ ಬರುತ್ತದೆ ಎನ್ನುವ ಕಾರಣಕ್ಕೆ ಆ ಪ್ರಾಜೆಕ್ಟ್‌ನಲ್ಲಿ ಕೆಲಸ ಗಿಟ್ಟಿಸಿಕೊಳ್ಳಲು ದಾರಿಯಾಗುತ್ತದೆ.

ಜಪಾನಿ ಭಾಷೆ ಕಲಿಕೆಗೆ ಹೆಚ್ಚಿದ ಬೇಡಿಕೆ

ಜಪಾನಿ ಭಾಷೆ ಕಲಿಕೆಗೆ ವಿಶ್ವದಾದ್ಯಂತ ಬೇಡಿಕೆ ಹೆಚ್ಚಿದೆ. ಅದರಲ್ಲಿಯೂ ಆರೋಗ್ಯಕ್ಷೇತ್ರಕ್ಕೆ ಸಂಬಂಧಪಟ್ಟ ವೃತ್ತಿಯಲ್ಲಿರುವವರು ಜಪಾನಿ ಭಾಷೆ ಕಲಿತರೆ ಅವರಿಗೆ ಜಪಾನ್ ದೇಶದಲ್ಲಿ ಉತ್ತಮ ಅವಕಾಶಗಳು ಲಭ್ಯವಿದೆ. ಇದನ್ನು ಗಮನದಲ್ಲಿಟ್ಟುಕೊಂಡು ಟಯೊಟೊ ಕಿರ್ಲೋಸ್ಕರ್ ಸಹಯೋಗದೊಂದಿಗೆ 'ಜ್ಯಾಪನೀಸ್ ಫಾರ್ ಸ್ಕಿಲ್ಡ್ ವರ್ಕ್‌ಫೋರ್ಸ್' ಎನ್ನುವ ಕೋರ್ಸ್ ಒಂದನ್ನು ರೂಪಿಸಲಾಗಿದ್ದು, ಸದ್ಯದಲ್ಲಿಯೇ ಚಾಲನೆ ಸಿಗಲಿದೆ. ಯಾವುದೇ ವೃತ್ತಿಯಲ್ಲಿರುವವರು ಈ ಕೋರ್ಸ್‌ಗೆ ಸೇರಬಹುದು. ಒಂದು ವರ್ಷ ಅವಧಿಯ ಎರಡು ಸೆಮಿಸ್ಟರ್ ಇರುವ ಕೋರ್ಸ್ ಇದಾಗಿದ್ದು, ತರಬೇತಿಯ ಅವಧಿ 1000 ಗಂಟೆಗಳು. ಆದರೆ, ಇದು ವಾರಾಂತ್ಯದಲ್ಲಿ ಇರುವುದಿಲ್ಲ. ಸೋಮವಾರದಿಂದ ಶುಕ್ರವಾರದವರೆಗೆ ಬೆಳಿಗ್ಗೆ 9ರಿಂದ ಮಧ್ಯಾಹ್ನ 12 ಗಂಟೆಯವರೆಗೆ ಜಪಾನಿ ಭಾಷೆಯನ್ನು ಕಲಿಸಲಾಗುತ್ತದೆ.

ಕೋರ್ಸ್ ಕುರಿತ ಮಾಹಿತಿಗೆ

ದ್ವಿತೀಯ ಪಿ.ಯು ಅಥವಾ ಸಮಾನಂತರ ಶಿಕ್ಷಣ ಪಡೆದಿರಬೇಕು. ಉನ್ನತ ಶಿಕ್ಷಣ ಇಲಾಖೆಯ ಸಮಗ್ರ ವಿಶ್ವವಿದ್ಯಾಲಯ ಮತ್ತು ಕಾಲೇಜುಗಳ ನಿರ್ವಹಣಾ ವ್ಯವಸ್ಥೆ (ಯುಯುಸಿಎಂಎಸ್) ಅಡಿ ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿ ಪ್ರವೇಶ ಪಡೆಯಬಹುದು.
ಆಸಕ್ತರು 080-29572019/9353251761 ಅಥವಾ ವಿ.ವಿಯ ಜಾಲತಾಣ www.bcu.ac.in ಮಾಹಿತಿ ಪಡೆಯಬಹುದು.



ಸೈಬರ್ ಸೆಕ್ಯೂರಿಟಿ ಕ್ಷೇತ್ರದಲ್ಲಿ ಅವಕಾಶಗಳು ಹೇಗಿವೆ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

- **ಸೈಬರ್ ಸೆಕ್ಯೂರಿಟಿ ಕ್ಷೇತ್ರದಲ್ಲಿರುವ ಅವಕಾಶಗಳ ಬಗ್ಗೆ ತಿಳಿಸಿ.**
ಹೆಸರು, ಊರು ತಿಳಿಸಿಲ್ಲ

ಇಂದಿನ ಡಿಜಿಟಲ್ ಜಗತ್ತಿನಲ್ಲಿ, ಸೈಬರ್ ಸೆಕ್ಯೂರಿಟಿ ಕ್ಷೇತ್ರದ ವೃತ್ತಿಪರರಿಗೆ ಹೆಚ್ಚಿನ ಬೇಡಿಕೆಯಿದೆ. ಈ ಕ್ಷೇತ್ರದಲ್ಲಿ, ಯಶಸ್ಸಿಗೆ ಎಂಜಿನಿಯರಿಂಗ್ (ಸೈಬರ್ ಸೆಕ್ಯೂರಿಟಿ, ಕಂಪ್ಯೂಟರ್ ಸೈನ್ಸ್ ಇತ್ಯಾದಿ) ಪದವಿ ಅಥವಾ ಇನ್ನಿತರ ಐಟಿ ಪದವಿಯ ಜೊತೆಗೆ ಸೈಬರ್ ಸೆಕ್ಯೂರಿಟಿ ಕ್ಷೇತ್ರದ ಉನ್ನತ ಮಟ್ಟದ ಡಿಪ್ಲೊಮಾ/ಸರ್ಟಿಫಿಕೇಟ್ ಕೋರ್ಸ್ ಮಾಡಿರಬೇಕು. ತಾಂತ್ರಿಕ ಜ್ಞಾನ ಹಾಗೂ ಈ ಕ್ಷೇತ್ರಕ್ಕೆ ಸಂಬಂಧಿಸಿದ ಕೌಶಲಗಳಾದ ಎಥಿಕಲ್ ಹ್ಯಾಕಿಂಗ್, ಕ್ಲೌಡ್ ಸೆಕ್ಯೂರಿಟಿ, ನೆಟ್‌ವರ್ಕ್ ಸೆಕ್ಯೂರಿಟಿ, ರಿಸ್ಕ್ ಮ್ಯಾನೇಜ್‌ಮೆಂಟ್, ಆಪರೇಟಿಂಗ್ ಸಿಸ್ಟಮ್ಸ್, ಕೋಡಿಂಗ್, ವಿಶ್ಲೇಷಣಾತ್ಮಕ ಕೌಶಲ, ಸಮಸ್ಯೆಗಳನ್ನು ಬಗೆಹರಿಸುವ ಕೌಶಲ, ಸಂವಹನ ಮುಂತಾದ ಕೌಶಲಗಳಿರಬೇಕು.

ಈ ಕ್ಷೇತ್ರದ ವೃತ್ತಿಪರರಿಗೆ ಬ್ಯಾಂಕಿಂಗ್, ಹಣಕಾಸು, ಬಂಡವಾಳ ಹೂಡಿಕೆ, ರಕ್ಷಣೆ, ಇ-ಕಾಮರ್ಸ್, ಮಾಹಿತಿ ತಂತ್ರಜ್ಞಾನ, ಶಿಕ್ಷಣ, ಉತ್ಪಾದನೆ, ಆರೋಗ್ಯ ಸೇರಿ ಅರ್ಥವ್ಯವಸ್ಥೆಯ ಎಲ್ಲಾ ಕ್ಷೇತ್ರಗಳಲ್ಲಿ ಸೈಬರ್ ಸೆಕ್ಯೂರಿಟಿ ಅನಲಿಸ್ಟ್, ಸೆಕ್ಯೂರಿಟಿ ಆರ್ಕಿಟೆಕ್ಟ್, ಸೈಬರ್ ಸೆಕ್ಯೂರಿಟಿ ಎಂಜಿನಿಯರ್, ಕ್ಲೌಡ್ ಸೆಕ್ಯೂರಿಟಿ ಎಂಜಿನಿಯರ್, ಸೆಕ್ಯೂರಿಟಿ ಆಡಿಟರ್, ಎಥಿಕಲ್ ಹ್ಯಾಕರ್ ಮುಂತಾದ ಹುದ್ದೆಗಳನ್ನು ಪಡೆದುಕೊಳ್ಳಬಹುದು.

- **ವಿದೇಶದಲ್ಲಿ ಯಾವ ಕೋರ್ಸ್ ಮಾಡಿದರೆ ಹೆಚ್ಚು ಸೂಕ್ತ?**
ಹೆಸರು, ಊರು ತಿಳಿಸಿಲ್ಲ

ಇಂದು ಭಾರತದಲ್ಲೇ ಅನೇಕ ಜಗದ್ವಿಖ್ಯಾತ ಕಾಲೇಜುಗಳೂ, ವಿಶ್ವವಿದ್ಯಾಲಯಗಳೂ ಇವೆ. ವಿದೇಶದಲ್ಲಿ ವ್ಯಾಸಂಗ ಮಾಡಲು ಬಯಸುವಿರಾದರೆ, ಈ ನಿರ್ಣಯದ ಹಿಂದಿರುವ ಪ್ರೇರಣೆ, ನಿಮ್ಮ ಆಸಕ್ತಿ, ಒಲವು, ಸಾಮರ್ಥ್ಯ, ದೌರ್ಬಲ್ಯಗಳ ಅರಿವು ಮತ್ತು ಸ್ಪಷ್ಟವಾದ ವೃತ್ತಿ ಯೋಜನೆಯಿರಬೇಕು. ಸಾಮಾನ್ಯವಾಗಿ ಎಂಜಿನಿಯರಿಂಗ್, ಮೆಡಿಕಲ್, ಹಣಕಾಸು, ಹೋಟೆಲ್ ಮತ್ತು ಬಿಸಿನೆಸ್ ಮ್ಯಾನೇಜ್‌ಮೆಂಟ್, ಪ್ರವಾಸೋದ್ಯಮ, ಪರಿಸರ ವಿಜ್ಞಾನ, ನೈಸರ್ಗಿಕ ಮತ್ತು ಅನ್ವಯಿಕ ವಿಜ್ಞಾನ, ಕಾನೂನು ಮುಂತಾದ ಕ್ಷೇತ್ರಗಳ ಸ್ನಾತಕೋತ್ತರ ಕೋರ್ಸ್‌ಗಳನ್ನು ವಿದೇಶದಲ್ಲಿ ಮಾಡಲು ಪರಿಗಣಿಸಬಹುದು. ವೃತ್ತಿ ಯೋಜನೆಯ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ; https://www.youtube.com/watch?v=AwlDno1YduQ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು shikshana@prajavani.co.in ಗೆ ಕಳಿಸಬಹುದು.

ವಿದ್ಯಾರ್ಥಿ ವೇತನ ಕೈಪಿಡಿ

ಎಚ್‌ಡಿಎಫ್‌ಸಿ ಬ್ಯಾಂಕ್ ಪರಿವರ್ತನ್

1ನೇ ತರಗತಿಯಿಂದ ಸ್ನಾತಕೋತ್ತರ ಹಂತದವರೆಗೆ ಓದುತ್ತಿರುವ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಿದೆ.

ಅರ್ಹತೆ: ವಿದ್ಯಾರ್ಥಿವೇತನವು ಭಾರತೀಯ ಪ್ರಜೆಗಳಿಗೆ ಮಾತ್ರ ಮುಕ್ತವಾಗಿದೆ. ವಿದ್ಯಾರ್ಥಿಗಳು 1 ರಿಂದ 12ನೇ ತರಗತಿ ಅಥವಾ ಡಿಪ್ಲೊಮಾ, ಐಟಿಐ, ಪಾಲಿಟೆಕ್ನಿಕ್, ಪದವಿ ಅಥವಾ ಸ್ನಾತಕೋತ್ತರ ಪದವಿಯಲ್ಲಿರಬೇಕು.

ಅರ್ಜಿದಾರರು ತಮ್ಮ ಹಿಂದಿನ ಅರ್ಹತಾ ಪರೀಕ್ಷೆಯಲ್ಲಿ ಕನಿಷ್ಠ ಶೇ 55 ಅಂಕಗಳೊಂದಿಗೆ ಉತ್ತೀರ್ಣರಾಗಿರಬೇಕು.

ಕುಟುಂಬದ ವಾರ್ಷಿಕ ಆದಾಯವು ₹ 2.5 ಲಕ್ಷಕ್ಕಿಂತ ಕಡಿಮೆ ಅಥವಾ ಸಮನಾಗಿರಬೇಕು.

ಆರ್ಥಿಕ ಸಹಾಯ: ₹75,000ದ ವರೆಗೆ ಅರ್ಜಿ ಸಲ್ಲಿಸಲು ಕೊನೆ ದಿನ: 31-12-2024 ಅರ್ಜಿ ಸಲ್ಲಿಸುವ ವಿಧಾನ: ಆನ್‌ಲೈನ್‌ನಲ್ಲಿ ಅರ್ಜಿ ಹಾಕಿ.

ಹೆಚ್ಚಿನ ಮಾಹಿತಿಗೆ: Short Url: www.b4s.in/pjvi/HDFC54

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ - ಸಮಾಜವಿಜ್ಞಾನ: ಇತಿಹಾಸ

ಅಧ್ಯಾಯ–4 ಕರ್ನಾಟಕದಲ್ಲಿ ಬ್ರಿಟಿಷ್ ಆಳ್ವಿಕೆಗೆ ಪ್ರತಿರೋಧಗಳು

ಪ್ರಶ್ನೋತ್ತರ:–

15) ಯಾವ ಒಪ್ಪಂದದ ಕಾರಣದಿಂದ ಮೊದಲ ಆಂಗ್ಲೋ ಮೈಸೂರು ಯುದ್ಧ ಅಂತ್ಯವಾಯಿತು?
ಉತ್ತರ:– ಮದ್ರಾಸ್ ಒಪ್ಪಂದ

16) ಮದ್ರಾಸ್ ಒಪ್ಪಂದ ಯಾವ ವರ್ಷ ಆಯಿತು?
ಉತ್ತರ:– 1769ರಲ್ಲಿ

17) ಮೊದಲನೆಯ ಆಂಗ್ಲೋ ಮೈಸೂರು ಯುದ್ಧದ ಬಗ್ಗೆ ಬರೆಯಿರಿ
ಉತ್ತರ: ಮೊದಲನೆಯ ಆಂಗ್ಲೋ ಮೈಸೂರು ಯುದ್ಧವು ಕ್ರಿ.ಶ. 1767ರಲ್ಲಿ ಪ್ರಾರಂಭವಾಗಿ 1769ರಲ್ಲಿ ಅಂತ್ಯಗೊಂಡಿತು.

ದಕ್ಷಿಣ ಭಾರತದಲ್ಲಿ ಹೈದರಾಲಿ ಗಳಿಸುತ್ತಿದ್ದ ರಾಜಕೀಯ ಪ್ರಾಬಲ್ಯ ಬ್ರಿಟಿಷರು, ಹೈದರಾಬಾದಿನ ನಿಜಾಮ ಮತ್ತು ಮರಾಠರಲ್ಲಿ ರಾಜಕೀಯ ಅಸಹನೆ ಮೂಡಿಸಿತು. ಹೀಗಾಗಿ ಬ್ರಿಟಿಷರು ತಮ್ಮ ಸಾಮ್ರಾಜ್ಯಶಾಹಿ ಧೋರಣೆಗೆ ಮುಳ್ಳಾಗಿ ಪರಿಣಮಿಸಿದ್ದ ಹೈದರಾಲಿಯನ್ನು ರಾಜಕೀಯವಾಗಿ ಮಣಿಸಲು ಕುತಂತ್ರ ನೀತಿಗಳನ್ನು ಮಾಡಲಾರಂಭಿಸಿದರು. ಮರಾಠರ ದಾಳಿಯಿಂದ ರಾಜಕೀಯ ಮತ್ತು ಆರ್ಥಿಕ ನಷ್ಟವನ್ನು ಅನುಭವಿಸಿದ ಹೈದರಾಲಿಯು ಮರಾಠರು ಮತ್ತು ನಿಜಾಮನನ್ನು ತನ್ನೆಡೆಗೆ ಸೆಳೆದುಕೊಳ್ಳಲು ಯತ್ನಿಸಿದನಾದರೂ ಈ ಪ್ರಯತ್ನದಲ್ಲಿ ಸ್ವಲ್ಪ ಮಟ್ಟಿಗೆ ಜಯಶೀಲನಾದರೂ. ಹೈದರಾಲಿಯ ವಿರುದ್ಧ ಬ್ರಿಟಿಷರು, ಮರಾಠರು ಮತ್ತು ನಿಜಾಮನೊಂದಿಗೆ ಒಪ್ಪಂದ ಮಾಡಿಕೊಂಡರು. ಇದರನ್ವಯ ತ್ರಿಪಕ್ಷ ಒಕ್ಕೂಟ ರಚಿಸಲ್ಪಟ್ಟಿತು. ಆದರೆ ಹೈದರಾಲಿ ತನ್ನ ಚಾಣಾಕ್ಷ್ಯ ರಾಜಕೀಯ ತಂತ್ರಗಳನ್ನು ಪ್ರಯೋಗಿಸುವ ಮೂಲಕ ತನ್ನ ವಿರುದ್ಧ ರಚನೆಯಾಗಿದ್ದ ಮಿತ್ರಕೂಟವನ್ನು ಒಡೆದು ಮರಾಠರು ಮತ್ತು ನಿಜಾಮನನ್ನು ಬ್ರಿಟಿಷರ ವಿರುದ್ಧ ಎತ್ತಿಕಟ್ಟುವಲ್ಲಿ ಯಶಸ್ವಿಯಾದನು. ಈ ನಡುವೆ ಆರ್ಕಾಟ್‌ನಲ್ಲಿ ರಾಜಕೀಯ ಸಮಸ್ಯೆಗಳು ಕಂಡು ಬಂದವು. 1767ರಲ್ಲಿ ಹೈದರಾಲಿ ಮತ್ತು ನಿಜಾಮ, ಬ್ರಿಟಿಷರ ಆಶ್ರಿತ ದೇಶೀಯ ರಾಜ್ಯವಾಗಿದ್ದ ಆರ್ಕಾಟಿಗೆ ಮುತ್ತಿಗೆ ಹಾಕಿದರು. ಇದರಿಂದಾಗಿ ಯುದ್ಧ ಪ್ರಾರಂಭವಾಯಿತು. ತಿರುಚನಾಪಳ್ಳಿ, ತಿರುವಣ್ಣಾಮಲೈ, ಅಂಬೂರು ಮೊದಲಾದ ಸ್ಥಳಗಳಲ್ಲಿ ಕದನಗಳು ಸಂಭವಿಸಿದವು. ಈ ಸಂದರ್ಭದಲ್ಲಿ ಹೈದರಾಲಿ ಮಿಂಚಿನ ಸೈನಿಕ ಕಾರ್ಯಾಚರಣೆಗಳನ್ನು ನಡೆಸಿದನು. ಆದರೆ ಬ್ರಿಟಿಷ್ ಸೈನ್ಯ ಅನೇಕ ಸ್ಥಳಗಳನ್ನು ವಶಪಡಿಸಿಕೊಂಡಿತು. ಹೈದರ್ ತಾತ್ಕಾಲಿಕ ಹಿನ್ನೆಡೆ ಅನುಭವಿಸಿದನು. ಮುಂಬಯಿಯ ಬ್ರಿಟಿಷ್ ಸೈನ್ಯ ರಂಗವನ್ನು ಪ್ರವೇಶಿಸಿತು. ಹೈದರ್ ಈ ಯುದ್ಧವನ್ನು ತನ್ನ ಪ್ರತಿಷ್ಠೆಯ ಸಂಕೇತವೆಂದು ಭಾವಿಸಿ ಕಾರ್ಯಾಚರಣೆಯನ್ನು ಮುಂದುವರಿಸಿದನು. 1769ರ ವೇಳೆಗೆ ಆತನ ಸೈನ್ಯ ಮದರಾಸಿನ ಪ್ರಾಂತ್ಯವನ್ನು ತಲುಪಿದ್ದು ಬ್ರಿಟಿಷರಲ್ಲಿ ನಡುಕವನ್ನು ಹುಟ್ಟಿಸಿತು. ಅನಿವಾರ್ಯವಾಗಿ ಬ್ರಿಟಿಷರು ಹೈದರಾಲಿಯೊಂದಿಗೆ ಚರ್ಚೆ ಮತ್ತು ಸಂಧಾನಗಳ ಮೂಲಕ 'ಮದ್ರಾಸ್ ಒಪ್ಪಂದ' ಮಾಡಿಕೊಂಡರು. ಮೊದಲನೇ ಆಂಗ್ಲೋಮೈಸೂರು ಯುದ್ಧ 1769ರಲ್ಲಿ ಸಹಿ ಹಾಕಲಾದ 'ಮದ್ರಾಸ್ ಒಪ್ಪಂದ'ದೊಂದಿಗೆ ಕೊನೆಯಾಯಿತು.

18) ಎರಡನೆಯ ಆಂಗ್ಲೋ–ಮೈಸೂರು ಯುದ್ಧ ಯಾವ ಒಪ್ಪಂದ ಮೂಲಕ ಅಂತ್ಯಗೊಳಿಸಲಾಯಿತು?
ಉತ್ತರ: 1784ರ ಮಂಗಳೂರು ಒಪ್ಪಂದ

19) ಹೈದರಾಲಿ ಯಾವ ವರ್ಷ ಮೃತಪಟ್ಟನು?
ಉತ್ತರ:– 1782

20) ಯಾವ ಯುದ್ಧದ ಸಂದರ್ಭದಲ್ಲಿ ಅನಾರೋಗ್ಯದ ಕಾರಣಕ್ಕಾಗಿ ಹೈದರಾಲಿ ತೀರಿಕೊಂಡನು?
ಉತ್ತರ:– ಎರಡನೆಯ ಆಂಗ್ಲೋ–ಮೈಸೂರು

21) ಎರಡನೆಯ ಆಂಗ್ಲೋ–ಮೈಸೂರು ಯುದ್ಧದ ಸಂದರ್ಭದಲ್ಲಿ ಎಲ್ಲಿ ನಡೆದ ಕದನದಲ್ಲಿ ಹೈದರಾಲಿ ಸೋತನು?
ಉತ್ತರ:– 1781ರಲ್ಲಿ ಪೋರ್ಟೋನೋವೆ ಎಂಬಲ್ಲಿ ನಡೆದ ಕದನದಲ್ಲಿ ಹೈದರ್ ಪರಾಭವಗೊಂಡನು.

22) ಎರಡನೆಯ ಆಂಗ್ಲೋ–ಮೈಸೂರು ಯುದ್ಧ ಕುರಿತು ಬರೆಯಿರಿ
ಉತ್ತರ: ಮದರಾಸು ಒಪ್ಪಂದ ದಕ್ಷಿಣ ಭಾರತದಲ್ಲಿ ತಾತ್ಕಾಲಿಕವಾಗಿ ರಾಜಕೀಯ ಬೆಳವಣಿಗೆಗಳನ್ನು ತಡೆಹಿಡಿದಿತ್ತು. ಆದರೆ ಬ್ರಿಟಿಷರು ಮದ್ರಾಸ್ ಒಪ್ಪಂದದ ಷರತ್ತುಗಳನ್ನು ಉಲ್ಲಂಘಿಸಲು ಯತ್ನಿಸಿದರು. ಮರಾಠರು ಮಾಧವರಾಯನ ನೇತೃತ್ವದಲ್ಲಿ ಸೈನ್ಯವನ್ನು ಮುನ್ನಡೆಸಿ ಶ್ರೀರಂಗಪಟ್ಟಣದ ಕಡೆ ನುಗ್ಗಿದಾಗ ಹೈದರ್ ಬ್ರಿಟಿಷರ ಸಹಾಯವನ್ನು ಅಪೇಕ್ಷಿಸಿದನು. ಆದರೆ ಬ್ರಿಟಿಷರು ಇದನ್ನು ತಿರಸ್ಕರಿಸಿ ಮದರಾಸು ಒಪ್ಪಂದಕ್ಕೆ ವಿರುದ್ಧವಾಗಿ ನಡೆದುಕೊಂಡರು. ಮಾಹೆಯು ಫ್ರೆಂಚರ ವಸಾಹತುವಾಗಿದ್ದು, ಹೈದರಾಲಿಯ ನಿಯಂತ್ರಣಕ್ಕೊಳಪಟ್ಟಿತ್ತು. ಬ್ರಿಟಿಷರು ಮಾಹೆಯನ್ನು ವಶಪಡಿಸಿಕೊಂಡಿದ್ದು ಎರಡನೆಯ ಮೈಸೂರು ಯುದ್ಧಕ್ಕೆ ಕಾರಣವಾಯಿತು. ಹೈದರಾಲಿ 1780ರಲ್ಲಿ ಎರಡನೆಯ ಮೈಸೂರು ಯುದ್ಧ ಪ್ರಾರಂಭವಾಯಿತು. ಯುದ್ಧದ ಪ್ರಾರಂಭದಲ್ಲಿ ಹೈದರ್ ಮುನ್ನಡೆ ಸಾಧಿಸಿದನು. ಕರ್ನಾಟಕ ಪ್ರಾಂತ್ಯದ ಅನೇಕ ಕೋಟೆಗಳನ್ನು ವಶಪಡಿಸಿಕೊಂಡನು. ಕಾಂಚೀಪುರಂನಿಂದ ಕೋರಮಂಡಲ ತೀರದವರೆವಿಗೂ ತನ್ನ ಸೈನ್ಯವನ್ನು ಮುನ್ನುಗ್ಗಿಸಿದನು. ಇದು ಮದರಾಸಿನ ಬ್ರಿಟಿಷ್ ಸೈನ್ಯಾಧಿಕಾರಿಗಳಲ್ಲಿ ನಡುಕವನ್ನು ತಂದಿತು. ಹೈದರ್ ಆರ್ಕಾಟಿಗೆ ಮುತ್ತಿಗೆ ಹಾಕಿ ಅದನ್ನು ವಶಪಡಿಸಿಕೊಂಡನು. ಅದೇ ಸಂದರ್ಭದಲ್ಲಿ ಸರ್ ಐರ್‌ಕೂಟ್‌ನ ನೇತೃತ್ವದಲ್ಲಿ ಬ್ರಿಟಿಷರ ಸೈನ್ಯ ಸಜ್ಜುಗೊಂಡಿತು. ಹೈದರ್ ಈ ಅವಧಿಯಲ್ಲಿ ವೆಲ್ಲೂರು ಮತ್ತು ವಾಂಡಿವಾಶ್‌ಗಳನ್ನು ಮುತ್ತುವುದಾಗಿ ಬೆದರಿಸಿದನು. ಹೈದರನ ಸೈನ್ಯವನ್ನು ಸರ್ ಐರ್‌ಕೂಟ್ ಪಾಂಡಿಚೇರಿಯವರೆವಿಗೂ ಹಿಂಬಾಲಿಸಿದನು. ಫ್ರೆಂಚರು ಹೈದರನಿಗೆ ಬ್ರಿಟಿಷರ ವಿರುದ್ಧ ಸಹಕರಿಸಲು ನಿರಾಕರಿಸಿದರು. ಹೈದರ್, ಇದರಿಂದಾಗಿ ಯುದ್ಧಗತಿಯನ್ನು ಬದಲಿಸಿದನು. ಹೈದರ್ ಬ್ರಿಟಿಷರ ಹತೋಟಿಯಲ್ಲಿನ ಪ್ರದೇಶಗಳಿಗೆ ಮುತ್ತಿಗೆ ಹಾಕಿ ಕೊಳ್ಳೆಹೊಡೆದು ಅಪಾರ ಸಂಪತ್ತು ಮತ್ತು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಿದನು. 1781ರಲ್ಲಿ ಪೋರ್ಟೋನೋವೆ ಎಂಬಲ್ಲಿ ನಡೆದ ಕದನದಲ್ಲಿ ಹೈದರ್ ಪರಾಭವಗೊಂಡನು. ಇದು ಯುದ್ಧದ ಗತಿಯನ್ನು ಬದಲಾಯಿಸಿತು ಮತ್ತು ಬ್ರಿಟಿಷರಲ್ಲಿ ಸ್ಥೈರ್ಯವನ್ನು ಹೆಚ್ಚಿಸಿತು. ತರುವಾಯ ಪುಲಿಕಾಟ್ ಮತ್ತು ಸೋಲಿಂಗೂರ್‌ಗಳ ಕದನದಲ್ಲಿಯೂ ಆರ್ಥಿಕ ಹಾನಿ ಅನುಭವಿಸಿದನು. ಈ ವೇಳೆಗೆ ಬ್ರಿಟಿಷರು ಸಾಲ್ಬಾಯ್ ಒಪ್ಪಂದಕ್ಕೆ ಸಹಿ ಹಾಕುವ ಮೂಲಕ ಹೈದರನ ಒಕ್ಕೂಟದಿಂದ ಮರಾಠರು ಹಾಗೂ ನಿಜಾಮನನ್ನು ಸೆಳೆಯುವಲ್ಲಿ ಸಫಲರಾದರು. ಯುದ್ಧದ ಮಧ್ಯದಲ್ಲಿ ಹೈದರಾಲಿ 1782ರಲ್ಲಿ ಅನಾರೋಗ್ಯದಿಂದ ಮೃತನಾದನು. ಆತನ ಮಗ ಟಿಪ್ಪು ಯುದ್ಧವನ್ನು ಮುನ್ನಡೆಸಿದನು. ಹೈದರನ ಮರಣ ಸಂದರ್ಭದಲ್ಲಿ ಮಲಬಾರ್ ಪ್ರಾಂತ್ಯದಲ್ಲಿ ನಡೆದ ಯುದ್ಧದಲ್ಲಿ ಟಿಪ್ಪು ತೊಡಗಿದ್ದನು. ಟಿಪ್ಪುವಿನ ಅನುಪಸ್ಥಿತಿಯ ಲಾಭ ಪಡೆದ ಬ್ರಿಟಿಷರು ಬಿದನೂರು ಮತ್ತು ಮಂಗಳೂರನ್ನು ವಶಪಡಿಸಿಕೊಳ್ಳಲು ಹವಣಿಸಿದರು. ತಿರುವಾಂಕೂರು, ಕಲ್ಲಿಕೋಟೆ ಮತ್ತು ಮಲಬಾರಿನ ಅನೇಕ ರಾಜರುಗಳನ್ನು ಟಿಪ್ಪುವಿನ ವಿರುದ್ಧ ಎತ್ತಿಕಟ್ಟುವ ಪ್ರಯತ್ನಗಳನ್ನು ಅವರು ನಡೆಸಿದರು. (ಮುಂದುವರಿಯುವುದು)

ಎಸ್ಸೆಸ್ಸೆಲ್ಸಿ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

II PUC PHYSICS

MOVING CHARGES AND MAGNETISM

34. There is a uniform magnetic field directed perpendicular and into the plane of the paper. An irregular shaped conducting loop is slowly changing into a circular loop in the plane of the paper. Then ....
a) current is induced in the loop in the clockwise direction
..,...b) current is induced in the loop in the anti-clockwise direction
c) no current is induced in the loop
d) AC is induced in the loop

Ans:- b

35. The magnetic force acting on a moving charge is
a) parallel to velocity $\vec{V}$
b) perpendicular to magnetic field $\vec{B}$ only
c) perpendicular to $\vec{V}$ and $\vec{B}$,,,,,,,,,,,,,
d) perpendicular to $\vec{V}$ and parallel to $\vec{B}$

Ans:- C

36. In an induction coil the emf induced in the secondary is maximum
........a) at the break of the primary circuit
b) either at the make or break of the primary circuit
c) neither at the make nor break of the primary circuit
d) at the make of the primary circuit

Ans:- a

37. When the radius of the T.G coil is decreased, its sensitiveness
a) remains unaltered .... b) increases
c) may increase or decrease
d) decreases

Ans:- b


38. The instrument used to measure e.m.f of the cell accurately is
a) High resistance Voltmeter
b) Potentiometer..........
c) Galvanometer
d) Voltmeter

Ans:- b

39. A galvanometer of resistance 50 Ω is connected to a battery of 3V along with a resistance 2950 Ω is series. A full scale deflection of 30 divisions is obtained in the galvanometer. In order to reduce this deflection to 20 divisions, the resistance in series should be –
a) 6050 Ω b) 5550 Ω
c) 5050 Ω ..... d) 4450 Ω


Ans:- d

41. The magnetic field due to a straight conductor of uniform cross- section of radius a and carrying a steady current is represented by –



Ans;- B


42. Circular loop of a wire and a long straight wire carry currents Ic and Ie respectively as shown in the figure. Assuming that these are placed in the same plane, the magnetic fields will be zero at the centre O of the loop, when separation H is –



(a) $\frac{I_e R}{I_c \pi}$, (b) $\frac{I_c R}{I_e \pi}$,
(c) $\frac{I_e \pi}{I_c R}$, (d) $\frac{I_c \pi}{I_e R}$,

Ans:-a

43. The magnetic field intensity due to a thin wire carrying current I in the figure shown is-



(a) $\frac{\mu_0 I}{2\pi R}(\pi - \alpha + \tan\alpha)$
(b) $\frac{\mu_0 I}{2\pi R}(\pi - \alpha)$ (c) $\frac{\mu_0 I}{2\pi R}(\pi + \alpha)$
(d) $\frac{\mu_0}{2\pi R}(\pi + \alpha - \tan\alpha)$

Ans:-A

‘ಡ್ರೋನ್ ನಿಗ್ರಹ ಘಟಕ’ ಸ್ಥಾಪನೆ

ಜೋಧಪುರ (ಪಿಟಿಐ): ‘ಗಡಿ ಭದ್ರತೆಗಾಗಿ ದೇಶದಲ್ಲಿ ಸಮಗ್ರ ಡ್ರೋನ್ ನಿಗ್ರಹ ಘಟಕ ಸ್ಥಾಪಿಸಲಾಗುವುದು’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ತಿಳಿಸಿದರು. ಮುಂಬರುವ ದಿನಗಳಲ್ಲಿ ಮಾನವರಹಿತ ವೈಮಾನಿಕ ವಿಮಾನಗಳ ಬೆದರಿಕೆ ಹೆಚ್ಚಾಗುವ ಸಾಧ್ಯತೆಯಿದ್ದು, ಅವುಗಳನ್ನು ನಿಗ್ರಹಿಸಲು ಈ ಕ್ರಮ ತೆಗೆದುಕೊಳ್ಳಲಾಗುವುದು ಎಂದರು.

ಬಿಎಸ್‌ಎಫ್‌ನ 60ನೇ ಸ್ಥಾಪನಾ ದಿನದ ಅಂಗವಾಗಿ ಇಲ್ಲಿ ನಡೆದ ಕಾರ್ಯಕ್ರಮದಲ್ಲಿ ಯೋಧರನ್ನು ಉದ್ದೇಶಿಸಿ ಮಾತನಾಡಿದ ಅವರು, ‘ಭಾರತ ಹಾಗೂ ಪಾಕಿಸ್ತಾನದ 300 ಕಿ.ಮೀ ಗಡಿಭಾಗದಲ್ಲಿ ಲೇಸರ್ ಹೊಂದಿದ ಡ್ರೋನ್ ನಿಗ್ರಹ ಬಂದೂಕಿನ ಬಳಕೆಯನ್ನು ಪ್ರೋತ್ಸಾಹಿಸಲಾಗುವುದು’ ಎಂದರು.

‘ಪಂಜಾಬ್‌ನ ಭಾರತ– ಪಾಕಿಸ್ತಾನ ಗಡಿಭಾಗದಲ್ಲಿ ಡ್ರೋನ್‌ಗಳನ್ನು ಪತ್ತೆಹಚ್ಚಿ ಹೊಡೆದುರುಳಿಸುವ ಪ್ರಮಾಣವು ಶೇ 3ರಿಂದ ಶೇ 55ರಷ್ಟಿದೆ. ಭವಿಷ್ಯದ ದಿನಗಳಲ್ಲಿ ಡ್ರೋನ್ ದಾಳಿಯ ಬೆದರಿಕೆ ಹೆಚ್ಚಾಗಲಿದ್ದು, ಇದನ್ನು ನಿಗ್ರಹಿಸಲು ಸರ್ಕಾರದ ಜೊತೆ ಕೈ ಜೋಡಿಸುವಂತೆ ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗೂ (ಡಿಆರ್‌ಡಿಒ) ತಿಳಿಸಲಾಗಿದೆ’ ಎಂದರು.

‘ಕಸಾಪ ಸ್ಪಂದಿಸದಿದ್ದರೆ ಮನೆಗೊಂದು ಕೋಳಿ ಸಂಗ್ರಹಿಸುವ ಅಭಿಯಾನ’

‘ನಾವೇ ಬಾಡೂಟ ಹಾಕಿಸ್ತೀವಿ’

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಇಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಬಾಡೂಟದ ವ್ಯವಸ್ಥೆ ಮಾಡದಿದ್ದರೆ, ಮನೆಗೊಂದು ಕೋಳಿ ಸಂಗ್ರಹಿಸಿ ನಾವೇ ಮಾಂಸದೂಟ ಹಾಕಿಸುತ್ತೇವೆ’ ಎಂದು ‘ಮಂಡ್ಯದ ಬಾಡೂಟ ಬಳಗ’ದವರು ತಿಳಿಸಿದರು.

ನಗರದ ಕಾವೇರಿ ಉದ್ಯಾನದಲ್ಲಿ ಭಾನುವಾರ ವಿವಿಧ ಸಂಘಟನೆಗಳ ಮುಖಂಡರು ಸಭೆ ನಡೆಸಿ, ಒಂದು ವೇಳೆ ನಮ್ಮ ಒತ್ತಾಯಕ್ಕೆ ಜಿಲ್ಲಾಡಳಿತ ಮತ್ತು ಕಸಾಪ ಪದಾಧಿಕಾರಿಗಳು ಸ್ಪಂದಿಸದಿದ್ದರೆ ಸ್ವಯಂಪ್ರೇರಿತವಾಗಿ ಸಮ್ಮೇಳನದ ಮೊದಲನೇ ದಿನ ಮೊಟ್ಟೆ, 2ನೇ ದಿನ ಮುದ್ದೆ– ನಾಟಿ ಕೋಳಿಮಾಂಸದ ಸಾಂಬಾರ್, 3ನೇ ದಿನ ಚಿಕನ್ ಬಿರಿಯಾನಿಯನ್ನು ಬಡಿಸುವ ಚಿಂತನೆ ನಡೆಸಲಾಗಿದೆ. ಇದಕ್ಕೆ ಪೂರಕವಾಗಿ ಮನೆಗೊಂದು ಕೋಳಿಯನ್ನು ಸಂಗ್ರಹಿಸುವ ಅಭಿಯಾನ ನಡೆಸೋಣ ಎಂದು ತೀರ್ಮಾನ ಕೈಗೊಂಡರು.



ಮಂಡ್ಯದ ಕಾವೇರಿ ಉದ್ಯಾನದಲ್ಲಿ ಭಾನುವಾರ ‘ಬಾಡೂಟ ಬಳಗ’ದವರು ಸಭೆ ನಡೆಸಿದರು –ಪ್ರಜಾವಾಣಿ ಚಿತ್ರ

‘ಸಮ್ಮೇಳನ ಹೊರಡಿಸಿರುವ ನಿಬಂಧನೆಗಳಲ್ಲಿ ಬಾಡೂಟ ನಿಷೇಧಿಸಲಾಗಿದೆ’ ಎಂಬ ಹೇಳಿಕೆಯನ್ನು ಒಕ್ಕೊರಲಿನಿಂದ ಖಂಡಿಸಿದರು. ಮಾಂಸಾಹಾರ ಅಪರಾಧ ಎಂಬಂತೆ ಬಿಂಬಿಸಲಾಗಿದೆ. ಈ ಮೂಲಕ ಬಹುಜನರ ಮಾಂಸಾಹಾರಕ್ಕೆ ಅಪಮಾನ ಮಾಡಿದಂತಾಗಿದೆ. ಆಹಾರ ಹಕ್ಕನ್ನು ಅವಮಾನಿಸಿದೆ’ ಎಂದು ಅಸಮಾಧಾನ ಹೊರ ಹಾಕಿದರು.

‘ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ವಿವಿಧ ಜಿಲ್ಲೆಗಳು, ಹೊರ ರಾಜ್ಯಗಳಿಂದ ಆಗಮಿಸುವ ಸಾಹಿತ್ಯ ಪ್ರಿಯರಿಗೆ ಉತ್ತರ ಮತ್ತು ದಕ್ಷಿಣ ಕರ್ನಾಟಕ ಶೈಲಿಯ ಆಹಾರವನ್ನು ಉಣಬಡಿಸಲು ಆಹಾರ ಸಮಿತಿ ನಿರ್ಧರಿಸಿದೆ. ಆದರೆ, ಮಂಡ್ಯ ನೆಲದ ಆಹಾರ ಸಂಸ್ಕೃತಿಯಾದ ಮಾಂಸಾಹಾರ ಸೇವನೆಗೆ ಅವಕಾಶ ನೀಡದಿರುವುದು ಸರಿಯಲ್ಲ’ ಎಂದು ಮುಖಂಡರು ಆಕ್ರೋಶ ವ್ಯಕ್ತಪಡಿಸಿದರು.

‘ಮಂಡ್ಯ ಭಾಗದ ಮುದ್ದೆ ಮತ್ತು ನಾಟಿಕೋಳಿ ಸಾರಿನ ಊಟಕ್ಕೆ ವಿಶೇಷ ಮಾನ್ಯತೆ ಇದೆ. ಈ ಆಹಾರ ಸಂಸ್ಕೃತಿ ಎತ್ತಿ ಹಿಡಿಯುವ ಉದ್ದೇಶದಿಂದ ಸಮ್ಮೇಳನದಲ್ಲಿ ಮಾಂಸಾಹಾರಕ್ಕೆ ಒತ್ತಾಯಿಸುತ್ತಿದ್ದೇವೆ. ಇದರಲ್ಲಿ ಸಸ್ಯಾಹಾರಿಗಳನ್ನು ಗುರಿಯಾಗಿಸುವ ಯಾವುದೇ ಉದ್ದೇಶವಿಲ್ಲ’ ಎಂದು ವಿವಿಧ ಸಂಘಟನೆಗಳ ಮುಖಂಡರಾದ ಟಿ.ಎಲ್. ಕೃಷ್ಣೇಗೌಡ, ಎಲ್. ಸಂದೇಶ್, ಎಂ.ಬಿ. ನಾಗಣ್ಣಗೌಡ, ಸಿ. ಕುಮಾರಿ, ಪೂರ್ಣಿಮಾ ಹೇಳಿದರು.

‘ಡಿ.9ರಂದು (ಸೋಮವಾರ) ಜಿಲ್ಲಾಧಿಕಾರಿ ಕುಮಾರ ಅವರಿಗೆ ಮನವಿ ಸಲ್ಲಿಸಲಾಗುವುದು. ಜೊತೆಗೆ ಸ್ವಾಗತ ಸಮಿತಿ ಅಧ್ಯಕ್ಷರಾದ ಸಚಿವ ಎನ್. ಚಲುವರಾಯಸ್ವಾಮಿ ಮತ್ತು ಕಸಾಪ ಅಧ್ಯಕ್ಷ ಮಹೇಶ ಜೋಶಿ ಅವರ ಗಮನಕ್ಕೂ ತರಲಾಗುವುದು’ ಎಂದು ಬಳಗದ ಟಿ. ಯಶವಂತ್, ಲಕ್ಷ್ಮಣ್ ಚೀರನಹಳ್ಳಿ, ಸುಂಡಹಳ್ಳಿ ಮಂಜುನಾಥ್ ತಿಳಿಸಿದರು.

ಮುಖಂಡರಾದ ಟಿ.ಡಿ. ನಾಗರಾಜು, ಸಿ.ಎಂ. ದ್ಯಾವಪ್ಪ, ಸಿ.ಆರ್. ರಮೇಶ್, ಎಚ್.ಡಿ. ಜಯರಾಂ, ಶಂಕರಲಿಂಗೇಗೌಡ, ನೆಲದನಿ ಲಂಕೇಶ್, ಕೀಲಾರ ಕೃಷ್ಣೇಗೌಡ, ಚಂದಗಾಲು ವಿಜಯಕುಮಾರ್, ಅರವಿಂದ ಪ್ರಭು, ಸಂತೋಷ್, ನರಸಿಂಹಮೂರ್ತಿ, ಜಿ.ಎನ್. ಕೆಂಪರಾಜು, ಶಿವರಾಂ ಭಾಗವಹಿಸಿದ್ದರು.

ತೋಳಿನವರೆಗೆ ಬಟ್ಟೆ ಕತ್ತರಿಸಿ ಪ್ರವೇಶ: ಅಭ್ಯರ್ಥಿಗಳ ಆಕ್ರೋಶ

ಪ್ರಜಾವಾಣಿ ವಾರ್ತೆ

ಹಾಸನ: ಇಲ್ಲಿನ ಎಲ್.ವಿ. ಪಾಲಿಟೆಕ್ನಿಕ್‌ನ ಪರೀಕ್ಷಾ ಕೇಂದ್ರದಲ್ಲಿ ಭಾನುವಾರ ನಡೆದ ಪಿಡಿಒ ಹುದ್ದೆಯ ಸ್ಪರ್ಧಾತ್ಮಕ ಪರೀಕ್ಷೆಗೆ ತುಂಬು ತೋಳಿನ ಅಂಗಿ ತೊಟ್ಟು ಹಾಜರಾದ ಅಭ್ಯರ್ಥಿಗಳ, ಅಂಗಿಯ ತೋಳುಗಳನ್ನು ಪರೀಕ್ಷಾ ಕೇಂದ್ರದ ಸಿಬ್ಬಂದಿ ಕತ್ತರಿಸಿದರು. ಇದು ಅಭ್ಯರ್ಥಿಗಳ ಆಕ್ರೋಶಕ್ಕೆ ಕಾರಣವಾಯಿತು.

ಪರೀಕ್ಷೆ ಬರೆಯಲು ನೂರಾರು ಯುವಕ-ಯುವತಿಯರು ಬಂದಿದ್ದರು. ಕೆಲ ಯುವತಿಯರು ತುಂಬು ತೋಳಿನ ಬಟ್ಟೆ ಧರಿಸಿದ್ದರು. ಇದರಿಂದ ಪರೀಕ್ಷಾ ಕೇಂದ್ರದೊಳಗೆ ಅಭ್ಯರ್ಥಿಗಳನ್ನು ಬಿಡಲು ಅಧಿಕಾರಿಗಳು ನಿರಾಕರಿಸಿದರು. ‘ಪರೀಕ್ಷೆಗೆ ಸಮಯವಾಗುತ್ತಿದೆ, ಒಳಗೆ ಬಿಡಿ’ ಎಂದು ಪರೀಕ್ಷಾರ್ಥಿಗಳು ಕೋರಿದರೂ ಅವಕಾಶ ನೀಡಲಿಲ್ಲ. ಕೊನೆಗೆ ಅರ್ಧ ತೋಳಿನವರೆಗೆ ಬಟ್ಟೆ ಕತ್ತರಿಸಿ ಪ್ರವೇಶ ನೀಡಲಾಯಿತು. ಈ ವೇಳೆ ಅಧಿಕಾರಿಗಳು ಹಾಗೂ ಪರೀಕ್ಷಾರ್ಥಿಗಳ ನಡುವೆ ವಾಗ್ವಾದ ನಡೆಯಿತು.

‘ವಸ್ತ್ರಸಂಹಿತೆ ನಿಯಮವಿದೆ. ಪ್ರವೇಶಪತ್ರದಲ್ಲಿ ನಿಯಮಗಳನ್ನು ಹಾಕಲಾಗಿದೆ. ಆದರೆ, ನೀವು ನಿಯಮಗಳನ್ನು ಉಲ್ಲಂಘಿಸಿ ಬಂದಿದ್ದೀರಾ, ನಮ್ಮ ಕರ್ತವ್ಯ ನಾವು ಮಾಡಲೇಬೇಕು’ ಎಂದು ಅಧಿಕಾರಿ ಹೇಳಿದರು.



ಹಾಸನದ ಎಂ.ವಿ.ಪಾಲಿಟೆಕ್ನಿಕ್ ಪರೀಕ್ಷಾ ಕೇಂದ್ರದಲ್ಲಿ ಭಾನುವಾರ ಅಭ್ಯರ್ಥಿಗಳ ಬಟ್ಟೆಯ ತೋಳುಗಳನ್ನು ಸಿಬ್ಬಂದಿ ಕತ್ತರಿಸಿದರು

‘ಒಂದು ಇಂಚು ಉದ್ದವಿದೆ ಎಂಬ ಕಾರಣಕ್ಕೆ ಮಹಿಳಾ ಅಭ್ಯರ್ಥಿಗಳ ಬಟ್ಟೆಯನ್ನೂ ಕತ್ತರಿಸಿದ್ದಾರೆ. ಬೇರೆ ಊರುಗಳಿಂದ ಬಂದಿರುವ ಯುವತಿಯರು ಕತ್ತರಿಸಿದ ಬಟ್ಟೆಯಲ್ಲಿಯೇ ಮನೆಗೆ ಹೋಗಬೇಕಾಯಿತು. ಸರ್ಕಾರ ಇದ್ಯಾವ ನಿಯಮಾವಳಿ ಮಾಡುತ್ತಿದೆ’ ಎಂದು ಅಭ್ಯರ್ಥಿಯೊಬ್ಬರು ಪ್ರಶ್ನಿಸಿದರು.

ಬ್ಲೂಟೂತ್ ಬಳಕೆ

ತುಮಕೂರು: ನಗರದ ವಿದ್ಯೋದಯ ಕಾನೂನು ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಭಾನುವಾರ ನಡೆದ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ನೇಮಕಾತಿ ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಅಭ್ಯರ್ಥಿಯೊಬ್ಬರು ನಕಲು ಮಾಡಲು ಬ್ಲೂಟೂತ್ ಬಳಸಿ ಸಿಕ್ಕಿ ಬಿದ್ದಿದ್ದಾರೆ.

ಬೆಂಗಳೂರಿನ ರಾಮಮೂರ್ತಿ ನಗರದ ಧರ್ಮೇಂದ್ರ (33) ಬ್ಲೂಟೂತ್ ಬಳಸಿದ ಅಭ್ಯರ್ಥಿ. ಭಾನುವಾರ ಸಾಮಾನ್ಯ ಪತ್ರಿಕೆ ಪರೀಕ್ಷೆ ಬರೆಯುತ್ತಿದ್ದ ಧರ್ಮೇಂದ್ರ ಬ್ಲೂಟೂತ್ ಬಳಸುತ್ತಿರುವುದನ್ನು ಗಮನಿಸಿದ ಪೊಲೀಸರು ಆತನನ್ನು ವಿಚಾರಿಸಿ ವಶಕ್ಕೆ ಪಡೆದಿದ್ದಾರೆ. ತಿಲಕ್ ಪಾರ್ಕ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಕರ್ನಾಟಕ ಲೋಕಸೇವಾ ಆಯೋಗ (ಕೆಪಿಎಸ್‌ಸಿ) ಪಿಡಿಒ ಪರೀಕ್ಷೆ ನಡೆಸುತ್ತಿದ್ದು, ಶನಿವಾರ ನಗರದ 23 ಪರೀಕ್ಷಾ ಕೇಂದ್ರಗಳಲ್ಲಿ ಕನ್ನಡ ಭಾಷೆ ಪರೀಕ್ಷೆ ಸುಸೂತ್ರವಾಗಿ ನಡೆದಿತ್ತು. ಭಾನುವಾರ 30 ಕೇಂದ್ರಗಳಲ್ಲಿ ಸಾಮಾನ್ಯ ಪತ್ರಿಕೆ ಪರೀಕ್ಷೆ ನಡೆಯಿತು.

15 ಸಾವಿರ ಆಹ್ವಾನಿತರಿಗೆ ವಸತಿ ವ್ಯವಸ್ಥೆ

87ನೇ ನುಡಿಜಾತ್ರೆ: ಹೋಟೆಲ್, ಲಾಡ್ಜ್, ಕಲ್ಯಾಣ ಮಂಟಪಗಳು ತಿಂಗಳ ಮುಂಚೆಯೇ ಬುಕ್ಕಿಂಗ್

● ಸಿದ್ದು ಆರ್.ಜಿ.ಹಳ್ಳಿ

ಮಂಡ್ಯ: 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಬರುವ ಅತಿಥಿ ಗಣ್ಯರಿಗೆ, ಕಲಾವಿದರಿಗೆ ಮತ್ತು ಪ್ರತಿನಿಧಿಗಳಿಗೆ ಒಟ್ಟು 15 ಸಾವಿರ ವಸತಿ ವ್ಯವಸ್ಥೆ ಮಾಡಲಾಗಿದೆ.

ಮಂಡ್ಯ, ಮದ್ದೂರು ಮತ್ತು ಶ್ರೀರಂಗಪಟ್ಟಣ ತಾಲ್ಲೂಕುಗಳ ಹೋಟೆಲ್, ಲಾಡ್ಜ್, ಕಲ್ಯಾಣ ಮಂಟಪ, ಸಮುದಾಯ ಭವನ, ವಿದ್ಯಾರ್ಥಿ ನಿಲಯಗಳನ್ನು ಒಂದೂವರೆ ತಿಂಗಳು ಮುಂಚಿತವಾಗಿಯೇ ಕಾಯ್ದಿರಿಸಲಾಗಿದೆ.

‘ವಿದೇಶಿ ಗಣ್ಯರು–250, ಹೊರ ರಾಜ್ಯಗಳ ಕನ್ನಡಿಗರು–250, ವಿವಿಧ ಜಿಲ್ಲೆಗಳ ಕಲಾತಂಡಗಳ ಕಲಾವಿದರು–600, ಸಾಂಸ್ಕೃತಿಕ ಕಾರ್ಯಕ್ರಮ ನೀಡುವ ಕಲಾವಿದರು– 1,000, ಕವಿಗೋಷ್ಠಿ ಮತ್ತು ವಿಚಾರಗೋಷ್ಠಿಯ ಕವಿಗಳು ಮತ್ತು ಸಾಹಿತಿಗಳು, ಸನ್ಮಾನಿತರು ಹಾಗೂ ಅತಿಥಿ ಗಣ್ಯರಿಗೆ ವಿವಿಧ ಸ್ಥಳಗಳಲ್ಲಿ ವಸತಿ ವ್ಯವಸ್ಥೆಗೆ ಸಿದ್ಧತೆಗಳನ್ನು ಮಾಡಿಕೊಳ್ಳಲಾಗಿದೆ’ ಎಂದು ಉಪವಿಭಾಗಾಧಿಕಾರಿ, ವಸತಿ ಸಮಿತಿಯ ಸದಸ್ಯ ಕಾರ್ಯದರ್ಶಿ ಶಿವಮೂರ್ತಿ ಮಾಹಿತಿ ನೀಡಿದರು.

ಸಾಹಿತ್ಯ ಸಮ್ಮೇಳನಕ್ಕೆ ವಸತಿ ವ್ಯವಸ್ಥೆ ವಿವರ

ವಸತಿ ಸ್ಥಳ	ಸಂಖ್ಯೆ	ಸಾಮರ್ಥ್ಯ
ಹೋಟೆಲ್–ಲಾಡ್ಜ್	30	1,350
ಕಲ್ಯಾಣ ಮಂಟಪ	29	1,742
ಸಮುದಾಯ ಭವನ	16	800
ವಿದ್ಯಾರ್ಥಿನಿಲಯ	42	10,772
ಒಟ್ಟು	117	14,664

ಮಂಡ್ಯ, ಮದ್ದೂರು, ಶ್ರೀರಂಗಪಟ್ಟಣ ತಾಲ್ಲೂಕಿನ ವಿವಿಧೆಡೆ ವಾಸ್ತವ್ಯ ಮಾಡುವ ಸಮ್ಮೇಳನದ ಅತಿಥಿಗಳಿಗಾಗಿ ಉಚಿತ ವಾಹನ ಸೌಲಭ್ಯ ಕಲ್ಪಿಸಲಾಗುವುದು

ಪಿ.ರವಿಕುಮಾರ್ ಗಣಿಗ
ಶಾಸಕ, ವಸತಿ ಸಮಿತಿ ಅಧ್ಯಕ್ಷ

6 ಸಾವಿರ ಪ್ರತಿನಿಧಿಗಳ ನೋಂದಣಿ: ಸಮ್ಮೇಳನಕ್ಕೆ ಆರಂಭದಲ್ಲಿ 10 ಸಾವಿರ ಪ್ರತಿನಿಧಿಗಳ ನೋಂದಣಿ ಗುರಿಯನ್ನು ಹಾಕಿಕೊಳ್ಳಲಾಗಿತ್ತು. ನಂತರ 6 ಸಾವಿರಕ್ಕೆ ಸೀಮಿತಗೊಳಿಸಲಾಯಿತು. ಅಷ್ಟು ಮಂದಿ ಆನ್‌ಲೈನ್ ನೋಂದಣಿ ಮಾಡಿಕೊಂಡಿದ್ದು, ಎಲ್ಲರೂ ಪರಿಷತ್ ಸದಸ್ಯರಾಗಿದ್ದಾರೆ. ಅವರಿಗೆ ‘ಸಮ್ಮೇಳನ ಕಿಟ್’ ಮತ್ತು ‘ವಸತಿ ಕಿಟ್’ ನೀಡಲಾಗುತ್ತದೆ. ‘ಪ್ರತಿನಿಧಿಗಳ ನೋಂದಣಿ ಮುಕ್ತಾಯಗೊಂಡಿದ್ದು, ಉಳಿದವರೂ ಸಮ್ಮೇಳನದಲ್ಲಿ ಪಾಲ್ಗೊಳ್ಳಬಹುದು. ಸರ್ಕಾರಿ ನೌಕರರಿಗೆ ‘ಒಒಡಿ’ಯನ್ನು ಸ್ಥಳದಲ್ಲೇ ನೋಂದಾಯಿಸಲಾಗುತ್ತದೆ’ ಎಂದು ಕಸಾಪ ಪದಾಧಿಕಾರಿಗಳು ತಿಳಿಸಿದ್ದಾರೆ.

460 ವಾಹನ ಸೌಲಭ್ಯ

‘ಗಣ್ಯರಿಗೆ 120 ಕಾರುಗಳು, ಕಲಾವಿದರು, ಸಾಹಿತ್ಯಾಸಕ್ತರು, ಪ್ರತಿನಿಧಿಗಳಿಗೆ 90 ಕೆಎಸ್‌ಆರ್‌ಟಿಸಿ ಬಸ್‌ಗಳು, 200 ಶಾಲಾ ವಾಹನಗಳು ಹಾಗೂ 50 ಸರ್ಕಾರಿ ವಾಹನಗಳನ್ನು ಸಾರಿಗೆ ಸಮಿತಿಯು ನಿಯೋಜಿಸಿದೆ.

‘ಮಂಡ್ಯ ನಗರದ ಬಸ್ ನಿಲ್ದಾಣ, ರೈಲು ನಿಲ್ದಾಣ ಮತ್ತು ಪ್ರಮುಖ ಸ್ಥಳಗಳಿಂದ ಸಮ್ಮೇಳನ ಸ್ಥಳಕ್ಕೆ ಬಂದು ಹೋಗಲು ಸಾರ್ವಜನಿಕರಿಗೆ ಉಚಿತ ಬಸ್ ಸೌಲಭ್ಯ ಕಲ್ಪಿಸಲಾಗಿದೆ. ಪ್ರತಿದಿನ ಜಿಲ್ಲಾ ಕೇಂದ್ರದಿಂದ ವಿವಿಧ ತಾಲ್ಲೂಕುಗಳು ಮತ್ತು ಗ್ರಾಮಗಳಿಗೆ ತೆರಳಿ, ಸಮ್ಮೇಳನಕ್ಕೆ ಜನರನ್ನು ಕರೆತರಲು 487 ರೂಟ್ ಬಸ್‌ಗಳ ವ್ಯವಸ್ಥೆ ಮಾಡಲಾಗಿದೆ’ ಎಂದು ಸಾರಿಗೆ ಸಮಿತಿ ಉಪಾಧ್ಯಕ್ಷ ಎಸ್.ಪಿ. ನಾಗರಾಜ ತಿಳಿಸಿದ್ದಾರೆ.

ಮುಂದಿನ ವಾರದಿಂದ ಗೇಟ್‌ಗಳ ಪರೀಕ್ಷೆ

ಪ್ರಜಾವಾಣಿ ವಾರ್ತೆ

ಹೊಸಪೇಟೆ (ವಿಜಯನಗರ): ತುಂಗಭದ್ರಾ ಅಣೆಕಟ್ಟೆಯ ಎಲ್ಲಾ 33 ಗೇಟ್‌ಗಳ ಸುಸ್ಥಿತಿಯ ಬಗ್ಗೆ ಕೂಲಂಕಷ ಪರೀಕ್ಷೆ ನಡೆಸಲು ರಾಷ್ಟ್ರೀಯ ಅಣೆಕಟ್ಟು ಸುರಕ್ಷತಾ ಪ್ರಾಧಿಕಾರದ ತಜ್ಞರು ನಿರ್ಧರಿಸಿದ್ದು, ಮುಂದಿನ ವಾರವೇ ತಜ್ಞರು ಆಗಮಿಸಿ ಪರೀಕ್ಷೆ ನಡೆಸಲಿದ್ದಾರೆ ಪ್ರಾಧಿಕಾರದ ಅಧ್ಯಕ್ಷ ಅನಿಲ್ ಜೈನ್ ಅವರ ನೇತೃತ್ವದ ತಂಡ ಭಾನುವಾರ ಇಲ್ಲಿ ಸಭೆ ನಡೆಸಿದ ಬಳಿಕ ಈ ನಿರ್ಧಾರ ಕೈಗೊಂಡಿದೆ.

‘ಈಗಿನ ಕ್ರಸ್ಟ್‌ಗೇಟ್‌ಗಳಿಗೆ ಹಾನಿ ಆಗದ ರೀತಿಯಲ್ಲಿ ನಾನ್ ಡಿಸ್ಟ್ರಕ್ಟಿವ್ ಟೆಸ್ಟ್ (ಎನ್‌ಡಿಟಿ) ನಡೆಸಬೇಕು, ಅದರ ಬಳಿಕವಷ್ಟೇ ಹೊಸ ವಿನ್ಯಾಸದ ಗೇಟ್ ಬೇಕೇ, ಬೇಡವೇ ಎಂಬ ಬಗ್ಗೆ ನಿರ್ಧರಿಸಬಹುದಷ್ಟೇ. ಹೀಗಾಗಿ ಮುಂದಿನ ವಾರದಿಂದಲೇ ಪರೀಕ್ಷೆಗೆ ನಿರ್ಧರಿಸಲಾಯಿತು’ ಎಂದು ತುಂಗಭದ್ರಾ ಮಂಡಳಿ ಮೂಲಗಳು ತಿಳಿಸಿವೆ.

‘ಡಿಕೆಶಿಗೆ ಒಳ್ಳೆಯದಾಗಬೇಕು’

ಪ್ರಜಾವಾಣಿ ವಾರ್ತೆ

ಮೈಸೂರು: ‘ಸಮಯ ಬರುತ್ತದೆ, ನನಗೆ ಒಳ್ಳೆಯದಾಗುತ್ತದೆ ಎಂದು ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಅವರೇ ಹೇಳಿದ್ದಾರೆ. ಬಹಳ ವರ್ಷಗಳಿಂದ ರಾಜಕೀಯದಲ್ಲಿರುವ ಅವರಿಗೆ ಒಳ್ಳೆಯದಾಗಬೇಕು’ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಇಲ್ಲಿ ಭಾನುವಾರ ಅಧಿಕಾರ ಹಂಚಿಕೆ ಕುರಿತ ಪತ್ರಕರ್ತರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ‘ಯಾರ್‍ಯಾರ ಜೀವನದಲ್ಲಿ ಏನೇನು ಸಿಗಬೇಕೋ ಅದು ಸಿಕ್ಕೇ ಸಿಗುತ್ತದೆ’ ಎಂದರು. ‘ಸರ್ಕಾರ ಮಾಡುತ್ತಿರುವ ಕೆಲಸಗಳ ಬಗ್ಗೆ ಚರ್ಚೆ ಆಗಬೇಕೇ ಹೊರತು, ನಿತ್ಯವೂ ಅಧಿಕಾರದ ಬಗ್ಗೆ ಚರ್ಚೆ ಸರಿಯಲ್ಲ. ರಾಜಕೀಯದಲ್ಲಿ ಕಾಲದಿಂದ ಕಾಲಕ್ಕೆ ಬದಲಾವಣೆಗಳು ಆಗುತ್ತಿರುತ್ತವೆ. ಅಧಿಕಾರ ಶಾಶ್ವತವಲ್ಲ. ಸಮಯ ಬಂದಾಗ ಏನಾಗಬೇಕೋ ಅದಾಗುತ್ತದೆ’ ಎಂದರು.

‘ಸಿದ್ದರಾಮಯ್ಯ– ಶಿವಕುಮಾರ್ ನೇತೃತ್ವದಲ್ಲಿ ಜನಪರವಾದ ಕೆಲಸ ಮಾಡುತ್ತಿದ್ದೇವೆ. ಈಚೆಗೆ ನಡೆದ ಮೂರು ಕ್ಷೇತ್ರಗಳ ಉಪ ಚುನಾವಣೆಯ ಫಲಿತಾಂಶವೇ ಅದಕ್ಕೆ ಸಾಕ್ಷಿ. ಕುಮಾರಸ್ವಾಮಿ ಹಾಗೂ ಬಸವರಾಜ ಬೊಮ್ಮಾಯಿ ಕ್ಷೇತ್ರದಲ್ಲಿ ಕಾಂಗ್ರೆಸ್ ಗೆದ್ದಿದೆ. ಅಲ್ಲಿನ ಕುಟುಂಬ ರಾಜಕಾರಣವನ್ನು ಜನರು ಕಡೆಗಣಿಸಿದ್ದಾರೆ. ಜನರಿಗೆ ಕಾಂಗ್ರೆಸ್ ಬಗ್ಗೆ ಒಳ್ಳೆಯ ಭಾವನೆ ಬಂದಿದೆ’ ಎಂದು ಹೇಳಿದರು.

‘ಜೆಡಿಎಸ್ ಮುಗಿಸುವುದು ಬಿಜೆಪಿ ಯವರ ಉದ್ದೇಶ. ಅದಕ್ಕಾಗಿ ಸ್ಕೆಚ್ ಹಾಕಿದ್ದಾರೆ’ ಎಂದು ಹೇಳಿದ ಅವರು, ‘ಜೆಡಿಎಸ್ ಉಳಿಯಬೇಕೆಂದು ಅಸೆಪಡುತ್ತೇನೆ’ ಎಂದರು.

‘ಚನ್ನಪಟ್ಟಣದಲ್ಲಿ ಎಚ್.ಡಿ. ಕುಮಾರಸ್ವಾಮಿ ಅವರು ತ್ರಿಕೋನ ಸ್ಪರ್ಧೆ ಇದ್ದಾಗ 97ಸಾವಿರ ಮತ ಪಡೆದಿದ್ದರು. ಉಪ ಚುನಾವಣೆಯಲ್ಲಿ ಬಿಜೆಪಿ-ಜೆಡಿಎಸ್ ಒಂದಾಗಿದ್ದರಿಂದ 10 ಸಾವಿರ ಮತಗಳಾದರೂ ಹೆಚ್ಚಾಗಬೇಕಿತ್ತು. ಹೇಗೆ 85 ಸಾವಿರ ಮತಗಳಿಗೆ ಇಳಿಯಿತು, ಬಿಜೆಪಿಯ ಮತಗಳು ಎಲ್ಲಿ ಹೋದವು? ಆ ಪಕ್ಷದ ಒಂದು ಮತವೂ ಜೆಡಿಎಸ್‌ಗೆ ಬಂದಿಲ್ಲ. ಬಿಜೆಪಿಯವರು ಬೇಕೆಂದೇ ಕುಮಾರಸ್ವಾಮಿ ಮಗನನ್ನು ಕಣಕ್ಕಿಳಿಸಿ ಮತವನ್ನು ಕಾಂಗ್ರೆಸ್‌ಗೆ ಹಾಕಿದ್ದಾರೆ. ಜೆಡಿಎಸ್ ಬೆನ್ನಿಗೆ ಚೂರಿ ಹಾಕಿದ್ದಾರೆ’ ಎಂದರು.

‘ಸಿ.ಪಿ. ಯೋಗೇಶ್ವರ್ 25ಸಾವಿರ ಮಗಳಿಂದ ಗೆಲ್ಲಬೇಕಾದರೆ ಯಾವ್ಯಾವ ಮೂಲೆಯಿಂದ ಸಹಾಯ ಬಂದಿದೆ ನೀವೇ ಯೋಚಿಸಿ. ಯೋಗೇಶ್ವರ್ ಗೆಲುವಿಗೆ ಬಿಜೆಪಿ ಪರೋಕ್ಷವಾಗಿ ಸಹಾಯ ಮಾಡಿದೆ’ ಎಂದರು.

ಸಿದ್ಧಗಂಗಾ ಮಠದಲ್ಲಿ ಚಿರತೆ

ಪ್ರಜಾವಾಣಿ ವಾರ್ತೆ

ತುಮಕೂರು: ಸಿದ್ಧಗಂಗಾ ಮಠದ ಆವರಣದಲ್ಲಿ ಶನಿವಾರ ರಾತ್ರಿ ಚಿರತೆ ಕಾಣಿಸಿಕೊಂಡಿದ್ದು, ಸಿಸಿಟಿವಿ ಕ್ಯಾಮೆರಾದಲ್ಲಿ ದೃಶ್ಯ ಸೆರೆಯಾಗಿದೆ.

ಮಠದ ಸ್ಮೃತಿ ವನದ ಬಳಿ ತಡರಾತ್ರಿ ಚಿರತೆ ಪ್ರತ್ಯಕ್ಷವಾಗಿದ್ದು ಆವರಣದಲ್ಲಿದ್ದ ನಾಯಿಯೊಂದು ಬೊಗಳಿದ ನಂತರ ಅಲ್ಲಿಂದ ಓಡಿ ಹೋಗಿದೆ. ಚಿರತೆ ಕಾಣಿಸಿಕೊಂಡ ಸ್ಥಳದ ಬಳಿ ಹಾಸ್ಟೆಲ್‌ಗಳಲ್ಲಿ ನಾಡಿನ ವಿವಿಧೆಡೆಗಳ ಸಾವಿರಾರು ಮಕ್ಕಳು ಇರುತ್ತಾರೆ.

ಭಾನುವಾರ ಬೆಳಿಗ್ಗೆ ಸಿಸಿಟಿವಿ ಕ್ಯಾಮೆರಾ ದೃಶ್ಯಗಳನ್ನು ಪರಿಶೀಲಿಸಿದ ಮಠದ ಸಿಬ್ಬಂದಿ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಮಾಹಿತಿ ನೀಡಿದ್ದಾರೆ. ಅರಣ್ಯ ಇಲಾಖೆ ಸಿಬ್ಬಂದಿ ಚಿರತೆ ಓಡಾಡಿದ ಸ್ಥಳ ಪರಿಶೀಲಿಸಿದ ನಂತರ ಸೆರೆಗೆ ಬೋನು ಅಳವಡಿಸಿದ್ದಾರೆ.

ಮಠದ ಆವರಣದಲ್ಲಿ ಚಿರತೆ ಕಾಣಿಸಿಕೊಂಡ ಸುದ್ದಿ ಕೇಳಿದ ಬಳಿಕ ಮಠದಲ್ಲಿರುವ ಮಕ್ಕಳು, ಸುತ್ತಮುತ್ತಲಿನ ಪ್ರದೇಶದ ಜನ ಭಯಭೀತರಾಗಿದ್ದಾರೆ.

ಶನಿವಾರ ಬೆಳಗಿನ ಜಾವ ಸಪ್ತಗಿರಿ ಬಡಾವಣೆಯ ಟಿ.ಪಿ.ಕೈಲಾಸಂ ರಸ್ತೆಯಲ್ಲಿ ಚಿರತೆ ಓಡಾಡಿರುವುದು ಹತ್ತಿರದ ಮನೆಯೊಂದರ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಇದರ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ಹರಿದಾಡುತ್ತಿದೆ. ಸಪ್ತಗಿರಿ ಬಡಾವಣೆ, ಜಯನಗರ ಪ್ರದೇಶಗಳಲ್ಲಿ ಕೂಡ ಶಾಲೆ, ಕಾಲೇಜು ಮತ್ತು ಶಿಕ್ಷಣ ಸಂಸ್ಥೆಹೆಚ್ಚಾಗಿದ್ದು ನಿತ್ಯ ನೂರಾರು ಮಕ್ಕಳು ಓಡಾಡುತ್ತಾರೆ.

‘ನಗರದಲ್ಲಿ ಚಿರತೆ ಕಾಣಿಸಿಕೊಂಡ ಬಗ್ಗೆ ಮಾಹಿತಿ ಇದೆ. ಈಗಾಗಲೇ ಪರಿಶೀಲನೆ ನಡೆಸಿ, ಚಿರತೆ ಸೆರೆಗೆ ಬೋನು ಅಳವಡಿಸಲಾಗಿದೆ’ ಎಂದು ವಲಯ ಅರಣ್ಯಾಧಿಕಾರಿ ನಮಿತಾ ಪ್ರತಿಕ್ರಿಯಿಸಿದ್ದಾರೆ.



ನೌಕಾ ವಿಹಾರ

ಕುಕ್ಕೆ ಸುಬ್ರಹ್ಮಣ್ಯ ದೇವರ ಚಂಪಾಷಷ್ಠಿ ಜಾತ್ರಾ ಮಹೋತ್ಸವದ ಅಂಗವಾಗಿ ಭಾನುವಾರ ಬೆಳಿಗ್ಗೆ ಕುಮಾರಾಧಾರಾ ನದಿಯಲ್ಲಿ ಸುಬ್ರಹ್ಮಣ್ಯ ದೇವರ ನೌಕಾವಿಹಾರ ಮತ್ತು ಅವಭೃತೋತ್ಸವ ನಡೆಯಿತು

‘ಹಿಂದೂಗಳ ಮೇಲೆ ದೌರ್ಜನ್ಯ ಖಂಡನೀಯ’

ದಾವಣಗೆರೆ: ‘ಬಾಂಗ್ಲಾದೇಶದಲ್ಲಿ ಅಲ್ಪಸಂಖ್ಯಾತರಾಗಿರುವ ಹಿಂದೂಗಳ ಮೇಲೆ ಬಹುಸಂಖ್ಯಾತ ಮುಸ್ಲಿಮರು ದೌರ್ಜನ್ಯ ನಡೆಸುತ್ತಿರುವುದು ಖಂಡನೀಯ. ಇದು ಇಸ್ಲಾಮಿನ ತತ್ವ, ಸಿದ್ಧಾಂತಗಳಿಗೆ ವಿರುದ್ಧವಾಗಿದೆ’ ಎಂದು ಉಮ್ಮತ್ ಚಿಂತಕರ ವೇದಿಕೆಯ ಅಧ್ಯಕ್ಷ, ವಕೀಲ ಅನೀಸ್ ಪಾಷ ಹೇಳಿದ್ದಾರೆ. ‘ಬಾಂಗ್ಲಾದಲ್ಲಿ ಇಸ್ಕಾನ್ ದೇಗುಲಕ್ಕೆ ಬೆಂಕಿ ಹಚ್ಚಿ, ಮೂರ್ತಿಗಳನ್ನು ವಿರೂಪಗೊಳಿಸಿ ಹಿಂಸಾಚಾರ ನಡೆಸಿರುವುದು ಸರಿ ಯಲ್ಲ. ಪ್ರತಿ ಸಮುದಾಯದ ಹಿತ ಕಾಪಾಡುವುದು ಅಲ್ಲಿನ ಸರ್ಕಾರದ ಜವಾಬ್ದಾರಿ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಾಮಗಾರಿ: ಶಾಸಕಿ, ಸಂಸದೆ ಪ್ರತ್ಯೇಕ ಚಾಲನೆ

ಪ್ರಜಾವಾಣಿ ವಾರ್ತೆ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ನಿಪ್ಪಾಣಿ ತಾಲ್ಲೂಕಿನ ಬೋರಗಾಂವ ಪಟ್ಟಣದಲ್ಲಿ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಮೃತ 2.0 ಯೋಜನೆ ಅಡಿಯಲ್ಲಿ ₹18.98 ಕೋಟಿ ಮೊತ್ತದ ನೀರು ಸರಬರಾಜು ವ್ಯವಸ್ಥೆ ಕಲ್ಪಿಸುವ ಕಾಮಗಾರಿಯ ಭೂಮಿಪೂಜೆಯನ್ನು ನಿಪ್ಪಾಣಿ ಶಾಸಕಿ ಶಶಿಕಲಾ ಜೊಲ್ಲೆ ಹಾಗೂ ಚಿಕ್ಕೋಡಿ ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಒಂದು ಗಂಟೆಯ ಅಂತರದಲ್ಲಿ ಭಾನುವಾರ ಇಬ್ಬರೂ ಪ್ರತ್ಯೇಕವಾಗಿ ನೆರವೇರಿಸಿದ್ದಾರೆ.

ಮೊದಲಿಗೆ ಸಂಸದೆ ಪ್ರಿಯಾಂಕಾ ಜಾರಕಿಹೊಳಿ ತಮ್ಮ ಬೆಂಬಲಿಗರೊಂದಿಗೆ ಕಾಮಗಾರಿ ನಡೆಯುತ್ತಿರುವ ಸ್ಥಳಕ್ಕೆ ಮಧ್ಯಾಹ್ನ 2 ಗಂಟೆಗೆ ಬಂದು ಭೂಮಿಪೂಜೆ ನೆರವೇರಿಸಿದರು. ‘ಮುಖ್ಯ ಮಂತ್ರಿ ಸಿದ್ಧರಾಮಯ್ಯ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಅವರ ಪ್ರಯತ್ನದಿಂದ ಯೋಜನೆಗೆ ಅನುಮೋದನೆ ನೀಡಲಾಗಿದೆ’ ಎಂದರು.

ಬಳಿಕ ನಿಪ್ಪಾಣಿ ಶಾಸಕಿ ಶಶಿಕಲಾ ಜೊಲ್ಲೆ ಪೂರ್ವ ನಿಗದಿಯಂತೆ ಮಧ್ಯಾಹ್ನ 3 ಗಂಟೆಗೆ ತಮ್ಮ ಬೆಂಬಲಿಗರೊಂದಿಗೆ ಬಂದು ಭೂಮಿಪೂಜೆ ನೆರವೇರಿಸಿದರು. ‘2021ರಲ್ಲಿಯೇ ಈ ಕಾಮಗಾರಿಗೆ ಕೇಂದ್ರ ಸರ್ಕಾರದಿಂದ ಅನುದಾನ ಮಂಜೂರು ಮಾಡಿಸಿಕೊಂಡು ಬರಲಾಗಿದೆ. ಹೀಗಿದ್ದರೂ ಚಿಕ್ಕೋಡಿ ಸಂಸದೆ ಜನರ ದಿಕ್ಕು ತಪ್ಪಿಸುವ ಕೆಲಸ ಮಾಡಿದ್ದಾರೆ’ ಎಂದು ಕಿಡಿಕಾರಿದರು.

ಹಿಂದೂ ಜಾಗೃತಿ ಕಾರ್ಯಕ್ರಮಕ್ಕೆ ನಿರ್ಬಂಧ

ಪ್ರಜಾವಾಣಿ ವಾರ್ತೆ

ಬೀದರ್: ಹಿಂದೂ ರಾಷ್ಟ್ರೀಯ ಜಾಗರಣ ಸಮಿತಿ ನಗರದ ಸಾಯಿ ಶಾಲೆ ಮೈದಾನದಲ್ಲಿ ಇದೇ 8ರಂದು ಭಾನುವಾರ ಸಂಜೆ ನಡೆಯಬೇಕಿದ್ದ ಹಿಂದೂ ಜಾಗೃತಿ ಕಾರ್ಯಕ್ರಮಕ್ಕೆ ನಿರ್ಬಂಧ ಹೇರಿ ಪ್ರಭಾರ ಜಿಲ್ಲಾಧಿಕಾರಿಯೂ ಆದ ಜಿಲ್ಲಾ ಪಂಚಾಯಿತಿ ಸಿಇಒ ಡಾ.ಗಿರೀಶ ಬದೋಲೆ ಆದೇಶ ಹೊರಡಿಸಿದ್ದಾರೆ.

ಕಾರ್ಯಕ್ರಮದಲ್ಲಿ ಶ್ರೀರಾಮ ಸೇನೆಯ ಸಂಸ್ಥಾಪಕ ಅಧ್ಯಕ್ಷ ಪ್ರಮೋದ ಮುತಾಲಿಕ, ಬಿಜೆಪಿ ನಾಯಕಿ ಮಾಧವಿ ಲತಾ, ಹಿಂದೂ ನಾಯಕಿ ಕಾಜಲ್ ಹಿಂದೂಸ್ತಾನಿ ಅವರು ಮುಖ್ಯ ಭಾಷಣಕಾರರಾಗಿ ಭಾಗವಹಿಸಬೇಕಿತ್ತು. ಕಾನೂನು ಸುವ್ಯವಸ್ಥೆ ಕಾರಣಕ್ಕೆ ಕಾರ್ಯಕ್ರಮಕ್ಕೆ ನಿರ್ಬಂಧ ಹೇರಲಾಗಿದೆ ಎಂದು ಎಸ್‌ಪಿ ಪ್ರದೀಪ ಗುಂಟಿ ತಿಳಿಸಿದ್ದಾರೆ.

ದೇವದುರ್ಗ ಬಿಇಒ ಅಮಾನತು

ಪ್ರಜಾವಾಣಿ ವಾರ್ತೆ

ದೇವದುರ್ಗ (ರಾಯಚೂರು ಜಿಲ್ಲೆ): ತಾಲ್ಲೂಕಿನ ಊಟಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ಹಟ್ಟಿ ಚಿನ್ನದ ಗಣಿ ಕಂಪನಿ ನೀಡಿದ ಸಿಎಸ್‌ಆರ್ ಅನುದಾನ ದುರ್ಬಳಕೆ, ಭ್ರಷ್ಟಾಚಾರ, ಕರ್ತವ್ಯ ಲೋಪ ಮತ್ತು ಸೇವಾ ನಿರ್ಲಕ್ಷ್ಯ ಮಾಡಿದ ಆರೋಪ ತನಿಖೆ ವೇಳೆ ಸಾಬೀತಾದ ಕಾರಣದಿಂದ ಕ್ಷೇತ್ರ ಶಿಕ್ಷಣಾಧಿಕಾರಿ ಸುಖದೇವ ಎಚ್. ಅವರನ್ನು ಶನಿವಾರ ಅಮಾನತು ಮಾಡಲಾಗಿದೆ.

ಶಾಲಾ ಶಿಕ್ಷಣ ಮತ್ತು ಮತ್ತು ಸಾಕ್ಷರತೆ ಇಲಾಖೆ ಅಮಾನತು ಆದೇಶ ಹೊರಡಿಸಿದೆ. ₹30 ಲಕ್ಷ ದುರುಪಯೋಗಪಡಿಸಿಕೊಂಡ ಕುರಿತು ಇಲಾಖೆಯ ಪ್ರಧಾನ ಕಾರ್ಯದರ್ಶಿಗೆ ಪಟ್ಟಣದ ಕಾಂಗ್ರೆಸ್ ಮುಖಂಡ ಟಿ. ಸುರೇಶನಾಯಕ ಅವರು ದೂರು ನೀಡಿದ್ದರು.

ದೂರು ಆಧರಿಸಿ ತನಿಖೆ ಕೈಗೊಂಡು ವರದಿ ನೀಡುವಂತೆ ಕಲಬುರಗಿ ವಿಭಾಗದ ಹೆಚ್ಚುವರಿ ಆಯುಕ್ತರಿಗೆ ಸೂಚಿಸಲಾಗಿತ್ತು. ಪ್ರಾಥಮಿಕ ವಿಚಾರಣೆ ವರದಿಯಲ್ಲಿ ಹಣಕಾಸು ದುರ್ಬಳಕೆ, ಭ್ರಷ್ಟಾಚಾರ, ಕರ್ತವ್ಯ ಲೋಪ ಮತ್ತು ಸೇವಾ ನಿರ್ಲಕ್ಷ್ಯ ಸಾಬೀತಾದ ಕಾರಣ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಶಾಲೆಯ ಶೈಕ್ಷಣಿಕ ಹಿನ್ನಡೆಗೆ ಕಾರಣವಾಗುವ ಆತಂಕ • ಅಲ್ಪಸಂಖ್ಯಾತರ ನಿರ್ದೇಶನಾಲಯದ ನಡೆಗೆ ಆಕ್ಷೇಪ

ಪ್ರಾಂಶುಪಾಲರಿಗೆ ‘ಜಿಲ್ಲಾ ಅಧಿಕಾರಿ’ ಹುದ್ದೆ!

• ರಾಜೇಶ್ ರೈ ಚಟ್ಲ

ಬೆಂಗಳೂರು: ಅಲ್ಪಸಂಖ್ಯಾತರ ನಿರ್ದೇಶನಾಲಯ ತನ್ನ ಅಧೀನದಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳ ಪ್ರಾಂಶುಪಾಲರನ್ನು ಆಡಳಿತಾತ್ಮಕ ಹುದ್ದೆಗಳಿಗೆ ನೇಮಿಸುತ್ತಿರುವುದಕ್ಕೆ ತೀವ್ರ ಆಕ್ಷೇಪ ವ್ಯಕ್ತವಾಗಿದೆ.

ಪ್ರಸ್ತುತ 31 ಜಿಲ್ಲೆಗಳ ಪೈಕಿ ಎಂಟು ಜಿಲ್ಲೆಗಳಲ್ಲಿ ಪ್ರಾಂಶುಪಾಲರನ್ನು ನಿರ್ದೇಶನಾಲಯವು ಜಿಲ್ಲಾ ಅಧಿಕಾರಿಗಳಾಗಿ ನೇಮಿಸಿದೆ. ಒಬ್ಬ ಪ್ರಾಂಶುಪಾಲರನ್ನು ಮತ್ತು ಒಬ್ಬ ಉಪನ್ಯಾಸಕರನ್ನು ನಿರ್ದೇಶನಾಲಯದಲ್ಲಿ ಸಹಾಯಕ ನಿರ್ದೇಶಕರ ಹುದ್ದೆಗೆ ನಿಯೋಜಿಸಿದೆ.

‘ಅಲ್ಪಸಂಖ್ಯಾತ ಇಲಾಖೆಯ ಜಿಲ್ಲಾ ಅಧಿಕಾರಿ ಹುದ್ದೆಗೆ ನೇರವಾಗಿ ಆಯ್ಕೆಗೊಂಡವರಿಗೆ, ಹುದ್ದೆ ಖಾಲಿ ಇದ್ದರೂ ‘ಸ್ಥಳ ನಿರೀಕ್ಷಣೆಯಲ್ಲಿ’ ಇಟ್ಟು, ಆ ಹುದ್ದೆಗೆ ಪ್ರಾಂಶುಪಾಲರ ನೇಮಿಸಲಾಗುತ್ತಿದೆ. ಆಡಳಿತಾತ್ಮಕ ಹುದ್ದೆಗಳಿಗೆ ಶಿಕ್ಷಕರು, ಉಪನ್ಯಾಸಕರು, ಪ್ರಾಂಶುಪಾಲರ ನೇಮಕ ಕಾನೂನುಬಾಹಿರ. ಈ ಬಗ್ಗೆ ನಿರ್ದೇಶನಾಲಯ 2020ರ ಜುಲೈನಲ್ಲಿ ಸುತ್ತೋಲೆ ಹೊರಡಿಸಿದ್ದರು’ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

‘ಕೆಲವು ಜಿಲ್ಲೆಗಳ ಮೊರಾರ್ಜಿ ದೇಸಾಯಿ ವಸತಿ ಶಾಲೆಗಳಲ್ಲಿ ಪ್ರಾಂಶುಪಾಲರೇ ಇಲ್ಲ. ಅಲ್ಲಿ ಶಿಕ್ಷಕರಿಗೆ ಪ್ರಾಂಶುಪಾಲ ಹುದ್ದೆಯನ್ನು ಪ್ರಭಾರ ಹೊಣೆ ನೀಡಲಾಗಿದೆ. ಇದು ಶಾಲೆಯ ಶೈಕ್ಷಣಿಕ ಹಿನ್ನಡೆಗೂ ಕಾರಣವಾಗಿದೆ. ಎಸ್ಸೆಸ್ಸೆಲ್ಸಿಯಲ್ಲಿ ಕಳಪೆ ಫಲಿತಾಂಶಕ್ಕೆ ಪ್ರಾಂಶುಪಾಲರನ್ನೇ ಹೊಣೆ ಮಾಡಿ ನಿರ್ದೇಶನಾಲಯ ಇತ್ತೀಚೆಗೆ ನೋಟಿಸ್ ನೀಡಿದೆ. ಹೀಗಿರುವಾಗ ಪ್ರಾಂಶುಪಾಲರನ್ನು ಜಿಲ್ಲಾ ಅಧಿಕಾರಿ ಹುದ್ದೆಗೆ ನೇಮಿಸುವುದು ಎಷ್ಟು ಸರಿ’ ಎಂದೂ ಅವರು ಪ್ರಶ್ನಿಸಿದರು.

‘ಪ್ರಾಂಶುಪಾಲರ ಹುದ್ದೆಗಳು ಖಾಲಿ ಇದ್ದರೂ ನೇಮಕ ಮಾಡಲು ನಿರ್ದೇಶನಾಲಯವಾಗಲಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಾಗಲಿ ಮುತುವರ್ಜಿ ವಹಿಸುತ್ತಿಲ್ಲ. ಬದಲಾಗಿ, ಇರುವ ಪ್ರಾಂಶುಪಾಲರನ್ನು ಜಿಲ್ಲಾ ಅಧಿಕಾರಿ ಅಥವಾ ತಾಲ್ಲೂಕು ಅಧಿಕಾರಿ ಹುದ್ದೆಗೆ ನೇಮಕ ಮಾಡುತ್ತಿದೆ. 2024-25 ಸಾಲಿನಲ್ಲಿ ಹೊಸದಾಗಿ 50 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳು ಹಾಗೂ 100 ಮೌಲಾನಾ ಅಜಾದ್ ಮಾದರಿ ಶಾಲೆಗಳನ್ನು ಸರ್ಕಾರ ಆರಂಭಿಸಿದೆ. ಲಭ್ಯವಿರುವ ಪ್ರಾಂಶುಪಾಲರನ್ನು ಈ ಶಾಲೆಗಳಿಗೆ ನಿರ್ದೇಶನಾಲಯ ನೇಮಿಸಿ, ಜವಾಬ್ದಾರಿ ನೀಡಬೇಕಿದೆ’ ಎಂದೂ ಅವರು ಹೇಳಿದರು.

‘ಕಳೆದ ಸಾಲಿನಲ್ಲಿ ಕೆಲವು ವಸತಿ ಶಾಲೆಗಳಲ್ಲಿ ಎಸ್ಸೆಸ್ಸೆಲ್ಸಿ ಫಲಿತಾಂಶ ತೀರಾ ಕಳಪೆ ದಾಖಲಾಗಿದೆ. ಪ್ರಾಂಶುಪಾಲರನ್ನು ಆಡಳಿತಾತ್ಮಕ ಹುದ್ದೆಗಳಿಗೆ ನಿಯೋಜಿಸುವ ಪ್ರಕ್ರಿಯೆ ಮುಂದುವರೆದರೆ ಫಲಿತಾಂಶದ ಮೇಲೆ ಪರಿಣಾಮ ಬೀಳುವ ಸಾಧ್ಯತೆ ಇದೆ. ಅಲ್ಲದೆ, ಹುದ್ದೆಯ ಶ್ರೇಣಿಯನ್ನು ಅನುಸರಿಸಿದೆ ಕೆಳ ಹಂತದ ಸಿಬ್ಬಂದಿಯನ್ನು ಜಿಲ್ಲಾ ಮಟ್ಟದ ಅಧಿಕಾರಿಯಾಗಿ ನೇಮಿಸುವುದರಿಂದ ಆಡಳಿತಾತ್ಮಕ ದುಷ್ಪರಿಣಾಮಗಳೂ ಉಂಟಾಗಲಿದೆ’ ಎಂದೂ ಅವರು ಆತಂಕ ವ್ಯಕ್ತಪಡಿಸಿದರು.

> **ಈ ಬಗ್ಗೆ ನಿರ್ದೇಶಕರನ್ನು ಕೇಳಿ. ಅವರಿಗೆ ಈ ವಿಷಯ ಗೊತ್ತಿದೆ. ಸದ್ಯಕ್ಕೆ ನನ್ನಲ್ಲಿ ಮಾಹಿತಿ ಇಲ್ಲ. ಮಾಹಿತಿ ತೆಗೆದುಕೊಂಡು ಮಾತನಾಡುತ್ತೇನೆ**
> **ಮನೋಜ್ ಜೈನ್,** ಕಾರ್ಯದರ್ಶಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ

> **ಈ ರೀತಿಯ ವರ್ಗಾವಣೆ, ನಿಯೋಜನೆ ನನ್ನಿಂದ ಆಗಿಲ್ಲ. ನನ್ನ ಹಂತದಲ್ಲಿಯೂ ಆಗಿಲ್ಲ. ಸರ್ಕಾರದ ಹಂತದಲ್ಲಿ ನಡೆಯುತ್ತಿದೆ**
> **ಜೀಲಾನಿ ಎಚ್. ಮೊಕಾಶಿ,** ನಿರ್ದೇಶಕ, ಅಲ್ಪಸಂಖ್ಯಾತರ ನಿರ್ದೇಶನಾಲಯ

ತಾನು ಹೊರಡಿಸಿದ್ದ ಸುತ್ತೋಲೆಯನ್ನೇ ಪಾಲಿಸದ ನಿರ್ದೇಶನಾಲಯ

ಶಾಲಾ ಶಿಕ್ಷಕರು, ಪದವಿಪೂರ್ವ ಕಾಲೇಜುಗಳ ಉಪನ್ಯಾಸಕರು ಮತ್ತು ಪ್ರಾಂಶುಪಾಲರನ್ನು ಬೋಧಕೇತರ ಕಾರ್ಯಗಳಿಗೆ ನಿಯೋಜನೆ ಮಾಡಬಾರದೆಂದು ಹೈಕೋರ್ಟ್, ಸುಪ್ರೀಂ ಕೋರ್ಟ್ ಹಲವು ತೀರ್ಪುಗಳಲ್ಲಿ ಹೇಳಿವೆ.

ರಾಜ್ಯ ಹೈಕೋರ್ಟ್ 2011ರ ಜುಲೈ 22ರ ಆದೇಶದಲ್ಲಿ, ಈ ರೀತಿ ನಿಯೋಜನೆ ಹಿಂಪಡೆಯುವಂತೆ ತಿಳಿಸಿದೆ. ಈ ಆದೇಶವನ್ನು ಉಲ್ಲೇಖಿಸಿ 2011ರ ನ. 8ರಂದು ಸುತ್ತೋಲೆ ಹೊರಡಿಸಿದ್ದ ಶಿಕ್ಷಣ ಇಲಾಖೆ, ಯಾವುದೇ ಕಾರಣಕ್ಕೂ ಬೋಧಕೇತರ ಹುದ್ದೆಗಳಿಗೆ ನಿಯೋಜನೆ ಮಾಡುವುದನ್ನು ಕಡ್ಡಾಯವಾಗಿ ನಿಷೇಧಿಸಿದೆ.

ಹೈಕೋರ್ಟ್ ಆದೇಶ ಉಲ್ಲೇಖಿಸಿ 2020 ಜುಲೈ 30ರಂದು ಸುತ್ತೋಲೆ ಹೊರಡಿಸಿರುವ ಅಲ್ಪಸಂಖ್ಯಾತರ ನಿರ್ದೇಶನಾಲಯ, ತನ್ನ ಅಧೀನದಲ್ಲಿರುವ ಶಾಲೆಗಳ ಶಿಕ್ಷಕರು, ಉಪನ್ಯಾಸಕರು, ಪ್ರಾಂಶುಪಾಲರನ್ನು ಬೋಧನೆ ಹೊರತುಪಡಿಸಿ ಬೇರೆ ಉದ್ದೇಶಗಳಿಗೆ ನಿಯೋಜಿಸಬಾರದು ಎಂದು ಎಲ್ಲ ಜಿಲ್ಲೆಗಳ ಜಿಲ್ಲಾ ಅಧಿಕಾರಿಗಳಿಗೆ ಸುತ್ತೋಲೆ ಹೊರಡಿಸಿದೆ. ಈ ಸುತ್ತೋಲೆಯನ್ನೇ ನಿರ್ದೇಶನಾಲಯ ಉಲ್ಲಂಘಿಸಿದೆ!

ಯಾವ ಜಿಲ್ಲೆಗಳಲ್ಲಿ ನೇಮಕ

ಪ್ರಾಂಶುಪಾಲರು	ಜಿಲ್ಲೆ
ಭಾಗ್ಯಶ್ರೀ ಕುಂಬಾರ್	ಯಾದಗಿರಿ
ಕರಿಬಸಪ್ಪ ಎನ್.	ಶಿವಮೊಗ್ಗ
ಶಿಲ್ಪಾ ಕೆ.ಎಂ.	ಹಾಸನ
ಪ್ರಶಾಂತ್ ಪೂಜಾರ್	ವಿಜಯಪುರ
ವಿಠೋಬಾ ಹೊನಕಂಡಿ	ಬಳ್ಳಾರಿ
ಮಧುಶ್ರೀ	ಮಂಡ್ಯ
ಪ್ರಕಾಶ್ ಬಿ.ಎಂ.	ಚಾಮರಾಜನಗರ
ಕಾಂತರಾಜು ಕೆ.	ಚಿತ್ರದುರ್ಗ
ಮುರಳಿ	ಸಹಾಯಕ ನಿರ್ದೇಶಕರು, ಬೆಂಗಳೂರು
ಶಿವಕುಮಾರ್ (ಉಪನ್ಯಾಸಕ)	

ಸುದ್ದಿ 2 ನಿಮಿಷ

ಸಾರಿಗೆ ಸಂಸ್ಥೆ ನೌಕರರಿಂದ ‘ಬೆಳಗಾವಿ ಚಲೊ’ ಇಂದು

ಬೆಂಗಳೂರು: ಅಧಿಕಾರಿಗಳು ಮತ್ತು ಕಾರ್ಮಿಕ ಸಂಘಟನೆಗಳ ಮುಖಂಡರೊಂದಿಗೆ ನಡೆದ ಮಾತುಕತೆ ಫಲಪ್ರದವಾಗದೇ ಇರುವುದರಿಂದ ಡಿ.8ರಂದು ‘ಬೆಳಗಾವಿ ಚಲೊ’ ರದ್ದುಪಡಿಸದಿರಲು ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ನಿರ್ಧರಿಸಿದೆ.

ನೌಕರರು ಹಾಗೂ ನಿವೃತ್ತ ನೌಕರರಿಗೆ ಹಿಂಬಾಕಿ ಮೊತ್ತ ಬಿಡುಗಡೆ ಮಾಡಬೇಕು. 2024ರ ಜನವರಿ 1ರಿಂದ ವೇತನ ಪರಿಷ್ಕರಣೆ ಸೇರಿದಂತೆ ಮೂರು ಪ್ರಮುಖ ಬೇಡಿಕೆಗಳು ಸೇರಿದಂತೆ ಒಟ್ಟು 14 ಬೇಡಿಕೆಗಳನ್ನು ಸರ್ಕಾರದ ಮುಂದಿಟ್ಟು ಹಲವು ಪ್ರತಿಭಟನೆ ನಡೆಸಲಾಗಿತ್ತು.



ಅಕ್ಟೋಬರ್‌ನಲ್ಲಿ ಧರಣಿ ನಡೆಸಿದಾಗ ಬೇಡಿಕೆ ಈಡೇರಿಸುವ ಭರವಸೆಯನ್ನು ಸಾರಿಗೆ ಸಚಿವರು ನೀಡಿದ್ದರು. ಆದರೆ, ಈಡೇರಿಸದ ಕಾರಣ ಬೆಳಗಾವಿ ಅಧಿವೇಶನದ ವೇಳೆ ಚಲೊ ನಡೆಸಲು ನಿರ್ಧರಿಸಲಾಗಿತ್ತು ಪ್ರಮುಖ ಬೇಡಿಕೆಗಳ ಈಡೇರಿಕೆಯ ಬಗ್ಗೆ ಅಧಿಕಾರಿಗಳಿಂದ ನಿಖರ ಸ್ಪಂದನ ದೊರೆಯದ ಕಾರಣ ಚಲೊ ಮುಂದುವರಿಸಲಾಗುವುದು ಎಂದು ಒಕ್ಕೂಟದ ನಾಯಕರು ತಿಳಿಸಿದ್ದಾರೆ.

‘ವೇತನ ಹೆಚ್ಚಳದ 38 ತಿಂಗಳ ಬಾಕಿ ಹಣ ₹ 1,785 ಕೋಟಿ ನೀಡಿಲ್ಲ. 2024ರ ಜನವರಿ 1ರಿಂದ ವೇತನ ಹೆಚ್ಚಳದ ಬಗ್ಗೆ ಕ್ರಮ ಕೈಗೊಂಡಿಲ್ಲ. ನಿವೃತ್ತ ನೌಕರರ ಹಿಂಬಾಕಿ ₹ 224 ನೀಡಲು ಮಾತ್ರ ಒಪ್ಪಿದ್ದಾರೆ. ಹಾಗಾಗಿ ಬೆಳಗಾವಿ ಚಲೊ ನಡೆದೇ ನಡೆಯುತ್ತದೆ’ ಎಂದು ಅಖಿಲ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನೌಕರರ ಮಹಾ ಮಂಡಳಿ ಅಧ್ಯಕ್ಷ ಬಿ. ಜಯದೇವರಾಜೇ ಅರಸು ‘ಪ್ರಜಾವಾಣಿ’ಗೆ ತಿಳಿಸಿದರು.

ಸಿಎಲ್‌ಪಿ ಸಭೆ ನಾಳೆ

ಬೆಂಗಳೂರು: ‘ಬೆಳಗಾವಿಯಲ್ಲಿ ಮಂಗಳವಾರ (ಡಿ. 10) ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆ ನಡೆಯಲಿದೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ತಿಳಿಸಿದರು.

‘ಗಾಂಧಿ ಭಾರತ ಕಾರ್ಯಕ್ರಮದ ಭಾಗವಾಗಿ ಇದೇ 26, 27ರಂದು ಬೆಳಗಾವಿಯಲ್ಲಿ ನಡೆಯಲಿರುವ ಕಾರ್ಯಕ್ರಮಗಳ ಕುರಿತು ಚರ್ಚಿಸಲು ಮುಖ್ಯಮಂತ್ರಿ ಈ ಸಭೆ ಕರೆದಿದ್ದಾರೆ’ ಎಂದರು.

‘26ರಂದು ಪಕ್ಷದ ಕಾರ್ಯಕಾರಣಿ ಸಮಿತಿ ಸಭೆ ನಡೆಯಲಿದೆ. 27ರಂದು ಸಾರ್ವಜನಿಕ ಸಭೆ ನಡೆಯಲಿದೆ’ ಎಂದೂ ತಿಳಿಸಿದರು.

‘ಕಲ್ಯಾಣ ಕರ್ನಾಟಕ ಭಾಗದ ಪಕ್ಷದ ಎಲ್ಲ ಪದಾಧಿಕಾರಿಗಳ ಸಭೆಯನ್ನು ಬೆಳಗಾವಿಯಲ್ಲಿ ಇದೇ 13ರಂದು ಕರೆಯಲಾಗಿದೆ. ರಾಜ್ಯದ ಇತರೆ ಪದಾಧಿಕಾರಿಗಳ ಸಭೆ ಬೆಂಗಳೂರಿನ ‘ಭಾರತ್ ಜೋಡೊ’ ಭವನದಲ್ಲಿ 14ರಂದು ನಡೆಯಲಿದೆ. ಗಾಂಧಿ ಭಾರತ ಕಾರ್ಯಕ್ರಮದ ಜವಾಬ್ದಾರಿಯನ್ನು ಈ ಸಭೆಗಳಲ್ಲಿ ಎಲ್ಲರಿಗೂ ಹಂಚಿಕೆ ಮಾಡಲಾಗುವುದು’ ಎಂದೂ ಅವರು ತಿಳಿಸಿದರು.



ಸುವರ್ಣ ಸೌಧ...

ಬೆಳಗಾವಿಯಲ್ಲಿ ಸೋಮವಾರದಿಂದ ನಡೆಯುವ ಚಳಿಗಾಲದ ಅಧಿವೇಶನದ ಹಿನ್ನೆಲೆಯಲ್ಲಿ ಸುವರ್ಣ ವಿಧಾನಸೌಧ ವಿದ್ಯುತ್ ಬೆಳಕಿನಿಂದ ಕಂಗೊಳಿಸುತ್ತಿರುವ ದೃಶ್ಯ ಕ್ಯಾಮೆರಾ ಕಣ್ಣಿಗೆ ಕಂಡಿದ್ದು ಹೀಗೆ ಪ್ರಜಾವಾಣಿ ಚಿತ್ರ: ಎಂ. ಎಸ್. ಮಂಜುನಾಥ್

ಬೆಳಗಾವಿ: 322 ಶಿಶುಗಳ ಸಾವು, ಗಮನ ಸೆಳೆದಿದ್ದ ‘ಪ್ರಜಾವಾಣಿ’

6 ತಿಂಗಳಲ್ಲಿ 29 ಬಾಣಂತಿಯರ ಸಾವು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಜಿಲ್ಲೆಯಲ್ಲಿ ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳೂ ಸೇರಿ ಕಳೆದ ಆರು ತಿಂಗಳ ಅವಧಿ (ಏಪ್ರಿಲ್–ಅಕ್ಟೋಬರ್) ಯಲ್ಲಿ 29 ಬಾಣಂತಿಯರು ಹಾಗೂ 322 ನವಜಾತ ಶಿಶುಗಳ ಸಾವು ವರದಿಯಾಗಿದೆ. ಇದರಲ್ಲಿ 111ಕ್ಕೂ ಹೆಚ್ಚು ಶಿಶುಗಳು ಜಿಲ್ಲಾಸ್ಪತ್ರೆಯಲ್ಲೇ ಸಾವನ್ನಪ್ಪಿವೆ.

ಈ ಬಗ್ಗೆ ಪ್ರತಿಕ್ರಿಯೆ ನೀಡಿದ ಪ್ರಭಾರಿ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಶಂಕರಪ್ಪ ಗಡೇದ, ‘ಅಪೌಷ್ಟಿಕತೆ, ನ್ಯುಮೋನಿಯಾ, ಕಡಿಮೆ ತೂಕ, ಅವಧಿಪೂರ್ವ ಹೆರಿಗೆ ಸೇರಿದಂತೆ ವಿವಿಧ ಕಾರಣಗಳಿಂದ ಈ ಸಾವುಗಳು ಸಂಭವಿಸಿವೆ. ನಿರ್ಲಕ್ಷ್ಯ ಅಥವಾ ಯಾವುದೇ ಔಷಧಿಯ ಅಡ್ಡ-ಪರಿಣಾಮದಿಂದ ಅಲ್ಲ. ಜನ ಆತಂಕ ಪಡಬಾರದು’ ಎಂದರು.

‘ಜಿಲ್ಲೆಯಲ್ಲಿ ಆರು ತಿಂಗಳ ಅವಧಿಯಲ್ಲಿ 322 ನವಜಾತ ಶಿಶುಗಳು ಮೃತಪಟ್ಟಿದ್ದು ನಿಜ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಮರಣ ಪ್ರಮಾಣ ಕಡಿಮೆಯಾಗಿದೆ’ ಎಂದು ಜಿಲ್ಲಾ ಅಧೀಕ್ಷಕ ಡಾ.ವಿಠ್ಠಲ ಶಿಂಧೆ ಪ್ರತಿಕ್ರಿಯಿಸಿದ್ದಾರೆ.

‘ಖಾಸಗಿ ಆಸ್ಪತ್ರೆಗಳಲ್ಲಿ ಹೆರಿಗೆಗೆ ದಾಖಲಾದವರ ಶಿಶುಗಳೇ ಹೆಚ್ಚಿನ ಪ್ರಮಾಣದಲ್ಲಿ ಮೃತಪಟ್ಟಿವೆ. ಖಾಸಗಿ ಆಸ್ಪತ್ರೆಯವರು ಕೈ ಚೆಲ್ಲಿದ ನಂತರ ಬಾಣಂತಿಯರನ್ನು ಜಿಲ್ಲಾಸ್ಪತ್ರೆಗೆ ದಾಖಲಿಸುತ್ತಾರೆ. ಕೆಲವು ತುರ್ತು ಸಂದರ್ಭಗಳಲ್ಲಿ ಎಷ್ಟೇ ಪ್ರಯತ್ನಪಟ್ಟರೂ ಶಿಶು ಬದುಕುವ ಸಾಧ್ಯತೆ ಕಡಿಮೆ ಇರುತ್ತದೆ’ ಎಂದೂ ಅವರು ಹೇಳಿದ್ದಾರೆ.

‘ಜಿಲ್ಲಾಸ್ಪತ್ರೆಗೆ ಗರ್ಭಿಣಿ ಬಂದ ತಕ್ಷಣ ವಿವಿಧ ತಪಾಸಣೆಗಳನ್ನು ಮಾಡಲಾಗುತ್ತದೆ. ನ್ಯೂನತೆ ಇರುವ ಶಿಶು ಬಗ್ಗೆ ಸೋನೋಗ್ರಾಫಿಯಲ್ಲಿ ಗೊತ್ತಾದಾಗ ‘ಟರ್ಶರಿ ಕೇರ್ ಸೆಂಟರ್’ನಲ್ಲಿ ಹೆರಿಗೆ ಮಾಡಿಸಿದರೆ ಶಿಶು ಮರಣ ಪ್ರಮಾಣ ಕಡಿಮೆ ಮಾಡಬಹುದು. ಇಂಥ ವಿಷಯಗಳು ಕಂಡುಬಂದಾಗ ಮುಂಚಿತವಾಗಿಯೇ ಪಾಲಕರ ಗಮನಕ್ಕೆ ತರಲಾಗುತ್ತದೆ. ಇದನ್ನೇ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಲ್ಲೂ ಪಾಲಿಸಲಾಗುತ್ತಿದೆ’ ಎಂದೂ ಅವರು ತಿಳಿಸಿದ್ದಾರೆ.

‘ಅವ್ವ ಪ್ರಶಸ್ತಿ’ಗೆ 12 ಮಂದಿ ಆಯ್ಕೆ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ಅವ್ವ ಸೇವಾ ಟ್ರಸ್ಟ್‌ನ ಪ್ರಸ್ತುತ ವರ್ಷದ ‘ಅವ್ವ ಪ್ರಶಸ್ತಿ’ಗೆ ಕಾಂಗ್ರೆಸ್ ಮುಖಂಡ ಎಸ್. ಆರ್.ಪಾಟೀಲ, ಪತ್ರಕರ್ತ ಚಂದ್ರಕಾಂತ ವಡ್ಡು, ಸೀತಾರ ವಾದಕ ಛೋಟೆ ರಹಮತ್‌ಖಾನ್ ಸೇರಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ 12 ಮಂದಿಯನ್ನು ಆಯ್ಕೆ ಮಾಡಲಾಗಿದೆ.

‘ಹುಬ್ಬಳ್ಳಿಯ ಗುಜರಾತ ಭವನದಲ್ಲಿ ಡಿಸೆಂಬರ್ 15ರಂದು ಬೆಳಿಗ್ಗೆ 10.30ಕ್ಕೆ ನಡೆಯಲಿರುವ ಗುರವ್ವ ಶಿವಲಿಂಗಪ್ಪ ಹೊರಟ್ಟಿ ಅವರ 14ನೇ ಪುಣ್ಯಸ್ಮರಣೆ ಕಾರ್ಯಕ್ರಮದಲ್ಲಿ ಸಾಧಕರಿಗೆ ‘ಅವ್ವ ಪ್ರಶಸ್ತಿ’ ಪ್ರದಾನ ಮಾಡಲಾಗುವುದು’ ಎಂದು ಭಾನುವಾರ ಸುದ್ದಿಗೋಷ್ಠಿಯಲ್ಲಿ ಅವ್ವ ಸೇವಾ ಟ್ರಸ್ಟ್ ಅಧ್ಯಕ್ಷ ಬಸವರಾಜ ಹೊರಟ್ಟಿ ತಿಳಿಸಿದರು.

‘ಸಾಹಿತಿ ಸಂಗಮನಾಥ ಲೋಕಾಪುರ, ಗಾಯಕಿ ರೇಖಾ ಹೆಗಡೆ, ಭಾಗವತ ಕೇಶವ ಹೆಗಡೆ ಕೊಳಗಿ, ಉದ್ಯಮಿ ಮಹೇಂದ್ರ ಸಿಂಘಿ, ಬಸವ ತತ್ವ ಪ್ರಚಾರಕ ಎಸ್. ಮಹದೇವಯ್ಯ, ಸಮಾಜ ಸೇವಕಿ ರಾಜೇಶ್ವರಿ ಪಾಟೀಲ, ಜಾನಪದ ಕಲಾವಿದ ಬಸವರಾಜ ಶಿಗ್ಗಾವಿ, ಸ್ಕೇಟ್ ಕ್ರೀಡಾಪಟು ತ್ರಿಶಾ ಜಡಲಾ ಹಾಗೂ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 625ಕ್ಕೆ 625 ಅಂಕಗಳಿಸಿದ ಬಾಗಲಕೋಟೆಯ ಅಂಕಿತಾ ಕೊಣ್ಣೂರ ಅವರು ಅವ್ವ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ. ಸ್ಮರಣಿಕೆ ಜೊತೆಗೆ ₹25 ಸಾವಿರ ನಗದು ಇರಲಿದೆ’ ಎಂದು ಮಾಹಿತಿ ನೀಡಿದರು.

ನಿಧನ ವಾರ್ತೆ

ನಿವೃತ್ತ ಉಪ ಲೋಕಾಯುಕ್ತ ಎನ್.ಆನಂದ್



ಎನ್.ಆನಂದ್

ಬೆಂಗಳೂರು: ನಿವೃತ್ತ ಉಪ ಲೋಕಾಯುಕ್ತ, ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನಾರಾಯಣಪ್ಪ ಆನಂದ್ (71) ಅವರು ಶನಿವಾರ ನಗರದ ಆಸ್ಪತ್ರೆಯಲ್ಲಿ ನಿಧನರಾದರು.

ಅವರಿಗೆ ಪತ್ನಿ, ಇಬ್ಬರು ಹೆಣ್ಣು ಮಕ್ಕಳು ಹಾಗೂ ಒಬ್ಬ ಪುತ್ರ ಇದ್ದಾರೆ. ‘ಅಂತ್ಯಕ್ರಿಯೆ ಭಾನುವಾರ ಮಧ್ಯಾಹ್ನ 3 ಗಂಟೆಗೆ ಕೋಲಾರ ಜಿಲ್ಲೆಯ ವೇಮಗಲ್ ಬಳಿಯ ಬೈರಂಡಹಳ್ಳಿಯಲ್ಲಿ ನೆರವೇರಿತು’ ಎಂದು ಅವರ ಕುಟುಂಬದ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಕೋಲಾರ ಜಿಲ್ಲೆಯಲ್ಲಿ 1953ರ ಮೇ 18ರಂದು ಜನಿಸಿದ್ದರು. 1977ರ ನ. 30ರಂದು ರಾಜ್ಯ ವಕೀಲರ ಪರಿಷತ್‌ನಿಂದ ಸನ್ನದು ಪಡೆದು ಜಿಲ್ಲೆಯಲ್ಲಿ ವಕೀಲಿಕೆ ಆರಂಭಿಸಿದ್ದರು. ನಂತರ ಬೆಂಗಳೂರಿನ ಒಂದನೇ ಹೆಚ್ಚುವರಿ ಸೆಷನ್ಸ್ ನ್ಯಾಯಾಲಯದಲ್ಲಿ 1987 ಮತ್ತು 1989ರ ಅವಧಿಯಲ್ಲಿ ಹೆಚ್ಚುವರಿ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿ ಕೆಲಸ ನಿರ್ವಹಿಸಿದ್ದರು. 2003ರಲ್ಲಿ ಕರ್ನಾಟಕ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್ ಆದ ಅವರು 2006ರ ಜನವರಿ 6ರಂದು ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಕಗೊಂಡು 2013ರಲ್ಲಿ ನಿವೃತ್ತರಾದರು. 2015ರ ಡಿಸೆಂಬರ್‌ನಲ್ಲಿ ಕರ್ನಾಟಕ ಉಪ ಲೋಕಾಯುಕ್ತರಾಗಿ ನೇಮಕಗೊಂಡಿದ್ದರು.

ಉತ್ತರ ಕರ್ನಾಟಕ ಚರ್ಚೆಗೆ ಒತ್ತು: ಖಾದರ್

ವಿಧಾನಸಭಾ ಅಧ್ಯಕ್ಷರಿಂದ ಅಂತಿಮ ಸಿದ್ಧತೆ ಪರಿಶೀಲನೆ; ‘ಅನುಭವ ಮಂಟಪ’ದ ತೈಲವರ್ಣ ಚಿತ್ರ ಅನಾವರಣ ಇಂದು

ಪ್ರಜಾವಾಣಿ ವಾರ್ತೆ

ಬೆಳಗಾವಿ: ‘ವಿಧಾನಮಂಡಲ ಚಳಿಗಾಲದ ಅಧಿವೇಶನ ಸೋಮವಾರದಿಂದ ಆರಂಭವಾಗಲಿದ್ದು ಎರಡು ವಾರಗಳ ಅಧಿವೇಶನಕ್ಕೆ ಈ ಬಾರಿ ₹25 ಕೋಟಿ ಖರ್ಚಾಗಲಿದೆ. ಸಮಗ್ರ ಕರ್ನಾಟಕದ ಅಭಿವೃದ್ಧಿಯೊಂದಿಗೆ ಉತ್ತರ ಕರ್ನಾಟಕದ ಸಮಸ್ಯೆಗಳ ಕುರಿತ ಚರ್ಚೆಗೆ ಪ್ರಾಶಸ್ತ್ಯ ಕೊಡಲಾಗುವುದು’ ಎಂದು ವಿಧಾನಸಭೆ ಅಧ್ಯಕ್ಷ ಯು.ಟಿ. ಖಾದರ್ ಹೇಳಿದರು.

ಇಲ್ಲಿನ ಸುವರ್ಣ ವಿಧಾನಸೌಧದಲ್ಲಿ ಅಧಿವೇಶನದ ಅಂತಿಮ ಸಿದ್ಧತೆಗಳನ್ನು ಭಾನುವಾರ ಪರಿಶೀಲಿಸಿದ ನಂತರ, ಸುದ್ದಿಗೋಷ್ಠಿಯಲ್ಲಿ ಅವರು ಮಾತನಾಡಿದರು.

ಅಧಿವೇಶನದ ಆರಂಭದಲ್ಲೇ ಉತ್ತರ ಕರ್ನಾಟಕದ ಬಗ್ಗೆ ಚರ್ಚಿಸಬೇಕೆಂಬ ಬೇಡಿಕೆಗೆ ಪ್ರತಿಕ್ರಿಯಿಸಿದ ಖಾದರ್, ‘ಅಧಿವೇಶನದ ಆರಂಭ ಅಥವಾ ಅಂತ್ಯಕ್ಕೆ ಈ ಭಾಗದ ಬಗ್ಗೆ ಚರ್ಚಿಸಿದರೆ ಹೆಚ್ಚಿನ ವ್ಯತ್ಯಾಸವಾಗದು. ಡಿ.9ರಂದು ನಡೆಯುವ ಕಲಾಪ ಸಲಹಾ ಸಮಿತಿ ಸಭೆಯಲ್ಲಿ ಅಧಿವೇಶನದ ರೂಪುರೇಷಗಳ ಕುರಿತಾಗಿ ಸಮಗ್ರವಾಗಿ ಚರ್ಚಿಸಿ ತೀರ್ಮಾನಕ್ಕೆ ಬರುತ್ತೇವೆ’ ಎಂದರು.

‘ಈ ಬಾರಿಯ ಅಧಿವೇಶನದಲ್ಲಿ ಐದು ಮಸೂದೆಗಳ ಮೇಲೆ ಸುದೀರ್ಘವಾಗಿ ಚರ್ಚಿಸುತ್ತೇವೆ. ವಿಧಾನಸಭೆ ಕಲಾಪಗಳಿಗೆ ಈವರೆಗೆ 3,004 ಪ್ರಶ್ನೆಗಳು, 205 ಗಮನಸೆಳೆಯುವ ಸೂಚನೆ ಸ್ವೀಕೃತವಾಗಿವೆ. ನಿಯಮ 96ರಡಿ 351 ಸೂಚನೆಗಳು ಮತ್ತು 3 ಖಾಸಗಿ ಮಸೂದೆಗಳನ್ನು ಸ್ವೀಕರಿಸಲಾಗಿದೆ. ರಾಜ್ಯದಲ್ಲಿ ಇತ್ತೀಚೆಗೆ ನಡೆದ ಮೂರು ವಿಧಾನಸಭೆ ಕ್ಷೇತ್ರಗಳ ಉಪಚುನಾವಣೆಯಲ್ಲಿ ಆಯ್ಕೆಯಾದ ಸದಸ್ಯರಿಗೆ ಪ್ರಮಾಣವಚನ ಬೋಧಿಸಲಿದ್ದೇವೆ’ ಎಂದು ತಿಳಿಸಿದರು.

‘ಬೆಂಗಳೂರಿನ ವಿಧಾನಸೌಧದ ಮಾದರಿಯಲ್ಲೇ, ಬೆಳಗಾವಿಯ ಸುವರ್ಣ ವಿಧಾನಸೌಧದಲ್ಲಿ ವಿಧಾನಸಭೆ ಅಧ್ಯಕ್ಷರ ಪೀಠ ಸಿದ್ಧಪಡಿಸಿದ್ದೇವೆ. ಕರ್ನಾಟಕ ಅರಣ್ಯ ಅಭಿವೃದ್ಧಿ ನಿಗಮ ಇದಕ್ಕೆ ₹45 ಲಕ್ಷ ವ್ಯಯಿಸಿದೆ’ ಎಂದರು.

‘ಡಿ.9ರಂದು ಬೆಳಿಗ್ಗೆ 11ಕ್ಕೆ ಅಧಿವೇಶನಕ್ಕೆ ಚಾಲನೆ ಸಿಗಲಿದೆ. ಇದಕ್ಕೂ ಮೊದಲು, ಬಸವಣ್ಣನವರು ಸ್ಥಾಪಿಸಿದ ‘ಅನುಭವ ಮಂಟಪ’ದ ಬೃಹತ್ ತೈಲವರ್ಣ ಚಿತ್ರವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಲೋಕಾರ್ಪಣೆ ಮಾಡುವರು’ ಎಂದರು.

ಬೆಳಗಾವಿಯಲ್ಲಿ ಶಾಸಕರ ಭವನ ನಿರ್ಮಾಣ ವಿಳಂಬವಾಗುತ್ತಿರುವ ಪ್ರಶ್ನೆಗೆ ಉತ್ತರಿಸಿದ ಖಾದರ್, ‘ಶಾಸಕರ ಭವನ ನಿರ್ಮಾಣದ ಬಗ್ಗೆ ಚರ್ಚೆ ನಡೆದಿದೆ. ಇದಕ್ಕಾಗಿ 10 ಎಕರೆ ಜಾಗವೂ ಇದೆ. ಶೀಘ್ರವೇ ಅಂತಿಮ ತೀರ್ಮಾನ ಕೈಗೊಳ್ಳುತ್ತೇವೆ’ ಎಂದು ಪ್ರತಿಕ್ರಿಯಿಸಿದರು.

‘ಈ ಅಧಿವೇಶನದಲ್ಲಿ 8,500 ಮಂದಿ ಕಾರ್ಯ ನಿರ್ವಹಿಸುತ್ತಿದ್ದಾರೆ. ಈ ಪೈಕಿ 6 ಸಾವಿರ ಪೊಲೀಸರೇ ಇದ್ದಾರೆ. ಜಿಲ್ಲಾಧಿಕಾರಿ ನೇತೃತ್ವದಲ್ಲಿ ರಚಿಸಿರುವ 10 ಸಮಿತಿಗಳು ಅಧಿವೇಶನ ಕರ್ತವ್ಯಕ್ಕೆ ಬಂದವರಿಗೆ ವಸತಿ, ಊಟ, ಸಾರಿಗೆ ವ್ಯವಸ್ಥೆ ಕಲ್ಪಿಸುತ್ತಿವೆ. ಪ್ರತಿಭಟನೆ ಮಾಡುವವರಿಗೆ ಎರಡು ಕಡೆ ವ್ಯವಸ್ಥೆ ಮಾಡಿದ್ದೇವೆ. ಮುಖ್ಯದ್ವಾರದಿಂದ ಸೌಧದ ಕಟ್ಟಡದವರೆಗೆ ಬಸ್‌ಗಳ ವ್ಯವಸ್ಥೆ ಕಲ್ಪಿಸಿದ್ದೇವೆ’ ಎಂದು ತಿಳಿಸಿದರು.

‘ಕಲಾಪಕ್ಕೆ ಗೈರು ಹಾಜರಾಗುವ ಸದಸ್ಯರಿಗೆ ದಂಡ ವಿಧಿಸುವ ಬಗ್ಗೆ ಚಿಂತನೆ ಮಾಡಿಲ್ಲ. ಮುಂದೆ ನೋಡೋಣ’ ಎಂದರು.

ವಿಧಾನಸಭೆ ಕಾರ್ಯದರ್ಶಿ ಎಂ.ಕೆ. ವಿಶಾಲಾಕ್ಷಿ, ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್, ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಭೀಮಾಶಂಕರ ಗುಳೇದ ಇದ್ದರು.



ಬೆಳಗಾವಿಯ ಸುವರ್ಣ ವಿಧಾನಸೌಧಕ್ಕೆ ವಿಧಾನಸಭೆ ಅಧ್ಯಕ್ಷ ಯು.ಟಿ.ಖಾದರ್ ಭಾನುವಾರ ಭೇಟಿ ನೀಡಿ ಅಂತಿಮ ಹಂತದ ಸಿದ್ಧತೆ ಪರಿಶೀಲಿಸಿದರು. ಜಿಲ್ಲಾಧಿಕಾರಿ ಮೊಹಮ್ಮದ್ ರೋಷನ್ ಮತ್ತಿತರರು ಇದ್ದಾರೆ —ಪ್ರಜಾವಾಣಿ ಚಿತ್ರ

ಚರ್ಚೆಗೆ ಬರಲಿರುವ ಮಸೂದೆಗಳು

- ಕರ್ನಾಟಕ ವಿಶ್ವವಿದ್ಯಾನಿಲಯಗಳ(ತಿದ್ದುಪಡಿ) ಮಸೂದೆ 2024
- ಬಸವನಬಾಗೇವಾಡಿ ಅಭಿವೃದ್ಧಿ ಪ್ರಾಧಿಕಾರದ ಮಸೂದೆ 2024
- ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್‌ರಾಜ್ ವಿಶ್ವವಿದ್ಯಾಲಯಗಳ(ತಿದ್ದುಪಡಿ) ಮಸೂದೆ 2024
- ಕರ್ನಾಟಕ ಕಾರ್ಮಿಕ ಕಲ್ಯಾಣ ನಿಧಿ(ತಿದ್ದುಪಡಿ) ಮಸೂದೆ 2024
- ಕರ್ನಾಟಕ ಪ್ರವಾಸೋದ್ಯಮ ರೋಪ್‌ವೇಗಳ ಮಸೂದೆ 2024

‘ಸರ್ಕಾರದ ಚಳಿ ಬಿಡಿಸುತ್ತೇವೆ’

ಪ್ರಜಾವಾಣಿ ವಾರ್ತೆ

ಹೊನ್ನಾಳಿ (ದಾವಣಗೆರೆ ಜಿಲ್ಲೆ): ‘ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದಾಗಿನಿಂದ ಅಭಿವೃದ್ಧಿ ಕಾರ್ಯಗಳು ಗೌಣವಾಗಿವೆ. ಬೆಳಗಾವಿಯಲ್ಲಿ ಸೋಮವಾರದಿಂದ ಆರಂಭವಾಗಲಿರುವ ಚಳಿಗಾಲದ ಅಧಿವೇಶನದಲ್ಲಿ ರಾಜ್ಯ ಸರ್ಕಾರದ ಭ್ರಷ್ಟಾಚಾರದ ಚಳಿಯನ್ನು ಬಿಡಿಸುತ್ತೇವೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಗ್ಯಾರಂಟಿ ಯೋಜನೆಗಳ ಹೆಸರಿನಲ್ಲಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್, ಒಂದೂವರೆ ವರ್ಷದಲ್ಲಿ ಗುರುತರ ಅಭಿವೃದ್ಧಿ ಕಾಮಗಾರಿ ಕೈಗೊಂಡಿಲ್ಲ. ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲಿ ಅಭಿವೃದ್ಧಿ ಕಾರ್ಯಗಳು ಗೌಣವಾಗಿವೆ’ ಎಂದು ದೂರಿದರು.

‘ವಕ್ಫ್: ಸದನದ ಒಳಗೆ –ಹೊರಗೆ ಹೋರಾಟ’

ರಾಣೆಬೆನ್ನೂರು (ಹಾವೇರಿ ಜಿಲ್ಲೆ): ‘ವಕ್ಫ್ ವಿರುದ್ಧ ಈಗಾಗಲೇ ರಾಜ್ಯದೆಲ್ಲೆಡೆ ಬಿಜೆಪಿ ಹೋರಾಟಕ್ಕೆ ಸಿದ್ಧವಾಗಿದೆ. ಬೆಳಗಾವಿಯಲ್ಲಿ ಸೋಮವಾರ ಆರಂಭವಾಗುವ ಚಳಿಗಾಲದ ಅಧಿವೇಶನದಲ್ಲಿ ವಕ್ಫ್ ವಿರುದ್ಧ ಹೋರಾಟ ಮಾಡುವ ಮೂಲಕ ಬಿಜೆಪಿ–ಜೆಡಿಎಸ್ ನಿಲುವಳಿ ಸೂಚನೆ ಮಂಡಿಸಲಿವೆ. ಎಂತಹ ಸಂದರ್ಭ ಬಂದರೂ ಹೋರಾಟ, ಧರಣಿ ನಿಲ್ಲಿಸುವುದಿಲ್ಲ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ಸಮೀಪದ ಚಳಗೇರಿ ಗ್ರಾಮದಲ್ಲಿ ಪಹಣಿಯಲ್ಲಿ ವಕ್ಫ್ ಆಸ್ತಿ ಎಂದು ನಮೂದಾಗಿದ್ದ ರೈತರ ಮನೆಗಳಿಗೆ ಭಾನುವಾರ ಭೇಟಿ ನೀಡಿದ್ದ ಅವರು ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

‘ನಾನು, ವಿಜಯೇಂದ್ರ, ಬಸನಗೌಡ ಪಾಟೀಲ್ ಯತ್ನಾಳ ಮತ್ತಿತರರು ಒಗ್ಗಟ್ಟಾಗಿ ಅಧಿವೇಶನದಲ್ಲಿ ವಿವಿಧ ವಿಷಯಗಳ ಕುರಿತು ಚರ್ಚಿಸುತ್ತೇವೆ. ಶಾಸಕ ಯತ್ನಾಳ ಅವರ ಬಗ್ಗೆ ಕೋರ್ ಕಮಿಟಿ ಸಭೆಯಲ್ಲಿ ಚರ್ಚಿಸಲಾಗಿದೆ. ಅವರ ಬಗ್ಗೆ ವರಿಷ್ಠರು ನಿರ್ಧರಿಸುತ್ತಾರೆ. ಬಿಜೆಪಿಯಲ್ಲಿ ಸಣ್ಣ–ಪುಟ್ಟ ಭಿನ್ನಾಭಿಪ್ರಾಯಗಳಿವೆ. ಸರಿಪಡಿಸಿಕೊಂಡು ಮುಂದೆ ಹೋಗುತ್ತೇವೆ’ ಎಂದರು.

ಕಾಮನೂರು ಗ್ರಾಮದ ಶಿಕ್ಷಕರ ಛಲದಿಂದ ದೂರವಾಯಿತು ಸಂಕಷ್ಟ

ದೇಣಿಗೆಯಿಂದ ಸಿಕ್ಕಿತು ಸರ್ಕಾರಿ ಶಾಲೆಗೆ ಜಾಗ

• ಪ್ರಮೋದ ಕುಲಕರ್ಣಿ

ಕೊಪ್ಪಳ: ಕಿರಿದಾದ ಜಾಗದಲ್ಲಿ ಪ್ರತಿನಿತ್ಯ ನೂರಾರು ಮಕ್ಕಳು ಪಾಠ ಕೇಳುವ ಕೊಪ್ಪಳ ತಾಲ್ಲೂಕಿನ ಕಾಮನೂರು ಗ್ರಾಮದ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಗೆ ಶಿಕ್ಷಕರ ನಿರಂತರ ಪ್ರಯತ್ನದಿಂದಾಗಿ ಈಗ ಹೊಸ ಜಾಗ ಸಿಕ್ಕಿದೆ.

ಈ ಜಾಗ ಖರೀದಿಗೆ ಬೇಕಾದ ಹಣವನ್ನು ಶಿಕ್ಷಕರು ನೀಡಿದ್ದು, ಬೇರೆಯವರಿಂದಲೂ ಸಂಗ್ರಹಿಸಿದ್ದಾರೆ. ಸೋಮವಾರ (ಇಂದು) ರಾಜ್ಯಪಾಲರ ಹೆಸರಿನಲ್ಲಿ ಜಾಗ ನೋಂದಣಿಯಾಗಲಿದೆ. ಇದಕ್ಕಾಗಿ ಶಿಕ್ಷಕರು ಹಲವು ವರ್ಷಗಳಿಂದ ಛಲಬಿಡದೇ ಶ್ರಮಿಸಿದ್ದಾರೆ.

ಕಾಮನೂರು ಮಹಾತ್ಮ ಗಾಂಧೀಜಿ ಅವರ ಆದರ್ಶಗಳನ್ನು ರೂಢಿಸಿಕೊಂಡ ಗ್ರಾಮವಾಗಿದ್ದು, ಈ ಗ್ರಾಮದಲ್ಲಿ ಇಂದಿಗೂ ಮದ್ಯ ಮಾರಾಟ ಮಾಡುವುದಿಲ್ಲ. ಗ್ರಾಮದ ಅಂಗಡಿಗಳಲ್ಲಿ ತಂಬಾಕು, ಗುಟ್ಕಾ ಸಿಗುವುದಿಲ್ಲ. ಇಂಥ ಹಿನ್ನಲೆಯ ಕಾಮನೂರಿನಲ್ಲಿ 1960ರಲ್ಲಿ ಏಳು ಗುಂಟೆ ಜಾಗದಲ್ಲಿ ಆರಂಭವಾದ ಶಾಲೆಯಲ್ಲಿ ಈಗ 1ರಿಂದ 8ರ ತನಕ ತರಗತಿಗಳು ನಡೆಯುತ್ತಿವೆ. 272 ವಿದ್ಯಾರ್ಥಿಗಳು, ಹತ್ತು ಜನ ಶಿಕ್ಷಕರು ಇದ್ದಾರೆ. ಇಕ್ಕಟ್ಟಾದ ಜಾಗದಲ್ಲಿ ಏಳು ಕೊಠಡಿಗಳು ಇವೆ. ಇದರಲ್ಲಿಯೇ ಅಡುಗೆ ಕೊಠಡಿಗೂ ವ್ಯವಸ್ಥೆ ಮಾಡಲಾಗಿದೆ.

ಕೊಠಡಿಗಳ ಕೊರತೆಯಿಂದಾಗಿ ನಿತ್ಯ ಒಂದೆರಡು ತರಗತಿಗಳನ್ನು ಕೂಡಿಸಿ ಪಾಠ ಮಾಡಬೇಕಾದ ಅನಿವಾರ್ಯವಿದೆ. ಆದ್ದರಿಂದ ಶಾಲೆಯ ಮುಖ್ಯೋಪಾಧ್ಯಾಯ ಯುವರಾಜ ಬಡಿಗೇರ ಹಾಗೂ ಶಿಕ್ಷಕರು ಶಾಲೆಗೆ ಹೊಸ ಜಾಗ ಖರೀದಿಗೆ ಪ್ರಯತ್ನ ಆರಂಭಿಸಿದರು. ಮೊದಲು ಶಿಕ್ಷಕರೆಲ್ಲರೂ ಸೇರಿ ತಮ್ಮ ವೇತನದಿಂದ ಹಣ ನೀಡಿ ₹ 1.48 ಲಕ್ಷ ಸಂಗ್ರಹಿಸಿದರು. ಬಳಿಕ ಸಾರ್ವಜನಿಕರು, ಕಾಮನೂರು ವ್ಯಾಪ್ತಿ ಹೊಂದಿರುವ ಲೇಬಗೇರಿ ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಜನಪ್ರತಿನಿಧಿಗಳ ನೆರವಿನಿಂದ ಒಟ್ಟು ₹ 21 ಲಕ್ಷ ಸಂಗ್ರಹವಾಗಿದೆ. ಇದೇ ಹಣದಲ್ಲಿ ಈಗ ಗ್ರಾಮದ ಶಿಬಾರಿಕಟ್ಟಿ ಬಳಿ ಒಂದು ಎಕರೆ 20 ಗುಂಟೆ ಜಾಗ ಖರೀದಿಸುತ್ತಿದ್ದಾರೆ.

ಕಾಮನೂರು ಗ್ರಾಮವನ್ನು ಕೊಪ್ಪಳ ಜಿಲ್ಲಾ ಪಂಚಾಯಿತಿ ನರೇಗಾ ಯೋಜನೆಯಡಿ ದತ್ತು ಗ್ರಾಮವನ್ನಾಗಿ ಸ್ವೀಕರಿಸಿದ್ದು ವಿಶೇಷ ಅನುದಾನವನ್ನೂ ನೀಡುವುದಾಗಿ ಘೋಷಿಸಿದೆ. ಇದೇ ಅನುದಾನದಲ್ಲಿ ಸರ್ಕಾರಿ ಶಾಲೆಯ ಹೊಸ ಜಾಗಕ್ಕೆ ಶೌಚಾಲಯ ಹಾಗೂ ಕಾಂಪೌಂಡ್ ನಿರ್ಮಿಸುವುದಾಗಿ ತಿಳಿಸಿದೆ.

ಮೂಲತಃ ಗದಗ ಜಿಲ್ಲೆಯ ರೋಣ ತಾಲ್ಲೂಕಿನ ಸವಡಿ ಗ್ರಾಮದ ಯುವರಾಜ ಬಡಿಗೇರ ಹಿಂದೆ ಕೊಪ್ಪಳ ತಾಲ್ಲೂಕಿನ ಕೊಡದಾಳ ಹಾಗೂ ತಾಳಕನಕಾಪುರದಲ್ಲಿ ಮುಖ್ಯೋಪಾಧ್ಯಾಯರಾಗಿದ್ದಾಗ ಸಾರ್ವಜನಿಕರ ದೇಣಿಗೆಯಿಂದ ಶಾಲೆಗೆ ಆಸ್ತಿ ಮಾಡಿದ್ದಾರೆ. ಈಗ ತಮ್ಮ ಗ್ರಾಮದ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಶಿಕ್ಷಕರೂ ಕೈ ಜೋಡಿಸಿದ್ದರಿಂದ ಕಾಮನೂರು ಗ್ರಾಮಸ್ಥರೂ ಖುಷಿಯಾಗಿದ್ದಾರೆ.



ಕೊಪ್ಪಳ ತಾಲ್ಲೂಕಿನ ಕಾಮನೂರು ಗ್ರಾಮದಲ್ಲಿ ಸರ್ಕಾರಿ ಶಾಲಾ ಕಟ್ಟಡಕ್ಕೆ ನಿಗದಿಯಾದ ಜಾಗ



ಮುಖ್ಯಾಂಶಗಳು

- ರಾಜ್ಯಪಾಲರ ಹೆಸರಿನಲ್ಲಿ ಇಂದು ಜಾಗ ನೋಂದಣಿ
- ₹ 21 ಲಕ್ಷ ದೇಣಿಗೆ ಸಂಗ್ರಹಿಸಿರುವ ಶಿಕ್ಷಕರು
- ಗಾಂಧೀಜಿ ಆದರ್ಶ ಅಳವಡಿಸಿಕೊಂಡ ಕಾಮನೂರು

> **ಈಗಿರುವ ಶಾಲೆ ಬಹಳ ಇಕ್ಕಟ್ಟಾಗಿದ್ದು ವಿದ್ಯಾರ್ಥಿಗಳಿಗೆ ತೊಂದರೆಯಾಗುತ್ತಿದೆ. ಎಲ್ಲರ ನೆರವಿನಿಂದ ದೇಣಿಗೆ ಸಂಗ್ರಹಿಸಿ ಹೊಸ ಜಾಗ ಖರೀದಿಸಲಾಗಿದ್ದು ನೋಂದಣಿ ಮಾಡಿಕೊಳ್ಳುತ್ತಿದ್ದೇವೆ**
> **ಯುವರಾಜ ಬಡಿಗೇರ** ಕಾಮನೂರು ಶಾಲೆಯ ಮುಖ್ಯೋಪಾಧ್ಯಾಯ

ಕಲಹವೇ ಪ್ರಧಾನ, ಕಲಾಪ ಅನುಮಾನ

• ವೈ.ಗ. ಜಗದೀಶ್

ಬೆಳಗಾವಿ: ಉಪಚುನಾವಣೆ ಗೆಲುವಿನ ಉಮೇದಿನ ಜತೆಗೆ ಆಡಳಿತ ಪಕ್ಷದಲ್ಲಿನ ಒಗ್ಗಟ್ಟು, ನಾಯಕತ್ವದ ಜಗ್ಗಾಟದಿಂದಾಗಿ ವಿಪಕ್ಷಗಳಲ್ಲಿನ ಬಿಕ್ಕಟ್ಟಿನ ನಡುವೆಯೇ, ಸೋಮವಾರ ಇಲ್ಲಿ ಆರಂಭವಾಗಲಿರುವ ಚಳಿಗಾಲದ ಅಧಿವೇಶನ, ರಚನಾತ್ಮಕ ಚರ್ಚೆಗಿಂತ ಕದನ ಕಣವಾಗುವ ಸಾಧ್ಯತೆಯೇ ದಟ್ಟವಾಗಿದೆ.

ರಾಜ್ಯದಲ್ಲಿ ಕಾಂಗ್ರೆಸ್ ಪಕ್ಷ ಚುಕ್ಕಾಣಿ ಹಿಡಿದು ಒಂದೂವರೆ ವರ್ಷ ಮುಗಿಯುವ ಹೊತ್ತಿಗೆ ಹಲವು ಭ್ರಷ್ಟಾಚಾರದ ಆರೋಪಗಳು ಸರ್ಕಾರದ ಕೊರಳನ್ನು ಬಿಗಿ ಮಾಡಿವೆ. ಮುಡಾ ನಿವೇಶನ ಹಂಚಿಕೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ವಿರುದ್ಧವೇ ಎಫ್‌ಐಆರ್ ದಾಖಲು, ವಾಲ್ಮೀಕಿ ಹಗರಣದಲ್ಲಿ ಸಚಿವರೊಬ್ಬರ ತಲೆದಂಡ, ಅಬಕಾರಿ ಸಚಿವರ ವಿರುದ್ಧ ₹700 ಕೋಟಿ ಹಗರಣದ ಆರೋಪ, ಬಳ್ಳಾರಿಯ ಆಸ್ಪತ್ರೆಯಲ್ಲಿನ ದಾರುಣ ಸಾವುಗಳು ಸೇರಿ ಎಂಟು ತಿಂಗಳಿನಲ್ಲಿ 327 ಬಾಣಂತಿಯರ ದುರ್ಮರಣ, ವಕ್ಫ್ ಆಸ್ತಿ ವಿವಾದದಂತಹ ಪ್ರಬಲ ಅಸ್ತ್ರಗಳು ವಿಪಕ್ಷ ನಾಯಕರ ಕೈಯಲ್ಲಿವೆ.

ಪ್ರತಿಯಾಗಿ ಆಡಳಿತ ಪಕ್ಷದ ಬಳಿಯೂ ಬಲವಾದ ಪ್ರತ್ಯಸ್ತ್ರಗಳಿವೆ. ಕೇಂದ್ರ ಸರ್ಕಾರ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಂಡು ಹಲವು ರಾಜ್ಯಗಳಲ್ಲಿ ಮುಖ್ಯಮಂತ್ರಿ ಕುರ್ಚಿಗಳನ್ನೇ ಅಲುಗಾಡಿಸಿದಂತೆ, ಕರ್ನಾಟಕದಲ್ಲೂ ಮಾಡುತ್ತಿದೆ ಎಂಬ ಪ್ರಬಲ ವಾದ, ಕೋವಿಡ್ ನಿರ್ವಹಣೆ ಹೆಸರಿನಲ್ಲಿ ₹7 ಸಾವಿರ ಕೋಟಿಗೂ ಹೆಚ್ಚಿನ ಮೊತ್ತದ ಖರೀದಿ ಹಗರಣದ ತನಿಖಾ ವರದಿಯಲ್ಲಿ ಬಿ.ಎಸ್. ಯಡಿಯೂರಪ್ಪ, ಶ್ರೀರಾಮುಲು ಹೆಸರಿನ ಉಲ್ಲೇಖ, ಯಡಿಯೂರಪ್ಪ ಕುಟುಂಬದ ವಿರುದ್ಧದ ಬಿಡಿಎ ಹಗರಣ, ಬಿಜೆಪಿ ಶಾಸಕ ಮುನಿರತ್ನ ವಿರುದ್ಧದ ಲೈಂಗಿಕ ದೌರ್ಜನ್ಯ ಪ್ರಕರಣಗಳನ್ನು ಮುಂದಿಟ್ಟು ವಿಪಕ್ಷವನ್ನು ಕಟ್ಟಿ ಹಾಕಲು ಆಡಳಿತ ಪಕ್ಷ ಅಣಿಯಾಗಿದೆ. ಎಲ್ಲದಕ್ಕಿಂತ ಮುಖ್ಯವಾಗಿ 137 ಶಾಸಕರ ಏಕತೆಯ ಬಲವೇ, ಕಾಂಗ್ರೆಸ್‌ಗೆ ತ್ರಾಣವಾಗುವ ಸಾಧ್ಯತೆಯೂ ಇದೆ.

ಬೆಂಗಳೂರಿನ ಅಧಿವೇಶನದ ವೇಳೆ ವಾಲ್ಮೀಕಿ ನಿಗಮ, ಹಾಗೂ ಮುಡಾ ಪ್ರಕರಣ ಪ್ರತಿಪಕ್ಷಗಳ ಬತ್ತಳಿಕೆಯಲ್ಲಿತ್ತು. ಮುಡಾ ಕುರಿತು ಚರ್ಚೆಗೆ ಆಸ್ಪದ ನೀಡದೇ ಸರ್ಕಾರ ಮುಜುಗರದಿಂದ ಪಾರಾಗಿತ್ತು.

ಮುಡಾ ಪ್ರಕರಣ ಕುರಿತು ಲೋಕಾಯುಕ್ತ ತನಿಖೆ, ವಾಲ್ಮೀಕಿ ಮತ್ತು ಮುಡಾ ಪ್ರಕರಣವನ್ನು ಜಾರಿ ನಿರ್ದೇಶನಾಲಯ ಕೈಗೆತ್ತಿಕೊಂಡು ತನಿಖೆ ನಡೆಸಿ, ಮಾಹಿತಿಗಳನ್ನು ಮಾಧ್ಯಮಗಳಿಗೆ ಸೋರಿಕೆ ಮಾಡುತ್ತಿರುವುದು ಬಿಜೆಪಿ ನಾಯಕರಿಗೆ ವರವಾಗಿ ಪರಿಣಮಿಸಿದೆ. ಆದರೆ, ನಾಯಕರ ಮಧ್ಯೆ ಇರುವ ದೊಡ್ಡ ಮಟ್ಟದ ಭಿನ್ನಾಭಿಪ್ರಾಯವೇ ಬಿಜೆಪಿಗೆ ಮುಳುವಾಗಿದೆ. ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ವಿರುದ್ಧ ಶಾಸಕರೂ ಆಗಿರುವ ಬಸನಗೌಡ ಪಾಟೀಲ ಯತ್ನಾಳ ಬಣ ತಿರುಗಿ ಬಿದ್ದಿರುವುದು, ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಸರ್ಕಾರವನ್ನು ಹೆಡೆಮುರಿ ಕಟ್ಟುವ ಚಾಣಾಕ್ಷತನ ವಿರೋಧ ಪಕ್ಷ ನಾಯಕ ಆರ್. ಅಶೋಕ ಅವರಿಗೆ ಇಲ್ಲದಿರುವುದು ಕಾಂಗ್ರೆಸ್‌ಗೆ ಅನುಕೂಲಕಾರಿ ಸ್ಥಿತಿ ಸೃಷ್ಟಿಸಿದೆ.

ಎನ್‌ಡಿಎ ಭಾಗವಾಗಿರುವ ಜೆಡಿಎಸ್‌ನಲ್ಲೂ ಶಾಸಕಾಂಗ ಪಕ್ಷದ ನಾಯಕ ಸುರೇಶ ಬಾಬು ಅವರ ಬಗೆಗೆ ಹೆಚ್ಚಿನ ಒಲವಿಲ್ಲ. ಪಕ್ಷದ ನಾಯಕರಾಗಿ, ಸದನದಲ್ಲಿ ಸರ್ಕಾರದ ಹುಳುಕು ಬಯಲಿಗೆಳೆಯುತ್ತಿದ್ದ ಎಚ್.ಡಿ.ಕುಮಾರಸ್ವಾಮಿ ಕೇಂದ್ರ ಸಚಿವರಾದ ಮೇಲೆ, ಶಾಸಕರಲ್ಲಿ ಒಗ್ಗಟ್ಟು ಕಾಣದಾಗಿದೆ. ಜಿ.ಟಿ. ದೇವೇಗೌಡ, ಎಚ್.ಟಿ.ಕೃಷ್ಣಪ್ಪ ಪಕ್ಷದ ಜತೆಗೆ ಅಂತರ ಕಾಯ್ದುಕೊಂಡಿದ್ದಾರೆ ಸದನದಲ್ಲಿ ಅಬ್ಬರಿಸಿರುವವರ ಸಂಖ್ಯೆಯೇ ಕಡಿಮೆ ಇದೆ. ಪ್ರತಿ ಮಾತಿಗೆ ಎದ್ದು ಸದನದಲ್ಲಿ ನಿಲ್ಲುತ್ತಿದ್ದ ಎಚ್.ಡಿ. ರೇವಣ್ಣ, ತಮ್ಮ ಕುಟುಂಬದ ವಿರುದ್ಧದ ಲೈಂಗಿಕ ದೌರ್ಜನ್ಯ ಪ್ರಕರಣದಿಂದಾಗಿ ಮಾತನ್ನೇ ಆಡದ ಸ್ಥಿತಿ ತಲುಪಿದ್ದಾರೆ.



ಇತ್ತ, ಕಾಂಗ್ರೆಸ್‌ನಲ್ಲಿ ಏಕಮತ ಮೂಡಿದೆ. ಸಿ.ಎಂ ಬದಲಾವಣೆಯ ವಿಷಯ, ಐದು ಉಪ ಮುಖ್ಯಮಂತ್ರಿ ಸ್ಥಾನ ಸೃಷ್ಟಿ, ಸಚಿವ ಆಕಾಂಕ್ಷಿಗಳ ಸಂಖ್ಯೆ ಹೆಚ್ಚಳದಂತಹ ವಿಷಯಗಳನ್ನು ಆಡಳಿತ ಪಕ್ಷವನ್ನು ಕಾಡಿದ್ದುಂಟು. ಮೂರು ಉಪಚುನಾವಣೆಗಳಲ್ಲಿ ಮಾಜಿ ಮುಖ್ಯಮಂತ್ರಿಗಳು ಪ್ರತಿನಿಧಿಸುತ್ತಿದ್ದ ಎರಡು ಕ್ಷೇತ್ರಗಳನ್ನು ಕಿತ್ತು ಕೊಂಡು, ಮೂರರಲ್ಲಿಯೂ ಜಯ ಸಾಧಿಸಿರುವುದು, ಹಾಸನದಲ್ಲಿ ನಡೆದ ಕಾಂಗ್ರೆಸ್ ಸಮಾವೇಶದ ಯಶಸ್ಸು ಆ ಪಕ್ಷದಲ್ಲಿ ಹುಮ್ಮಸ್ಸು ತಂದಂತೆ ಕಾಣಿಸುತ್ತಿದೆ. ಆಂತರಿಕ ಕಚ್ಚಾಟದಿಂದ ಬಳಲುತ್ತಿರುವ ಬಿಜೆಪಿ, ಜೆಡಿಎಸ್ ಪಕ್ಷಗಳು, ಅಷ್ಟು ಸುಲಭಕ್ಕೆ ಈ ಬಾರಿ ಆಡಳಿತ ಪಕ್ಷವನ್ನು ಸದನದಲ್ಲಿ ಕಟ್ಟಿಹಾಕುವುದು ಸುಲಭದ ಸಂಗತಿಯಂತೆ ತೋರುತ್ತಿಲ್ಲ.

ವಕ್ಫ್–ಬಿಪಿಎಲ್ ವಿಷಯ: ಕಾಂಗ್ರೆಸ್ ಅಧಿಕಾರಕ್ಕೆ ಬಂದ ಮೇಲೆ, ಮುಸ್ಲಿಮರ ಓಲೈಕೆಗೆ ಹಲವು ಕಾರ್ಯಕ್ರಮ ರೂಪಿಸುತ್ತಿದೆ ಎಂಬ ಸಂಕಥನವನ್ನು ಬಿಜೆಪಿ ಪ್ರಬಲವಾಗಿ ಮುನ್ನೆಲೆಗೆ ತಂದಿತು. ವಕ್ಫ್ ವಿಚಾರದಲ್ಲಿ ಬಿಜೆಪಿ, ಹೋರಾಟವನ್ನು ತೀವ್ರಗೊಳಿಸಿತು. ಬಿಪಿಎಲ್ ಪಡಿತರ ಚೀಟಿ ರದ್ದತಿ ವಿಚಾರ ಮುಂದಿಟ್ಟು ಹೋರಾಟ ನಡೆಸಲು ವಿರೋಧ ಪಕ್ಷ ಅಣಿಯಾಗಿದೆ. ಆದರೆ, ಕೇಂದ್ರದ ನಿರ್ದೇಶನದಂತೆ ಈ ಪ್ರಕ್ರಿಯೆ ನಡೆದಿದೆ ಎಂಬ ಪ್ರತಿವಾದ ಮುಂದಿಡಲು ಸರ್ಕಾರ ಸಿದ್ಧವಾಗಿದೆ.

ಅಸ್ತ್ರ–ಪ್ರತ್ಯಸ್ತ್ರ ಹೂಡುವ ಆಡಳಿತ–ವಿಪಕ್ಷಗಳ ನಡೆಯೇ ಬೆಳಗಾವಿ ಕಲಾಪವನ್ನು ಬಾಧಿಸುವ ಸಂಭವ ಹೆಚ್ಚಿದೆ. ಹೀಗಾಗಿ, ನಾಡಿನ ಪ್ರಗತಿಗೆ ಸಂಬಂಧಿಸಿದ ಸಂಗತಿಗಳು, ಪ್ರಾಕೃತಿಕ ವಿಕೋಪ ತಂದ ಸಮಸ್ಯೆ, ಕಿತ್ತೂರು ಮತ್ತು ಕರ್ನಾಟಕ ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಕುರಿತಾದ ರಚನಾತ್ಮಕ ಚರ್ಚೆಗಳಿಗೆ ಈ ಬಾರಿಯೂ ಅವಕಾಶ ಸಿಗುವ ಸಾಧ್ಯತೆ ಕಡಿಮೆ ಇದ್ದಂತೆ ಕಾಣಿಸುತ್ತದೆ.

ಮುಫ್ತಿ ಪುತ್ರಿ ಇಲ್ತಿಜಾ ಹೇಳಿಕೆ ● ಬಿಜೆಪಿ ಖಂಡನೆ

ಜೈ ಶ್ರೀ ರಾಮ್ ಘೋಷಣೆ ಕೂಗಲು ನಿರಾಕರಿಸಿರುವ ಮುಸ್ಲಿಂ ಯುವಕನ ಮೇಲಿನ ಹಲ್ಲೆಯನ್ನು ಖಂಡಿಸಿರುವ ಇಲ್ತಿಜಾ ಅವರು ಹಿಂದುತ್ವ ಅಪಾಯಕಾರಿ ಎಂದು ಹೇಳಿದ್ದಾರೆ.

‘ಹಿಂದುತ್ವ ಎನ್ನುವುದು ಕಾಯಿಲೆ’

ಜಮ್ಮು (ಪಿಟಿಐ): ಹಿಂದುತ್ವ ಎನ್ನುವುದು ಹಿಂದೂ ಧರ್ಮದ ಘನತೆಯನ್ನು ಕುಗ್ಗಿಸುವ ಮತ್ತು ಅಲ್ಪಸಂಖ್ಯಾತರು ಅದರಲ್ಲೂ ಮುಸ್ಲಿಮರನ್ನು ಹಿಂಸಿಸುವ ಕಾಯಿಲೆಯಾಗಿದೆ. ಇದನ್ನು ಬಿಜೆಪಿ ಮತಬ್ಯಾಂಕ್ ಆಗಿ ಬಳಸಿಕೊಳ್ಳುತ್ತಿದೆ ಎಂದು ಪಿಡಿಪಿ ಮುಖ್ಯಸ್ಥೆ ಮೆಹಬೂಬಾ ಮುಫ್ತಿ ಅವರ ಪುತ್ರಿ ಇಲ್ತಿಜಾ ಮುಫ್ತಿ ಅವರು ಭಾನುವಾರ ಹೇಳಿದ್ದಾರೆ.

‘ರಾಮ ನಾಮ ಜಪಿಸಲು ನಿರಾಕರಿಸಿದ ಮುಸ್ಲಿಂ ಯುವಕರಿಗೆ ಚಪ್ಪಲಿಯಿಂದ ಹೊಡೆದಿರುವುದನ್ನು ಅಸಹಾಯಕತೆಯಿಂದ ನೋಡಿ ರಾಮನು ನಾಚಿಕೆಯಿಂದ ತಲೆ ತಗ್ಗಿಸುತ್ತಾನೆ. ಹಿಂದುತ್ವವು ಲಕ್ಷಾಂತರ ಭಾರತೀಯರನ್ನು ಬಾಧಿಸುತ್ತಿರುವ ಮತ್ತು ದೇವರ ಹೆಸರನ್ನು ಕೆಡಿಸುತ್ತಿರುವ ಕಾಯಿಲೆಯಾಗಿದೆ’ ಎಂದು ಇಲ್ತಿಜಾ ‘ಎಕ್ಸ್’ ಮೂಲಕ ಹೇಳಿದ್ದಾರೆ.


ಇಲ್ತಿಜಾ ಮುಫ್ತಿ

ಇಲ್ತಿಜಾ ಹೇಳಿಕೆಯನ್ನು ಖಂಡಿಸಿರುವ ಬಿಜೆಪಿ ಕ್ಷಮೆಯಾಚನೆಗೆ ಆಗ್ರಹಿಸಿದೆ.

ಬಳಿಕ ಜಮ್ಮುವಿನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಇಲ್ತಿಜಾ ತನ್ನ ಹೇಳಿಕೆಯನ್ನು ಸಮರ್ಥಿಸಿಕೊಂಡರು. ‘ಇಂತಹ ಘಟನೆಗಳು ದೇಶದಲ್ಲಿ ನಡೆಯಲು ಬಿಜೆಪಿ ಕುಮ್ಮಕ್ಕು ನೀಡುತ್ತಿದೆ ಎಂದು ಆರೋಪಿಸಿದರು.

‘ಹಿಂದುತ್ವ ಮತ್ತು ಹಿಂದೂ ಧರ್ಮಕ್ಕೆ ವ್ಯತ್ಯಾಸವಿದೆ. ಹಿಂದುತ್ವ ಎಂದರೆ ದ್ವೇಷ ಭಾವನೆಗೆ ಸಂಬಂಧಿಸಿದ್ದು. 1940ರಲ್ಲಿ ಸಾವರ್ಕರ್ ಹಿಂದುತ್ವವನ್ನು ಹರಡಿದರು. ಇದು ದೇಶದಲ್ಲಿ ಹಿಂದೂಗಳ ಪ್ರಾಬಲ್ಯವನ್ನು ಸ್ಥಾಪಿಸುವ ಮತ್ತು ಹಿಂದೂಗಳಿಂದ ಮತ್ತು ಹಿಂದೂಗಳಿಗಾಗಿ ಭಾರತ ಎಂಬ ತತ್ವವನ್ನು ಪಸರಿಸುವ ಗುರಿಯನ್ನು ಹೊಂದಿತ್ತು’ ಎಂದು ಇಲ್ತಿಜಾ ಹೇಳಿದರು.

‘ರಾಜಕೀಯ ನಿಲುವುಗಳಲ್ಲಿ ವ್ಯತ್ಯಾಸವಿರುತ್ತದೆ. ಆದರೆ, ಕೆಲವರ ಧಾರ್ಮಿಕ ಭಾವನೆಗಳನ್ನು ಗಾಸಿಗೊಳಿಸುವುದು ಸ್ವೀಕಾರಾರ್ಹವಲ್ಲ’ ಎಂದು ಜಮ್ಮು–ಕಾಶ್ಮೀರ ಬಿಜೆಪಿ ಘಟಕದ ಮಾಜಿ ಅಧ್ಯಕ್ಷ ರವೀಂದರ್ ರೈನಾ ಅವರು ಹೇಳಿದ್ದಾರೆ.

ಬ್ಯಾರಿಕೇಡ್‌ಗಳನ್ನಿಟ್ಟು ತಡೆ, ರೈತರ ಮೇಲೆ ಅಶ್ರುವಾಯು ಶೆಲ್ ಪ್ರಯೋಗ

‘ದೆಹಲಿ ಚಲೋ’ಗೆ ಪೊಲೀಸರಿಂದ ಮತ್ತೆ ಅಡ್ಡಿ

ಶಂಭು (ಪಿಟಿಐ): ವಿವಿಧ ಬೇಡಿಕೆಗಳ ಈಡೇರಿಕೆಗಾಗಿ 101 ರೈತರ ಗುಂಪು ಪಂಜಾಬ್–ಹರಿಯಾಣದ ಶಂಭು ಗಡಿಯಿಂದ ದೆಹಲಿಯತ್ತ ಭಾನುವಾರ ಮಧ್ಯಾಹ್ನ ಪುನಃ ಪಾದಯಾತ್ರೆಯನ್ನು ಆರಂಭಿಸಿತ್ತು. ಆದರೆ ರೈತರು ಕೆಲವೇ ಮೀಟರ್ ದೂರ ಸಾಗಿದ ನಂತರ ಪೊಲೀಸರು ಬಹುಸ್ತರದ ಬ್ಯಾರಿಕೇಡ್‌ಗಳನ್ನು ಇಟ್ಟು ರೈತರನ್ನು ತಡೆದರು.

ಬ್ಯಾರಿಕೇಡ್‌ಗಳತ್ತ ಧಾವಿಸುತ್ತಿದ್ದ ಪ್ರತಿಭಟನಕಾರರನ್ನು ಚದುರಿಸಲು ಪೊಲೀಸರು ಅಶ್ರುವಾಯು ಶೆಲ್ ಮತ್ತು ಜಲಫಿರಂಗಿ ಪ್ರಯೋಗಿಸಿದರು.

ರಾಷ್ಟ್ರರಾಜಧಾನಿ ಆಡಳಿತದಿಂದ ಅನುಮತಿ ಪಡೆದ ನಂತರವಷ್ಟೇ ರೈತರು ‘ದೆಹಲಿ ಚಲೋ’ ನಡೆಸಬಹುದು ಎಂದು ಅಂಬಾಲಾ ಪೊಲೀಸರು ಇದಕ್ಕೂ ಮುನ್ನ ತಿಳಿಸಿದ್ದರು.

‘ಪಾದಯಾತ್ರೆ ಆರಂಭಿಸಿದ್ದ ರೈತರ ಬಳಿ ಅನುಮತಿ ಪತ್ರ ಕೇಳಿದೆವು. ನಮ್ಮ ಬಳಿ ಇರುವ 101 ರೈತರ ಹೆಸರಿನ ಪಟ್ಟಿಯಲ್ಲಿ ಇವರುಗಳ ಹೆಸರು ಇರಲಿಲ್ಲ. ಗುರುತಿನ ಚೀಟಿಯನ್ನೂ ಅವರು ನೀಡಲಿಲ್ಲ. ಗಲಭೆ ಉಂಟು ಮಾಡಲು ಅವರು ಸೇರಿದ್ದರು’ ಎಂದು ಹರಿಯಾಣದ ಭದ್ರತಾ ಸಿಬ್ಬಂದಿಯೊಬ್ಬರು ಹೇಳಿದರು.

ರೈತರೊಬ್ಬರು ಪ್ರತಿಕ್ರಿಯಿಸಿ, ‘ಪಟ್ಟಿಯಲ್ಲಿ ನಮ್ಮ ಹೆಸರು ಇಲ್ಲ ಎಂದು ಪೊಲೀಸರು ಹೇಳಿದರು. ಅವರ ಬಳಿ ಯಾವ ಪಟ್ಟಿ ಇದೆಯೋ ನಮಗೆ ಗೊತ್ತಿಲ್ಲ. ನಮ್ಮ ಗುರುತಿನ ಚೀಟಿ ನೀಡಿದ ನಂತರ ಪಾದಯಾತ್ರೆಗೆ ಅವಕಾಶ ನೀಡುತ್ತೀರಾ ಎಂದು ಕೇಳಿದರೆ, ಅನುಮತಿ ಪತ್ರ ತೋರಿಸಬೇಕು ಎಂದು ಹೇಳಿದರು’ ಎಂದು ತಿಳಿಸಿದರು. ಇದೇ ವಿಚಾರವಾಗಿ ಪೊಲೀಸರು ಮತ್ತು ರೈತರ ಮಧ್ಯೆ ವಾಗ್ವಾದ ನಡೆಯಿತು. ಪ್ರತಿಭಟನಕಾರರನ್ನು ಚದುರಿಸಲು ಭದ್ರತಾ ಸಿಬ್ಬಂದಿ ಅಶ್ರುವಾಯು ಸಿಡಿಸಿದರು.


ರೈತರು, ಪಂಜಾಬ್–ಹರಿಯಾಣದ ಶಂಭು ಗಡಿಯಿಂದ ದೆಹಲಿಯತ್ತ ಭಾನುವಾರ ಮಧ್ಯಾಹ್ನ ಪುನಃ ಪಾದಯಾತ್ರೆಯನ್ನು ಆರಂಭಿಸಿದ್ದಾರೆ — ಪಿಟಿಐ ಚಿತ್ರ

ಅಶ್ರುವಾಯು ಪ್ರಯೋಗಿಸಿದ ನಂತರ ಕೆಲವು ರೈತರು ಹಿಂದಕ್ಕೆ ಸರಿದರು, ಮತ್ತೆ ಕೆಲವರು ಮುಖಕ್ಕೆ ಬಟ್ಟೆ ಮುಚ್ಚಿಕೊಂಡರು, ಮತ್ತೆ ಕೆಲವರು ರಕ್ಷಣಾತ್ಮಕ ಕನ್ನಡಕ ಧರಿಸಿದರು, ಇನ್ನೊಂದಿಷ್ಟು ಜನ ಒದ್ದೆಯಾದ ಸೆಣಬಿನ ಚೀಲ ಅಡ್ಡ ಹಿಡಿದು ರಕ್ಷಿಸಿಕೊಳ್ಳಲು ಯತ್ನಿಸಿದರು.

ಹರಿಯಾಣದ ಅಂಬಾಲಾ ಜಿಲ್ಲೆಯಲ್ಲಿ ಜಿಲ್ಲಾಡಳಿತವು ನಿಷೇಧಾಜ್ಞೆಯನ್ನು ಜಾರಿ ಮಾಡಿದೆ. ಹೀಗಾಗಿ ಪಾದಯಾತ್ರೆ, ಪ್ರತಿಭಟನೆ ನಡೆಸಬೇಡಿ ಎಂದು ಹರಿಯಾಣ ಪೊಲೀಸರು ರೈತರಿಗೆ ಹೇಳಿದ್ದರು. ಹರಿಯಾಣ ಸರ್ಕಾರವು ಅಂಬಾಲಾ ಜಿಲ್ಲೆಯ 11 ಗ್ರಾಮಗಳಲ್ಲಿ ಡಿಸೆಂಬರ್ 6ರಿಂದ 9ರವರೆಗೆ ಮೊಬೈಲ್ ಇಂಟರ್ ನೆಟ್ ಮತ್ತು ಎಸ್‌ಎಂಎಸ್ ಸೇವೆಯನ್ನು ಸ್ಥಗಿತ ಮಾಡಿದೆ.

300 ದಿನ ಪೂರ್ಣ: ಪ್ರತಿಭಟನೆ ಆರಂಭಿಸಿ ಭಾನುವಾರಕ್ಕೆ 300 ದಿನಗಳು ಪೂರ್ಣಗೊಂಡಿವೆ ಎಂದು ಪಂಜಾಬ್‌ನ ರೈತ ನಾಯಕ ಸರವಣ ಸಿಂಗ್ ಪಂಢೇರ್ ತಿಳಿಸಿದರು.

ಪ್ರತಿಭಟನಾ ಸ್ಥಳಕ್ಕೆ ಧಾವಿಸುತ್ತಿದ್ದ ಮಾಧ್ಯಮದವರನ್ನು ಪಂಜಾಬ್ ಪೊಲೀಸರು ತಡೆದಿದ್ದಾರೆ. ಪಂಜಾಬ್ ಪೊಲೀಸರಿಗೆ ಈ ಬಗ್ಗೆ ಹರಿಯಾಣ ಪೊಲೀಸರು ಸೂಚನೆ ನೀಡಿದ್ದರು ಎಂದು ಪಂಢೇರ್ ಅವರು ಆರೋಪಿಸಿದರು.

ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಸಂಯುಕ್ತ ಕಿಸಾನ್ ಮೋರ್ಚಾ (ರಾಜಕೀಯೇತರ) ಹಾಗೂ ಕಿಸಾನ್ ಮಜ್ದೂರ್ ಮೋರ್ಚಾ ಬ್ಯಾನರ್ ಅಡಿಯಲ್ಲಿ ರೈತರು, ಶಂಭು ಹಾಗೂ ಖನೌರಿ ಗಡಿಯಲ್ಲಿ ಕಳೆದ ಫೆಬ್ರುವರಿಯಿಂದ ಪ್ರತಿಭಟನೆ ನಡೆಸುತ್ತಿದ್ದಾರೆ.

ಪಾದಯಾತ್ರೆ ನಿಲ್ಲಿಸಿದ ರೈತರು

ಅಶ್ರುವಾಯು ಪ್ರಯೋಗದಿಂದ ಕೆಲವು ರೈತರು ಗಾಯಗೊಂಡ ನಂತರ ಪ್ರತಿಭಟನಕಾರರು ಪಾದಯಾತ್ರೆಯನ್ನು ನಿಲ್ಲಿಸಿದರು.

ದಾಳಿಯಲ್ಲಿ ಕನಿಷ್ಠ 8 ರೈತರು ಗಾಯಗೊಂಡಿದ್ದಾರೆ. ಒಬ್ಬರನ್ನು ಚಂಡೀಗಢದ ಆಸ್ಪತ್ರೆಗೆ ದಾಖಲಿಸಲಾಗಿದೆ. 101 ಮಂದಿ ರೈತರ ಗುಂಪನ್ನು ಪ್ರತಿಭಟನೆಯಿಂದ ವಾಪಸ್ ಕರೆದಿದ್ದೇವೆ ಎಂದು ಪಂಜಾಬ್ ರೈತ ನಾಯಕ ಸರವಣ ಸಿಂಗ್ ಪಢೇರ್ ತಿಳಿಸಿದರು. ಸಂಯುಕ್ತ ಕಿಸಾನ್ ಮೋರ್ಚಾ ಮತ್ತು ಕಿಸಾನ್ ಮಜ್ದೂರ್ ಮೋರ್ಚಾದ ಸಭೆ ಬಳಿಕ ಮುಂದಿನ ಹೆಜ್ಜೆ ಬಗ್ಗೆ ನಿರ್ಧರಿಸಲಾಗುವುದು ಎಂದು ಅವರು ಹೇಳಿದರು.

ರೈತರ ಮೇಲೆ ಹೂಮಳೆ

ಪಾದಯಾತ್ರೆ ಹೊರಟಿದ್ದ ರೈತರನ್ನು ತಡೆದ ನಂತರ ಹರಿಯಾಣದ ಭದ್ರತಾ ಸಿಬ್ಬಂದಿ, ಅವರಿಗೆ ಟೀ ಮತ್ತು ಬಿಸ್ಕತ್ ನೀಡಿದರು. ನಂತರ ಅವರ ಮೇಲೆ ಹೂವಿನ ಮಳೆಗರೆದರು.

ಆದರೆ ಪ್ರತಿಭಟನಕಾರರು ಇದನ್ನು ‘ನಾಟಕ’ ಎಂದು ಕರೆದರು. ಬಳಿಕ ಪೊಲೀಸರು ಅಶ್ರುವಾಯು ಮತ್ತು ಜಲಫಿರಂಗಿ ಪ್ರಯೋಗಿಸಿದರು.

> **ದೆಹಲಿಗೆ ಟ್ರ್ಯಾಕ್ಟರ್ ಮೂಲಕ ಹೋಗಲು ಕೇಂದ್ರ ಸಚಿವರು, ಬಿಜೆಪಿ ನಾಯಕರು ಆಕ್ಷೇಪ ವ್ಯಕ್ತಪಡಿಸಿದ್ದರು. ಆದರೆ ಪಾದಯಾತ್ರೆಗೆ ಅಡ್ಡಿ ಮಾಡುತ್ತಿರುವುದು ಏಕೆ?**
> **ತೇಜ್‌ವೀರ್ ಸಿಂಗ್**, ರೈತ ನಾಯಕ

ಸಂಕ್ಷಿಪ್ತ ಸುದ್ದಿ

ಕ್ರಿಯಾಯೋಜನೆ ಸಲ್ಲಿಸಲು ರಾಜ್ಯಗಳಿಗೆ ಸೂಚನೆ

ನವದೆಹಲಿ (ಪಿಟಿಐ): ಶಾಲೆಗೆ ಹೋಗುವ ಹೆಣ್ಣುಮಕ್ಕಳ ‘ಮುಟ್ಟಿನ ಅವಧಿಯ ನೈರ್ಮಲ್ಯ ಕುರಿತ ರಾಷ್ಟ್ರೀಯ ನೀತಿ’ಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ಕ್ರಿಯಾಯೋಜನೆ ಸಲ್ಲಿಸುವಂತೆ ರಾಜ್ಯ ಸರ್ಕಾರಗಳಿಗೆ ಕೇಂದ್ರ ಸರ್ಕಾರ ಸೂಚನೆ ನೀಡಿದೆ. ವಿದ್ಯಾರ್ಥಿನಿಯರಿಗೆ ಕಡಿಮೆ ವೆಚ್ಚದ ಶುಚಿತ್ವದ ವಸ್ತುಗಳು ಲಭ್ಯವಾಗುವಂತೆ ಮಾಡುವುದನ್ನು ಹಾಗೂ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಗುಣಮಟ್ಟದ ನೈರ್ಮಲ್ಯ ವ್ಯವಸ್ಥೆ ಇದೆ ಎನ್ನುವುದನ್ನು ಖಾತರಿಪಡಿಸುವಂತೆ ತಿಳಿಸಿದೆ.

ನೀತಿಯನ್ನು ಪರಿಣಾಮಕಾರಿಯಾಗಿ ಜಾರಿಗೆ ತರಲು ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳು ಸಮಗ್ರ ಕ್ರಿಯಾಯೋಜನೆ ರೂಪಿಸುವ ಅಗತ್ಯವಿದೆ ಎಂದು ನ.12ರಂದು ಸುಪ್ರೀಂ ಕೋರ್ಟ್ ಹೇಳಿತ್ತು. ಇದರ ಬೆನ್ನಲ್ಲೇ, ಕೇಂದ್ರ ಆರೋಗ್ಯ ಸಚಿವಾಲಯವು ಈ ಸಂಬಂಧ ಕ್ರಿಯಾಯೋಜನೆ ಸಲ್ಲಿಸುವಂತೆ ರಾಜ್ಯಗಳಿಗೆ ಪತ್ರ ಬರೆದಿದೆ.

‘ಶಾಲೆಗೆ ಹೋಗುವ ಹೆಣ್ಣುಮಕ್ಕಳ ಮುಟ್ಟಿನ ಅವಧಿಯ ನೈರ್ಮಲ್ಯ ಕುರಿತ ನೀತಿ’ಗೆ ಕೇಂದ್ರ ಆರೋಗ್ಯ ಸಚಿವಾಲಯವು ನ.2ರಂದು ಒಪ್ಪಿಗೆ ನೀಡಿರುವುದಾಗಿ ಕಳೆದ ತಿಂಗಳು ಸುಪ್ರೀಂ ಕೋರ್ಟ್‌ಗೆ ಮಾಹಿತಿ ನೀಡಿತ್ತು.

ಜಮ್ಮು–ಕಾಶ್ಮೀರ ಪೊಲೀಸ್ ಸಿಬ್ಬಂದಿ ಮೃತದೇಹಗಳು ಪತ್ತೆ

ಜಮ್ಮು (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಉಧಮ್‌ಪುರ ಜಿಲ್ಲೆಯಲ್ಲಿ ಇಬ್ಬರು ಪೊಲೀಸ್ ಸಿಬ್ಬಂದಿ ಗುಂಡೇಟಿನ ಗಾಯಗಳಿಂದ ಭಾನುವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ.

ಮೃತ ಸಿಬ್ಬಂದಿ ಉತ್ತರ ಕಾಶ್ಮೀರದ ಸೋಪೋರದಿಂದ ತಲವಾರದತ್ತ ತರಬೇತಿ ಕೇಂದ್ರಕ್ಕೆ ಇಲಾಖೆ ವಾಹನದಲ್ಲಿ ತೆರಳುತ್ತಿದ್ದರು ಎಂದು ಅಧಿಕಾರಿಗಳು ತಿಳಿಸಿದರು.

ಉಧಮ್‌ಪುರದ ಕಾಳಿ ಮಠ ದೇಗುಲದ ಸಮೀಪ ನಿಲ್ಲಿಸಿದ್ದ ಪೊಲೀಸ್ ವ್ಯಾನ್ ಒಳಗೆ ಗುಂಡೇಟಿನಿಂದ ಜರ್ಜರಿತವಾದ ಮೃತದೇಹಗಳು ಪತ್ತೆಯಾಗಿವೆ ಎಂದು ಹೇಳಿದರು.

ಮೃತರಲ್ಲಿ ಒಬ್ಬರು ಸಹೋದ್ಯೋಗಿಯನ್ನು ಕೊಂದು ಬಳಿಕ ಆತ್ಮಹತ್ಯೆ ಮಾಡಿಕೊಂಡಿರಬಹುದು ಎಂದು ಪ್ರಾಥಮಿಕ ತನಿಖೆ ವೇಳೆ ಗೊತ್ತಾಗಿದೆ. ಹಿರಿಯ ಪೊಲೀಸ್ ಅಧಿಕಾರಿಗಳು ಸ್ಥಳಕ್ಕೆ ಧಾವಿಸಿದ್ದು, ತನಿಖೆ ನಡೆಸುತ್ತಿದ್ದಾರೆ ಎಂದು ಪೊಲೀಸ್ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಅಸ್ಸಾಂನಲ್ಲಿ ಬಾಂಗ್ಲಾದೇಶಿ ಪ್ರಜೆ ಬಂಧನ

ಗುವಾಹಟಿ (ಪಿಟಿಐ): ಇಲ್ಲಿನ ಶ್ರೀಭೂಮಿ ಜಿಲ್ಲೆಯಲ್ಲಿ ಬಾಂಗ್ಲಾದೇಶದ ಪ್ರಜೆ ಅಲಿ ಬಹಾರ್ ಎಂಬುವವರನ್ನು ಭಾನುವಾರ ಬಂಧಿಸಿದ್ದು, ನಂತರ ಅವರ ದೇಶಕ್ಕೆ ಕಳುಹಿಸಿಕೊಡಲಾಗಿದೆ ಎಂದು ಅಸ್ಸಾಂ ಮುಖ್ಯಮಂತ್ರಿ ಹಿಮಂತ್ ಬಿಸ್ವಾ ಶರ್ಮಾ ‘ಎಕ್ಸ್’ನಲ್ಲಿ ತಿಳಿಸಿದ್ದಾರೆ.

ವ್ಯಕ್ತಿಯು ಯಾವ ಭಾಗದಲ್ಲಿ ಭಾರತದ ಒಳಗೆ ನುಸುಳಲು ಯತ್ನಿಸಿದ್ದರು ಎಂಬ ಮಾಹಿತಿ ನೀಡಲು ಅವರು ನಿರಾಕರಿಸಿದರು.

ಅಸ್ಸಾಂನ ಶ್ರೀಭೂಮಿ, ಕಛಾರ್, ಧುಬ್ರಿ ಹಾಗೂ ದಕ್ಷಿಣ ಶಾಲ್‌ಮಾರಾ–ಮಾನ್‌ಕಾಚರ್ ಜಿಲ್ಲೆಗಳು ಬಾಂಗ್ಲಾದೇಶದೊಂದಿಗೆ 267.5 ಕಿ.ಮೀ ಉದ್ದದ ಅಂತರರಾಷ್ಟ್ರೀಯ ಗಡಿ ಹಂಚಿಕೊಂಡಿವೆ.

ಮರಕಡವಾಡಿ ಗ್ರಾಮಕ್ಕೆ ಶರದ್ ಭೇಟಿ

ಮತಪತ್ರ ಬಳಸಿ ಮರು ಚುನಾವಣೆಗೆ ಬೆಂಬಲ

ಸೋಲಾಪುರ (ಪಿಟಿಐ): ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್ ಅವರು ಮಹಾರಾಷ್ಟ್ರದ ಸೋಲಾಪುರದ ಮರಕಡವಾಡಿ ಗ್ರಾಮಕ್ಕೆ ಭಾನುವಾರ ಭೇಟಿ ನೀಡಿ, ಮತಪತ್ರ ಬಳಸಿ ಮರು ಚುನಾವಣೆ ನಡೆಸಲು ಯೋಜಿಸಿದ್ದ ಗ್ರಾಮಸ್ಥರಿಗೆ ಬೆಂಬಲ ಸೂಚಿಸಿದರು.


ಮತಪತ್ರದ ಮೂಲಕ ಅನಧಿಕೃತವಾಗಿ ಮರು ಚುನಾವಣೆ ನಡೆಸಲು ಯತ್ನಿಸಿದ ಆರೋಪದ ಮೇಲೆ ಗ್ರಾಮದ 200ಕ್ಕೂ ಹೆಚ್ಚು ಜನರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

‘ಇವಿಎಂ ಬಗ್ಗೆ ಕೆಲವು ದತ್ತಾಂಶ ಸಂಗ್ರಹಿಸಿದ್ದೇವೆ. ಜನರು ಮತ ಚಲಾಯಿಸುತ್ತಾರೆ. ಆದರೆ, ಫಲಿತಾಂಶವು ಅನಿರೀಕ್ಷಿತವಾಗಿರುತ್ತದೆ. ಈ ವಿಷಯದ ಬಗ್ಗೆ ನೀವು ಅರಿವು ಮೂಡಿಸಿದ್ದೀರಿ’ ಎಂದರು.

‘ಗ್ರಾಮಸ್ಥರ ಮೇಲೆ ದಾಖಲಾಗಿರುವ ದೂರುಗಳ ಪ್ರತಿಯನ್ನು ಕೊಡಿ. ಮುಖ್ಯಮಂತ್ರಿ, ಚುನಾವಣಾ ಆಯೋಗ, ರಾಜ್ಯದ ಮುಖ್ಯ ಚುನಾವಣಾ ಆಯುಕ್ತರು ಮತ್ತು ಪ್ರಧಾನಿ ಬಳಿ ವಿಷಯ ಪ್ರಸ್ತಾಪ ಮಾಡುತ್ತೇನೆ’ ಎಂದು ಹೇಳಿದರು.

ಪವಾರ್ ಅವರ ಅಭಿಪ್ರಾಯಕ್ಕೆ ಪ್ರತಿಕ್ರಿಯಿಸಿರುವ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಚಂದ್ರಶೇಖರ್ ಬಾವಂಕುಲೆ, ‘ಹಿರಿಯ ನಾಯಕ ಪವಾರ್ ಅವರು ಜನರನ್ನು ದಿಕ್ಕು ತಪ್ಪಿಸುವ ಬದಲು ಜನಾದೇಶವನ್ನು ಗೌರವಿಸಬೇಕು’ ಎಂದರು.

ಮಮತಾ ಮಾತಿಗೆ ಶರದ್ ಬೆಂಬಲ



ವಿರೋಧ ಪಕ್ಷಗಳ ‘ಇಂಡಿಯಾ’ ಮೈತ್ರಿಕೂಟದ ನಾಯಕತ್ವವನ್ನು ವಹಿಸಿಕೊಳ್ಳಲು ತಾವು ಸಿದ್ಧವಿರುವುದಾಗಿ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಹೇಳಿರುವುದನ್ನು ಎನ್‌ಸಿಪಿ (ಎಸ್‌ಪಿ) ಮುಖ್ಯಸ್ಥ ಶರದ್ ಪವಾರ್ ಬೆಂಬಲಿಸಿದ್ದಾರೆ.

ಕೊಲ್ಹಾಪುರದಲ್ಲಿ ಸುದ್ದಿಗಾರರ ಜೊತೆ ಮಾತನಾಡಿದ ಪವಾರ್ ಅವರು, ‘ಟಿಎಂಸಿ ನಾಯಕಿಯು ಸಾಮರ್ಥ್ಯ ಹೊಂದಿದ್ದಾರೆ, ವಿರೋಧ ಪಕ್ಷಗಳ ಮೈತ್ರಿಕೂಟವನ್ನು ಮುನ್ನಡೆಸುವ ತಮ್ಮ ಬಯಕೆಯನ್ನು ವ್ಯಕ್ತಪಡಿಸುವ ಹಕ್ಕು ಅವರಿಗೆ ಇದೆ’ ಎಂದು ಹೇಳಿದ್ದಾರೆ. ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಸ್ಥಾನದಲ್ಲಿ ಇದ್ದುಕೊಂಡೇ, ವಿರೋಧ ಪಕ್ಷಗಳ ಮೈತ್ರಿಕೂಟದ ನಾಯಕಿ ಸ್ಥಾನವನ್ನು ನಿಭಾಯಿಸುವ ಸಾಮರ್ಥ್ಯ ತಮಗೆ ಇದೆ ಎಂದು ಮಮತಾ ಅವರು ಕಳೆದ ವಾರ ಹೇಳಿದ್ದರು.

ಮಹಾರಾಷ್ಟ್ರ ಉಪ ಮುಖ್ಯಮಂತ್ರಿ ಏಕನಾಥ ಶಿಂದೆ ಮನವಿ

‘ಜನರ ದಿಕ್ಕುತಪ್ಪಿಸುವ ಕೆಲಸ ನಿಲ್ಲಿಸಿ’

ಮುಂಬೈ (ಪಿಟಿಐ): ಮಹಾರಾಷ್ಟ್ರದಲ್ಲಿ ವಿರೋಧ ಪಕ್ಷಗಳು ಎಲೆಕ್ಟ್ರಾನಿಕ್ ಮತಯಂತ್ರಗಳ (ಇವಿಎಂ) ವಿಚಾರದಲ್ಲಿ ಜನರ ದಾರಿತಪ್ಪಿಸುವ ಕೆಲಸ ಮಾಡುತ್ತಿವೆ ಎಂದು ಉಪ ಮುಖ್ಯಮಂತ್ರಿ ಏಕನಾಥ ಶಿಂದೆ ಆರೋಪಿಸಿದರು. ಅಲ್ಲದೆ, ವಿರೋಧ ಪಕ್ಷಗಳು ಜನರ ತೀರ್ಪನ್ನು ಒಪ್ಪಿಕೊಳ್ಳುತ್ತಿಲ್ಲ ಎಂದು ದೂರಿದರು.


ಏಕನಾಥ ಶಿಂದೆ

‘ಮಹಾಯುತಿ ಮೈತ್ರಿಕೂಟ’ವು ತಾನು ಮಾಡಿದ ಕೆಲಸಗಳ ಕಾರಣದಿಂದಾಗಿ ವಿಧಾನಸಭಾ ಚುನಾವಣೆಯಲ್ಲಿ ಜಯ ಸಾಧಿಸಿದೆ. ಜನಾದೇಶವನ್ನು ‘ಮಹಾ ವಿಕಾಸ ಆಘಾಡಿ’ ಮೈತ್ರಿಕೂಟವು ಒಪ್ಪಿಕೊಳ್ಳಬೇಕು, ಅಭಿವೃದ್ಧಿ ಕಾರ್ಯಗಳಲ್ಲಿ ಸರ್ಕಾರವನ್ನು ಬೆಂಬಲಿಸಬೇಕು ಎಂದು ಸುದ್ದಿಗಾರರ ಜೊತೆ ಮಾತನಾಡಿದ ಶಿಂದೆ ಹೇಳಿದರು.

ಇವಿಎಂಗಳಲ್ಲಿ ಆಗಿರುವ ಅಕ್ರಮದ ಕಾರಣದಿಂದಾಗಿ ತಮಗೆ ಸೋಲಾಗಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿವೆ. ಚುನಾವಣೆಗಳಲ್ಲಿ ಮತ್ತೆ ಮತಪತ್ರಗಳ ಬಳಕೆ ಆರಂಭಿಸಬೇಕು ಎಂದು ಅವು ಒತ್ತಾಯಿಸಿವೆ.

‘ನೀವು ಜಯ ಸಾಧಿಸಿದಾಗ ಇವಿಎಂ ಹಗರಣ ಆಗಿರುವುದಿಲ್ಲ. ಆದರೆ ನೀವು ಚುನಾವಣೆಯಲ್ಲಿ ಸೋತಾಗ ಮತಯಂತ್ರಗಳು ಕೆಟ್ಟದ್ದಾಗಿ ಕಾಣುತ್ತವೆ. ಇದು ಸರಿಯಾದ ನಡೆ ಅಲ್ಲ’ ಎಂದು ಶಿಂದೆ ಅವರು ವಿರೋಧ ಪಕ್ಷಗಳನ್ನು ಗುರಿಯಾಗಿಸಿಕೊಂಡು ಹರಿಹಾಯ್ದರು.

ವಿರೋಧ ಪಕ್ಷಗಳ ಸ್ಥಾನ ಯಾವುದು ಎಂಬುದನ್ನು ಜನರು ತೋರಿಸಿಕೊಟ್ಟಿದ್ದಾರೆ, ಮನೆಯಲ್ಲಿಯೇ ಕುಳಿತಿರುವವರಿಗೆ ತಾವು ಮತ ನೀಡುವುದಿಲ್ಲ ಎಂಬುದನ್ನು ಸಾಬೀತು ಮಾಡಿದ್ದಾರೆ ಎಂದು ಹೇಳಿದರು.

‘ಲೋಕಸಭಾ ಚುನಾವಣೆಯಲ್ಲಿ ಮಹಾಯುತಿ ಮೈತ್ರಿಕೂಟಕ್ಕೆ 2.48 ಕೋಟಿ ಮತಗಳು ದೊರೆತವು. ಇವು ಶೇ 43.55ರಷ್ಟು ಮತಗಳು. ಎಂವಿಎ ಅಭ್ಯರ್ಥಿಗಳು ಒಟ್ಟು 2.5 ಕೋಟಿ ಮತಗಳನ್ನು ಪಡೆದರು. ಇವು ಶೇ 43.71ರಷ್ಟು ಮತಗಳು. ಹೀಗಿದ್ದರೂ ವಿರೋಧ ಪಕ್ಷಗಳು 31 ಸ್ಥಾನ ಪಡೆದವು, ಮಹಾಯುತಿ ಮೈತ್ರಿಕೂಟ 17 ಸ್ಥಾನ ಪಡೆಯಿತು. ಆಗ ಇವಿಎಂಗಳಲ್ಲಿ ಅಕ್ರಮ ನಡೆದಿತ್ತು ಎಂದು ನಾವು ಹೇಳಬೇಕೇ’ ಎಂದು ಶಿಂದೆ ಪ್ರಶ್ನಿಸಿದರು.

ನಾರ್ವೇಕರ ನೂತನ ಸ್ಪೀಕರ್?

ಮಹಾರಾಷ್ಟ್ರ ವಿಧಾನಸಭೆಯ ಸ್ಪೀಕರ್ ಆಗಿ ಬಿಜೆಪಿಯ ರಾಹುಲ್ ನಾರ್ವೇಕರ ಅವರು ಅವಿರೋಧವಾಗಿ ಆಯ್ಕೆಯಾಗುವ ಸಾಧ್ಯತೆ ಇದೆ. ಸ್ಪೀಕರ್ ಹುದ್ದೆಗೆ ತನ್ನ ಕಡೆಯಿಂದ ಯಾರನ್ನೂ ಕಣಕ್ಕೆ ಇಳಿಸದೆ ಇರಲು ಎಂವಿಎ ಮೈತ್ರಿಕೂಟ ತೀರ್ಮಾನಿಸಿದೆ.

ಸ್ಪೀಕರ್ ಹುದ್ದೆಗೆ ನಾರ್ವೇಕರ ಅವರು ಭಾನುವಾರ ನಾಮಪತ್ರ ಸಲ್ಲಿಸಿದ್ದಾರೆ. ಭಾನುವಾರ ನಡೆದ ವಿಧಾನಸಭೆಯ ವಿಶೇಷ ಅಧಿವೇಶನದಲ್ಲಿ ಒಟ್ಟು 105 ಮಂದಿ ಶಾಸಕರು ಪ್ರಮಾಣ ವಚನ ಸ್ವೀಕರಿಸಿದ್ದಾರೆ.

‘ರಾಜ್ ಠಾಕ್ರೆ ಅಪ್ರಸ್ತುತ’: ಮಹಾರಾಷ್ಟ್ರ ನವನಿರ್ಮಾಣ ಸೇನಾ (ಎಂಎನ್‌ಎಸ್) ಮುಖ್ಯಸ್ಥ ರಾಜ್ ಠಾಕ್ರೆ ಅವರು ಅಪ್ರಸ್ತುತರಾಗಿದ್ದಾರೆ, ಮಹಾಯುತಿ ಮೈತ್ರಿಕೂಟಕ್ಕೆ ಅವರ ಅಗತ್ಯ ಇಲ್ಲ ಎಂದು ಕೇಂದ್ರ ಸಚಿವ ರಾಮದಾಸ್ ಆಠವಲೆ ಹೇಳಿದ್ದಾರೆ. ಮಹಾರಾಷ್ಟ್ರ ವಿಧಾನಸಭಾ ಚುನಾವಣೆಯಲ್ಲಿ ಎಂಎನ್‌ಎಸ್ ಒಂದೂ ಸ್ಥಾನ ಗೆದ್ದಿಲ್ಲ.

ಉಪ ಸ್ಪೀಕರ್ ಹುದ್ದೆಗೆ ಕೋರಿಕೆ

ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರನ್ನು ಭಾನುವಾರ ಭೇಟಿ ಮಾಡಿದ ಮಹಾ ವಿಕಾಸ ಆಘಾಡಿ ಮೈತ್ರಿಕೂಟದ (ಎಂವಿಎ) ನಾಯಕರು, ವಿಧಾನಸಭೆಯ ಉಪ ಸ್ಪೀಕರ್ ಹುದ್ದೆಯನ್ನು ಎಂವಿಎ ಪಕ್ಷಗಳಿಗೆ ಬಿಟ್ಟುಕೊಡಬೇಕು ಎಂದು ಮನವಿ ಮಾಡಿದರು.

ಸಂಪ್ರದಾಯದಂತೆ ಉಪ ಸ್ಪೀಕರ್ ಹುದ್ದೆಯನ್ನು ವಿರೋಧ ಪಕ್ಷಗಳಿಗೆ ಬಿಟ್ಟುಕೊಟ್ಟರೆ, ಸ್ಪೀಕರ್ ಆಯ್ಕೆಯನ್ನು ಅವಿರೋಧವಾಗಿ ನಡೆಸಲು ಅವಕಾಶ ಮಾಡಿಕೊಡಲಾಗುತ್ತದೆ ಎಂದು ಎಂವಿಎ ನಾಯಕರು ಫಡಣವೀಸ್ ಅವರಿಗೆ ತಿಳಿಸಿದರು.

ಶೌಚಾಲಯದ ಪೈಪ್‌ನಲ್ಲಿ ಭ್ರೂಣ ಪತ್ತೆ

ಗಾಜಿಯಾಬಾದ್ (ಪಿಟಿಐ): ಮನೆಯೊಂದರ ಶೌಚಾಲಯದ ಪೈಪ್‌ನಲ್ಲಿ ಆರು ತಿಂಗಳ ಭ್ರೂಣವು ಪತ್ತೆಯಾಗಿದೆ.

‘ನೀರಿನ ಒತ್ತಡದಿಂದಾಗಿ ಪೈಪ್ ಒಡೆದಾಗ ಅದರಲ್ಲಿ 6 ತಿಂಗಳ ಭ್ರೂಣವು ಪತ್ತೆಯಾಯಿತು’ ಎಂದು ಮನೆಯ ಮಾಲೀಕ ದೇವೇಂದ್ರ ಪೊಲೀಸರಿಗೆ ತಿಳಿಸಿದ್ದಾರೆ.

ಸ್ಥಳದಲ್ಲಿ ದೇವೇಂದ್ರ ಅವರು ಒಟ್ಟು 9 ಜನರಿಗೆ ಮನೆಗಳನ್ನು ಬಾಡಿಗೆ ನೀಡಿದ್ದಾರೆ. ಭ್ರೂಣವನ್ನು ಶೌಚಾಲಯದಲ್ಲಿ ಎಸೆದಿರುವುದು ಯಾರು ಎಂಬುದು ತಿಳಿದುಬಂದಿಲ್ಲ ಎಂದು ಪೊಲೀಸರು ತಿಳಿಸಿದ್ದಾರೆ.

‘ಭ್ರೂಣವನ್ನು ಸಂರಕ್ಷಿಸಿದ್ದೇವೆ. ಸ್ಥಳದಲ್ಲಿ ವಾಸಿಸುವ ಎಲ್ಲರನ್ನೂ ವಿಚಾರಣೆಗೊಳಪಡಿಸಲಾಗಿದ್ದು, ಬಾಡಿಗೆದಾರರು ಹಾಗೂ ಭ್ರೂಣದ ಡಿಎನ್‌ಎ ಪರೀಕ್ಷೆ ನಡೆಸುವಮೂಲಕಅಪರಾಧಿಗಳನ್ನುಪತ್ತೆಹಚ್ಚಲಾಗುವುದು’ ಎಂದು ಪೊಲೀಸರು ತಿಳಿಸಿದ್ದಾರೆ.

ಸಂಭಲ್ ಹಿಂಸಾಚಾರ: ಇಬ್ಬರ ಬಂಧನ



ಸಂಭಲ್ (ಉತ್ತರ ಪ್ರದೇಶ) (ಪಿಟಿಐ): ಉತ್ತರ ಪ್ರದೇಶದ ಸಂಭಲ್‌ನಲ್ಲಿ ನಡೆದ ಹಿಂಸಾಚಾರ ಪ್ರಕರಣಕ್ಕೆ ಸಂಬಂಧಿಸಿದಂತೆ ಭಾನುವಾರ ಇಬ್ಬರನ್ನು ಬಂಧಿಸಲಾಗಿದೆ. ‘ನವೆಂಬರ್ 24ರಂದು ಪಕ್ಕಾ ಬಾಗ್ ಎಂಬಲ್ಲಿ ಹಿಂಸಾಚಾರ ನಡೆದಿತ್ತು. ಈ ಘಟನೆಗೆ ಸಂಬಂಧಿಸಿದಂತೆ ಸಿ.ಸಿ.ಟಿ.ವಿ ಕ್ಯಾಮರಾ ದೃಶ್ಯಾವಳಿಗಳನ್ನು ಆಧರಿಸಿ ಅನಾಸ್ ಮತ್ತು ಮೊಹಮ್ಮದ್ ಸೂಫಿಯಾನ್ ಎಂಬ ಇಬ್ಬರನ್ನೂ ಬಂಧಿಸಲಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಇಂಡಿಯಾ’ ಸದಸ್ಯರಿಂದ ಇಂದು ಪ್ರತಿಭಟನೆ

ಇಂಫಾಲ್ (ಪಿಟಿಐ): ‘ಇಂಡಿಯಾ’ ಮೈತ್ರಿಕೂಟದ ಭಾಗವಾಗಿರುವ ಮಣಿಪುರದ ವಿವಿಧ ಪಕ್ಷಗಳು ಕೇಂದ್ರ ಸರ್ಕಾರ ಹಾಗೂ ಮಣಿಪುರ ರಾಜ್ಯ ಸರ್ಕಾರದ ವಿರುದ್ಧ ದೆಹಲಿಯ ಜಂತರ್ ಮಂತರ್‌ನಲ್ಲಿ ಸೋಮವಾರ ಪ್ರತಿಭಟನೆ ನಡೆಸಲಿವೆ ಎಂದು ಕಾಂಗ್ರೆಸ್ ಭಾನುವಾರ ಹೇಳಿದೆ.

ಪ್ರತಿಭಟನೆಗೆ ಅನುಮತಿ ಸಿಗಲಿ, ಸಿಗದೆ ಇರಲಿ, ‘ಇಂಡಿಯಾ’ ಮೈತ್ರಿಕೂಟದ ನಾಯಕರು ಪ್ರತಿಭಟನೆ ನಡೆಸುವುದು ಖಂಡಿತ ಎಂದು ಮಣಿಪುರ ರಾಜ್ಯದ ಕಾಂಗ್ರೆಸ್ ಮುಖ್ಯ ವಕ್ತಾರ ಹರೇಶ್ವರ ಗೋಸ್ವಾಮಿ ಸುದ್ದಿಗಾರರಿಗೆ ತಿಳಿಸಿದರು.

ಮಣಿಪುರದ ಕಾಂಗ್ರೆಸ್ ಅಧ್ಯಕ್ಷ ಕೈಶಾಂ ಮೇಘಚಂದ್ರ ಅವರು ಪ್ರತಿಭಟನೆಗೆ ಅಗತ್ಯವಿರುವ ಎಲ್ಲ ಸಿದ್ಧತೆಗಳನ್ನು ನವೆಂಬರ್ 25ರಿಂದಲೇ ದೆಹಲಿಯಲ್ಲಿ ಮಾಡುತ್ತಿದ್ದಾರೆ ಎಂದು ಗೋಸ್ವಾಮಿ ಹೇಳಿದರು. ಸಿಪಿಎಂ, ಟಿಎಂಸಿ, ಎಎಪಿ ನಾಯಕರು ಪ್ರತಭಟನೆಯಲ್ಲಿ ಭಾಗಿಯಾಗಲಿದ್ದಾರೆ.

ಕಸ್ಟಡಿಯಲ್ಲಿದ್ದ ಮಾಂತ್ರಿಕ ಸಾವು

ಅಹಮದಾಬಾದ್ (ಪಿಟಿಐ): ಉದ್ಯಮಿಯೊಬ್ಬರ ಹತ್ಯೆಗೆ ಸಂಚು ರೂಪಿಸಿದ ಆರೋಪದ ಅಡಿ ಬಂಧಿಸಲಾಗಿದ್ದ 42 ವರ್ಷ ವಯಸ್ಸಿನ ಮಾಂತ್ರಿಕರೊಬ್ಬರು ಗುಜರಾತ್ ಪೊಲೀಸರ ವಶದಲ್ಲಿದ್ದಾಗ ಮೃತಪಟ್ಟಿದ್ದಾರೆ. ಆರೋಪಿಯು ರಾಸಾಯನಿಕ ಮಿಶ್ರಿತ ಪಾನೀಯ ನೀಡಿ 12 ವ್ಯಕ್ತಿಗಳನ್ನು ಕೊಂದಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಡಿಸೆಂಬರ್ 3ರ ಬೆಳಿಗ್ಗೆ 1 ಗಂಟೆ ಸುಮಾರಿಗೆ ಉದ್ಯಮಿಯೊಬ್ಬರನ್ನು ಹಣ ದ್ವಿಗುಣಗೊಳಿಸುವುದಾಗಿ ನಂಬಿಸಿ, ತಮ್ಮ ಬಳಿಗೆ ಹಣದ ಸಮೇತ ಕರೆಸಿಕೊಂಡು ಅವರ ಹತ್ಯೆಗೆ ಮಾಂತ್ರಿಕ ಸಂಚು ರೂಪಿಸುತ್ತಿದ್ದರು. ಈ ಕುರಿತು ಅವರ ಟ್ಯಾಕ್ಸಿ ಚಾಲಕನೇ ನೀಡಿದ ಸುಳಿವು ಆಧರಿಸಿ ಸರ್‌ಕೆಜ್ ಪೊಲೀಸರು ಬಂಧಿಸಿದ್ದರು. ಹೆಚ್ಚಿನ ವಿಚಾರಣೆಗೆ ಒಳಪಡಿಸಲು ಡಿಸೆಂಬರ್ 10ರ 3 ಗಂಟೆಯವರೆಗೆ ಪೊಲೀಸರ ವಶಕ್ಕೆ ನೀಡಲಾಗಿತ್ತು ಎಂದು ಅಧಿಕಾರಿಯೊಬ್ಬರು ತಿಳಿಸಿದರು.

‘ಭಾನುವಾರ ಬೆಳಿಗ್ಗೆ 10 ಗಂಟೆ ಸುಮಾರಿಗೆ ಮಾಂತ್ರಿಕ ನವಲ್‌ಸಿಂಗ್ ಚಾವ್ಡಾ ಅವರು ಠಾಣೆಯಲ್ಲಿ ಅನಾರೋಗ್ಯದಿಂದ ಕುಸಿದುಬಿದ್ದರು, ತಕ್ಷಣವೇ ಸರ್ಕಾರಿ ಆಸ್ಪತ್ರೆಗೆ ಕರೆದೊಯ್ಯಲಾಯಿತು. ತಪಾಸಣೆ ನಡೆಸಿದ ವೈದ್ಯರು ಆಸ್ಪತ್ರೆಗೆ ಕರೆತರುವ ಮಾರ್ಗದಲ್ಲಿಯೇ ಚಾವ್ಡಾ ಮೃತಪಟ್ಟಿದ್ದಾರೆ ಎಂದು ತಿಳಿಸಿದರು. ಸಾವಿಗೂ ಮುನ್ನ ಅವರನ್ನು ವಿಚಾರಣೆ ನಡೆಸಿದ್ದ ವೇಳೆ 12 ಮಂದಿಯನ್ನು ಕೊಲೆ ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದರು’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಸುರೇಂದ್ರ ನಗರ ಜಿಲ್ಲೆಯ ವದಾವಾನ್‌ನಲ್ಲಿ ಆಶ್ರಮ ಹೊಂದಿದ್ದ ನವಲ್‌ಸಿಂಗ್ ತನ್ನನ್ನು ‘ಮಾಂತ್ರಿಕ’ ಎಂದು ಕರೆಸಿಕೊಂಡಿದ್ದರು. ಮಂತ್ರ ಹಾಗೂ ತಂತ್ರ ವಿದ್ಯೆ ಕಲಿತಿರುವುದಾಗಿ ತಿಳಿಸಿ, ಹಣ ದ್ವಿಗುಣ, ಶತ್ರುನಾಶ ಶಕ್ತಿ ಹೊಂದಿರುವುದಾಗಿ ನಂಬಿಸಿದ್ದರು. ಅತೀಂದ್ರಿಯ ಆಚರಣೆ ವೇಳೆ ಸಂತ್ರಸ್ತರಿಗೆ ನೀರಿನಲ್ಲಿ ಕರಗಿದ ‘ಸೋಡಿಯಂ ನೈಟ್ರೇಟ್’ ಕುಡಿಯುವಂತೆ ತಿಳಿಸುತ್ತಿದ್ದರು. ಇದನ್ನು ಕುಡಿದ 10ರಿಂದ 15 ನಿಮಿಷದಲ್ಲಿ ಅವರು ಹೃದಯಾಘಾತಕ್ಕೆ ಒಳಗಾಗಿ ಕೊನೆಯುಸಿರೆಳೆಯುತ್ತಿದ್ದರು. ಈ ರೀತಿ 12 ಮಂದಿಯನ್ನು ಕೊಂದಿರುವುದಾಗಿ ಚಾವ್ಡಾ ತಪ್ಪೊಪ್ಪಿಕೊಂಡಿದ್ದರು’ ಎಂದು ಉಪ ಪೊಲೀಸ್ ಆಯುಕ್ತ (ಡಿಸಿಪಿ) ಶಿವಂ ವರ್ಮಾ ತಿಳಿಸಿದರು.

ಗುರುದ್ವಾರದಲ್ಲಿ ಬಾದಲ್ ‘ಸೇವೆ’

ಚಂಡೀಗಢ (ಪಿಟಿಐ): ಶಿರೋಮಣಿ ಅಕಾಲಿ ದಳದ (ಎಸ್‌ಎಡಿ) ನಾಯಕ, ಸುಖ್‌ಬೀರ್ ಸಿಂಗ್ ಬಾದಲ್ ಅವರು ಧಾರ್ಮಿಕ ಶಿಕ್ಷೆಯ ಆರನೇ ದಿನ ಫತೇಗಢ ಸಾಹಿಬ್‌ನಲ್ಲಿರುವ ಗುರುದ್ವಾರದಲ್ಲಿ ಭಾನುವಾರ ‘ಸೇವಾದಾರ’ನಾಗಿ ಕೆಲಸ ಮಾಡಿದರು.

ಗಾಲಿ ಕುರ್ಚಿಯನ್ನು ಆಶ್ರಯಿಸಿರುವ ಅವರು ‘ಕೀರ್ತನೆ’ಗಳನ್ನು ಆಲಿಸಿದರಲ್ಲದೆ, ಗುರುದ್ವಾರದ ಹೊರಭಾಗದಲ್ಲಿ ಪಾತ್ರೆ ತೊಳೆಯುವ ಕೆಲಸವನ್ನೂ ನಿರ್ವಹಿಸಿದರು.

‘ಸೇವಾದಾರ’ರು ಧರಿಸುವ ನೀಲಿ ಬಣ್ಣದ ಸಮವಸ್ತ್ರ ತೊಟ್ಟಿದ್ದ ಅವರು ಬೆಳಿಗ್ಗೆ 9 ಗಂಟೆಗೆ ಗುರುದ್ವಾರಕ್ಕೆ ಬಂದರು. ಬಾದಲ್ ಅವರಿಗೆ ಝಡ್ ಪ್ಲಸ್ ದರ್ಜೆಯ ಭದ್ರತೆ ನೀಡಲಾಗಿದ್ದು, ಗುರುದ್ವಾರಕ್ಕೆ ಪೊಲೀಸರ ಬಿಗಿ ಬಂದೋಬಸ್ತ್ ಏರ್ಪಡಿಸಲಾಗಿತ್ತು.

ಪಂಜಾಬ್‌ನಲ್ಲಿ 2007ರಿಂದ 2017ರವರೆಗೆ ಎಸ್‌ಎಡಿ ಪಕ್ಷದ ಅಧಿಕಾರ ಅವಧಿಯಲ್ಲಿ ಆಗಿರುವ ‘ತಪ್ಪುಗಳಿಗೆ’ ಪ್ರಾಯಶ್ಚಿತ್ತವಾಗಿ 62 ವರ್ಷದ ಬಾದಲ್, ಧಾರ್ಮಿಕ ಶಿಕ್ಷೆಗೆ ಗುರಿಯಾಗಿದ್ದಾರೆ.

ಅಮೃತಸರದ ಸ್ವರ್ಣಮಂದಿರ ಅಲ್ಲದೆ, ಇತರ ನಾಲ್ಕು ಗುರುದ್ವಾರಗಳಲ್ಲಿ ತಲಾ ಎರಡು ದಿನ ‘ಸೇವಾದಾರ’ ಆಗಿ ಕೆಲಸ ಮಾಡುವ ಶಿಕ್ಷೆ ಅವರಿಗೆ ವಿಧಿಸಲಾಗಿದೆ.



ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ವಿರುದ್ಧ ಬಿಜೆಪಿ ಆರೋಪ

‘ಸೋರೊಸ್’ ಜೊತೆ ಸೋನಿಯಾ ನಂಟು

ನವದೆಹಲಿ (ಪಿಟಿಐ): ಜಾರ್ಜ್ ಸೋರೊಸ್ ಪ್ರತಿಷ್ಠಾನದಿಂದ ಹಣದ ನೆರವು ಪಡೆಯುವ ಹಾಗೂ ಕಾಶ್ಮೀರವನ್ನು ಪ್ರತ್ಯೇಕ ರಾಷ್ಟ್ರವೆಂದು ಪರಿಗಣಿಸುವ ಆಲೋಚನೆಯನ್ನು ಬೆಂಬಲಿಸುವ ಸಂಸ್ಥೆಯೊಂದರ ಜೊತೆ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷೆ ಸೋನಿಯಾ ಗಾಂಧಿ ಅವರಿಗೆ ನಂಟು ಇದೆ ಎಂದು ಬಿಜೆಪಿ ಭಾನುವಾರ ಆರೋಪಿಸಿದೆ.

ಭಾರತದ ಆಂತರಿಕ ವ್ಯವಹಾರಗಳಲ್ಲಿ ವಿದೇಶಿ ಸಂಸ್ಥೆಗಳು ಹೊಂದಿರುವ ಪ್ರಭಾವವನ್ನು ಈ ನಂಟು ತೋರಿಸುತ್ತಿದೆ ಎಂದು ‘ಎಕ್ಸ್’ ಮೂಲಕ ಬಿಜೆಪಿ ಹೇಳಿದೆ.

ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಈ ವಿಚಾರವಾಗಿ 10 ಪ್ರಶ್ನೆಗಳನ್ನು ಕೇಳುವುದಾಗಿ ಬಿಜೆಪಿ ಸಂಸದ ನಿಶಿಕಾಂತ್ ದುಬೆ ಎಕ್ಸ್ ಮೂಲಕ ಹೇಳಿದ್ದಾರೆ.

‘ಸಂಘಟಿತ ಅಪರಾಧ ಮತ್ತು ಭ್ರಷ್ಟಾಚಾರ ವರದಿಗಾರಿಕೆ ಯೋಜನೆ’ (ಒಸಿಸಿಆರ್‌ಪಿ) ಮಾಧ್ಯಮ ಪೋರ್ಟಲ್ ಮತ್ತು ಅಮೆರಿಕದ ಉದ್ಯಮಿ ಜಾರ್ಜ್ ಸೋರೊಸ್ ಅವರು, ಭಾರತದ ಅರ್ಥವ್ಯವಸ್ಥೆಯನ್ನು ಹಾಳುಮಾಡಲು ಹಾಗೂ ನರೇಂದ್ರ ಮೋದಿ ನೇತೃತ್ವದ ಸರ್ಕಾರಕ್ಕೆ ಕೆಟ್ಟ ಹೆಸರು ತರಲು ವಿರೋಧ ಪಕ್ಷಗಳ ಜೊತೆ ಶಾಮೀಲಾಗಿದ್ದಾರೆ ಎಂದು ದುಬೆ ದೂರಿದ್ದಾರೆ.


ಸೋನಿಯಾ

ಸೋನಿಯಾ ಗಾಂಧಿ ಅವರು, ‘ಏಷ್ಯಾ ಪೆಸಿಫಿಕ್‌ನ ಪ್ರಜಾತಾಂತ್ರಿಕ ನಾಯಕರ ವೇದಿಕೆ (ಎಫ್‌ಡಿಎಲ್–ಎಪಿ) ಪ್ರತಿಷ್ಠಾನ’ದ ಸಹ ಅಧ್ಯಕ್ಷೆಯಾಗಿ, ಜಾರ್ಜ್ ಸೋರೊಸ್ ಪ್ರತಿಷ್ಠಾನದಿಂದ ಹಣಕಾಸಿನ ನೆರವು ಪಡೆಯುವ ಸಂಸ್ಥೆಯೊಂದರ ಜೊತೆ ನಂಟು ಹೊಂದಿದ್ದಾರೆ ಎಂದು ಬಿಜೆಪಿ ಹೇಳಿದೆ.

‘ಕಾಶ್ಮೀರವನ್ನು ಪ್ರತ್ಯೇಕ ಅಂಗವಾಗಿ ಕಾಣುವ ಅಭಿಪ್ರಾಯವನ್ನು ಎಫ್‌ಡಿಎಲ್–ಎಪಿ ಪ್ರತಿಷ್ಠಾನವು ವ್ಯಕ್ತಪಡಿಸಿದೆ’ ಎಂದು ಪಕ್ಷ ಹೇಳಿದೆ. ‘ಕಾಶ್ಮೀರವು ಪ್ರತ್ಯೇಕ ರಾಷ್ಟ್ರ ಎಂಬ ಆಲೋಚನೆಯನ್ನು ಬೆಂಬಲಿಸಿರುವ ಸಂಸ್ಥೆ ಮತ್ತು ಸೋನಿಯಾ ಗಾಂಧಿ ನಡುವಿನ ನಂಟು, ಭಾರತದ ಆಂತರಿಕ ವ್ಯವಹಾರಗಳಲ್ಲಿ ವಿದೇಶಿ ಸಂಸ್ಥೆಗಳ ಪ್ರಭಾವವನ್ನು ಹಾಗೂ ಇಂತಹ ಸಂಬಂಧಗಳ ರಾಜಕೀಯ ಪರಿಣಾಮಗಳನ್ನು ಹೇಳುತ್ತದೆ’ ಎಂದು ಬಿಜೆಪಿ ಹೇಳಿದೆ.

ಸೋನಿಯಾ ಅವರು ರಾಜೀವ್ ಗಾಂಧಿ ಪ್ರತಿಷ್ಠಾನದ ಅಧ್ಯಕ್ಷೆ ಆದ ನಂತರದಲ್ಲಿ ಜಾರ್ಜ್ ಸೋರೊಸ್ ಪ್ರತಿಷ್ಠಾನದ ಜೊತೆ ಪಾಲುದಾರಿಕೆ ಆಯಿತು. ಇದು ಭಾರತದ ಸಂಸ್ಥೆಗಳಿಗೆ ವಿದೇಶಿ ನೆರವಿನ ಪ್ರಭಾವವನ್ನು ತೋರಿಸುತ್ತದೆ ಎಂದು ಕೂಡ ಬಿಜೆಪಿ ಹೇಳಿದೆ.

ಅದಾನಿ ಕುರಿತು ರಾಹುಲ್ ಗಾಂಧಿ ನಡೆಸಿದ ಪತ್ರಿಕಾಗೋಷ್ಠಿಯನ್ನು ಜಾರ್ಜ್ ಸೋರೊಸ್ ಅವರಿಂದ ನೆರವು ಪಡೆಯುವ ಒಸಿಸಿಆರ್‌ಪಿ ನೇರ ಪ್ರಸಾರ ಮಾಡಿತು. ಇದನ್ನು ರಾಹುಲ್ ಅವರು ಅದಾನಿ ಅವರನ್ನು ಟೀಕಿಸಲು ಮೂಲವಾಗಿ ಬಳಸಿಕೊಂಡರು. ಇದು ಇವರ ಅಪಾಯಕಾರಿ ಸಂಬಂಧವನ್ನು ತೋರಿಸುತ್ತದೆ ಮತ್ತು ಭಾರತದ ಅರ್ಥ ವ್ಯವಸ್ಥೆಯ ಹಳಿತಪ್ಪಿಸಲು ಇವರು ನಡೆಸಿರುವ ಯತ್ನವನ್ನು ತೋರಿಸುತ್ತದೆ ಎಂದು ಬಿಜೆಪಿ ಆರೋಪಿಸಿದೆ.

ಒಸಿಸಿಆರ್‌ಪಿ ಮತ್ತು ಸೋರೊಸ್ ಅವರ ಕೆಲಸವು ವಿರೋಧ ಪಕ್ಷಗಳ ನಾಯಕರ ಜೊತೆ ಸೇರಿಕೊಂಡು ಭಾರತದ ಅರ್ಥವ್ಯವಸ್ಥೆಯನ್ನು ಹಾಳು ಮಾಡುವುದು ಹಾಗೂ ಮೋದಿ ನೇತೃತ್ವದ ಸರ್ಕಾರಕ್ಕೆ ಕೆಟ್ಟ ಹೆಸರು ತರುವುದು ಎಂದು ದುಬೆ ಅವರು ‘ಎಕ್ಸ್’ನಲ್ಲಿ ಬರೆದಿದ್ದಾರೆ.

ಭಾರತ–ಚೀನಾ ಸಂಬಂಧ ಸಂಸತ್ತಿನಲ್ಲಿ ಚರ್ಚೆಗೆ ಆಗ್ರಹ

ನವದೆಹಲಿ (ಪಿಟಿಐ): ಚೀನಾ ಮತ್ತು ಭಾರತದ ನಡುವಣ ಸಂಬಂಧದ ಬಗ್ಗೆ ಸಂಸತ್ ಅಧಿವೇಶನದಲ್ಲಿ ಚರ್ಚೆಗೆ ಅವಕಾಶ ನೀಡಬೇಕೆಂದು ಕಾಂಗ್ರೆಸ್ ಭಾನುವಾರ ಒತ್ತಾಯಿಸಿದೆ.


ಜೈರಾಮ್ ರಮೇಶ್

ಭಾರತ–ಚೀನಾ ಬಾಂಧವ್ಯದ ಬಗ್ಗೆ ಸಂಸತ್ತಿನಲ್ಲಿ ಸರ್ಕಾರ ನೀಡಿರುವ ಹೇಳಿಕೆಯನ್ನು ಟೀಕಿಸಿರುವ ಕಾಂಗ್ರೆಸ್, 2020ರಲ್ಲಿ ಚೀನಾ ಏಕಪಕ್ಷೀಯವಾಗಿ ಬಿಕ್ಕಟ್ಟು ಸೃಷ್ಟಿಸಿದ ನಂತರದ ಪರಿಸ್ಥಿತಿಯನ್ನು ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಒಪ್ಪಿಕೊಂಡಂತಿದೆ ಎಂದು ಹೇಳಿದೆ.

‘ಕಾರ್ಯತಂತ್ರ ಮತ್ತು ಆರ್ಥಿಕ ನೀತಿಗಳನ್ನು ಕೇಂದ್ರೀಕರಿಸಿ, ಭಾರತ–ಚೀನಾ ಸಂಬಂಧದ ಬಗ್ಗೆ ಸಂಸತ್ತಿನಲ್ಲಿ ಚರ್ಚೆ ನಡೆಯಬೇಕು. ಗಡಿ ಪರಿಸ್ಥಿತಿಯನ್ನು ನಾಲ್ಕು ವರ್ಷಗಳ ಹಿಂದೆ ಚೀನಾ ಏಕಪಕ್ಷೀಯವಾಗಿ ಬದಲಾಯಿಸಿದ್ದರೂ, ಚೀನಾದ ಮೇಲಿನ ನಮ್ಮ ಅವಲಂಬನೆ ಹೆಚ್ಚಾಗುತ್ತಲೇ ಇದೆ’ ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಹೇಳಿದ್ದಾರೆ.

ಭಾರತ ಮತ್ತು ಚೀನಾ ಸಂಬಂಧದ ಬಗ್ಗೆ ವಿದೇಶಾಂಗ ಸಚಿವ ಜೈಶಂಕರ್ ಅವರು ಉಭಯ ಸದನಗಳಲ್ಲಿ ನೀಡಿರುವ ಹೇಳಿಕೆಯ ಬಗ್ಗೆ ಕಾಂಗ್ರೆಸ್ ಅಧ್ಯಯನ ಮಾಡಿದೆ. ಸಂಸದರು ಯಾವುದೇ ಪ್ರತಿಕ್ರಿಯೆ ನೀಡಲು ಮೋದಿ ಸರ್ಕಾರ ಅನುಮತಿ ನೀಡದೇ ಹೋದದ್ದು ದುರದೃಷ್ಟಕರ ಎಂದೂ ಪ್ರತಿಕ್ರಿಯಿಸಿದ್ದಾರೆ.

ಕಾಂಗ್ರೆಸ್‌ನ ಪ್ರಶ್ನೆಗಳು

- ಗಾಲ್ವನ್ ಕಣಿವೆಯಲ್ಲಿ ಜೂನ್ 20ರಂದು ನಡೆದ ಘರ್ಷಣೆಗೆ ಕಾರಣ ಏನೆಂದು ಸದನಕ್ಕೆ ತಿಳಿದಿದೆ. ನಮ್ಮ ಗಡಿಯೊಳಗೆ ಯಾರೂ ನುಗ್ಗಿಲ್ಲ ಎನ್ನುವ ಮೂಲಕ ಸರ್ಕಾರವು ಚೀನಾಕ್ಕೆ ‘ಕ್ಲೀನ್ ಚಿಟ್’ ನೀಡಿತ್ತು. ಇದರಿಂದ ನಮ್ಮ ಹುತಾತ್ಮ ಸೈನಿಕರಿಗೆ ಅವಮಾನವಾಗಿದ್ದು ಮಾತ್ರವಲ್ಲದೇ ಭಾರತದ ಮುಂದಿನ ಮಾತಕತೆಯನ್ನು ದುರ್ಬಲಗೊಳಿಸಿತು. ಯಾವ ಉದ್ದೇಶದಿಂದ ಪ್ರಧಾನಿ ಆ ಹೇಳಿಕೆ ನೀಡಿದ್ದರು?
- ಚೀನಾ–ಭಾರತ ಗಡಿ ವ್ಯವಹಾರಗಳ ಸಂಬಂಧ ನಡೆದಿದ್ದ 32ನೇ ಸಭೆಯಲ್ಲಿ ವಿದೇಶಾಂಗ ಇಲಾಖೆಯು, ‘2020 ಬಿಕ್ಕಟ್ಟಿನ ಪರಿಹಾರಕ್ಕಾಗಿ ರೂಪಿಸಿದ್ದ ಒಪ್ಪಂದದ ಬಗ್ಗೆ ಇತ್ತೀಚೆಗೆ ಎರಡು ದೇಶಗಳು ದೃಢಪಡಿಸಿದ್ದವು’ ಎಂದು ಹೇಳಿತ್ತು. ಹಾಗಾದರೆ ‘ದನಗಾಹಿಗಳಿಗೆ ಹಿಂದಿನಂತೆ ಗಡಿ ಭಾಗದಲ್ಲಿ ದನ ಮೇಯಿಸುವ ಹಕ್ಕನ್ನು ನೀಡಲಾಗಿದೆಯೇ?
- ನಮ್ಮ ಸಾಂಪ್ರದಾಯಿಕ ಗಸ್ತು ಕೇಂದ್ರಗಳಿಗೆ ಮುಕ್ತ ಪ್ರವೇಶ ಇದೆಯೇ?
- ಹಿಂದಿನ ಮಾತುಕತೆಗಳ ಸಮಯದಲ್ಲಿ ಬಿಟ್ಟುಕೊಟ್ಟಿರುವ ಬಫರ್ ವಲಯಗಳನ್ನು ಭಾರತ ಮರಳಿ ಪಡೆದುಕೊಂಡಿದೆಯೆ?
- ಡೆಪ್ಸಾಂಗ್ ಮತ್ತು ಡೆಮ್ಚೋಕ್‌ನಲ್ಲಿನ ಪರಿಸ್ಥಿತಿ ಬಗ್ಗೆ ಚೀನಾ ಸರ್ಕಾರ ಯಾಕೆ ದೃಢಪಡಿಸಿಲ್ಲ?

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in



ಸುಭಾಷಿತ

ಮಾತಿನ ಬೆಲೆ ತಿಳಿದವರು, ಹೃದಯದ ತಕ್ಕಡಿಯಲ್ಲಿ ಅದನ್ನು ತೂಗಿ ನಂತರ ಬಾಯಿಂದ ಹೊರಹಾಕುತ್ತಾರೆ.

-ಸಂತ ಕಬೀರ

ವಿಶ್ವವಿದ್ಯಾಲಯ ಕಾಯ್ದೆಗೆ ತಿದ್ದುಪಡಿ ಪ್ರಸ್ತಾವ ಆಡಳಿತವು ರಾಜಕೀಯದಿಂದ ಮುಕ್ತವಾಗಲಿ

ಕುಲಪತಿಗಳ ನೇಮಕವೂ ಸೇರಿದಂತೆ ವಿಶ್ವವಿದ್ಯಾಲಯಗಳ ಆಡಳಿತದಲ್ಲಿ ರಾಜ್ಯ ಸರ್ಕಾರಕ್ಕೆ ಪರಮಾಧಿಕಾರ ನೀಡುವ ಹಾಗೂ ರಾಜ್ಯಪಾಲರ ಅಧಿಕಾರವನ್ನು ಮೊಟಕುಗೊಳಿಸುವ ಉದ್ದೇಶದಿಂದ ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯಗಳ ಕಾಯ್ದೆಗೆ ತಿದ್ದುಪಡಿ ತರುವ ಪ್ರಸ್ತಾವವನ್ನು ಸರ್ಕಾರ ಹೊಂದಿದೆ. ರಾಜಕೀಯ ಮತ್ತು ಶೈಕ್ಷಣಿಕ ವಲಯದಲ್ಲಿ ಇದು ತೀವ್ರ ಚರ್ಚೆಯನ್ನು ಹುಟ್ಟುಹಾಕಿದೆ. ಕಾಯ್ದೆಗೆ ಗುಜರಾತ್ ಮಾದರಿಯಲ್ಲಿ ರಾಜ್ಯದಲ್ಲಿಯೂ ತಿದ್ದುಪಡಿ ಮಾಡಲಾಗುವುದು ಎಂದು ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್ ಹೇಳಿದ್ದಾರೆ. ಗುಜರಾತ್‌ನಲ್ಲಿ ರಾಜ್ಯಪಾಲರ ಪಾತ್ರವು ಘಟಿಕೋತ್ಸವದಲ್ಲಿ ಭಾಗವಹಿಸುವುದಕ್ಕೆ ಸೀಮಿತ. ಅವರ ಪಾತ್ರ ಆಲಂಕಾರಿಕ ಮಾತ್ರ. ತಿದ್ದುಪಡಿಯು ಅಂಗೀಕಾರ ಪಡೆದರೆ, ಕುಲಪತಿಗಳು ಮತ್ತು ಶೈಕ್ಷಣಿಕ ಸಮಿತಿಗಳ ಸದಸ್ಯರ ನೇಮಕದ ನಿಯಂತ್ರಣವು ಸಂಪೂರ್ಣವಾಗಿ ರಾಜ್ಯ ಸರ್ಕಾರದ ಕೈಗೆ ಬರುತ್ತದೆ. ವಿಶ್ವವಿದ್ಯಾಲಯಗಳ ಆಡಳಿತವು ರಾಜ್ಯ ಸರ್ಕಾರದ ಕೈಯಲ್ಲಿ ಕೇಂದ್ರೀಕೃತವಾಗುತ್ತದೆ. ವಿಶ್ವವಿದ್ಯಾಲಯಗಳ ಸ್ವಾಯತ್ತೆಯನ್ನು ಖಾತರಿಪಡಿಸಿಕೊಳ್ಳುವುದಕ್ಕಾಗಿ ಕುಲಾಧಿಪತಿಯ ಹೊಣೆಗಾರಿಕೆಯನ್ನು ರಾಜ್ಯಪಾಲರಿಗೆ ನೀಡಲಾಗಿತ್ತು. ಉನ್ನತ ಶಿಕ್ಷಣ ಸಂಸ್ಥೆಗಳನ್ನು ರಾಜಕೀಯ ಹಸ್ತಕ್ಷೇಪದಿಂದ ಪಾರು ಮಾಡುವುದು ಮತ್ತು ಶೈಕ್ಷಣಿಕ ವಲಯದ ಘನತೆಯನ್ನು ರಕ್ಷಿಸುವುದು ನಿಷ್ಪಕ್ಷಪಾತಿಯಾದ ರಾಜ್ಯಪಾಲರಿಂದ ಸಾಧ್ಯವಾಗುತ್ತದೆ ಎಂಬ ಕಾರಣಕ್ಕೆ ಈ ವ್ಯವಸ್ಥೆ ಮಾಡಲಾಗಿತ್ತು. ವಿವಿಧ ರಾಜ್ಯಗಳಲ್ಲಿ ರಾಜ್ಯಪಾಲರು ನಡೆದುಕೊಳ್ಳುತ್ತಿರುವ ರೀತಿ ಹಾಗೂ ನೇಮಕಾತಿಗಳಲ್ಲಿನ ರಾಜಕೀಯ ಲೆಕ್ಕಾಚಾರಗಳನ್ನು ಗಮನಿಸಿದರೆ, ರಾಜ್ಯಪಾಲರು ತಟಸ್ಥ ನಿಲುವನ್ನು ನಿಜಕ್ಕೂ ಹೊಂದಿದ್ದಾರೆಯೇ ಎಂಬ ಸಂದೇಹ ಮೂಡುತ್ತದೆ. ಈಚಿನ ವರ್ಷಗಳಲ್ಲಿ ಬಿಜೆಪಿಯೇತರ ಪಕ್ಷಗಳ ನೇತೃತ್ವದ ಸರ್ಕಾರ ಇರುವ ರಾಜ್ಯಗಳಲ್ಲಿ ವಿಶ್ವವಿದ್ಯಾಲಯಗಳ ಆಡಳಿತದಲ್ಲಿ ರಾಜ್ಯಪಾಲರ ಪಾತ್ರದ ಬಗ್ಗೆ ಹೆಚ್ಚು ಹೆಚ್ಚು ಪ್ರಶ್ನೆಗಳು ಮೂಡುತ್ತಿವೆ. ಕೇಂದ್ರ ಸರ್ಕಾರದಿಂದ ನೇಮಕಗೊಂಡ ರಾಜ್ಯಪಾಲರು ವಿಶ್ವವಿದ್ಯಾಲಯಗಳ ವ್ಯವಹಾರಗಳಲ್ಲಿ ಕೇಂದ್ರದ ಆಡಳಿತ ಪಕ್ಷದ ರಾಜಕೀಯ ಕಾರ್ಯಸೂಚಿಯನ್ನು ಕಾರ್ಯಗತಗೊಳಿಸಲು ಪ್ರಯತ್ನಿಸುತ್ತಿದ್ದಾರೆ ಎಂಬ ಭಾವನೆ ಮೂಡಿದೆ. ಇದಕ್ಕೆ ಪ್ರತಿಕ್ರಿಯೆಯಾಗಿ ರಾಜ್ಯಪಾಲರ ಪಾತ್ರಕ್ಕೆ ಕತ್ತರಿ ಹಾಕಿ ಈ ಹೊಣೆಗಾರಿಕೆಯನ್ನು ಚುನಾಯಿತ ಪ್ರತಿನಿಧಿಗಳಿಗೆ ನೀಡುವ ಪ್ರಯತ್ನವನ್ನು ರಾಜ್ಯ ಸರ್ಕಾರಗಳು ಮಾಡಿವೆ.



ವಿಶ್ವವಿದ್ಯಾಲಯದ ಆಡಳಿತವು ಹೆಚ್ಚು ಪಾರದರ್ಶಕ, ಸ್ವತಂತ್ರ ಮತ್ತು ಉತ್ತರದಾಯಿ ಆಗಬೇಕು ಎಂಬುದರ ಸುತ್ತ ತುರ್ತಾಗಿ ಚರ್ಚೆ ನಡೆಯಬೇಕಿದೆ

ಕರ್ನಾಟಕದ ಉದ್ದೇಶಿತ ತಿದ್ದುಪಡಿಯಲ್ಲಿ ಒಳ್ಳೆಯ ಅಂಶಗಳ ಜತೆಗೆ ಕೆಲವು ಲೋಪಗಳೂ ಇವೆ. ಒಂದು ಪ್ರಮುಖ ಅನುಕೂಲಕರ ಅಂಶವೆಂದರೆ, ಚುನಾಯಿತ ಪ್ರತಿನಿಧಿಗಳ ಉತ್ತರದಾಯಿತ್ವ ಮತ್ತು ಹೊಣೆಗಾರಿಕೆ ಹೆಚ್ಚಾಗುತ್ತದೆ. ಜನರಿಂದ ಆಯ್ಕೆಯಾದ ನಾಯಕನಾಗಿರುವ ಮುಖ್ಯಮಂತ್ರಿಯು ಉನ್ನತ ಶಿಕ್ಷಣಕ್ಕೆ ಸಂಬಂಧಿಸಿ ತೆಗೆದುಕೊಳ್ಳುವ ನಿರ್ಧಾರಗಳಿಗೆ ಉತ್ತರದಾಯಿಯಾಗಿ ಇರಬೇಕಾಗುತ್ತದೆ. ಜನರ ಪ್ರಶ್ನೆಗಳಿಗೆ ಉತ್ತರಿಸಬೇಕಾಗುತ್ತದೆ. ರಾಜ್ಯ ಸರ್ಕಾರದ ಕೈಯಲ್ಲಿ ಅತಿಯಾದ ಅಧಿಕಾರ ಕೇಂದ್ರೀಕರಣವು ವಿಶ್ವವಿದ್ಯಾಲಯಗಳ ಸ್ವಾತಂತ್ರ್ಯಕ್ಕೆ ಕುತ್ತು ತರಬಹುದು ಎಂದು ಟೀಕಾಕಾರರು ಹೇಳುತ್ತಿದ್ದಾರೆ. ವಿಶ್ವವಿದ್ಯಾಲಯಗಳ ಮೇಲೆ ರಾಜಕೀಯ ಒತ್ತಡಗಳು ಸೃಷ್ಟಿಯಾಗಬಹುದು ಎಂಬ ಕಳವಳವನ್ನೂ ಅವರು ವ್ಯಕ್ತಪಡಿಸಿದ್ದಾರೆ. ಬೌದ್ಧಿಕ ಸಂವಾದ ಮತ್ತು ವಿಭಿನ್ನ ಅಭಿಪ್ರಾಯಗಳಿಗೆ ವೇದಿಕೆ ಎಂಬ ವಿಶ್ವವಿದ್ಯಾಲಯದ ಪಾತ್ರಕ್ಕೆ ರಾಜಕೀಯ ಮೇಲಾಟಗಳಿಂದ ಧಕ್ಕೆ ಬರಬಹುದು. ಕುಲಪತಿಯಂತಹ ಪ್ರಮುಖ ಶೈಕ್ಷಣಿಕ ಹುದ್ದೆಗಳ ನೇಮಕಾತಿಯು ಪ್ರತಿಭೆಯ ಬದಲು ರಾಜಕೀಯ ನಿಷ್ಠೆಯ ಆಧಾರದಲ್ಲಿ ನಡೆದರೆ ಉನ್ನತ ಶಿಕ್ಷಣದ ಗುಣಮಟ್ಟ ಕುಸಿಯುತ್ತದೆ. ವಿಶ್ವವಿದ್ಯಾಲಯಗಳ ವಿಶ್ವಾಸಾರ್ಹತೆ ಕುಗ್ಗುತ್ತದೆ.

ಉದ್ದೇಶಿತ ತಿದ್ದುಪಡಿಯಿಂದಾಗಿ ವಿಶ್ವವಿದ್ಯಾಲಯಗಳು ಹೆಚ್ಚು ಸ್ಪಂದನಶೀಲವಾಗಬಹುದು, ಆಡಳಿತವು ಸ್ಥಳೀಯ ಅಗತ್ಯಗಳಿಗೆ ಹೆಚ್ಚಿನ ಮಹತ್ವ ನೀಡಬಹುದು. ಏನಿದ್ದರೂ ಉನ್ನತ ಶಿಕ್ಷಣದಲ್ಲಿ ರಾಜಕೀಯದ ಪ್ರವೇಶವು ಚಿಂತೆಯ ವಿಚಾರವೇ ಆಗಿದೆ. ವಿಶ್ವವಿದ್ಯಾಲಯದ ಆಡಳಿತದಲ್ಲಿ ಸಮಗ್ರ ಸುಧಾರಣೆಯ ಅಗತ್ಯ ಇದೆ. ಇದಕ್ಕೆ ಮಾದರಿ ಪರಿಹಾರವೆಂದರೆ, ದಕ್ಷ ಆಡಳಿತದ ಜೊತೆಗೆ ಶೈಕ್ಷಣಿಕ ಸಂಸ್ಥೆಗಳ ಸ್ವಾಯತ್ತೆಗೆ ಧಕ್ಕೆ ಆಗದಂತಹ ಸಮತೋಲಿತ ವ್ಯವಸ್ಥೆ. ರಾಜ್ಯವು ತರಲು ಹೊರಟಿರುವ ತಿದ್ದುಪಡಿಯು ಈ ಸಮತೋಲನವನ್ನು ಸಾಧಿಸಲಿದೆಯೇ ಎಂಬುದನ್ನು ಕಾದು ನೋಡಬೇಕಿದೆ. ವಿಶ್ವವಿದ್ಯಾಲಯದ ಆಡಳಿತವು ಹೆಚ್ಚು ಪಾರದರ್ಶಕ, ಸ್ವತಂತ್ರ ಮತ್ತು ಉತ್ತರದಾಯಿ ಆಗಬೇಕು ಎಂಬುದರ ಸುತ್ತ ತುರ್ತಾಗಿ ಚರ್ಚೆ ನಡೆಯಬೇಕಿದೆ.

ದಿನದ ಟ್ವೀಟ್

ಭಾರತಕ್ಕೂ ಇದೆ ಪಾಠ



ಸಿರಿಯಾದ ಅಸ್ಸಾದ್ ಆಡಳಿತದ ಪತನದಲ್ಲಿ ಭಾರತಕ್ಕೆ ಒಂದು ಪಾಠ ಇದೆ. ಅಭಿವೃದ್ಧಿಯತ್ತ ಗಮನ ಕೇಂದ್ರೀಕರಿಸುವವರ ಸ್ನೇಹ ಹೊಂದಬೇಕೇ ವಿನಾ ಯುದ್ಧಗಳು, ವಿನಾಶ ಮತ್ತು ಅಧಿಕಾರ ರಾಜಕಾರಣದ ಸಮತೋಲನ ಕಾಯ್ದುಕೊಳ್ಳಬಯಸುವವರದ್ದಲ್ಲ...

ಪ್ರವೀಣ್ ಸಾಹ್ನಿ, ನಿವೃತ್ತ ಸೇನಾಧಿಕಾರಿ

ಕಿಡಿನುಡಿ



ರಾಜ್ಯ ಸರ್ಕಾರಕ್ಕೆ ಮಾಡಲು ಕೆಲಸವಿಲ್ಲ. ಹೀಗಾಗಿ ತನಿಖೆಗಳನ್ನು ನಡೆಸುತ್ತಾ ಕುಳಿತಿದೆ. ಕೋವಿಡ್ ನಾಲ್ಕು ವರ್ಷಗಳ ಹಿಂದೆ ಸಂಭವಿಸಿದ್ದು. ಆಗ ಅಕ್ರಮವಾಗಿದೆ, ತನಿಖೆ ಮಾಡಿಸುತ್ತೇವೆ ಎಂದು ಸರ್ಕಾರದವರು ಈಗ ಹೇಳುತ್ತಿದ್ದಾರೆ. ಮಾಡಿಸಲಿ ಬಿಡಿ.

ಬಿ.ಎಸ್.ಯಡಿಯೂರಪ್ಪ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

25 ವರ್ಷಗಳ ಹಿಂದೆ

ಗುರುವಾರ, 9-12-1999

• ಪಂಚಾಯಿತಿ: ಪರಿಶಿಷ್ಟರ ಮೀಸಲು ಶೇ 28ಕ್ಕೆ

ಬೆಂಗಳೂರು, ಡಿ. 8– ರಾಜ್ಯದ ಗ್ರಾಮ ಪಂಚಾಯಿತಿಗಳಲ್ಲಿ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಗಳಿಗೆ ಈಗ ಇರುವ ಶೇ 18ರ ಮೀಸಲಾತಿಯನ್ನು 28ಕ್ಕೆ ಹೆಚ್ಚಿಸಲು ಸಚಿವ ಸಂಪುಟ ಇಂದು ಇಲ್ಲಿ ನಿರ್ಧರಿಸಿದೆ.

ಈ ನಿರ್ಧಾರದಿಂದ ರಾಜ್ಯದ ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡಗಳಿಗೆ ಸೇರಿದವರಿಗೆ ಕನಿಷ್ಠ ಒಂದು ಸ್ಥಾನವನ್ನು ಮೀಸಲಿಡಲು ಸಹಾಯಕವಾಗುತ್ತದೆ.

ಈ ಹೆಚ್ಚುವರಿ ಮೀಸಲಾತಿಯನ್ನು ಜಾರಿಗೆ ತರಲು ಪಂಚಾಯತ್ ರಾಜ್ ಕಾಯ್ದೆಗೆ ಸುಗ್ರೀವಾಜ್ಞೆ ಮುಖಾಂತರ ತಿದ್ದುಪಡಿ ತರಲಾಗುತ್ತದೆ. ಪರಿಶಿಷ್ಟ ಜಾತಿಗೆ ಪ್ರಸಕ್ತ 13,834 ಸ್ಥಾನಗಳು ಅಂದರೆ ಶೇ 15 ಹಾಗೂ ಪರಿಶಿಷ್ಟ ಪಂಗಡಗಳಿಗೆ 3,842 ಸ್ಥಾನಗಳು ಅಂದರೆ ಶೇ 3ರಷ್ಟು ಮೀಸಲಿರಿಸಲಾಗಿದೆ.

• ಕೃಪಾಂಕ ಕೈಬಿಡಲು ಹೈಕೋರ್ಟ್ ಆಜ್ಞೆ

ಬೆಂಗಳೂರು, ಡಿ. 8– ಸರ್ಕಾರವು ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ (ಎಪಿಪಿ) ಮತ್ತು ಸರ್ಕಾರಿ ಪ್ಲೀಡರುಗಳ (ಎಜಿಪಿ) ಹುದ್ದೆಗಳಿಗೆ ಗ್ರಾಮಾಂತರ ಕೃಪಾಂಕ ಕೈಬಿಟ್ಟು ಬೇರೆ ಪಟ್ಟಿ ತಯಾರಿಸಬೇಕೆಂದು ಹೈಕೋರ್ಟ್ ಇಂದು ಆದೇಶಿಸಿತು.

ಆಯ್ಕೆಯಲ್ಲಿ ಮಹಿಳೆಯರಿಗೆ ಶೇ 30ರಷ್ಟು ಮೀಸಲಾತಿ ಒದಗಿಸಿರುವ ಸರ್ಕಾರದ ನಿಯಮವನ್ನು ಒಪ್ಪಿದ್ದು, ಗ್ರಾಮಾಂತರ ಕೃಪಾಂಕ ನೀಡಿರುವುದನ್ನು ತಳ್ಳಿಹಾಕಿದೆ.

ಬೆಳಗಾವಿಯ ಕಿರಣ್ ಎಸ್. ಪಾಟೀಲ್ ಮತ್ತು ಮೂವರು ರಿಟ್ ಅರ್ಜಿ ಸಲ್ಲಿಸಿ, ಮೂವರು ಸದಸ್ಯರ ಸಮಿತಿ ಮೂಲಕ 68 ಮಂದಿ ಎಪಿಪಿಗಳು ಮತ್ತು ಎಜಿಪಿಗಳ ಆಯ್ಕೆ ಮಾಡಿರುವಲ್ಲಿ ಮಹಿಳೆಯರಿಗೆ ಪ್ರತಿ ವಿಭಾಗದಲ್ಲಿ ಶೇ 30ರಷ್ಟು ಮೀಸಲಾತಿ ಕೊಟ್ಟಿರುವುದು ಒಟ್ಟಾರೆ ಮೀಸಲಾತಿಯ ಶೇ 50ರಷ್ಟನ್ನು ಮೀರುವುದೆಂದು ವಾದಿಸಿದ್ದರು.

50 ವರ್ಷಗಳ ಹಿಂದೆ

ಸೋಮವಾರ, 9-12-1974

• ವಿರೋಧಿಗಳ ಬೇಡಿಕೆಗೆ ಸರ್ಕಾರದ ರಿಯಾಯಿತಿ

ನವದೆಹಲಿ, ಡಿ. 8– ಲೈಸೆನ್ಸ್ ಹಗರಣಕ್ಕೆ ಸಂಬಂಧಿಸಿದಂತೆ ಸಿಬಿಐ ವರದಿಯನ್ನೇ ಅಲ್ಲದೆ ಸಂಬಂಧಪಟ್ಟ ಎಲ್ಲ ದಾಖಲೆಗಳನ್ನೂ ತೋರಿಸಬೇಕೆಂಬ ವಿರೋಧ ಪಕ್ಷದ ಬೇಡಿಕೆಯ ಬಗ್ಗೆ 'ಬಿಗಿ ಅಲ್ಲದ ಧೋರಣೆ'ಯನ್ನು ಅನುಸರಿಸಲು ಸರ್ಕಾರ ಇಂದು ರಾತ್ರಿ ನಿರ್ಧರಿಸಿತು.

ಸಂಸತ್ತಿನ ಉಭಯ ಸದನಗಳಲ್ಲೂ ನಾಳೆ ಸತ್ಯಾಗ್ರಹ ಹೂಡುವ ಬೆದರಿಕೆ ಹಾಕಿರುವ ವಿರೋಧ ಪಕ್ಷಗಳ ಜತೆ ಘರ್ಷಣೆಯನ್ನು ನಿವಾರಿಸುವ ಆತುರದಲ್ಲಿ ಸರ್ಕಾರ ಈ ನಿರ್ಧಾರ ಕೈಗೊಂಡಿದೆ.

• ಜಾತಿ ವಿನಾಶಕ್ಕೆ ಪ್ರತಿಜ್ಞೆ ತೊಡಲು ಕುವೆಂಪು ಕರೆ

ಬೆಂಗಳೂರು, ಡಿ. 8– ಜಾತಿ ಪದ್ಧತಿಯ ಸಂಪೂರ್ಣ ವಿನಾಶಕ್ಕೆ ಕಂಕಣ ಕಟ್ಟಿಕೊಂಡು ಹೋರಾಡಲು ರಾಷ್ಟ್ರಕವಿ ಕುವೆಂಪು ಅವರು ಇಲ್ಲಿ ಇಂದು ನೂತನ ಪದವೀಧರರಿಗೆ ಕರೆ ನೀಡಿದರು.

ಜಾತಿ ಪದ್ಧತಿಯನ್ನು 'ಮತ ಭಾವನೆಯ ಶನಿಸಂತಾನ' ಎಂದು ಟೀಕಿಸಿದ ಕುವೆಂಪು, ಸಮಾಜವಾದದ ಪ್ರಜಾಸತ್ತೆಯ ಗುರಿ ಸಾಧನೆಗೆ ಈ ಪದ್ಧತಿಯ ವಿನಾಶ ಅಗತ್ಯವೆಂದರು.

ಚುನಾವಣೆ ಪದ್ಧತಿಯ ಲೋಪದೋಷಗಳನ್ನು ಪ್ರಸ್ತಾಪಿಸಿದ ಅವರು 'ಭ್ರಷ್ಟಾಚಾರವನ್ನು ನಿರ್ಮೂಲನೆ ಮಾಡುವ ಮತ್ತು ನಿಜವಾದ ಪ್ರಜಾಸತ್ತೆಯನ್ನು ರಕ್ಷಿಸುವ ಇಚ್ಛೆ ನಿಮಗಿದ್ದರೆ ಇಂದಿನ ರೀತಿಯ ಧನಾಶ್ರಿತ ಚುನಾವಣೆಯ ಪದ್ಧತಿಯನ್ನು ಬದಲಾಯಿಸಿ ಅದನ್ನು ಗುಣಾಶ್ರಿತವನ್ನಾಗಿ ಪರಿವರ್ತಿಸುವ ಕರ್ತವ್ಯ ನಿಮ್ಮ ಹೆಗಲಮೇಲೆ ಬೀಳುತ್ತದೆ. ಉಗ್ರಕ್ರಾಂತಿಯಿಂದಲಾದರೂ ನೀವು ಚುನಾವಣೆಯನ್ನು ಸಾತ್ವಿಕ ಮಾರ್ಗಕ್ಕೆ ತಿರುಗಿಸಬೇಕು' ಎಂದು ಕರೆ ಕೊಟ್ಟರು.

ಆಡಳಿತದ ಹುದ್ದೆಗಳಲ್ಲಿ ಇರುವವರಿಗೆ ಪ್ಯಾಲೆಸ್ಟೀನ್ ಪರ ಮಾತಿನ ಬಗ್ಗೆ ಅತಿಹೆಚ್ಚು ಅಸಹನೆ

ಮಧ್ಯಪ್ರಾಚ್ಯದ ಕದನ ತಂದ ಒಡಕು



ವಿಶ್ಲೇಷಣೆ

ಮಾರ್ಕ್ ಟ್ರಾಸಿ

'ಪ್ಯಾಲೆಸ್ಟೀನ್ ಮುಕ್ತಿ'ಯನ್ನು ಬೆಂಬಲಿಸುವ ಪತ್ರವನ್ನು ಪ್ರಕಟಿಸಿದ್ದಕ್ಕಾಗಿ ಪ್ರತಿಷ್ಠಿತ ನಿಯತಕಾಲಿಕ 'ಆರ್ಟ್‌ಫೋರಂ'ನ ಮಾಲೀಕರು ಅದರಲ್ಲಿ ದೊಡ್ಡ ಹುದ್ದೆಯಲ್ಲಿದ್ದ ಪತ್ರಕರ್ತರೊಬ್ಬರನ್ನು ವಜಾಗೊಳಿಸಿದರು. ಇದರ ಪರಿಣಾಮವಾಗಿ, ಕೆಲವು ಲೇಖಕರು ಮತ್ತು ಕಲಾವಿದರು ಪ್ರತಿಕ್ರಿಯೆಯನ್ನು ಬಹಿಷ್ಕರಿಸಿದರು. ಹಾಲಿವುಡ್‌ನ ಪ್ರಮುಖ ವ್ಯಕ್ತಿಯೊಬ್ಬರು ಗಾಜಾ ಮೇಲಿನ ಇಸ್ರೇಲ್ ದಾಳಿಯನ್ನು 'ಹತ್ಯಾಕಾಂಡ' ಎಂದು ಹೇಳಿದ ನಂತರ ಇದ್ದ ಚಿತ್ರಗಳನ್ನು ಸಾಮಾಜಿಕ ಜಾಲತಾಣಗಳ ಮೂಲಕ ಹಂಚಿಕೊಂಡ ನಂತರ ಕ್ರಿಯೇಟಿವ್ ಆರ್ಟ್ಸ್ ಏಜೆನ್ಸಿಯ ನಾಯಕತ್ವದ ಹುದ್ದೆಯೊಂದರಿಂದ ಕೆಳಗಿಳಿಯಬೇಕಾಯಿತು.

ಸ್ಯಾನ್‌ಫ್ರಾನ್ಸಿಸ್ಕೊ ನಗರದ ಕಲಾ ವಸ್ತುಸಂಗ್ರಹಾಲಯದ ಮುಖ್ಯ ಕಾರ್ಯನಿರ್ವಾಹಕರು 'ತಮ್ಮ ವಿರುದ್ಧ ಯಹೂದಿ ವಿರೋಧಿ ದಾಳಿ'ಯನ್ನು ಕೆಲವು ಕಲಾವಿದರು ಮತ್ತು ನೌಕರರು ನಡೆಸಿದ ನಂತರ ಹುದ್ದೆಗೆ ರಾಜೀನಾಮೆ ನೀಡಿದರು. ಯುದ್ಧದ ಆಘಾತಕ್ಕೆ ಅಮೆರಿಕದ ಸಾಂಸ್ಕೃತಿಕ ಹಾಗೂ ಕಲಾ ಜಗತ್ತಿನಲ್ಲಿ ಆಘಾತಕ್ಕೆ ಬರುತ್ತಿದೆ. ಸಿನಿಮಾ ನಿರ್ಮಾಣ ಸಂಸ್ಥೆಗಳು, ವಸ್ತುಸಂಗ್ರಹಾಲಯಗಳು, ವಿಶ್ವವಿದ್ಯಾಲಯಗಳು, ಕೆಲವು ಸಂಸ್ಥೆಗಳ ಕಚೇರಿ ಸಂಘರ್ಷಗಳನ್ನು ಕಂಡಿವೆ. ಆದರೆ, 2023ರ ಅಕ್ಟೋಬರ್ 7ರ ನಂತರ ಅಂದರೆ ಇಸ್ರೇಲ್ ಮೇಲೆ ಹಮಾಸ್ ಬಂಡುಕೋರರು ದಾಳಿ ನಡೆಸಿದ ದಿನ– ಕಲಾ ಜಗತ್ತಿನಲ್ಲಿ ಚರ್ಚೆಗಳ ಪರಿಧಿಯು ಕಿರಿದಾಗುತ್ತಿರುವುದು ಸಾಂಸ್ಕೃತಿಕ ಲೋಕವು ಮುಕ್ತ ಅಭಿವ್ಯಕ್ತಿಗೆ ಹಿಂದಿನಿಂದಲೂ ಹೊಂದಿರುವ ಬದ್ಧತೆಗೆ ಅನುಗುಣವಾಗಿ ಇಲ್ಲ ಎಂದು ಹಲವಾರು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

'ಉದಾರವಾದಿ ಬಹುತ್ವದ ವಿಚಾರವಾಗಿ ಒಂದಿಷ್ಟು ಸಮತಲ ಮೂಡುವಂತೆ ಮಾಡುವಲ್ಲಿ ಅಕ್ಟೋಬರ್ 7ರ ಘಟನೆಯು ದಾರಿ ಮಾಡಿಕೊಟ್ಟಿದೆ ಎಂದು ನಾನು ಆಶಿಸಿದ್ದೆ. ಆದರೆ, ಅದು ಆಗಿಲ್ಲ' ಎಂದು ಪ್ರಿನ್ಸ್‌ಟನ್ ವಿಶ್ವವಿದ್ಯಾಲಯದ ಇತಿಹಾಸ ಪ್ರಾಧ್ಯಾಪಕ ಜೊನಾಥನ್ ಜಿಮ್ಮರ್‌ಮ್ಯಾನ್ ಹೇಳುತ್ತಾರೆ. ಸಾಂಸ್ಕೃತಿಕ ಸಂಸ್ಥೆಗಳ ಒಂದು ವರ್ಗದ ಚಟುವಟಿಕೆಗಳ ಮೇಲೆ ಕಣ್ಣು ಹಾಯಿಸಿದರೆ ಒಂದು ಸಂಗತಿ ಗೋಚರವಾಗುತ್ತದೆ: 'ಇಸ್ರೇಲ್ ಬಗ್ಗೆ ಟೀಕೆ ರೂಪದ ದೃಷ್ಟಿಕೋನವನ್ನು ಹತ್ತಿಕ್ಕಲು ಯತ್ನಿಸುವಲ್ಲಿ ಹೆಚ್ಚಿನವರು ಸಂಸ್ಥೆಗಳ ಆಡಳಿತ ಮಂಡಳಿಗಳಲ್ಲಿ ಇರುವವರು, ಅಂದರೆ ಕಾರ್ಯ ನಿರ್ವಾಹಕರು ಮತ್ತು ಮಾಲೀಕರು. ಕೆಳಗಿನ ಹಂತಗಳ ನೌಕರರು ಹಾಗೂ ಸ್ವತಂತ್ರ ಕಲಾವಿದರು ಇಸ್ರೇಲ್ ಪರವಾದ ದೃಷ್ಟಿಕೋನವನ್ನು ಹತ್ತಿಕ್ಕಲು ಯತ್ನಿಸಿರುವುದು ಕಾಣುತ್ತದೆ.

ಉದಾಹರಣೆಗೆ, ಈಚಿನ ತಿಂಗಳುಗಳಲ್ಲಿ ಬ್ರುಕ್ಲಿನ್ ಪುಸ್ತಕದ ಅಂಗಡಿಯ ನೌಕರನೊಬ್ಬ ಪುಸ್ತಕ ಕಾರ್ಯಕ್ರಮವೊಂದಕ್ಕೆ ಅಡ್ಡಿ ಉಂಟುಮಾಡಿದ. ಏಕೆಂದರೆ, ಅಲ್ಲಿ ಒಬ್ಬ ಮಾತುಗಾರ ಯಹೂದಿ ನಾಯಕನಾಗಿದ್ದ. ಅಲ್ಲದೆ, ಅಲ್ಬನಿ ಪುಸ್ತಕೋತ್ಸವದ ಕಾರ್ಯಕ್ರಮವೊಂದರಲ್ಲಿ, ಇಸ್ರೇಲ್ ಪರ ಲೇಖಕರೊಬ್ಬರ ಜೊತೆ ಭಾಗಿಯಾಗಲು ಇಬ್ಬರು ಲೇಖಕರು ನಿರಾಕರಿಸಿದರು.

[illegible] ವಸ್ತುಸಂಗ್ರಹಾಲಯದ ಮೂವರು ಕೆಲಸಗಾರರು ಪ್ಯಾಲೆಸ್ಟೀನ್ ಲಾಂಛನವೊಂದನ್ನು ಧರಿಸಿದ್ದಕ್ಕಾಗಿ ಕೆಲಸ ಕಳೆದುಕೊಂಡರು. 'ರಾಜಕೀಯ ಸಂದೇಶ, ಘೋಷಣೆ'ಯನ್ನು ರವಾನಿಸುವ ಬಟ್ಟೆಯನ್ನು ಕೆಲಸಗಾರರು ಧರಿಸುವುದನ್ನು ವಸ್ತುಸಂಗ್ರಹಾಲಯದ ನಾಯಕತ್ವವು ನಿರ್ಬಂಧಿಸಿದ ನಂತರ ಈ ರೀತಿ ಆಗಿದೆ. ಇಸ್ರೇಲ್‌ಗೆ ಬೆಂಬಲ ವ್ಯಕ್ತಪಡಿಸುವುದು ಕೆಲವೆಡೆಗಳಲ್ಲಿ 'ಅಪಾಯ' ಎಂಬಂತೆ ಆಗಿದೆ ಎಂದು ಯಹೂದಿ ಪುಸ್ತಕ ಪರಿಷತ್ತಿನ ಮುಖ್ಯ ಕಾರ್ಯನಿರ್ವಾಹಕ ನಾವೋಮಿ ಫೈರ್‌ಸ್ಟೋನ್-ಟೀಟಲ್ ಹೇಳಿದರು. 'ಇಸ್ರೇಲಿ, ಜಿಯೋನಿಸ್ಟ್ (ಸ್ವತಂತ್ರವಾದ ಯಹೂದಿ ರಾಷ್ಟ್ರದ ರಚನೆಯ ಪರ ಇರುವವರು) ಎಂಬಂತಹ ಪದಗಳು ನಿಂದನಾತ್ಮಕ ಎಂಬಂತಾಗಿವೆ. ಇದು ಬಹಳ ನೋವಿನ ಸಂಗತಿ' ಎಂದು ಅವರು ಹೇಳಿದರು.

'ಇದು ಸಾಂಸ್ಕೃತಿಕ ಅಭಿವ್ಯಕ್ತಿಯ ವಿಚಾರದಲ್ಲಿ ಬಹಳ ಆಘಾತಕಾರಿ ಪರಿಣಾಮವನ್ನು ಉಂಟುಮಾಡುತ್ತಿದೆ. ನಾವಿರುವುದು ಸಾಂಸ್ಕೃತಿಕ ಸಮುದಾಯದಲ್ಲಿ. ಅಭಿಪ್ರಾಯದಲ್ಲಿ ಬಹುತ್ವಕ್ಕೆ ಬೆಲೆ ನೀಡುವುದನ್ನು, ಸಂವಾದಗಳಿಗೆ ಅವಕಾಶ ಕಲ್ಪಿಸುವುದನ್ನು ನಾವು ಹೆಮ್ಮೆಯಿಂದ ಕಾಣುತ್ತೇವೆ' ಎಂದು ಅವರು ಹೇಳಿದರು.

ವಿಸ್ತೃತ ನೆಲೆಯಲ್ಲಿ ಹೇಳುವುದಾದರೆ, ಸಾಂಸ್ಕೃತಿಕ ಸಂಸ್ಥೆಗಳಲ್ಲಿ ದೊಡ್ಡ ಸ್ಥಾನಗಳಲ್ಲಿ ಇರುವ ಅವಕಾಶಗಳನ್ನು ಹೆಚ್ಚು ಪಡೆದಿರುವ ಅಮೆರಿಕದ ಹಿರಿಯರು ಇಸ್ರೇಲ್ ನಡೆಸುತ್ತಿರುವ ಮಿಲಿಟರಿ ಕಾರ್ಯಾಚರಣೆಯನ್ನು ಯುವ ಅಮೆರಿಕನ್ನರಿಗಿಂತ ಹೆಚ್ಚು ಬೆಂಬಲಿಸುತ್ತಿದ್ದಾರೆ. ಯುವ ಅಮೆರಿಕನ್ನರು ಸಾಮಾನ್ಯವಾಗಿ ಕೆಳಹಂತದ ಉದ್ಯೋಗಗಳಲ್ಲಿ ಇರುತ್ತಾರೆ. 30 ವರ್ಷಕ್ಕಿಂತ ಕಡಿಮೆ ವಯಸ್ಸಿನ ವಯಸ್ಕರ ಪೈಕಿ ಶೇಕಡ 46ರಷ್ಟು ಮಂದಿ, ಹಮಾಸ್ ನಡೆಸಿದ ಮೊದಲ ದಾಳಿಗೆ ಇಸ್ರೇಲ್ ನೀಡಿದ ಪ್ರತಿಕ್ರಿಯೆ ಸ್ವೀಕಾರಾರ್ಹ ಅಲ್ಲ ಎಂದು ಹೇಳುತ್ತಾರೆ. 50 ವರ್ಷ ಹಾಗೂ ಅದಕ್ಕಿಂತ ಹೆಚ್ಚು ವಯಸ್ಸಾದವರಲ್ಲಿ ಇಂತಹ ಅಭಿಪ್ರಾಯ ಹೊಂದಿರುವವರ ಪ್ರಮಾಣವು ಶೇಕಡ 29ರಷ್ಟು ಮಾತ್ರ ಎಂಬುದನ್ನು ಪ್ಯೂ ರಿಸರ್ಚ್ ಸೆಂಟರ್ ಈ ವರ್ಷ ನಡೆಸಿದ ಸಮೀಕ್ಷೆಯು ಹೇಳಿದೆ.

ಆದರೆ, ಪ್ಯಾಲೆಸ್ಟೀನ್ ಪರ ಮಾತುಗಳ ವಿಚಾರವಾಗಿ ಅತಿಹೆಚ್ಚಿನ ಪ್ರಮಾಣದಲ್ಲಿ ಅಸಹನೆ ವ್ಯಕ್ತಪಡಿಸುತ್ತಿರುವವರು ಆಡಳಿತದ ಹುದ್ದೆಗಳಲ್ಲಿ ಇರುವವರು. ನ್ಯೂಯಾರ್ಕ್‌ನ ಮ್ಯಾನ್‌ಹಟನ್ ಪ್ರದೇಶದಲ್ಲಿರುವ ಪ್ರಮುಖ ಸಾಂಸ್ಕೃತಿಕ ಕೇಂದ್ರವಾದ '92ಎನ್‌ವೈ'ನಲ್ಲಿನ ಬೆಳವಣಿಗೆಗಳನ್ನು ಇಲ್ಲಿ ಉದಾಹರಿಸಬಹುದು. ಯಹೂದಿಯರ ಸಾಂಸ್ಕೃತಿಕ ಕೇಂದ್ರವಾದ ಇದು ಕಳೆದ ಅಕ್ಟೋಬರ್‌ನಲ್ಲಿ, ಪುಲಿಟ್ಜರ್ ಪ್ರಶಸ್ತಿ ಪುರಸ್ಕೃತ ಕಾದಂಬರಿಕಾರ ವಿಯೆಟ್ ಥಾನ್ ಎಂಗುಯೆನ್ ಅವರ ಭಾಗವಹಿಸುವಿಕೆಯನ್ನು ಅನಿರ್ದಿಷ್ಟ ಅವಧಿಗೆ ಮುಂದೂಡಿತು. ಇದಕ್ಕೆ ಅದು ನೀಡಿದ ಕಾರಣ, ಹಮಾಸ್ ದಾಳಿಯ ನಂತರ ಅವರು ಇಸ್ರೇಲ್ ಬಗ್ಗೆ ಕಟುವಾಗಿ ಸಾರ್ವಜನಿಕವಾಗಿ ಆಡಿದ ಮಾತುಗಳು. ಕೇಂದ್ರದ ತೀರ್ಮಾನದ ಪರಿಣಾಮವಾಗಿ, ಎಂಗುಯೆನ್ ಅವರ ಪರ ಇರುವ ಇತರ ಹಲವು ಲೇಖಕರು '92ಎನ್‌ವೈ'ನಲ್ಲಿ ತಮ್ಮ ಭಾಗವಹಿಸುವಿಕೆಯನ್ನು ರದ್ದುಪಡಿಸಿದರು.

ತಮ್ಮ ರಾಜಕೀಯ ನಿಲುವುಗಳನ್ನು ವ್ಯಕ್ತಪಡಿಸುವಂತೆ ಇಲ್ಲ ಎಂಬ ಹೊಸ ನೀತಿಯನ್ನು ಪಾಲಿಸಲಾಗದು ಎಂಬ ಕಾರಣಕ್ಕೆ '92ಎನ್‌ವೈ'ನಲ್ಲಿ ಕೆಲಸ ಮಾಡುವ ಮತ್ತು ಪ್ಯಾಲೆಸ್ಟೀನ್ ಪರವಾಗಿರುವ ಕೆಲವು ನೌಕರರು ಈಚಿನ ಕೆಲವು ತಿಂಗಳುಗಳಲ್ಲಿ ಕೆಲಸ ತೊರೆದಿರುವುದಾಗಿ ವರದಿಯಾಗಿದೆ. ಹೊಸ ನೀತಿಯು ಇಸ್ರೇಲ್ ಪರವಾಗಿರುವ ನಿಲುವುಗಳಿಗೂ ಅನ್ವಯಿಸುತ್ತದೆಯಾದರೂ ಕೆಲಸ ತೊರೆದವರು ಪ್ಯಾಲೆಸ್ಟೀನ್ ನಾಗರಿಕರ ಪರವಾಗಿ ನಿಲ್ಲಲು ಬಯಸಿದ್ದರು.

'ಹತ್ಯಾಕಾಂಡದ ಸಂತ್ರಸ್ತರ ಪರವಾಗಿ ಅಭಿಪ್ರಾಯ ವ್ಯಕ್ತಪಡಿಸಿದ ಸಿಬ್ಬಂದಿಯ ಬಾಯಿ ಮುಚ್ಚಿಸಲು ಯತ್ನಗಳು ಹೆಚ್ಚಾಗಿದ್ದುದನ್ನು, ಅಂತಹ ಸಿಬ್ಬಂದಿಯ ವಿರುದ್ಧ ಪ್ರತೀಕಾರ ತೀರಿಸಿಕೊಳ್ಳುವುದು ಹೆಚ್ಚಾಗಿದ್ದುದನ್ನು ನಾನು ಕಂಡೆ. ಇದರ ಜೊತೆಯಲ್ಲೇ, ಸಂಸ್ಥೆಯು ಇಸ್ರೇಲ್‌ಗೆ ಸ್ಪಷ್ಟ ಬೆಂಬಲ ವ್ಯಕ್ತಪಡಿಸುವ ನಿಲುವು ತಳೆಯಿತು' ಎಂದು '92ಎನ್‌ವೈ'ನಲ್ಲಿ ಬೋಧನಾ ಸಹಾಯಕರಾಗಿ ಅರೆಕಾಲಿಕ ಅವಧಿಗೆ ಕೆಲಸ ಮಾಡುತ್ತಿದ್ದ ಹಜೆಲ್ ಎನ್ನುವವರು ಹೇಳಿದರು. ಇವರು ಇಲ್ಲಿನ ಕೆಲಸ ತೊರೆದಿದ್ದಾರೆ. ಆದರೆ, ಹೊಸ ನೀತಿಯ ಅಡಿಯಲ್ಲಿ ಯಾರನ್ನೂ ಕೆಲಸದಿಂದ ತೆಗೆದಿಲ್ಲ ಎಂದು '92ಎನ್‌ವೈ' ಹೇಳಿದೆ.

ಇಸ್ರೇಲ್ ಪರವಾದ ನಿಲುವು ಅಮೆರಿಕದ ಯಹೂದಿಯರ ಪಾಲಿಗೆ ಅನಿರೀಕ್ಷಿತ ಪರಿಣಾಮಗಳನ್ನು ಕೂಡ ಉಂಟುಮಾಡಬಹುದು. ಅಮೆರಿಕದಲ್ಲಿ ಹೆಚ್ಚುತ್ತಿರುವ ಯಹೂದಿ ವಿರೋಧಿ ಭಾವನೆಯು, ತಾವು ಸುರಕ್ಷಿತರಲ್ಲ ಎಂಬ ಭಾವನೆಯನ್ನು ಯಹೂದಿ ಸಮುದಾಯದವರಲ್ಲಿ ಮೂಡಿಸಿದೆ. ಅಕ್ಟೋಬರ್‌ನ ಭೀಕರ ದಾಳಿಯ ನಂತರದಲ್ಲಿ ಸಾಂಸ್ಕೃತಿಕ ಸಂಸ್ಥೆಗಳಲ್ಲಿ ಕೆಲಸ ಮಾಡುವ ಹಲವಾರು ಯಹೂದಿ ನೌಕರರು, ಹಮಾಸ್ ದಾಳಿಯನ್ನು ಖಂಡಿಸದ ಸಹೋದ್ಯೋಗಿಗಳಿಂದ ತಾವು ವಿಶ್ವಾಸಘಾತಕ್ಕೆ ಒಳಗಾದೆವು ಎಂದು ಭಾವಿಸಿದ್ದೂ ಇದೆ.

ಆದರೆ, ಇಸ್ರೇಲ್‌ಗೆ ಸರ್ಕಾರದ ಮಟ್ಟದಲ್ಲಿ ಹಾಗೂ ಸಂಸ್ಥೆಗಳ ಮಟ್ಟದಲ್ಲಿ ಸಿಗುತ್ತಿರುವ ಬೆಂಬಲದ ಬಲವು 'ಅಮೆರಿಕದ ಜೀವನದಲ್ಲಿ ವಿವಿಧ ಸಂಸ್ಥೆಗಳಲ್ಲಿ ನೆಲೆ ಕಂಡುಕೊಳ್ಳುವಲ್ಲಿ ಸಂಘಟಿತವಾದ ಯಹೂದಿ ಸಮುದಾಯವು ಎಷ್ಟರಮಟ್ಟಿಗೆ ಯಶಸ್ವಿಯಾಗಿದೆ ಎಂಬುದನ್ನು ತೋರಿಸುತ್ತಿದೆ' ಎಂದು ಟೆಂಪಲ್ ವಿಶ್ವವಿದ್ಯಾಲಯದ ಇತಿಹಾಸ ಪ್ರಾಧ್ಯಾಪಕರಾದ ಲಿಲಾ ಕಾರ್ವಿನ್ ಬರ್ಮನ್ ಹೇಳುತ್ತಾರೆ.



ದಿ ನ್ಯೂಯಾರ್ಕ್ ಟೈಮ್ಸ್

ಚುರುಮುರಿ



ಬಾಡೂಟ... ಸಮ್ಮೇಳನ!

• ಗುರು ಪಿ.ಎಸ್.

'ಬಾಡೇ ನಮ್ಮ ಗಾಡು, ಇವರು ಊಟಕ್ಕೂ ನಿಷೇಧ-ಗಿಷೇಧ ಅಂದ್ರೆ ಹೆಂಗೆ' ಪೇಪರ್ ರಪ್ಪನೆ ಕೆಳಗಿಟ್ಟು ಎದ್ದಳು ಹೆಂಡತಿ.

'ಏನಾಯ್ತೇ?' ಕಾಫಿ ಕುಡಿಯುತ್ತಾ ಕೇಳಿದೆ.

'ನಾನು ಮಂಡ್ಯ ಸಾಹಿತ್ಯ ಸಮ್ಮೇಳನಕ್ಕೆ ಹೋಗಬೇಕು ಅಂತ ಒಂದ್ ತಿಂಗಳಿಂದ ಪ್ಲ್ಯಾನ್ ಮಾಡ್ತಿದೀನಿ ಅಂತ ನಿಮಗೆ ಗೊತ್ತಿದೆ ತಾನೆ?'

'ಹೌದು, ಏನಾಯ್ತೀಗ?'

'ಸಾಹಿತ್ಯ ಸಮ್ಮೇಳನದಲ್ಲಿ ಮಾಂಸಾಹಾರ ತಿನ್ನಬಾರದಂತೆ, ಯಾಕಿಷ್ಟು ತಾರತಮ್ಯ?'

'ನೀನು ಸಾಹಿತ್ಯ ಸಮ್ಮೇಳನಕ್ಕೆ ಹೋಗ್ತಿದ್ದೀಯೋ? ಯಾವುದಾದರೂ ಮದುವೆ ಬಾಡೂಟಕ್ಕೆ ಹೋಗ್ತಿದ್ದೀಯೋ? ಈವರೆಗೆ ಅದ್ಯಾವ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ನಾನ್‌ವೆಜ್ ಊಟ ಹಾಕಿದ್ದಾರೆ ಹೇಳು ನೋಡೋಣ'.

'ಅದೆಲ್ಲ ಗೊತ್ತು ರೀ, ಕನ್ನಡ ಸಮ್ಮೇಳನದ ಉದ್ದೇಶವೇ ನಮ್ಮ ನಾಡು-ನುಡಿ, ಸಂಸ್ಕೃತಿ-ಸೊಗಡು ನೆನಪಿಸಿಕೊಳ್ಳೋದು ತಾನೆ...'

'ಹೌದು'.

'ಬಾಡೂಟಕ್ಕೆ ಹೆಸರಾಗಿರೋ ಮಂಡ್ಯದಲ್ಲಿ ನಡೀತಿರೋ ಸಮ್ಮೇಳನದಲ್ಲಿ ಮಾಂಸಾಹಾರ ಇಲ್ಲ ಅಂದ್ರೆ ಹೇಗ್ ರೀ?'

'ಕವನ ಹೇಳಿ ಬಾ ಅಂದ್ರೆ, ಮೂಳೆ ಕಡಿದು ಬರ್ತೀನಿ ಅಂತೀಯಲ್ಲಮ್ಮ ನೀನು' ನಕ್ಕೆ.

'ಊಟದ ವ್ಯವಸ್ಥೆ ಮೊದಲಿನಂತೆ ಇರುತ್ತೆ ಅಂದಿದ್ರೆ ಆಗ್ತಿತ್ತು. ಅದು ಬಿಟ್ಟು ಮಾಂಸಾಹಾರ ನಿಷೇಧ ಅಂತ ಯಾಕ್ ಹೇಳಬೇಕಿತ್ತು, ಇದೇನು ಮಡಿ ಸಮ್ಮೇಳನವಾ?' ಕೆರಳಿದಳು ಪತ್ನಿ.

'ನೋಡು, ಮಾಂಸಾಹಾರಿಗಳು ಸಸ್ಯಾಹಾರ ತಿನ್ನಬಹುದು, ಸಸ್ಯಾಹಾರಿಗಳು ಮಾಂಸಾಹಾರ ತಿನ್ನೋಕ್ಕಾಗಲ್ಲ, ಅದಕ್ಕೇ ಸಾಮೂಹಿಕ ಸ್ವೀಕಾರಾರ್ಹವಾದ ಸಸ್ಯಾಹಾರ ಉತ್ತಮ ಅಲ್ವಾ?'

'ಇದೇನ್ರೀ ನೀವೂ ಹೀಗ್ ಮಾತಾಡ್ತಿದ್ದೀರಾ, ನಮ್ಮ ಆಹಾರ, ನಮ್ಮ ಹಕ್ಕು. ಅದು ಬೇಡ, ಇದು ಬೇಡ ಅಂದ್ರೆ ನನ್ನ ಪಿತ್ತ ನೆತ್ತಿಗೇರುತ್ತಷ್ಟೇ' ಧ್ವನಿಯನ್ನೂ ಏರಿಸಿದಳು.

ಸಮ್ಮೇಳನದ ದಿನ ಬಂದೇ ಬಿಡ್ತು. ಹೊರಟು ನಿಂತಳು ಹೆಂಡತಿ.

'ಇದೇನ್ರೀ, ಇಷ್ಟ್ ದೊಡ್ಡ ಸ್ಟೀಲ್ ಬಾಕ್ಸ್‌ಗಳನ್ನ ಕೊಡ್ತಿದ್ದೀರಿ?'

'ಬರೋವಾಗ ಮಟನ್‌ಪೀಸ್, ಬಿರಿಯಾನಿ ಹಾಕ್ಕೊಂಡು ಬಾ' ಎಂದೆ ಮೆತ್ತಗೆ!

ಸಂಗತ

ಬಿಸಿಯೂಟದಲ್ಲಿ ಮೊಟ್ಟೆ: ಭವಿಷ್ಯದ ಹೂಡಿಕೆ

ಮಕ್ಕಳಲ್ಲಿ ಸಾಮಾನ್ಯವಾಗಿ ಕಂಡುಬರುವ ಅಪೌಷ್ಟಿಕತೆಯ ವಿರುದ್ಧದ ಸಮರದಲ್ಲಿ ಮೊಟ್ಟೆಯು ಬಹಳ ಶಕ್ತಿಯುತವಾದ ಅಸ್ತ್ರವಾಗಿ ಕಾಣುತ್ತಿದೆ

• ರುದ್ರೇಶ್ ಎಸ್.

ದಾವಣಗೆರೆ ಜಿಲ್ಲೆಯ ಗ್ರಾಮಾಂತರ ಭಾಗದ ಶಾಲೆಯೊಂದರ ಮುಖ್ಯೋಪಾಧ್ಯಾಯಿನಿ ಹಾಗೂ ವಿದ್ಯಾರ್ಥಿಗಳಿಂದ ಈಚೆಗೆ ನನಗೆ ಪತ್ರವೊಂದು ಬಂತು. ವಾರದಲ್ಲಿ ಆರು ದಿನ ಮೊಟ್ಟೆ ಕೊಡಲು ಆರಂಭಿಸಿದ ನಂತರ ಮಕ್ಕಳ ಉತ್ಸಾಹ ಹೆಚ್ಚಾಗಿದೆ ಎಂದು ಮುಖ್ಯೋಪಾಧ್ಯಾಯಿನಿ ಹೇಳಿದ್ದರು, ಮಧ್ಯಾಹ್ನದ ಊಟಕ್ಕೆ ತಾವು ಈಗ ಕಾತರದಿಂದ ಕಾಯುತ್ತಿರುವುದಾಗಿ ಮಕ್ಕಳು ಹೇಳಿದ್ದರು.

ಕರ್ನಾಟಕದಲ್ಲಿ ಮತ್ತು ಇಡೀ ದೇಶದಲ್ಲಿ ಮಕ್ಕಳು ಶಾಲೆಗೆ ಬರುವಂತೆ ಮಾಡಲು, ಅವರಲ್ಲಿ ಅಪೌಷ್ಟಿಕತೆಯನ್ನು ನಿವಾರಿಸಲು ಮಧ್ಯಾಹ್ನದ ಬಿಸಿಯೂಟ ಯೋಜನೆಯು ತಳಹದಿಯಂತೆ ಕೆಲಸ ಮಾಡುತ್ತಿದೆ. ಹಿಂದೆ ಇದು ಮಕ್ಕಳ ಹಾಜರಾತಿಯನ್ನು ಹೆಚ್ಚು ಮಾಡುವಲ್ಲಿ ಮಹತ್ವದ ಪಾತ್ರ ವಹಿಸಿತು. ಈಗ ಸಮತೋಲಿತವಾದ, ಪೌಷ್ಟಿಕಾಂಶಗಳಿಂದ ಕೂಡಿದ ಶಾಲಾ ಊಟವು ದುರ್ಬಲ ವರ್ಗಗಳ ಮಕ್ಕಳ ಬದುಕಿನಲ್ಲಿ ತರಬಹುದಾದ ಬದಲಾವಣೆಗಳ ಸಾಧ್ಯತೆಗಳನ್ನು ನಾವು ನೋಡುತ್ತಿದ್ದೇವೆ.

ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆಯ ಪ್ರಕಾರ, ಕರ್ನಾಟಕದಲ್ಲಿ ದುರ್ಬಲ ವರ್ಗಗಳಿಗೆ ಸೇರಿದ ಗಣನೀಯ ಸಂಖ್ಯೆಯ ಮಕ್ಕಳ ಬೆಳವಣಿಗೆ ಕುಂಠಿತವಾಗಿದೆ. ಇದು ಶಾಲೆಗೆ ಸೇರುವ ವಯಸ್ಸಿಗೆ ಮೊದಲೇ ಗೋಚರವಾಗಿರುತ್ತದೆ. ಮಕ್ಕಳಲ್ಲಿ ಶೇ 35.4ರಷ್ಟು ಮಂದಿ ವಯಸ್ಸಿಗೆ ತಕ್ಕಂತೆ ಬೆಳೆದಿರುವುದಿಲ್ಲ, ಶೇ 32.9ರಷ್ಟು ಮಂದಿಯ ತೂಕ ಕಡಿಮೆ ಇರುತ್ತದೆ. ಇದರಿಂದಾಗಿ ಬಹಳ ತೀವ್ರವಾದ ದೀರ್ಘಾವಧಿ ಆರೋಗ್ಯ ಪರಿಣಾಮಗಳು ಉಂಟಾಗಬಹುದು.

ಅಪೌಷ್ಟಿಕತೆ ಹಾಗೂ ರಕ್ತಹೀನತೆಯನ್ನು ನಿವಾರಿಸಲು ಮುನ್ನೆಚ್ಚರಿಕೆಯ ಕ್ರಮಗಳನ್ನು ಕೈಗೊಂಡಿರುವ ಕೆಲವೇ ರಾಜ್ಯಗಳಲ್ಲಿ ಕರ್ನಾಟಕವೂ ಒಂದು. ದುರ್ಬಲ ವರ್ಗಗಳಿಗೆ ಸೇರಿದ ಮಕ್ಕಳು ಹೆಚ್ಚಾಗಿರುವ ಸರ್ಕಾರಿ ಶಾಲೆಗಳನ್ನು ಕೇಂದ್ರವಾಗಿ ಇರಿಸಿಕೊಂಡು ಈ ಕೆಲಸ ಮಾಡಲಾಗುತ್ತಿದೆ. ಮಧ್ಯಾಹ್ನ ಬಿಸಿಯೂಟದ ಜೊತೆಯಲ್ಲಿ ಮೊಟ್ಟೆ ನೀಡಲು ಆರಂಭಿಸುವ ಮೂಲಕ ರಾಜ್ಯದ ಪ್ರಾಥಮಿಕ ಶಿಕ್ಷಣ ಇಲಾಖೆಯು ಶ್ಲಾಘನೀಯ ಕೆಲಸ ಮಾಡಿದೆ.

ಪ್ರೋಟೀನ್, ಖನಿಜಗಳು, ಜೀವಸತ್ವಗಳನ್ನು ಮಕ್ಕಳಿಗೆ ನಿರಂತರವಾಗಿ ಒದಗಿಸುವ ಮೂಲಕ ಈ ಕ್ರಮವು ಮಕ್ಕಳಲ್ಲಿನ ಅಪೌಷ್ಟಿಕತೆಯ ಸಮಸ್ಯೆಯನ್ನು ನಿವಾರಿಸುತ್ತದೆ. ಮಕ್ಕಳಲ್ಲಿನ ಅಪೌಷ್ಟಿಕತೆಯ ವಿರುದ್ಧದ ಸಮರದಲ್ಲಿ ಮೊಟ್ಟೆಯು ಬಹಳ ಶಕ್ತಿಯುತವಾದ ಅಸ್ತ್ರವಾಗಿ ಕಾಣುತ್ತಿದೆ. ಮಕ್ಕಳ ಬೆಳವಣಿಗೆಗೆ ಅಗತ್ಯವಿರುವ ಪೌಷ್ಟಿಕಾಂಶಗಳು ಮೊಟ್ಟೆಯಲ್ಲಿವೆ. ದೇಹದ ಅಂಗಾಂಗಗಳು ಮತ್ತು ಅಂಗಾಂಶಗಳಿಗೆ ಅಗತ್ಯವಾಗಿರುವ ಪ್ರೋಟೀನ್, ಜೀವಸತ್ವಗಳಾದ ಡಿ ಹಾಗೂ ಬಿ12 ಮೊಟ್ಟೆಯಲ್ಲಿ ಹೇರಳವಾಗಿವೆ.

ಹಲವು ಮಕ್ಕಳ ಪಾಲಿಗೆ ಯಶಸ್ವಿ ಜೀವನಕ್ಕೆ ಅಡಿಪಾಯ ನಿರ್ಮಾಣವಾಗುವುದು ಶಾಲಾ ಅವಧಿಯಲ್ಲಿ. ಬೆಂಬಲ ಒದಗಿಸುವ ಕಲಿಕಾ ವಾತಾವರಣ, ಪೌಷ್ಟಿಕಾಂಶವುಳ್ಳ ಆಹಾರವನ್ನು ಒಳಗೊಂಡ ಎರಡು ಅಂಶಗಳಿಗೆ ಹೆಚ್ಚು ವೆಚ್ಚ ಮಾಡುವುದರಿಂದ ನಮ್ಮ ಸರ್ಕಾರಿ ಶಾಲೆಗಳ ಮಕ್ಕಳು ತಮ್ಮ ಪೂರ್ಣ ಸಾಮರ್ಥ್ಯವನ್ನು ಬಳಸಿಕೊಳ್ಳಲು ಅನುವು ಮಾಡಿಕೊಟ್ಟಂತಾಗುತ್ತದೆ. ರಾಜ್ಯದ ಸರ್ಕಾರಿ ಹಾಗೂ ಸರ್ಕಾರಿ ಅನುದಾನಿತ ಶಾಲೆಗಳ ಮಕ್ಕಳಿಗೆ ಮೊಟ್ಟೆ ಒದಗಿಸಲು ಹಾಗೂ ಮೊಟ್ಟೆ ಬೇಡವೆನ್ನುವ ಮಕ್ಕಳಿಗೆ ಆರೋಗ್ಯಕರವಾದ ಪರ್ಯಾಯ ಆಹಾರ ಒದಗಿಸಲು ನಾವು ಪ್ರಾಥಮಿಕ ಶಿಕ್ಷಣ ಇಲಾಖೆಯ ಜೊತೆಗೂಡಿರುವುದು ಈ ಕಾರಣಕ್ಕಾಗಿ. ಈ ಕ್ರಮದಿಂದಾಗಿ ಅಂದಾಜು 55 ಲಕ್ಷ ಮಕ್ಕಳಿಗೆ ಅನುಕೂಲ ಆಗಲಿದೆ. ಅವರಿಗೆ ಶಾಲೆ ಇರುವ ಪ್ರತಿದಿನವೂ ಪೌಷ್ಟಿಕಾಂಶಯುಕ್ತ ಆಹಾರ ಸಿಗುತ್ತದೆ. ಯೋಜನೆಯು ಪರಿಣಾಮಕಾರಿ ಆಗಬೇಕು ಎಂಬ ಉದ್ದೇಶದಿಂದ ಸಮನ್ವಯ, ಪಾರದರ್ಶಕತೆ ತತ್ವದ ಅಡಿ ಅಜೀಂ ಪ್ರೇಮ್‌ಜಿ ಪ್ರತಿಷ್ಠಾನವು ಪ್ರಾಥಮಿಕ ಶಿಕ್ಷಣ ಇಲಾಖೆಯ ಜೊತೆ ನಿಕಟವಾಗಿ ಕೆಲಸ ಮಾಡುತ್ತಿದೆ.



ಮೊಟ್ಟೆಗಳ ವಿಚಾರದಲ್ಲಿನ ತಪ್ಪುಗ್ರಹಿಕೆಗಳನ್ನು ನಿವಾರಿಸುವ ಕೆಲಸ ಕೂಡ ಆಗಬೇಕಿದೆ. ಮೊಟ್ಟೆಯು ಅನಾರೋಗ್ಯಕ್ಕೆ ಕಾರಣವಾಗಬಹುದು, ಇದನ್ನು ತಿನ್ನುವುದರಿಂದ ಮಕ್ಕಳು ಬಹಳ ಬೇಗ ಹರೆಯದ ಹಂತ ತಲುಪಬಹುದು ಎಂಬ ನಂಬಿಕೆ ಕೆಲವರಲ್ಲಿದೆ. ಇವೆಲ್ಲ ಸವಕಲು ಮಾಹಿತಿಯನ್ನು ಆಧರಿಸಿವೆ. ಮೊಟ್ಟೆಗಳಲ್ಲಿನ ಕೊಲೆಸ್ಟ್ರಾಲ್‌ನಿಂದಾಗಿ ಹೃದ್ರೋಗ ಸಮಸ್ಯೆ ಹೆಚ್ಚಬಹುದು ಎಂಬುದೂ ತಪ್ಪು ಗ್ರಹಿಕೆ. ಮೊಟ್ಟೆ ತಿನ್ನುವುದರಿಂದ ಮಕ್ಕಳು ಬಹುಬೇಗ ಹರೆಯಕ್ಕೆ ಬರುತ್ತಾರೆ ಎಂಬುದಕ್ಕೆ ವೈಜ್ಞಾನಿಕ ಆಧಾರಗಳಿಲ್ಲ. ಇಂತಹ ತಪ್ಪುಗ್ರಹಿಕೆಗಳನ್ನು ಹೋಗಲಾಡಿಸುವ ಮೂಲಕ, ಮಧ್ಯಾಹ್ನ ಬಿಸಿಯೂಟದಲ್ಲಿ ಮೊಟ್ಟೆಯನ್ನು ಸೇರಿಸುವ ಮೂಲಕ ನಾವು ನಮ್ಮ ಮಕ್ಕಳಿಗೆ ಆರೋಗ್ಯಕರವಾದ ಭವಿಷ್ಯವನ್ನು ಸೃಷ್ಟಿಸಬಹುದು.

ಈ ಯೋಜನೆಯಿಂದಾದ ಇತರ ಪ್ರಯೋಜನಗಳನ್ನೂ ನಾವು ಕಾಣುತ್ತಿದ್ದೇವೆ. ಉದಾಹರಣೆಗೆ, ಕೆಲವೆಡೆ ಮಹಿಳೆಯರ ನೇತೃತ್ವದ ಸ್ವಸಹಾಯ ಸಂಘಗಳು ಹತ್ತಿರದ ಸರ್ಕಾರಿ ಶಾಲೆಗಳಿಗೆ ಮೊಟ್ಟೆ ಪೂರೈಸುತ್ತಿವೆ. ಹಲವು ಜಿಲ್ಲೆಗಳಲ್ಲಿ ಶಾಲೆಗಳು ಸ್ಥಳೀಯ ಕುಟುಂಬಗಳ ಮಾಲೀಕತ್ವದ ಫಾರ್ಮ್‌ಗಳಿಂದ ಮೊಟ್ಟೆ ತರಿಸಿಕೊಳ್ಳುತ್ತಿವೆ. ಇದರಿಂದಾಗಿ ರೈತರಿಗೆ ಅನುಕೂಲ ಆಗುತ್ತಿದೆ.

ಶಾಲಾ ಆಡಳಿತದ ಹೊಣೆ ಹೊತ್ತವರು, ಶಿಕ್ಷಕರು, ವಿವಿಧ ಸಂಘಟನೆಗಳು ಮತ್ತು ಪಾಲಕರ ಸಾಮೂಹಿಕ ಯತ್ನವನ್ನು ಆಧರಿಸಿ ಈ ಕಾರ್ಯಕ್ರಮದ ಯಶಸ್ಸು ನಿಂತಿದೆ. ಮೊಟ್ಟೆಯನ್ನು ಒಳಗೊಂಡಿರುವ ಮಧ್ಯಾಹ್ನದ ಬಿಸಿಯೂಟ ಯೋಜನೆಯು ಊಟ ಕೊಡುವ ಯೋಜನೆಯಷ್ಟೇ ಅಲ್ಲ; ಇದು ಭವಿಷ್ಯಕ್ಕಾಗಿನ ಹೂಡಿಕೆ.

ಲೇಖಕ: ಅಜೀಂ ಪ್ರೇಮ್‌ಜಿ ಪ್ರತಿಷ್ಠಾನ ಕರ್ನಾಟಕ ವಿಭಾಗದ ಮುಖ್ಯಸ್ಥ

ವಾಚಕರ ವಾಣಿ

ಕನ್ನಡಿಗರ ಕ್ಷಮೆ ಕೋರಲಿ

ಮಂಡ್ಯದಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಮಾಂಸಾಹಾರವನ್ನು ನಿಷೇಧಿಸಿರುವುದು ಕನ್ನಡ ನಾಡಿನ ಬಹುಸಂಸ್ಕೃತಿಗೆ ಮಾಡಿರುವ ಅಪಮಾನವಾಗಿದೆ. ಅಲ್ಲದೆ ಮಾಂಸಾಹಾರವನ್ನು ತಂಬಾಕು ಮತ್ತು ಮದ್ಯದೊಂದಿಗೆ ಹೋಲಿಸಿ ಸೂಚನೆ ಹೊರಡಿಸಿರುವುದು ಆಯೋಜಕರ ರೋಗಿಷ್ಟ ಮನಃಸ್ಥಿತಿಯನ್ನು ತೋರಿಸುತ್ತದೆ. ಇದರಿಂದಾಗಿ ಬಹುಸಂಖ್ಯಾತ ಮಾಂಸಾಹಾರಿಗಳ ಮನಸ್ಸಿಗೆ ನೋವಾಗುತ್ತದೆ ಎಂಬ ಕನಿಷ್ಠ ಜ್ಞಾನವೂ ಇಲ್ಲ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರು ಈ ಕೂಡಲೇ ಕನ್ನಡಿಗರ ಕ್ಷಮೆ ಕೋರಬೇಕು.

ಹುಲಿಕುಂಟೆ ಮೂರ್ತಿ, ಬೆಂಗಳೂರು

ಸಾರ್ವಜನಿಕರ ಮನವಿ: ದಿನಚರಿ ನಿರ್ವಹಿಸಿ

ಐದು ವಿಷಯಗಳನ್ನು ಒಳಗೊಂಡ ಮನವಿಯನ್ನು ನಾನು ನೋಂದಾಯಿತ ಅಂಚೆ ಮೂಲಕ ನವೆಂಬರ್ 2ರಂದು ಮುಖ್ಯಮಂತ್ರಿಯವರಿಗೆ ಲಕೋಟೆಯಲ್ಲಿ ಕಳುಹಿಸಿದ್ದೆ. ಅವುಗಳಲ್ಲಿ ಒಂದು ಮನವಿಯು ಹಂದನಕೆರೆಯ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವಂತೆ ಕೋರಿದ್ದಾಗಿತ್ತು. ಈ ಮನವಿಯ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ಕಳುಹಿಸಲಾಗಿದ್ದು, ಈ ಕುರಿತು ಕೈಗೊಂಡ ಕ್ರಮದ ಬಗ್ಗೆ ಅಲ್ಲಿಂದ ಮಾಹಿತಿ ಪಡೆಯಬಹುದು ಎಂದು 8ರಂದು ಮುಖ್ಯಮಂತ್ರಿಯವರ ಅಧೀನ ಕಾರ್ಯದರ್ಶಿಯಿಂದ ನನಗೆ ಪತ್ರವೊಂದು ಬಂದಿತು. ಆದರೆ ಇನ್ನುಳಿದ ನಾಲ್ಕು ಮನವಿಗಳ ಬಗ್ಗೆ ಯಾವುದೇ ಉತ್ತರವಿಲ್ಲ.

ಅಕ್ಟೋಬರ್ 16ರಂದು ಸಾಧಾರಣ ಅಂಚೆಯಲ್ಲಿ ಮೂರು ವಿಷಯಗಳ ಬಗ್ಗೆ ಮನವಿಯನ್ನು ಕಳುಹಿಸಿದ್ದೆ. ಅವುಗಳ ಬಗ್ಗೆಯೂ ಯಾವುದೇ ಉತ್ತರವಿಲ್ಲ. ನಾನು ಕಳುಹಿಸಿದ್ದ ಇನ್ನುಳಿದ ನಾಲ್ಕು ಮನವಿಗಳು ಏನಾದವು? ನೋಂದಾಯಿತ ಅಂಚೆಯಲ್ಲಿ ಕಳಿಸಿದ ಮನವಿಗಳ ಸ್ಥಿತಿಯೇ ಹೀಗಾದರೆ, ಸಾಧಾರಣ ಅಂಚೆಯಲ್ಲಿ ಕಳುಹಿಸುವ ಮನವಿಗಳ ಗತಿ ಏನು? ಕೆಲವು ಕಚೇರಿಗಳಲ್ಲಿ ಸಾರ್ವಜನಿಕರು ನೀಡಿದ ಅಥವಾ ಅಂಚೆ ಮುಖಾಂತರ ಕಳುಹಿಸಿದ ಮನವಿಗಳಿಗೆ ಸಂಬಂಧಿಸಿದಂತೆ ಯಾವುದೇ ಕ್ರಮ ಕೈಗೊಳ್ಳುವುದಿಲ್ಲ. ಆದ್ದರಿಂದ ಪ್ರತಿ ಸರ್ಕಾರಿ ಕಚೇರಿಯಲ್ಲಿ ಒಂದು ಪುಸ್ತಕದಲ್ಲಿ ದಿನವಹಿ ಬಂದ ಮನವಿ, ಅವನ್ನು ಸಲ್ಲಿಸಿದ ಅರ್ಜಿದಾರರ ಹೆಸರು, ಗ್ರಾಮ, ಮನವಿಯ ವಿಷಯ, ಆ ಮನವಿಯನ್ನು ಯಾವ ಶಾಖೆಗೆ ಅಥವಾ ನೌಕರನಿಗೆ ಕ್ರಮ ಕೈಗೊಳ್ಳಲು ನೀಡಲಾಗಿದೆ, ಅರ್ಜಿಯನ್ನು ಸ್ವೀಕರಿಸಿದ ನೌಕರನ ಸಹಿ, ತೆಗೆದುಕೊಂಡ ಕ್ರಮ, ಈ ಸಂಬಂಧ ಅರ್ಜಿದಾರನಿಗೆ ಮಾಹಿತಿ ನೀಡಿದ ದಿನಾಂಕದಂತಹ ವಿವರಗಳನ್ನು ನಮೂದಿಸಿ, ಕಚೇರಿಯ ಮುಖ್ಯಸ್ಥರ ಗಮನಕ್ಕೆ ತರುವಂತೆ ಆಗಬೇಕು. ಹೀಗಾದರೆ ಸಾರ್ವಜನಿಕರು ನೀಡಿದ ಮನವಿಗಳಿಗೆ ಬೆಲೆ ಸಿಗುತ್ತದೆ.

ಸಿ.ಪುಟ್ಟಯ್ಯ ಹಂದನಕೆರೆ, ತುಮಕೂರು

ಆ... ಅರ್ಧಚಂದ್ರ!

ಅಂತೂ ಇಂತು ಹಿಡಿದೇಬಿಟ್ಟರು
ದೆಹಲಿಯ ನರೇಂದ್ರ
ಮಹಾರಾಷ್ಟ್ರಕ್ಕೊಬ್ಬ ದೇವೇಂದ್ರ
ಬಿಜೆಪಿ ಅಲ್ಲೀಗ ಪೂರ್ಣಚಂದ್ರ
ಮತದಾರ ಕೊಟ್ಟ
'ಕೈ'ಗೆ ಅರ್ಧಚಂದ್ರ!

ಮ.ಗು.ಬಸವಣ್ಣ
ಮೈಸೂರು

ನೇಮಕಾತಿ ಪ್ರಕ್ರಿಯೆ: ನಿಯಮ ಅನ್ವಯವಾಗಿಲ್ಲವೇಕೆ?

ನೇಮಕಾತಿ ಪ್ರಕ್ರಿಯೆಗಾಗಿ ಪ್ರಾಮಾಣಿಕವಾಗಿ ಪರೀಕ್ಷೆ ನಡೆಸಿ, ಅರ್ಹತೆಯ ಆಧಾರದ ಮೇಲೆ ನೇಮಿಸಿಕೊಳ್ಳುವ ಬದ್ಧತೆ ಹಾಗೂ ಪ್ರಾಮಾಣಿಕತೆ ಇಲ್ಲದಿದ್ದರೆ ಸರ್ಕಾರಿ ಪ್ರಾಯೋಜಿತ ನೇಮಕಾತಿ ಪ್ರಾಧಿಕಾರಗಳು ಏಕೆ ಬೇಕು? ಈಗೀಗ ನೇಮಕಾತಿಗಳಲ್ಲಿ ಭ್ರಷ್ಟಾಚಾರ, ಅನ್ಯಾಯ, ಅಕ್ರಮ ಮಿತಿಮೀರಿದೆ. ಪಿಎಸ್‌ಐ ಹುದ್ದೆ ನೇಮಕಾತಿ ಪರೀಕ್ಷಾ ಅಕ್ರಮದ ಬಗ್ಗೆ ಹೈಕೋರ್ಟ್ ಈ ಹಿಂದೆ ಛೀಮಾರಿ ಹಾಕಿ ಮರುಪರೀಕ್ಷೆಗೆ ಆದೇಶಿಸಿತ್ತು. ಈಗ ಆ ಮರುಪರೀಕ್ಷೆಯಲ್ಲೂ ಮೌಲ್ಯಮಾಪನವನ್ನು ನಿಯಮಾನುಸಾರ ಮಾಡಿಲ್ಲವೆಂದು ಹೈಕೋರ್ಟಿನಲ್ಲಿ ದೂರು ದಾಖಲಾಗಿದೆ. ಅಪೆಕ್ಸ್ ಬ್ಯಾಂಕಿನ ನೇಮಕಾತಿಗಾಗಿ ಅಂತಿಮ ಅರ್ಹತಾ ಪಟ್ಟಿಯನ್ನು ಇತ್ತೀಚೆಗೆ ಪ್ರಕಟಿಸಲಾಗಿದೆ. ಆದರೆ ಮೌಖಿಕ ಸಂದರ್ಶನಕ್ಕೆ 30 ಅಂಕ ನಿಗದಿಪಡಿಸಿರುವುದು ಸಹ ಭ್ರಷ್ಟಾಚಾರ ಮಾಡಲೆಂದೇ ಅಲ್ಲವೇ? 'ಬಿ' ಮತ್ತು 'ಸಿ' ಗ್ರೂಪಿನ ಹುದ್ದೆಗಳಿಗೆ ಮೌಖಿಕ ಸಂದರ್ಶನವನ್ನು ಈ ಹಿಂದಿನ ಸರ್ಕಾರವೇ ರದ್ದು ಮಾಡಿದ್ದರೂ ಈ ನಿಯಮವನ್ನು ಈಗಿನ ಸರ್ಕಾರ ಏಕೆ ಅನ್ವಯ ಮಾಡಿಲ್ಲ?

ಸರ್ಕಾರದ ನಿಯಮವನ್ನು ಪಾಲಿಸದಂತಹ ದುಷ್ಟರ ಕೂಟವೇ ಈ ನೇಮಕಾತಿ ಪ್ರಕ್ರಿಯೆಯನ್ನು ನಿಯಂತ್ರಿಸುತ್ತಿದೆಯೇ ಅಥವಾ ಈ ಸಂಗತಿ ಸರ್ಕಾರದ ಗಮನಕ್ಕೆ ಬಂದಿಲ್ಲವೇ? ಸರ್ಕಾರ ಈಗಲಾದರೂ ಗಮನಹರಿಸಿ, ಲಿಖಿತ ಪರೀಕ್ಷೆಯ ಮೌಲ್ಯಮಾಪನದ ಪ್ರಕಟಿತ ಫಲಿತಾಂಶದ ಪ್ರಕಾರ, ಮೆರಿಟ್ ಲಿಸ್ಟಿನ ಆಧಾರದ ಮೇಲೆಯೇ ನೇಮಿಸಿಕೊಳ್ಳಲಿ.

ಎಸ್.ಎನ್.ರಮೇಶ್, ಮಂಡ್ಯ

ಮಳಿಗೆಗಳ ನಡುವೆ ಸೂಕ್ತ ಅಂತರವಿರಲಿ

ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಸಹಜವಾಗಿಯೇ ಹೆಚ್ಚಿನ ಸಂಖ್ಯೆಯಲ್ಲಿ ಆಸಕ್ತರು ಜಮಾಯಿಸುತ್ತಾರೆ. ಆದ್ದರಿಂದ ವಾಣಿಜ್ಯ ಹಾಗೂ ಪುಸ್ತಕ ಮಾರಾಟ ಮಳಿಗೆಗಳ ನಡುವಿನ ಜಾಗದ ಅಂತರ ಜಾಸ್ತಿ ಇದ್ದರೆ ಮಾರಾಟಗಾರರು ಮತ್ತು ಸಾಹಿತ್ಯಾಸಕ್ತರು ನಿರುಮ್ಮಳವಾಗಿ ಕೃತಿಗಳ ಆಯ್ಕೆ ಮತ್ತು ಕೊಂಡುಕೊಳ್ಳುವ ಪ್ರಕ್ರಿಯೆಯಲ್ಲಿ ತೊಡಗಿಕೊಳ್ಳಲು ಅವಕಾಶವಾಗುತ್ತದೆ. ಮಳಿಗೆಗಳಿಗೆ ಸೂಕ್ತ ಗಾಳಿ, ಬೆಳಕಿನ ಜೊತೆಗೆ ಕುಡಿಯುವ ನೀರು ಮತ್ತು ತಾತ್ಕಾಲಿಕ ಶೌಚಾಲಯ ವ್ಯವಸ್ಥೆಯೂ ಇರಬೇಕಾದುದು ಅನಿವಾರ್ಯ. ಹಿಂದೆಲ್ಲಾ ದಾಖಲೆ ಮಟ್ಟದಲ್ಲಿ ಪುಸ್ತಕಗಳು ಖರೀದಿಯಾದ ಉದಾಹರಣೆಗಳು ಇವೆ. ಇದು ಸಮ್ಮೇಳನದ ಯಶಸ್ಸಿನ ಕಿರೀಟಕ್ಕೊಂದು ಗರಿ ಎನ್ನಬಹುದು. ಊಟ ಚೆನ್ನಾಗಿರುವುದರಲ್ಲಿ ಸಮ್ಮೇಳನದ ಯಶಸ್ಸು ಇದೆ ಅನ್ನುವಂತೆ ಆಗಬಾರದು. ಸಂಘಟಕರು ಹಾಗೂ ಸೇರಿದವರ ನಡುವೆ ಸಮನ್ವಯ, ತಾಳ್ಮೆ, ಸಹಕಾರ ಅಗತ್ಯ.

ರುದ್ರಮೂರ್ತಿ ಎಂ.ಜೆ., ಚಿತ್ರದುರ್ಗ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಪ್ಯಾನ್ 2.0
ತೆರಿಗೆದಾರರ ನೋಂದಣಿ ಸೇವೆಗಳ ಹೊಸ ರೂಪ

ದೇಶದ ತೆರಿಗೆ ವ್ಯವಸ್ಥೆ ಮತ್ತು ತೆರಿಗೆದಾರರ ನೋಂದಣಿ ಸೇವೆಗಳನ್ನು ಮತ್ತಷ್ಟು ಸರಳೀಕರಿಸುವ ಹಾಗೂ ಸಂಪೂರ್ಣವಾಗಿ ಡಿಜಿಟಲೀಕರಿಸುವ ಮಹತ್ವದ 'ಪ್ಯಾನ್ 2.0' ಯೋಜನೆಗೆ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಹಣಕಾಸು ವ್ಯವಹಾರಗಳ ಸಂಪುಟ ಸಮಿತಿ ನವೆಂಬರ್ 25ರಂದು ಒಪ್ಪಿಗೆ ನೀಡಿದೆ. ಆದಾಯ ತೆರಿಗೆ ಇಲಾಖೆ ಅನುಷ್ಠಾನಗೊಳಿಸಲಿರುವ ಈ ಯೋಜನೆಗೆ ₹1,435 ಕೋಟಿ ವೆಚ್ಚವಾಗಲಿದೆ. 'ಪ್ಯಾನ್ 2.0 ಯೋಜನೆಯಿಂದಾಗಿ ದೇಶದ ತೆರಿಗೆ ವ್ಯವಸ್ಥೆಯು ಹೆಚ್ಚು ಪರಿಣಾಮಕಾರಿ, ಸುರಕ್ಷಿತ ಮತ್ತು ಸುಲಭವಾಗಿ ಲಭ್ಯವಾಗುವ ಮೂಲಕ ತೆರಿಗೆದಾರರು, ಉದ್ದಿಮೆಗಳಿಗೆ ಅನುಕೂಲವಾಗಲಿದೆ. ಯೋಜನೆಯಿಂದ ಹಣಕಾಸು ವ್ಯವಹಾರದ ಪಾರದರ್ಶಕತೆ ಇನ್ನಷ್ಟು ಹೆಚ್ಚಲಿದೆ' ಎಂದು ಸರ್ಕಾರ ಹೇಳಿದೆ. ಹೊಸ ಯೋಜನೆ ಜಾರಿ ದಿನಾಂಕವನ್ನು ಇನ್ನೂ ಘೋಷಿಸಲಾಗಿಲ್ಲ

ಏನಿದು ಪ್ಯಾನ್ 2.0?

'ಪ್ಯಾನ್' ಅಥವಾ 'PAN' ಎನ್ನುವುದು PERMANENT ACCOUNT NUMBER ನ ಸಂಕ್ಷಿಪ್ತ ರೂಪ. ಅಂಕಿ ಮತ್ತು ಅಕ್ಷರಗಳನ್ನೊಳಗೊಂಡ (Alphanumeric) 10 ಅಂಕಿಗಳ ಸಂಖ್ಯೆಯೇ 'ಪ್ಯಾನ್'. ಆದಾಯ ತೆರಿಗೆ ಪಾವತಿದಾರರು, ಉದ್ದಿಮೆಗಳು ಕಡ್ಡಾಯವಾಗಿ ಹೊಂದಿರಬೇಕಾದ ಶಾಶ್ವತ ಸಂಖ್ಯೆ ಇದು. ಆದಾಯ ತೆರಿಗೆ ಇಲಾಖೆಯು ಈ ಸಂಖ್ಯೆಯನ್ನು ಹೊಂದಿದ ಕಾರ್ಡ್ ಅನ್ನು ತೆರಿಗೆದಾರರಿಗೆ ವಿತರಿಸುತ್ತದೆ. 1972ರಲ್ಲಿ ಮೊದಲ ಬಾರಿಗೆ ದೇಶದಲ್ಲಿ ಪ್ಯಾನ್ ಅನ್ನು ಪರಿಚಯಿಸಲಾಗಿತ್ತು. ಐದು ದಶಕಗಳಲ್ಲಿ ದೇಶದ ತೆರಿಗೆ ವ್ಯವಸ್ಥೆ, ತೆರಿಗೆದಾರರ ನೋಂದಣಿ ಸೇವೆಗಳಲ್ಲಿ ಹಲವು ಬದಲಾವಣೆಗಳಾಗಿವೆ. ಇಲಾಖೆಯು ಈವರೆಗೆ 74.67 ಕೋಟಿ ಪ್ಯಾನ್ ಕಾರ್ಡ್ ವಿತರಿಸಿದೆ. ಇದರಲ್ಲಿ ಶೇ 98ರಷ್ಟು ಪ್ಯಾನ್ ಕಾರ್ಡ್‌ಗಳು ವೈಯಕ್ತಿಕ ತೆರಿಗೆದಾರರ ಬಳಿ ಇವೆ.

ಪ್ಯಾನ್ ಮಾದರಿಯಲ್ಲೇ ಇರುವ 10 ಅಂಕಿಗಳನ್ನೊಳಗೊಂಡ (ಅಕ್ಷರಗಳ ಸಹಿತ) ಮತ್ತೊಂದು ಸಂಖ್ಯೆ ಟ್ಯಾನ್/ TAN (TAX DEDUCTION AND COLLECTION ACCOUNT NUMBER). ತೆರಿಗೆಯನ್ನು ಮೂಲದಲ್ಲೇ ಕಡಿತಗೊಳಿಸುವ ಅಥವಾ ಸಂಗ್ರಹಿಸುವವರು (ಸಾಮಾನ್ಯವಾಗಿ ಉದ್ಯೋಗದಾತ ಕಂಪನಿಗಳು/ ಉದ್ದಿಮೆಗಳು) ಟ್ಯಾನ್ ಹೊಂದಿರುತ್ತಾರೆ. ಇಲಾಖೆಯು ಇಲ್ಲಿಯವರೆಗೆ 73.28 ಲಕ್ಷ ಟ್ಯಾನ್ ವಿತರಿಸಿದೆ.

ಪ್ಯಾನ್ ಮತ್ತು ಟ್ಯಾನ್ ಸಹಿತ ತೆರಿಗೆದಾರರ ನೋಂದಣಿ ಸೇವೆಗಳೂ ಸೇರಿದಂತೆ ದೇಶದ ಒಟ್ಟಾರೆ ತೆರಿಗೆ ವ್ಯವಸ್ಥೆಯನ್ನು ಆಧುನಿಕ ಡಿಜಿಟಲ್ ತಂತ್ರಜ್ಞಾನಕ್ಕೆ ಅನುಗುಣವಾಗಿ ಮೇಲ್ದರ್ಜೆಗೆ ಏರಿಸುವ ಗುರಿಯೊಂದಿಗೆ ಆದಾಯ ತೆರಿಗೆ ಇಲಾಖೆ ರೂಪಿಸಿರುವ ಬಳಕೆಸ್ನೇಹಿ ಹೊಸ ಯೋಜನೆಯೇ ಪ್ಯಾನ್ 2.0.

ಯೋಜನೆಯ ಸಂಕ್ಷಿಪ್ತ ನೋಟ

- ಪ್ಯಾನ್/ಟ್ಯಾನ್‌ಗೆ ಸಂಬಂಧಿಸಿದ ಎಲ್ಲ ಸೇವೆಗಳಿಗೆ ಜನಸ್ನೇಹಿಯಾಗಿರುವ ಒಂದೇ ಪೋರ್ಟಲ್
- ಪರಿಸರ ಸ್ನೇಹಿ, ಕಾಗದ ರಹಿತ ಸೇವೆಗಳಿಗೆ ಒತ್ತು. ಆನ್‌ಲೈನ್‌ನಲ್ಲಿ ಸುಲಭ ಸೇವೆ
- ಯಾವುದೇ ಶುಲ್ಕವಿಲ್ಲದೆ ಪ್ಯಾನ್ ನೀಡಿಕೆ. ಅರ್ಜಿದಾರರಿಗೆ ಕಡಿಮೆ ಅವಧಿಯಲ್ಲಿ ಪ್ಯಾನ್ ವಿತರಣೆ
- ವೈಯಕ್ತಿಕ ಮತ್ತು ಜನಸಂಖ್ಯೆಗೆ ಸಂಬಂಧಿಸಿದ ದತ್ತಾಂಶಗಳ ರಕ್ಷಣೆಗೆ 'ಪ್ಯಾನ್ ಡೇಟಾ ವಾಲ್ಟ್' ಸೇರಿದಂತೆ ಹೆಚ್ಚು ಅತ್ಯಾಧುನಿಕವಾದ ಸುರಕ್ಷಾ ಕ್ರಮಗಳು
- ಜನರ ಪ್ರಶ್ನೆಗಳಿಗೆ ಉತ್ತರಿಸಲು ಮತ್ತು ಕುಂದುಕೊರತೆಗಳನ್ನು ಪರಿಹರಿಸಲು ಪ್ರತ್ಯೇಕ ಕಾಲ್ ಸೆಂಟರ್ ಮತ್ತು ಸಲಹಾ ಕೇಂದ್ರ ಸ್ಥಾಪನೆ

ಪ್ಯಾನ್ ನಡೆದು ಬಂದ ಹಾದಿ

1972	1983	1994	2019	2024
ಪ್ಯಾನ್ ವ್ಯವಸ್ಥೆಯನ್ನು ಪರಿಚಯಿಸಿದ ವರ್ಷ	ಪ್ಯಾನ್ ವಿನ್ಯಾಸ ಮತ್ತು ಅಭಿವೃದ್ಧಿ	ಹೊಸ ಪ್ಯಾನ್ ಜಾರಿ	ಪ್ಯಾನ್ ಬದಲು ಆಧಾರ್/ ಆಧಾರ್ ಬದಲು ಪ್ಯಾನ್ ಬಳಸುವುದಕ್ಕೆ ಅನುಮತಿ	ಪ್ಯಾನ್ 2.0 ಯೋಜನೆಗೆ ಕೇಂದ್ರ ಸಂಪುಟದ ಅನುಮತಿ

ಪ್ಯಾನ್ ಹಂಚಿಕೆ: ಯಾರಿಗೆ, ಎಷ್ಟು?
2024ರ ಮಾರ್ಚ್ 31ರವರೆಗೆ

- **74.67 ಕೋಟಿ** ಆದಾಯ ತೆರಿಗೆ ಇಲಾಖೆಯು ವಿತರಿಸಿರುವ ಪ್ಯಾನ್ ಕಾರ್ಡ್
- **73.16 ಕೋಟಿ** ವೈಯಕ್ತಿಕ ಪ್ಯಾನ್ ಕಾರ್ಡ್‌ಗಳು
- **87.10 ಲಕ್ಷ** ಕಂಪನಿಗಳು/ಕಾರ್ಪೊರೇಟ್ ಸಂಸ್ಥೆಗಳಿಗೆ ಹಂಚಿಕೆ ಮಾಡಿರುವ ಪ್ಯಾನ್
- **42.10 ಕೋಟಿ** ಪ್ಯಾನ್ ಕಾರ್ಡ್ ಹೊಂದಿರುವ ಪುರುಷರು
- **31.05 ಕೋಟಿ** ಪ್ಯಾನ್ ಕಾರ್ಡ್ ಹೊಂದಿರುವ ಮಹಿಳೆಯರು
- **18,205** ಪ್ಯಾನ್ ಕಾರ್ಡ್ ಹೊಂದಿರುವ ಲೈಂಗಿಕ ಅಲ್ಪಸಂಖ್ಯಾತರು

ಹಾಲಿ ಪ್ಯಾನ್ ಕಾರ್ಡ್‌ದಾರರು ಹೊಸ ಕಾರ್ಡ್ ಮಾಡಿಸಬೇಕೇ?

ಈಗಾಗಲೇ ಪ್ಯಾನ್ ಕಾರ್ಡ್ ಹೊಂದಿರುವವರು ಹೊಸ ಯೋಜನೆ ಜಾರಿಯಾದ ಬಳಿಕ ಹೊಸ ಕಾರ್ಡ್‌ಗೆ ಅರ್ಜಿ ಸಲ್ಲಿಸಬೇಕಾಗಿಲ್ಲ. ಈಗಿನ ಪ್ಯಾನ್ ಕಾನೂನುಬದ್ಧವಾಗಿರುತ್ತದೆ. ಈಗಿನಂತೆಯೇ ಅದನ್ನು ಬಳಸಬಹುದು.

ಪ್ಯಾನ್ ಕಾರ್ಡ್‌ನಲ್ಲಿ ವಿವರಗಳ ಪರಿಷ್ಕರಣೆ, ಹೆಸರು, ವಿಳಾಸ ಸೇರಿದಂತೆ ಇನ್ನಿತರ ತಿದ್ದುಪಡಿಗಳನ್ನು ಮಾಡಬೇಕಾಗಿದ್ದರೆ ಮಾತ್ರ ಹೊಸದಾಗಿ ಅರ್ಜಿ ಸಲ್ಲಿಸಬೇಕು. ಪರಿಷ್ಕರಣೆ ಅಥವಾ ತಿದ್ದುಪಡಿಗಾಗಿ ಹೊಸ ಯೋಜನೆ ಜಾರಿಗೆ ಬರುವವರೆಗೆ ಕಾಯಬೇಕಾಗಿಯೂ ಇಲ್ಲ. ಈಗಿನ ವ್ಯವಸ್ಥೆಯ ಅಡಿಯಲ್ಲೇ (ಆಧಾರ್ ಆಧಾರಿತ ಆನ್‌ಲೈನ್ ಸೇವೆ ಅಥವಾ ಕೇಂದ್ರಗಳಿಗೆ ಭೇಟಿ ನೀಡಿ) ಅರ್ಜಿ ಸಲ್ಲಿಸಿ ಪರಿಷ್ಕೃತ/ ತಿದ್ದುಪಡಿ ಮಾಡಿದ ಪ್ಯಾನ್ ಕಾರ್ಡ್ ಪಡೆಯಬಹುದು.

ದತ್ತಾಂಶ ಸುರಕ್ಷಿತವೇ?



ಹೊಸ ಯೋಜನೆಯಲ್ಲಿ ತೆರಿಗೆದಾರರ ನೋಂದಣಿಯ ಡಿಜಿಟಲ್ ಪ್ರಕ್ರಿಯೆ ಸುಗಮಗೊಳಿಸಲು ಮತ್ತು ದತ್ತಾಂಶಗಳ ರಕ್ಷಣೆಗಾಗಿ ಜಾಗತಿಕ ಮಟ್ಟದ ಮಾನದಂಡಗಳನ್ನು ಪಾಲಿಸಲಾಗುತ್ತದೆ. ಗುಣಮಟ್ಟ, ಭದ್ರತೆ ಮತ್ತು ಸೇವಾ ನಿರ್ವಹಣೆಗಾಗಿ ಐಎಸ್‌ಒ ಪ್ರಮಾಣಪತ್ರ ಹೊಂದಿರುವುದನ್ನು ಖಾತರಿ ಪಡಿಸಲಾಗುತ್ತದೆ. ಪ್ಯಾನ್ 2.0 ಯೋಜನೆಯು ಕೇಂದ್ರೀಕೃತ ದತ್ತಾಂಶ ಸಂಗ್ರಹ ಕೋಠಿಯನ್ನು ಹೊಂದಿರಲಿದ್ದು, ಅಂತರರಾಷ್ಟ್ರೀಯ ಮಟ್ಟದಲ್ಲಿ ಲಭ್ಯವಿರುವ ಸುರಕ್ಷತಾ ಕ್ರಮಗಳು, 'ಪ್ಯಾನ್ ಡೇಟಾ ವಾಲ್ಟ್'ನಂತಹ ಸದೃಢ ಭದ್ರತಾ ವ್ಯವಸ್ಥೆಯನ್ನು ಹೊಂದಿರಲಿದೆ ಎಂದು ಆದಾಯ ತೆರಿಗೆ ಇಲಾಖೆ ಹೇಳಿದೆ.

ವೈಶಿಷ್ಟ್ಯಗಳು ಏನು?

ಒಂದೇ ಪೋರ್ಟಲ್: ಸದ್ಯ ಪ್ಯಾನ್‌ಗೆ ಸಂಬಂಧಿಸಿದ ಸೇವೆಗಳನ್ನು ನೀಡಲು ಆದಾಯ ತೆರಿಗೆ ಇಲಾಖೆಯು ಇ-ಫೈಲಿಂಗ್ ಪೋರ್ಟಲ್, ಯುಟಿಐಐಟಿಎಸ್ಎಲ್ ಪೋರ್ಟಲ್ ಮತ್ತು ಪ್ರೊಟಿಯಾನ್ ಇ-ಗವರ್ನೆನ್ಸ್ ಪೋರ್ಟಲ್‌ಗಳನ್ನು ಬಳಸುತ್ತಿದೆ. ಪ್ಯಾನ್ 2.0 ಯೋಜನೆಯಲ್ಲಿ ಪ್ಯಾನ್/ ಟ್ಯಾನ್‌ಗೆ ಸಂಬಂಧಿಸಿದ ಸಮಗ್ರ ಸೇವೆಗಳನ್ನು ನೀಡಲು ಇಲಾಖೆಯು ಒಂದೇ ಪೋರ್ಟಲ್ ಅನ್ನು ಅಭಿವೃದ್ಧಿ ಪಡಿಸಲಿದೆ. ಪ್ಯಾನ್/ಟ್ಯಾನ್ ಹಂಚಿಕೆ, ಮಾಹಿತಿ ಪರಿಷ್ಕರಣೆ, ತಿದ್ದುಪಡಿ, ಆನ್‌ಲೈನ್ ಪ್ಯಾನ್ ದೃಢೀಕರಣ (ಒಪಿವಿ), ನಿಮ್ಮ ತೆರಿಗೆ ಪರಿಶೀಲನಾ ಅಧಿಕಾರಿಯನ್ನು ತಿಳಿದುಕೊಳ್ಳಿ (ನೋ ಯುವರ್ ಎಒ), ಆಧಾರ್-ಪ್ಯಾನ್ ಜೋಡಣೆ ಸ್ಥಿತಿಗತಿ ಪರಿಶೀಲನೆ, ಪ್ಯಾನ್ ದೃಢೀಕರಣ, ಇ-ಪ್ಯಾನ್‌ಗೆ ಅರ್ಜಿ ಸಲ್ಲಿಸುವುದು, ಪ್ಯಾನ್ ಕಾರ್ಡ್ ಮರು ಮುದ್ರಣಕ್ಕೆ ಅರ್ಜಿ ಹಾಕುವುದು ಸೇರಿದಂತೆ ಪ್ಯಾನ್/ಟ್ಯಾನ್‌ಗೆ ಸಂಬಂಧಿಸಿದ ಎಲ್ಲ ಸೇವೆಗಳನ್ನೂ ತೆರಿಗೆದಾರರು ಈ ಪೋರ್ಟಲ್‌ನಲ್ಲಿ ಪಡೆಯಬಹುದು.

ಕಾಗದ ರಹಿತ: ಹೊಸ ವ್ಯವಸ್ಥೆಯಲ್ಲಿ ಎಲ್ಲ ಪ್ರಕ್ರಿಯೆಗಳೂ ಕಾಗದ ರಹಿತವಾಗಿರಲಿವೆ

ಶುಲ್ಕ ರಹಿತ: ಪ್ಯಾನ್ ಹಂಚಿಕೆ/ಪರಿಷ್ಕರಣೆ/ತಿದ್ದುಪಡಿ ಎಲ್ಲವೂ ಉಚಿತ. ಇ-ಪ್ಯಾನ್ ಅನ್ನು ಅರ್ಜಿದಾರರ ನೋಂದಾಯಿತ ಇ-ಮೇಲ್ ವಿಳಾಸಕ್ಕೆ ಆದಾಯ ತೆರಿಗೆ ಇಲಾಖೆ ಕಳುಹಿಸಲಿದೆ. ಮುದ್ರಿತ ಪ್ಯಾನ್ ಕಾರ್ಡ್ (ಡೆಬಿಟ್/ಕ್ರೆಡಿಟ್ ಕಾರ್ಡ್ ಮಾದರಿಯ) ಬೇಕೆಂದಿದ್ದರೆ ಅರ್ಜಿದಾರ ₹50 ಶುಲ್ಕವನ್ನು ಪಾವತಿಸಬೇಕು. ಹೊಸ ಕಾರ್ಡ್ ಅನ್ನು ಭಾರತದಿಂದ ಹೊರಗಡೆ ಇರುವ ವಿಳಾಸಕ್ಕೆ ತಲುಪಿಸಬೇಕಾದರೆ ಅರ್ಜಿದಾರರು ₹15 ಮತ್ತು ಅಂಚೆ ಶುಲ್ಕ ಪಾವತಿಸಬೇಕು.

ಸಾಮಾನ್ಯ ಗುರುತಿನ ಸಂಖ್ಯೆ: ಸರ್ಕಾರಿ ಏಜೆನ್ಸಿಗಳ ಡಿಜಿಟಲ್ ವ್ಯವಸ್ಥೆಯಲ್ಲಿ ಗುರುತಿನ ದೃಢೀಕರಣಕ್ಕಾಗಿ ಈ ಪ್ಯಾನ್ ಕಾರ್ಡ್ ಅನ್ನು ಸಾಮಾನ್ಯ ಗುರುತಿನ ಸಂಖ್ಯೆಯಾಗಿ ಪರಿಗಣಿಸಲಾಗುತ್ತದೆ.

ಸಶಕ್ತ ಕ್ಯುಆರ್ ಕೋಡ್

ಪ್ಯಾನ್ ಕಾರ್ಡ್‌ಗಳಲ್ಲಿ ಕ್ಯುಆರ್ ಕೋಡ್ ಹೊಸದೇನಲ್ಲ. 2017-18ರಿಂದ ವಿತರಿಸಲಾಗುತ್ತಿರುವ ಎಲ್ಲ ಪ್ಯಾನ್ ಕಾರ್ಡ್‌ಗಳು ಕ್ಯುಆರ್ ಕೋಡ್ ಹೊಂದಿವೆ. ಪ್ಯಾನ್ 2.0 ಯೋಜನೆಯ ಪ್ಯಾನ್ ಕಾರ್ಡ್‌ಗಳು ಹೆಚ್ಚು ಸಶಕ್ತವಾದ ಅಂದರೆ, ಪ್ಯಾನ್ ದತ್ತಾಂಶ ಸಂಗ್ರಹದಲ್ಲಿರುವ ಪರಿಷ್ಕೃತ ಮಾಹಿತಿಗಳನ್ನು ನೀಡುವ ಕ್ಯುಆರ್ ಕೋಡ್ ಹೊಂದಿರಲಿವೆ. 2017-18ಕ್ಕೂ ಮೊದಲು ವಿತರಿಸಲಾದ (ಕ್ಯುಆರ್ ಕೋಡ್ ಹೊಂದಿಲ್ಲದ) ಪ್ಯಾನ್ ಕಾರ್ಡ್‌ಗಳನ್ನು ಹೊಂದಿರುವವರು ಈಗಿರುವ ವ್ಯವಸ್ಥೆಯಲ್ಲೇ ಕ್ಯುಆರ್ ಕೋಡ್ ಇರುವ ಕಾರ್ಡ್‌ಗಾಗಿ ಅರ್ಜಿ ಸಲ್ಲಿಸುವುದಕ್ಕೆ ಅವಕಾಶ ಇದೆ.

ಕ್ಯುಆರ್ ಕೋಡ್‌ಗಳು ಪ್ಯಾನ್ ಹಾಗೂ ಅದರಲ್ಲಿನ ವಿವರಗಳನ್ನು ದೃಢೀಕರಿಸಲು ಸಹಾಯ ಮಾಡುತ್ತವೆ. ಸದ್ಯ ಮಾಹಿತಿಗಳನ್ನು ಪರಿಶೀಲಿಸುವುದಕ್ಕಾಗಿ ಪ್ರತ್ಯೇಕವಾದ ಕ್ಯುಆರ್ ರೀಡರ್ ಅಪ್ಲಿಕೇಷನ್ ಇದೆ.

ಒಂದಕ್ಕಿಂತ ಹೆಚ್ಚು ಪ್ಯಾನ್ ಹೊಂದಿದ್ದರೆ?

1961ರ ಆದಾಯ ತೆರಿಗೆ ಕಾಯ್ದೆ ಪ್ರಕಾರ, ಒಬ್ಬರು ಒಂದೇ ಪ್ಯಾನ್ ಹೊಂದಿರಬೇಕು. ಒಂದಕ್ಕಿಂತ ಹೆಚ್ಚು ಪ್ಯಾನ್ ಹೊಂದಿದ್ದರೆ, ಕಾರ್ಡ್‌ದಾರರು ತಮ್ಮ ವ್ಯಾಪ್ತಿಯ ತೆರಿಗೆ ಪರಿಶೀಲನಾ ಅಧಿಕಾರಿಯ ಗಮನಕ್ಕೆ ತಂದು ಹೆಚ್ಚುವರಿ ಪ್ಯಾನ್ ಅನ್ನು ಡಿಲೀಟ್ ಮಾಡಬೇಕು ಅಥವಾ ನಿಷ್ಕ್ರಿಯಗೊಳಿಸಬೇಕು.

ಪ್ಯಾನ್ 2.0 ಯೋಜನೆಯಲ್ಲಿ ಸುಧಾರಿತ ವ್ಯವಸ್ಥೆ ಅಳವಡಿಸಿಕೊಳ್ಳುವುದರಿಂದ ಹೆಚ್ಚುವರಿ ಪ್ಯಾನ್ ಗುರುತಿಸಬಹುದು ಅಥವಾ ಅರ್ಜಿದಾರರೊಬ್ಬರು ಒಂದಕ್ಕಿಂತ ಹೆಚ್ಚು ಬಾರಿ ಪ್ಯಾನ್‌ಗೆ ಮನವಿ ಸಲ್ಲಿಸಿರುವುದನ್ನು ಪತ್ತೆಹಚ್ಚಬಹುದಾಗಿದೆ. ಅಲ್ಲದೇ ಹೊಸ ವ್ಯವಸ್ಥೆಯು ಕೇಂದ್ರೀಕೃತವಾಗಿರಲಿದ್ದು, ಅತ್ಯಾಧುನಿಕವೂ ಆಗಿರಲಿದೆ. ಹೀಗಾಗಿ, ವ್ಯಕ್ತಿಯೊಬ್ಬರು ಒಂದಕ್ಕಿಂತ ಹೆಚ್ಚು ಪ್ಯಾನ್ ಹೊಂದಿರುವ ಸಾಧ್ಯತೆಯನ್ನು ಕಡಿಮೆ ಮಾಡುತ್ತದೆ ಎಂದು ಆದಾಯ ತೆರಿಗೆ ಇಲಾಖೆ ಹೇಳಿದೆ.

ಆಧಾರ: ಪಿಟಿಐ, ಆದಾಯ ತೆರಿಗೆ ಇಲಾಖೆ ವೆಬ್‌ಸೈಟ್, ಪಿಐಬಿ

ಸಿನಿ ಬಿಟ್ಸ್

ತೆರೆಗೆ ಬರಲಿದೆ 'ರಕ್ತ ಕಾಶ್ಮೀರ'

ಉಪೇಂದ್ರ ಹಾಗೂ ರಮ್ಯ ಜೋಡಿಯಾಗಿ ನಟಿಸಿದ್ದ 'ರಕ್ತ ಕಾಶ್ಮೀರ' ಚಿತ್ರ ಈಗ ತೆರೆಗೆ ಬರಲು ಸಿದ್ಧವಾಗಿದೆ. ಬಹಳ ವರ್ಷಗಳ ಹಿಂದೆ ನಿರ್ದೇಶಕ ಎಸ್.ವಿ.ರಾಜೇಂದ್ರ ಸಿಂಗ್ ಬಾಬು ಘೋಷಿಸಿದ್ದ 'ಭೀಮೂಸ್ ಬ್ಯಾಂಗ್ ಬ್ಯಾಂಗ್ ಕಿಡ್ಸ್' ಚಿತ್ರವೇ ಇದೀಗ ಶೀರ್ಷಿಕೆ ಬದಲಿಸಿಕೊಂಡು ತೆರೆಗೆ ಬರಲು ಅಣಿಯಾಗಿದೆ ಎನ್ನುತ್ತಿವೆ ಮೂಲಗಳು.

'ಪಾಕ್ ಆಕ್ರಮಿತ ಕಾಶ್ಮೀರವನ್ನು ವಾಪಸ್ ಪಡೆಯುವ ಪ್ರಧಾನಿ ಮೋದಿ ಅವರ ಹೇಳಿಕೆಯನ್ನು ಈ ಚಿತ್ರದಲ್ಲಿ ಬಳಸಿಕೊಳ್ಳಲಾಗಿದೆ. ಇದೇ ಚಿತ್ರದ ಪ್ರಮುಖ ಕಥಾಹಂದರವಾಗಿದೆ. ಗಡಿ ಪ್ರದೇಶವಷ್ಟೇ ಅಲ್ಲ, ಬೆಂಗಳೂರಿನಲ್ಲೂ ಉಗ್ರಗಾಮಿಗಳ ಕಾಟವಿದೆ. ಅದರ ನಿರ್ಮೂಲನೆಗೆ ಸಂಬಂಧಿಸಿದ ಕಥಾವಸ್ತುವನ್ನೂ ಈ ಚಿತ್ರ ಹೊಂದಿದೆ' ಎನ್ನುತ್ತಿದೆ ಚಿತ್ರತಂಡ.

ಎಂಡಿಎಂ ಪ್ರೊಡಕ್ಷನ್ ಲಾಂಛನದಲ್ಲಿ ನಿರ್ಮಾಣವಾಗಿರುವ ಚಿತ್ರಕ್ಕೆ ಗುರುಕಿರಣ್ ಸಂಗೀತ ನಿರ್ದೇಶನವಿದೆ. ಎಸ್.ವಿ ರಾಜೇಂದ್ರಸಿಂಗ್ ಬಾಬು ಅವರೆ ಕಥೆ, ಚಿತ್ರಕಥೆ ಬರೆದಿದ್ದು, ಸಂಭಾಷಣೆ ಎಂ.ಎಸ್ ರಮೇಶ್ ಅವರದು. ದೊಡ್ಡಣ್ಣ, ಓಂಪ್ರಕಾಶ್ ರಾವ್, ಕುರಿ ಪ್ರತಾಪ್ ಮುಂತಾದವರಿದ್ದಾರೆ.


ರಮ್ಯ, ಉಪೇಂದ್ರ

ಜ.31ಕ್ಕೆ 'ನೋಡಿದವರು ಏನಂತಾರೆ' ರಿಲೀಸ್

ಶೀರ್ಷಿಕೆಯ ಮೂಲಕವೇ ಗಮನಸೆಳೆದಿರುವ ನವೀನ್ ಶಂಕರ್ ನಟನೆಯ, ಕುಲದೀಪ್ ಕಾರಿಯಪ್ಪ ನಿರ್ದೇಶನದ 'ನೋಡಿದವರು ಏನಂತಾರೆ' ಸಿನಿಮಾ 2025ರ ಜ.31ರಂದು ಬಿಡುಗಡೆಯಾಗಲಿದೆ.

ನಾಗೇಶ್ ಗೋಪಾಲ್ ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ನವೀನ್ ಶಂಕರ್ ಚಿತ್ರದ ನಾಯಕನಾಗಿ ನಟಿಸಿದ್ದು, ಅಪೂರ್ವ ಭಾರದ್ವಾಜ್ ನಾಯಕಿಯಾಗಿ ಬಣ್ಣಹಚ್ಚಿದ್ದಾರೆ. 'ಗುರುದೇವ್ ಹೊಯ್ಸಳ', 'ಕ್ಷೇತ್ರಪತಿ' ಮತ್ತು 'ಸಲಾರ್' ಸಿನಿಮಾಗಳಲ್ಲಿ ರಗಡ್ ಆಗಿ ನಟಿಸಿ ಗಮನಸೆಳೆದಿದ್ದ ನವೀನ್ ಶಂಕರ್ ಈ ಸಿನಿಮಾದಲ್ಲಿ ಭಿನ್ನವಾದ ಪಾತ್ರವೊಂದರ ಮೂಲಕ ಪ್ರೇಕ್ಷಕರೆದುರಿಗೆ ಬರುತ್ತಿದ್ದಾರೆ. 'ನವೀನ್ ಶಂಕರ್ ಅವರ ಪಾತ್ರ ನಮ್ಮೆಲ್ಲರ ಒಳಗಿರುವ ಒಬ್ಬ ಮನುಷ್ಯನ ಕಥೆ ಹಾಗೂ ಭಾವನೆಗಳನ್ನು ಹೇಳುತ್ತದೆ. ಜೀವನದಲ್ಲಿ ನಮ್ಮ ಅಸ್ತಿತ್ವದ ಬಗ್ಗೆಯೇ ನಮಗೆ ಕಾಡುವ ಪ್ರಶ್ನೆಗಳು, ಪ್ರೀತಿ, ಆತ್ಮಾವಲೋಕನ ಹಾಗೂ ಬಾಂಧವ್ಯಗಳ ಸುತ್ತ ಈ ಸಿನಿಮಾ ಸಾಗುತ್ತದೆ' ಎಂದಿದ್ದಾರೆ ನಿರ್ದೇಶಕರು.


ನವೀನ್ ಶಂಕರ್

ಅಶ್ವಿನ್ ಕೆನಡಿ ಛಾಯಾಚಿತ್ರಗ್ರಹಣ, ಮಯೂರೇಶ್ ಅಧಿಕಾರಿ ಸಂಗೀತ ನಿರ್ದೇಶನ, ಮನು ಶೆಡಗಾರ್ ಸಂಕಲನ ಚಿತ್ರಕ್ಕಿದೆ. ಕುಲದೀಪ್ ಕಾರಿಯಪ್ಪ ಅವರು ಬರೆದ ಕಥೆ ಮತ್ತು ಚಿತ್ರಕಥೆಗೆ ಸಾಯಿ ಶ್ರೀನಿಧಿ, ಪ್ರಜ್ವಲ್ ರಾಜ್ ಮತ್ತು ಸುನಿಲ್ ವೆಂಕಟೇಶ್ ಸಂಭಾಷಣೆ ಬರೆದಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

❎ **ನೆರೆಯ ಬಾಂಗ್ಲಾದೇಶದಲ್ಲಿ** ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ದೌರ್ಜನ್ಯ ಪ್ರಕರಣಗಳು ಹೆಚ್ಚಾಗುತ್ತಿರುವಂತೆಯೇ, ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೊವೊಂದು ಹರಿದಾಡುತ್ತಿದೆ. 'ಬಾಂಗ್ಲಾದೇಶದಲ್ಲಿ ಹಿಂದೂ ಮಹಿಳೆಯರ ಮೇಲೆ ಅತ್ಯಾಚಾರ ಎಸಗಿ ಕೊಲೆ ಮಾಡಲಾಗುತ್ತಿದೆ 'ಎಂದು ಹೇಳಿಕೊಂಡು 'ಎಕ್ಸ್', ಫೇಸ್‌ಬುಕ್‌ನಲ್ಲಿ ಆ ವಿಡಿಯೊವನ್ನು ಪೋಸ್ಟ್ ಮಾಡಲಾಗುತ್ತಿದೆ. ಹಲವರು ಅದನ್ನು ಹಂಚಿಕೊಳ್ಳುತ್ತಿದ್ದಾರೆ. ಆದರೆ, ಇದು ಸುಳ್ಳು. ಆ ವಿಡಿಯೊ ಬಾಂಗ್ಲಾದೇಶದ್ದಲ್ಲ.

✅ **ವಿಡಿಯೊವನ್ನು ಹಲವು ಫ್ರೇಮ್‌ಗಳಾಗಿ** ವಿಭಜಿಸಿ, ಕೀ ಫ್ರೇಮ್ ಒಂದನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಾಡಿದಾಗ, ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊವನ್ನೇ ಹೋಲುವ ವಿಡಿಯೊ ತುಣುಕು ಯು-ಟ್ಯೂಬ್‌ನಲ್ಲಿ ಸಿಕ್ಕಿತು. ಈ ವರ್ಷದ ಜುಲೈ 2ರಂದು ಆ ವಿಡಿಯೊವನ್ನು ಅಪ್‌ಲೋಡ್ ಮಾಡಲಾಗಿತ್ತು. ಅದು ಉತ್ತರ ಪ್ರದೇಶದ ಹಾಥರಸ್‌ನಲ್ಲಿ ನಡೆದ ಕಾಲ್ತುಳಿತದ ವಿಡಿಯೊ ಎಂದು ಹೇಳಲಾಗಿತ್ತು (ಆ ದುರ್ಘಟನೆಯಲ್ಲಿ 122 ಮಂದಿ ಮೃತಪಟ್ಟಿದ್ದರು). ಇದರ ಆಧಾರದಲ್ಲಿ ನಿರ್ದಿಷ್ಟ ಪದಗಳನ್ನು ಬಳಸಿ ಇಂಟರ್‌ನೆಟ್‌ನಲ್ಲಿ ಜಾಲಾಡಿದಾಗ, ಜುಲೈ 5ರಲ್ಲಿ ಪೋಸ್ಟ್ ಮಾಡಿದ ವಿಡಿಯೊದಲ್ಲೂ ಅದು ಹಾಥರಸ್‌ನ ವಿಡಿಯೊ ಎಂದು ಬರೆಯಲಾಗಿತ್ತು. ಮಾಧ್ಯಮವೊಂದರಲ್ಲಿ ಪ್ರಕಟಗೊಂಡ ವರದಿಯಲ್ಲೂ ಈ ವಿಡಿಯೊದಲ್ಲಿರುವ ದೃಶ್ಯಾವಳಿಯನ್ನು ಹೋಲುವ ಚಿತ್ರವನ್ನೇ ಬಳಸಲಾಗಿತ್ತು. ವಿಡಿಯೊವು ಬಾಂಗ್ಲಾದಲ್ಲ, ಹಾಥರಸ್ ಕಾಲ್ತುಳಿತ ಪ್ರಕರಣಕ್ಕೆ ಸಂಬಂಧಿಸಿದ್ದು ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ದೇವರು ಬೆಳಕಿನ ಹಾಗೆ!

ನುಡಿ ಬೆಳಗು 83



ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

ಪ್ರತಿಯೊಬ್ಬ ಪ್ರಜ್ಞಾವಂತ ಮನುಷ್ಯನಲ್ಲಿಯೂ ಒಂದು ಪ್ರಶ್ನೆ ಕಾಡುತ್ತಲೇ ಇರ್ತದ. ಅದೇನೆಂದರಏನಿದು ಜಗತ್ತು ಎನ್ನುವುದು. ಒಬ್ಬ ಬಡವ ಇದ್ದಾನೆ, ಇನ್ನೊಬ್ಬ ಶ್ರೀಮಂತ ಇದ್ದಾನೆ. ಒಬ್ಬ ರೋಗಿ ಇದ್ದಾನೆ. ಇನ್ನೊಬ್ಬ ಆರೋಗ್ಯವಂತ ಇದ್ದಾನೆ. ಒಬ್ಬ ಶ್ರೇಷ್ಠನಾದ, ಒಬ್ಬ ಕನಿಷ್ಠನಾದ. ಒಬ್ಬನಿಗೆ ಮಿನರಲ್ ವಾಟರ್ ಕುಡಿದರೂ ನೆಗಡಿ ಬರತ್ತೈತಿ, ಇನ್ನೊಬ್ಬನಿಗೆ ಹಳ್ಳದ ನೀರು ಕುಡಿದರೂ ಏನೂ ಆಗೋದಿಲ್ಲ. ಅಂತರರಾಷ್ಟ್ರೀಯ ಶಾಲೆಯಲ್ಲಿ ಓದಿದವ ಫೇಲ್ ಆಗ್ತಾನ, ಜೋಪಡಿಯಲ್ಲಿ ಹುಟ್ಟಿದ ಮಗ ಮೊದಲ ಸ್ಥಾನ ಗಳಿಸ್ತಾನ. ಇವೆಲ್ಲ ಯಾವ ಕಾರಣಕ್ಕ ಹಿಂಗಾಗ್ತೈತಿ? ಈ ಶ್ರೇಷ್ಠ ಕನಿಷ್ಠತೆಗಳು ಯಾಕ?

ಬಹಳಾ ಮಂದಿ ಹೇಳ್ತಾರ, 'ನಾವು ಬಹಳಾ ಒಳ್ಳೇವ್ರು ಅದೀವ್ರೀ. ಆದ್ರೂ ನಮಗ ಯಾಕ್ ಸಂಕಟ ಕಾಡ್ತದೆ' ಅಂತ. ಕಾಡುವುದು ಏನು? ಯಾಕ್ ಈ ವ್ಯತ್ಯಾಸ? ಈ ಜಗತ್ತಿನ ತಾರತಮ್ಯಗಳಿಗೆ ಕಾರಣ ಯಾರು? ಈ ಜಗತ್ತನ್ನು ಸೃಷ್ಟಿ ಮಾಡಿದ್ದು ದೇವರು ಅನ್ನೋದನ್ನು ನಂಬೋದಾದರ ದೇವರಲ್ಲಿ ತಾರತಮ್ಯ ಮನೋಭಾವ ಐತಲ್ಲ ಅಂದಂಗೆ ಆತಲ್ಲ. ದೇವರು ಅಂದರ ಎಲ್ಲವನ್ನೂ ಸಮಾನವಾಗಿ ನೋಡಬೇಕಿತ್ತಲ್ಲ? ದೇವರಲ್ಲೇ ಏನೋ ವ್ಯತ್ಯಾಸ ಆಗಿರಬೇಕು ಅಂತ ಅನಸ್ತದಲ್ಲ. ಆದರೆ ಜ್ಞಾನಿಗಳು 'ಈ ಬಡತನ, ಸಿರಿತನ, ಸುಖ, ದುಃಖ ಇದಕ್ಕೆಲ್ಲಾ ದೇವರು ಕಾರಣನಲ್ಲ' ಅಂತಾರ.

ನೀವು ಭೂಮಿಯಲ್ಲಿ ಗೋಧಿ ಬಿತ್ತೀರಿ, ಜೋಳ ಬಿತ್ತೀರಿ, ಅಲಸಂದೆ ಬಿತ್ತೀರಿ. ಮಳೆ ಗೋಧಿಗೆ ಬೇರೆ, ಅಲಸಂದೆಗೆ ಬೇರೆ, ಜೋಳಕ್ಕೆ ಬೇರೆ ಬೇರೆ ಅಂತ ಆಗಿಲ್ಲ. ಎಲ್ಲದಕ್ಕೂ ಒಂದೇ ಮಳೆ. ಆದರ ಎಲ್ಲವೂ ಒಂದೇ ಕಾಳು ಬಂದಿಲ್ಲ. ಬೇರೆ ಬೇರೆ ಕಾಳುಗಳೇ ಬಂದಾವ. ಮಳೆ ಒಂದೇ ಆಗಿದ್ದರೂ ಕಾಳು ಬೇರೆ ಬೇರೆ ಯಾಕಾದವು ಅಂದರ ಮಳೆಯಲ್ಲಿ ದೋಷ ಇಲ್ಲ. ಕಾಳುಗಳ ಆಂತರ್ಯದೊಳಗೆ ಯಾವ ಶಕ್ತಿ ಐತೋ ಅದರಂತೆ ಕಾಳುಗಳಾದವು ಅಷ್ಟೆ. ದೇವರು ಅಂದರ ಮಳೆ ಇದ್ದಂಗೆ. ದೇವರು ಅಂದರ ಕ್ಯಾಟೆಲೆಟಿಕ್ ಏಜೆಂಟ್. ಅಂದರ ನೀರು ಐತಲ್ಲ, ಅದು ಎರಡು ವಸ್ತುಗಳು ಕೂಡಿ ಆಗ್ತದೆ. ಎರಡು ಜಲಜನಕ ಮತ್ತು ಒಂದು ಆಮ್ಲಜನಕ ಸೇರಿದರೆ ನೀರು ಆಗುತ್ತದೆ. ಈ ಎರಡು ವಸ್ತುಗಳು ಕೂಡಲು ಸೂರ್ಯನ ಬೆಳಕು ಬೇಕು. ಸೂರ್ಯನ ಬೆಳಕು ಇಲ್ಲದೆ ನೀರಾಗೋದಿಲ್ಲ. ಆಮ್ಲಜನಕ, ಜಲಜನಕ ಎರಡನ್ನೂ ಒಡೆದು ನೋಡಿ ಅದರೊಳಗೆ ಬೆಳಕಿಲ್ಲ. ಆದರೆ, ಕೂಡಿದರೆ ನೀರಾಗುತ್ತವೆ. ಇದು ನಿಸರ್ಗದ ವೈಶಿಷ್ಟ್ಯ. ದೇವರು ಬೆಳಕಿದ್ದಂಗೆ. ಬೆಳಕಿದ್ದರೆ ಓದಬಹುದು,ಬರಿಯಬಹುದು, ಒಬ್ಬನ ಕಪಾಳಕ್ಕೆ ಹೊಡೆಯಬಹುದು. ಯಾವುದೂ ಬೆಳಕಿನ ದೋಷ ಅಲ್ಲ.

ಮಾಡುವವನ ದೋಷ ಅಷ್ಟೆ. ರಾಮಕೃಷ್ಣ ಪರಮಹಂಸರು ಇದ್ದರು. ಅವರು ನರೇಂದ್ರನನ್ನು ಮುಟ್ಟಲಿಲ್ಲ. ಸುಮ್ಮನೆ ಹೀಂಗೆ ನೋಡಿದ್ದಕ್ಕೇ ವಿವೇಕಾನಂದ ನಿರ್ಮಾಣ ಆಗಿದ್ದ. ಹಾಂಗಿದ್ದರು ರಾಮಕೃಷ್ಣ ಪರಮಹಂಸರು. ಕಾಳಿ ದೇವಿಯ ಪರಮ ಭಕ್ತರು ಅವರು. ಅಂಥವರಿಗೆ ಕ್ಯಾನ್ಸರ್ ಆತು. ಇದಕ್ಕೆ ಕಾರಣ ಯಾರು? ಜೀವನದಲ್ಲಿ ಏನಾದರೂ ತಪ್ಪು ಮಾಡಿದ್ದರೇನು? ಬರೀ ತಪಸ್ಸು ಮಾಡಿದ್ದರು. ಆದರೂ ಅವರಿಗೆ ಕ್ಯಾನ್ಸರ್ ಆತಲ್ಲ ಯಾಕ? ನಮ್ಮ ಬದುಕಿನಲ್ಲಿ ಬರುವ ಸುಖ ದುಃಖ ಎಲ್ಲದಕ್ಕೂ ನಾವು ಮಾಡುವ ಕರ್ಮಗಳೇ ಕಾರಣ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಡಿಸೆಂಬರ್ 9, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಹೇಮಂತ ಋತು ತಿಥಿ: ಮಾರ್ಗಶಿರ ಶುಕ್ಲ ಅಷ್ಟಮಿ ಗಂ. 08-03 ನಂತರ ನವಮಿ ಗಂ. 30-02 ನಕ್ಷತ್ರ: ಪೂರ್ವಾಭಾದ್ರ ಗಂ. 14-56 ಯೋಗ: ಸಿದ್ಧಿ (ಆಸ್ರಿಕ್) ಗಂ. 25-05, ವೃಶ್ಚಿಕ ಮಾಸದ 23 ನೇ ದಿನ, ಮಳೆನಕ್ಷತ್ರ: ಜ್ಯೇಷ್ಠ 3.
ರಾಹುಕಾಲ: ಬೆಳಿಗ್ಗೆ 07-30 – 09-00
ಸೂರ್ಯೋದಯ: 06-46 ಸೂರ್ಯಾಸ್ತ : 06-00
ಮುಸ್ಲಿಂ ದಿನಾಂಕ: 06 ಜುಮಾದುಸ್ಸಾನಿ
ಅದೃಷ್ಟ ಸಂಖ್ಯೆ: 7, 10

ಮೇಷ: ಎಲ್ಲವನ್ನೂ ಎದುರಿಸುವ ಮಾನಸಿಕ ಧೈರ್ಯವನ್ನು ತಂದುಕೊಳ್ಳಿರಿ. ಅಸಾಧ್ಯ ಕಾರ್ಯಗಳನ್ನು ಸಹ ಸಾಧಿಸಿ ತೋರಿಸುವಷ್ಟು ಮನೋಬಲ ನಿಮ್ಮಲ್ಲಿದೆ. ಗುರು ನಿಂದನೆಯಂತಹ ಪಾಪದ ಕೆಲಸಗಳನ್ನು ಮಾಡಬೇಡಿ.

ವೃಷಭ: ಅಲೆದಾಟದಿಂದ ದೇಹಾಯಾಸವಾದರೂ, ಕಾರ್ಯಗಳು ಉತ್ತಮ ರೀತಿಯಲ್ಲಿ ಸಾಗುವುದು. ಅವಕಾಶಗಳು ಕೈತಪ್ಪಿ ಹೋಗದಂತೆ ನೋಡಿಕೊಳ್ಳಿ. ನಾಯಕತ್ವದ ಸ್ಥಾನಕ್ಕೆ ಆಯ್ಕೆಯಾಗುವ ಲಕ್ಷಣಗಳಿದೆ.

ಮಿಥುನ: ತಪ್ಪು ಮಾಡುವುದರ ಬದಲು ಸಹೋದ್ಯೋಗಿಗಳ ಸಹಕಾರ ಪಡೆಯಿರಿ. ಸುಗಂಧ ಹಾಗೂ ಅಲಂಕಾರಿಕ ದ್ರವ್ಯಗಳ ಮಾರಾಟ ಲಾಭದಾಯಕ ವಾಗಲಿದೆ. ಅರಣ್ಯ ಪಾಲಕರಿಗೆ ಭಡ್ತಿ ಸಂಭವವಿದೆ.

ಕರ್ಕಾಟಕ: ಸಾಂಸಾರಿಕವಾಗಿ ಮತ್ತು ಆರ್ಥಿಕವಾಗಿ ಇಷ್ಟಾರ್ಥ ಸಿದ್ಧಿಸುವುದು. ಅದನ್ನು ಉಪಯೋಗಿಸಿಕೊಳ್ಳಿರಿ. ವಸ್ತ್ರ ವಿನ್ಯಾಸದಲ್ಲಿ ವಿಶೇಷ ಪರಿಣತಿ ಪಡೆದು ಕೊಳ್ಳಬಹುದು. ನನೆಗುದಿಗೆ ಬಿದ್ದ ಕೆಲಸಗಳು ಪುನರಾರಂಭವಾಗುತ್ತದೆ.

ಸಿಂಹ: ಬಾಕಿ ಇರಿಸಿದ ಕೆಲಸ ಕಾರ್ಯಗಳನ್ನು ಪೂರ್ಣಗೊಳಿಸುವ ಬಗ್ಗೆ ಗಮನವಹಿಸಿ ಇಲ್ಲವಾದಲ್ಲಿ ಅಧಿಕಾರಿಗಳ ಕೋಪಕ್ಕೆ ಕಾರಣವಾಗುವಿರಿ. ಸಾಕಷ್ಟು ತಯಾರಿ ಮಾಡಿಕೊಂಡರೆ ಗುರಿ ಮುಟ್ಟುವುದು ಕಷ್ಟವೇನಲ್ಲ.

ಕನ್ಯಾ: ಹೃದಯ ಸಂಬಂಧಿ ರೋಗ ಹೊಂದಿದವರಿಗೆ ರೋಗ ಉಲ್ಬಣವಾಗುವ ಸಾಧ್ಯತೆಗಳಿದೆ. ವೃತ್ತಿ ಬದುಕಿನಲ್ಲಿ ಉನ್ನತ ಸ್ಥಾನಕ್ಕೇರಲು ಇದು ಸಕಾಲವಾಗಿದೆ. ರೈತಾಪಿ ವರ್ಗದವರಲ್ಲಿ ಕೃಷಿಕಾರ್ಯಗಳು ಬಿಡುವಿಲ್ಲದೆ ನಡೆಯುವುದು.

ತುಲಾ: ಜೀವನ ಶೈಲಿಯನ್ನು ಇನ್ನೊಬ್ಬರ ಬಲವಂತದ ಮೇಲೆ ಬದಲಾಯಿಸಿ ಕೊಳ್ಳಬೇಕಾಗುತ್ತದೆ. ಆಡಳಿತ ಮಂಡಳಿಯವರೆದುರು ಕಾರ್ಮಿಕರ ಪರವಾಗಿ ನಿಲ್ಲುವುದು ನಿಮ್ಮ ಉದ್ಯೋಗಕ್ಕೆ ಕಂಟಕವನ್ನು ತಂದೊಡ್ಡಲಿದೆ.

ವೃಶ್ಚಿಕ: ಒಳ್ಳೆಯ ಯೋಚನಾಶಕ್ತಿ ಹಾಗೂ ಸಂಸ್ಕೃತಿಯನ್ನು ಪಡೆದಿರುವುದು ಉಪಯೋಗಕ್ಕೆ ಬರಲಿದೆ. ಸಂಜೆಯ ಸಮಯದಲ್ಲಿ ಬೆಲೆ ಬಾಳುವ ವಸ್ತು ಕಾಣೆಯಾಗುವ ಸಂಭವವಿದೆ. ಆರಕ್ಷಕರಿಗೆ ವಿಶ್ರಾಂತಿಯ ಕೊರತೆ ಕಾಣುವುದು.

ಧನು: ಯಾವುದೇ ಹೊಸ ಉದ್ಯೋಗ ಅಥವಾ ಕರಾರುಗಳ ವಿಚಾರದಲ್ಲಿ ಮುಂದುವರೆಯುವುದು ಸರಿಯಲ್ಲ. ಸಾಮಾಜಿಕವಾಗಿ ವರ್ಚಸ್ಸು ಹೆಚ್ಚುವುದು. ಔಷಧ ವ್ಯಾಪಾರಿಗಳ ಆರ್ಥಿಕ ಸ್ಥಿತಿಗತಿಗಳು ಉತ್ತಮಗೊಳ್ಳುವುದು.

ಮಕರ: ಸಂಬಂಧಿಗಳ ಅಪಹಾಸ್ಯದ ಮಾತುಗಳು ಆತ್ಮವಿಶ್ವಾಸವನ್ನು ಇಮ್ಮಡಿಯಾಗಿಸಿ ಕಠಿಣ ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸುವಿರಿ. ವ್ಯಾವಹಾರಿಕ ಸಂಬಂಧಗಳು ವಿಸ್ತಾರಗೊಳ್ಳುವ ಸಮಯ ಇದಾಗಿದೆ.

ಕುಂಭ: ಕುಟುಂಬದ ಸದಸ್ಯರು ಜೊತೆಗೂಡಿ ಸಂತೋಷವಾಗಿ ಕಾಲ ಕಳೆಯುವ ಅವಕಾಶ ಲಭ್ಯವಾಗುವುದು. ಮನಸ್ಸಿನಲ್ಲಿ ಯಾವುದೇ ರೀತಿಯ ಗೊಂದಲಗಳಿ ರುವುದಿಲ್ಲ. ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಜಯ ಗಳಿಸುವಿರಿ.


ಮೀನ: ನಿಮ್ಮ ಕೆಲಸಕ್ಕೆ ದಾಯಾದಿ ವರ್ಗದವರಿಂದ ಅಪರೂಪಕ್ಕೆ ಅನುಕೂಲ ಉಂಟಾಗಲಿದೆ. ನಡವಳಿಕೆಯನ್ನು ಕೊಂಚ ಹಿಡಿತದಲ್ಲಿಟ್ಟುಕೊಂಡರೆ ಸಂದಿಗ್ಧ ಪರಿಸ್ಥಿತಿಗೆ ಸಿಲುಕುವುದು ತಪ್ಪುವುದು. ವ್ಯಾಧಿಗಳಿಂದ ಗುಣಮುಖರಾಗುವಿರಿ.

ಪದಬಂಧ 5886

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಎಣ್ಣೆ ಮಜ್ಜನ (4)
3.ಶ್ರೇಷ್ಠವಾದ ಕಾವ್ಯವಿದು (4)
5.ಪಕ್ಷಿ ಅಥವಾ ಗಂಧರ್ವ ಎಂದರೂ ಸರಿ (3)
7.ಗ್ರಂಥದ ವಿಭಾಗ (3)
8.ಇನ್ನೂ ಕರು ಹಾಕದ ಹಸು (3)
10.ಗದುಗಿನ ನಾರಾಯಣಪ್ಪನ ಕಾವ್ಯನಾಮ (5)
11.ಸಾಲ ಮಾಡಿ ಖರೀದಿಸಿರುವ ರಸದಾಳಿ ಕಬ್ಬು (3)
13.ದೊಡ್ಡ ಹಾರೆ ಇಲ್ಲಿದೆ (3)
14.ಮುಂದೆ ಬರಲಿರುವ ಕಾಲ (3)
16.ಮಧುರವಾದ ಧ್ವನಿ (4)
17.ಶೀರ್ಷಿಕೆ ಅಥವಾ ತಲೆಬರಹ (4)

ಮೇಲಿಂದ ಕೆಳಕ್ಕೆ
1.ರಾಜನಿಲ್ಲದ ಸ್ಥಿತಿ (4)
2.ನಖರ ಮಾಡುವಾಗ ಕಾಣಿಸಿದ ಉಗುರು! (2)
3.ಮಧುರ ಫಲಗಳನ್ನು ನೀಡುವ ವೃಕ್ಷ (2)
4.ತಡೆ ಎನ್ನುವ ಪದಕ್ಕೆ ಪರ್ಯಾಯ ಪದ (3)
6.ಚಂಬೆಳಕಿನ ಕವಿ ಎಂದೇ ಪ್ರಖ್ಯಾತರಾದವರು (7)
7.ಸರ ತರಲು ತೋರಿದ ಅರ್ಜೆಂಟು (4)
9.ಒಳ್ಳೆಯ ಮಗಳು (4)
12.ಸಮಾರಂಭಕ್ಕೆ ಬೇಕಾದ ಸಾಮಗ್ರಿ (4)
13.ಗುಂಪಿನಲ್ಲಿ ಕಾಣಿಸಿರುವ ಲೆಕ್ಕಿಗ (3)
14.ಭವನದಲ್ಲೇ ಅಸ್ತಿತ್ವ! (2)
15.ಗುರುವಿಗೆ ತಕ್ಕ ವಿದ್ಯಾರ್ಥಿ ತಿರುಗಿದ್ದಾನಲ್ಲಾ! (2)



5885ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಿಪ್ಲವ 3.ಇಂಚರ 5.ಜನಾನುರಾಗಿ 7.ಗಡಿ 9.ಮಾಸ 10.ಕಾವಳ 11.ಅಡಪ 12.ಹಾವು 13.ಕಸು 16.ಮರ್ಮಭೇದಕ 18.ಡಬರಿ 19.ಚಮ್ಮಾರ

ಮೇಲಿಂದ ಕೆಳಕ್ಕೆ:
1.ವಿನಿಯೋಗ 2.ವಜ 3.ಇಂಗಿತ 4.ರಸಾಭಾಸ 6.ನಾರಿಕೇಳ 8.ಡಿಕಾವು 9.ಮಾಪಕ 11.ಅನುವಾದ 12.ಹಾಯಿಗಡ 14.ಸುಕುಮಾರ 15.ಕಮರಿ 17.ಕಚ

ಸುಡೊಕು 6271

2		6					5	
	4	7	5		6	3		2
3	8	5		2			6	
	2							4
			2	4	7			6
	7					5		
7		9			8		4	
4				3			8	1
	6		4		2	7		3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6270 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

ಬಜೆಟ್ ಅಧಿವೇಶನದಲ್ಲಿ ವಿಮಾ ತಿದ್ದುಪಡಿ ಮಸೂದೆ ಮಂಡನೆ?

ನವದೆಹಲಿ (ಪಿಟಿಐ): ವಿಮಾ ವಲಯದಲ್ಲಿ ಶೇ 100ರಷ್ಟು ವಿದೇಶಿ ನೇರ ಬಂಡವಾಳ (ಎಫ್‌ಡಿಐ) ಹೂಡಿಕೆಗೆ ಅವಕಾಶ ಕಲ್ಪಿಸಲು ಕೇಂದ್ರ ಸರ್ಕಾರ ಮುಂದಾಗಿದೆ. ಆದರೆ, ಇದಕ್ಕೆ ಸಂಬಂಧಿಸಿದಂತೆ ವಿಮಾ ತಿದ್ದುಪಡಿ ಮಸೂದೆಯನ್ನು ಪ್ರಸ್ತುತ ನಡೆಯುತ್ತಿರುವ ಚಳಿಗಾಲದ ಸಂಸತ್ ಅಧಿವೇಶನದಲ್ಲಿ ಮಂಡಿಸುವ ಸಾಧ್ಯತೆ ಕಡಿಮೆ ಎಂದು ಮೂಲಗಳು ತಿಳಿಸಿವೆ.

ಕರಡು ಮಸೂದೆ ಬಗ್ಗೆ ಕೇಂದ್ರ ಹಣಕಾಸು ಸೇವೆಗಳ ಇಲಾಖೆಯು ಸಾರ್ವಜನಿಕರಿಂದ ಡಿಸೆಂಬರ್ 10ರ ವರೆಗೆ ಅಭಿಪ್ರಾಯ ಆಹ್ವಾನಿಸಿದೆ. ಅಲ್ಲದೆ, ವಿಮಾ ವಲಯದ ಪ್ರತಿನಿಧಿಗಳಿಂದ ಅಭಿಪ್ರಾಯ ಸ್ವೀಕರಿಸಿ ಪರಾಮರ್ಶೆ ನಡೆಸಿದ ಬಳಿಕವಷ್ಟೇ ಮಸೂದೆಯನ್ನು ಅಂತಿಮಗೊಳಿಸಬೇಕಿದೆ ಎಂದು ಹೇಳಿವೆ.



ಈ ಪ್ರಕ್ರಿಯೆ ಪೂರ್ಣಗೊಳಿಸಲು ಕಾಲಾವಕಾಶ ಕಡಿಮೆಯಿದೆ. ಹಾಗಾಗಿ, ಚಳಿಗಾಲದ ಅಧಿವೇಶನದಲ್ಲಿ ಮಂಡಿಸುವ ಸಾಧ್ಯತೆ ಇಲ್ಲ. ಬಜೆಟ್ ಅಧಿವೇಶನದಲ್ಲಿ ಮಸೂದೆ ಮಂಡನೆ ಮಾಡುವ ನಿರೀಕ್ಷೆಯಿದೆ ಎಂದು ತಿಳಿಸಿವೆ.

ವಿಮಾ ಕಂಪನಿಗಳಲ್ಲಿ ಎಫ್‌ಡಿಐ ಹೂಡಿಕೆ, ಒಂದೇ ಕಂಪನಿಗೆ ಜೀವ ವಿಮೆ, ಸಾಮಾನ್ಯ ಅಥವಾ ಆರೋಗ್ಯ ವಿಮೆ ಸೌಲಭ್ಯ ನೀಡಲು ಸಂಯೋಜಿತ ಪರವಾನಗಿ ನೀಡಿಕೆ ಸಂಬಂಧ ವಿಮಾ ಕಾಯ್ದೆ 1938ಕ್ಕೆ ತಿದ್ದುಪಡಿ ತರುವ ಬಗ್ಗೆ ಕೇಂದ್ರ ಹಣಕಾಸು ಸಚಿವಾಲಯವು ಸರ್ಕಾರಕ್ಕೆ ಪ್ರಸ್ತಾಪ ಸಲ್ಲಿಸಿದೆ.

ಪ್ರಸ್ತುತ ಭಾರತದ ವಿಮಾ ಕಂಪನಿಗಳಲ್ಲಿ ಶೇ 74ರಷ್ಟು ಎಫ್‌ಡಿಐ ಹೂಡಿಕೆಗೆ ಅವಕಾಶವಿದೆ.

ರಾಮನಗರ ರೇಷ್ಮೆಗೂಡು



ಮಿಶ್ರತಳಿ (ಸಿ.ಬಿ) ₹265-572
ದ್ವಿತಳಿ (ಬಿ.ವಿ) ₹405-782

ವಿತ್ತೀಯ ಕೊರತೆ ಗುರಿ ಮೀರದಿರಲಿ: ಸಿಐಐ

ನವದೆಹಲಿ (ಪಿಟಿಐ): ದೇಶದ ಆರ್ಥಿಕತೆ ಬೆಳವಣಿಗೆ ದೃಷ್ಟಿಯಿಂದ ಕೇಂದ್ರ ಸರ್ಕಾರವು ವಿತ್ತೀಯ ಕೊರತೆಯ ಗುರಿ ಮೀರದಂತೆ ಎಚ್ಚರ ವಹಿಸಬೇಕಿದೆ ಎಂದು ಭಾರತೀಯ ಕೈಗಾರಿಕಾ ಒಕ್ಕೂಟ (ಸಿಐಐ) ಒತ್ತಾಯಿಸಿದೆ.

ಬಜೆಟ್‌ನಲ್ಲಿ ನಿಗದಿಪಡಿಸಿರುವ ಗುರಿಯಂತೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ ವಿತ್ತೀಯ ಕೊರತೆಯನ್ನು ಶೇ 4.9ರಲ್ಲಿಯೇ ಕಾಯ್ದುಕೊಳ್ಳಬೇಕು. 2025–26ರಲ್ಲಿ ಶೇ 4.5ರಷ್ಟಕ್ಕೆ ತಗ್ಗಿಸಬೇಕು. ಈ ಗುರಿ ಮೀರಿದರೆ ದೇಶದ ಆರ್ಥಿಕತೆ ಬೆಳವಣಿಗೆಗೆ ತೊಡಕಾಗಲಿದೆ ಎಂದು ಹೇಳಿದೆ.

‘ಜಾಗತಿಕಮಟ್ಟದ ಆರ್ಥಿಕತೆ ಬೆಳವಣಿಗೆಯು ಮಂದಗತಿಯಲ್ಲಿದ್ದರೂ ಭಾರತದ ಬೆಳವಣಿಗೆ ವೇಗವಾಗಿದೆ. ಆರ್ಥಿಕತೆಯ ಸ್ಥಿರತೆ ಕಾಯ್ದುಕೊಳ್ಳಲು ಜಾಗರೂಕವಾಗಿ ಆರ್ಥಿಕ ಚಟುವಟಿಕೆಗಳನ್ನು ನಿರ್ವಹಣೆ ಮಾಡಬೇಕಿದೆ’ ಎಂದು ಸಿಐಐನ ಪ್ರಧಾನ ನಿರ್ದೇಶಕ ಚಂದ್ರಜಿತ್ ಬ್ಯಾನರ್ಜಿ ಹೇಳಿದ್ದಾರೆ.

ವರಮಾನ ಮತ್ತು ವೆಚ್ಚದ ನಡುವಣ ಅಂತರವಾದ ವಿತ್ತೀಯ ಕೊರತೆಯ ಮಟ್ಟವನ್ನು ನಿಗದಿತ ಗುರಿಯಲ್ಲಿ ಉಳಿಸಿಕೊಂಡರೆ ಒಟ್ಟು ಆಂತರಿಕ ಉತ್ಪನ್ನದ (ಜಿಡಿಪಿ) ಹೆಚ್ಚಳಕ್ಕೆ ನೆರವಾಗಲಿದೆ. ಜೊತೆಗೆ, ಸಾಲದ ಅನುಪಾತವನ್ನು ತಗ್ಗಿಸ ಬಹುದಾಗಿದೆ ಎಂದು ಹೇಳಿದ್ದಾರೆ.

2030–31ರ ವೇಳೆಗೆ ಶೇ 50ರಷ್ಟು ಸಾಲವನ್ನು ಕಡಿಮೆ ಮಾಡಲು ಮುಂದಾಗಬೇಕು. 2025–26ನೇ ಸಾಲಿನ ಬಜೆಟ್‌ನಲ್ಲಿಯೇ ಇದಕ್ಕೆ ಸಿದ್ಧತೆ ಆರಂಭಿಸಬೇಕು. ದೀರ್ಘಾವಧಿಯಲ್ಲಿ ಇದನ್ನು ಶೇ 40ಕ್ಕಿಂತ ಕೆಳಕ್ಕೆ ಇಳಿಸಬೇಕು ಎಂದು ಹೇಳಿದ್ದಾರೆ.

ಖಾತೆಯಲ್ಲಿ ಕನಿಷ್ಠ ಮೊತ್ತ ಎಷ್ಟಿರಬೇಕು?



ಹಣಕಾಸು ಸಾಕ್ಷರತೆ
ರಾಜೇಶ್ ಕುಮಾರ್ ಟಿ.ಆರ್.

ಯಾವುದೇ ಬ್ಯಾಂಕ್‌ನಲ್ಲಿ ಉಳಿತಾಯ ಖಾತೆ ತೆರೆದಾಗ ಕನಿಷ್ಠ ಸರಾಸರಿ ಮೊತ್ತ (ಎಎಂಬಿ) ಕಾಯ್ದುಕೊಳ್ಳುವುದು ಕಡ್ಡಾಯ. ಆದರೆ, ಅನೇಕರಿಗೆ ಈ ಸರಾಸರಿ ಮೊತ್ತ ಎಂದರೇನು? ಬ್ಯಾಂಕ್‌ಗಳು ಅದನ್ನು ಹೇಗೆ ಲೆಕ್ಕ ಹಾಕುತ್ತವೆ? ಈ ನಿಯಮ ಪಾಲಿಸದಿದ್ದರೆ ಯಾವ ಸಂದರ್ಭದಲ್ಲಿ ಎಷ್ಟು ದಂಡ ಕಟ್ಟಬೇಕಾಗುತ್ತದೆ? ಎನ್ನುವ ಬಗ್ಗೆ ಸರಿಯಾದ ತಿಳುವಳಿಕೆ ಇರುವುದಿಲ್ಲ. ಬನ್ನಿ, ಈ ಲೇಖನದಲ್ಲಿ ಇದರ ಪರಿಪೂರ್ಣ ಮಾಹಿತಿ ತಿಳಿಯೋಣ.

ಏನಿದು ಕನಿಷ್ಠ ಸರಾಸರಿ ಮೊತ್ತ?: ಒಂದು ತಿಂಗಳ ಅವಧಿಯಲ್ಲಿ ಬ್ಯಾಂಕ್ ಖಾತೆಯಲ್ಲಿ ಕಾಯ್ದುಕೊಳ್ಳಬೇಕಾದ ಸರಾಸರಿ ಮೊತ್ತವೇ ಮಂತ್ಲಿ ಆವರೇಜ್ ಬ್ಯಾಲೆನ್ಸ್. ಇದನ್ನು ಮಿನಿಮಮ್ ಆವರೇಜ್ ಬ್ಯಾಲೆನ್ಸ್ ಎಂದು ಕೂಡ ಕರೆಯಲಾಗುತ್ತದೆ.

ಯಾವ ಬ್ಯಾಂಕ್, ಯಾವ ಮಾದರಿಯ ಬ್ಯಾಂಕ್ ಖಾತೆ ಮತ್ತು ಯಾವ ಪ್ರದೇಶದಲ್ಲಿ ಬ್ಯಾಂಕ್ ಖಾತೆ ಇದೆ ಎನ್ನುವುದರ ಆಧಾರದ ಮೇಲೆ ಈ ಸರಾಸರಿ ಮೊತ್ತದಲ್ಲಿ ಬದಲಾವಣೆ ಇರುತ್ತದೆ. ಉದಾಹರಣೆಗೆ ಮಹಾನಗರಗಳಲ್ಲಿ (ಮೆಟ್ರೊ ಸಿಟಿ) ಎಕ್ಸಿಸ್ ಬ್ಯಾಂಕ್ ಉಳಿತಾಯ ಖಾತೆ ತೆರೆದರೆ ₹12 ಸಾವಿರ ಸರಾಸರಿ ಮೊತ್ತ ಕಾಯ್ದುಕೊಳ್ಳಬೇಕಾಗುತ್ತದೆ. ನಗರ ಪ್ರದೇಶದಲ್ಲಿ ಈ ಖಾತೆ ಆರಂಭಿಸಿದರೆ ಮಾಸಿಕ ₹5 ಸಾವಿರ ಕಾಯ್ದುಕೊಳ್ಳಬೇಕಾಗುತ್ತದೆ. ಇದೇ ಖಾತೆಯನ್ನು ಗ್ರಾಮೀಣ ಪ್ರದೇಶದಲ್ಲಿ ತೆರೆದರೆ ₹2,500 ಬ್ಯಾಲೆನ್ಸ್ ನಿರ್ವಹಿಸಬೇಕಾಗುತ್ತದೆ.

ಆದರೆ, ಕೆನರಾ ಬ್ಯಾಂಕ್‌ನಲ್ಲಿ ಉಳಿತಾಯ ಖಾತೆ ಆರಂಭಿಸಿದರೆ ಮಹಾನಗರ ಪ್ರದೇಶದಲ್ಲಿ ₹2 ಸಾವಿರ, ನಗರ ಪ್ರದೇಶದಲ್ಲಿ ₹1 ಸಾವಿರ ಮತ್ತು ಗ್ರಾಮೀಣ ಪ್ರದೇಶದಲ್ಲಿ ₹500 ಕಾಯ್ದುಕೊಂಡರೆ ಸಾಕಾಗುತ್ತದೆ. ಇದನ್ನು ಸರಿಯಾಗಿ ನಿರ್ವಹಿಸದಿದ್ದರೆ ವಿವಿಧ ಬ್ಯಾಂಕ್‌ಗಳು ಮಾಸಿಕ ₹300ರಿಂದ ₹600ರ ವರೆಗೂ ದಂಡ ವಿಧಿಸುತ್ತವೆ.

ಜನರ ತಪ್ಪು ಕಲ್ಪನೆ ಏನು?: ಕನಿಷ್ಠ ಸರಾಸರಿ ಮೊತ್ತದ ಬಗ್ಗೆ ಬಹುಪಾಲು ಗ್ರಾಹಕರು ಸರಿಯಾಗಿ ಅರ್ಥ ಮಾಡಿಕೊಂಡಿಲ್ಲ. ಬ್ಯಾಂಕ್ ನಿಗದಿ ಮಾಡಿರುವ ಮೊತ್ತವನ್ನು ಒಂದು ದಿನ ತಪ್ಪಿಸಿದರೂ ದಂಡ ಬೀಳುತ್ತದೆ ಎಂದುಕೊಂಡಿದ್ದಾರೆ. ಉದಾಹರಣೆಗೆ ಬ್ಯಾಂಕ್‌ವೊಂದು ₹12 ಸಾವಿರ ಕನಿಷ್ಠ ಸರಾಸರಿ ಮೊತ್ತ ಕಾಯ್ದುಕೊಳ್ಳಬೇಕು ಎಂದು ಹೇಳಿರುತ್ತದೆ ಎಂದುಕೊಳ್ಳಿ. ಪರಿಸ್ಥಿತಿ ಹೀಗಿದ್ದಾಗ ಒಂದೇ ಒಂದು ದಿನ ಬ್ಯಾಂಕ್ ಖಾತೆಯಲ್ಲಿ ₹12 ಸಾವಿರ ನಿರ್ವಹಿಸದಿದ್ದರೆ ಬ್ಯಾಂಕ್ ದಂಡ ವಿಧಿಸುತ್ತದೆ ಎಂದು ಹೆಚ್ಚಿನ ಸಂಖ್ಯೆಯ ಗ್ರಾಹಕರು ಭಾವಿಸಿದ್ದಾರೆ.

ಆದರೆ, ವಾಸ್ತವದಲ್ಲಿ ಬ್ಯಾಂಕ್‌ನ ಕನಿಷ್ಠ ಸರಾಸರಿ ಮೊತ್ತ ಕುರಿತ ಲೆಕ್ಕಾಚಾರ ಹೀಗಿರುವುದಿಲ್ಲ. ಖಾತೆಯಲ್ಲಿರುವ ತಿಂಗಳ ಸರಾಸರಿ ಮೊತ್ತವನ್ನು ಬ್ಯಾಂಕ್ ಗಣನೆಗೆ ತೆಗೆದುಕೊಳ್ಳುತ್ತದೆ.

ಲೆಕ್ಕಾಚಾರ ಹೇಗೆ?: ಪ್ರತಿ ದಿನದ ಕೊನೆಯಲ್ಲಿ ಬ್ಯಾಂಕ್ ಖಾತೆಯಲ್ಲಿರುವ ಒಟ್ಟು ಹಣವನ್ನು ಗಣನೆಗೆ ತೆಗೆದುಕೊಂಡು ತಿಂಗಳಲ್ಲಿರುವ ದಿನಗಳಿಂದ ಭಾಗಿಸಿ ನೋಡಿದಾಗ ನಿರ್ದಿಷ್ಟ ಬ್ಯಾಂಕ್ ಖಾತೆಯಲ್ಲಿ ಕನಿಷ್ಠ ಸರಾಸರಿ ಮೊತ್ತವನ್ನು ಎಷ್ಟು ಕಾಯ್ದುಕೊಳ್ಳಲಾಗಿದೆ ಎನ್ನುವುದು ತಿಳಿಯುತ್ತದೆ. ಈ ಸೂತ್ರ ಬಳಸಿ ಕನಿಷ್ಠ ಸರಾಸರಿ ಮೊತ್ತವನ್ನು ಕಂಡುಕೊಳ್ಳಬಹುದು (ಪ್ರತಿ ದಿನದ ಕೊನೆಯಲ್ಲಿ ಖಾತೆಯಲ್ಲಿರುವ ಒಟ್ಟು ಹಣ /ತಿಂಗಳಲ್ಲಿರುವ ದಿನಗಳು = ಮಾಸಿಕ ಸರಾಸರಿ ಮೊತ್ತ).

ಯಾವಾಗ ದಂಡ ಬೀಳುತ್ತದೆ?: ಉದಾಹರಣೆಗೆ ನಿಮ್ಮ ಬ್ಯಾಂಕ್‌ನಲ್ಲಿ ₹5 ಸಾವಿರ ಕನಿಷ್ಠ ಸರಾಸರಿ ಮೊತ್ತ ಕಾಯ್ದುಕೊಳ್ಳಬೇಕು ಎಂಬ ನಿಯಮ ಇರುತ್ತದೆ ಎಂದುಕೊಳ್ಳಿ. ಆದರೆ, ನಿಮ್ಮ ಖಾತೆಯಲ್ಲಿ ತಿಂಗಳ ಮೊದಲ 10 ದಿನಗಳ ವರೆಗೆ (ಡಿಸೆಂಬರ್ 1 ರಿಂದ ಡಿಸೆಂಬರ್ 10ರ ವರೆಗೆ) ₹10 ಸಾವಿರ ಇರುತ್ತದೆ. ಆ ನಂತರದ 21 ದಿನಗಳಲ್ಲಿ (ಡಿಸೆಂಬರ್ 11 ರಿಂದ ಡಿಸೆಂಬರ್ 31ರ ವರೆಗೆ) ಯಾವುದೇ ಹಣವಿರುವುದಿಲ್ಲ ಎಂದುಕೊಳ್ಳಿ. ಹೀಗಿದ್ದಾಗ ₹5 ಸಾವಿರ ಕನಿಷ್ಠ ಸರಾಸರಿ ಮೊತ್ತ ಕಾಯ್ದುಕೊಳ್ಳುವ ಜಾಗದಲ್ಲಿ ನೀವು ₹3,225 ಕನಿಷ್ಠ ಸರಾಸರಿ ಮೊತ್ತವನ್ನು ಮಾತ್ರ ನಿರ್ವಹಿಸಿದಂತಾಗುತ್ತದೆ. ಇಂತಹ ಸಂದರ್ಭದಲ್ಲಿ ಬ್ಯಾಂಕ್ ದಂಡ ವಿಧಿಸುತ್ತದೆ.

ಯಾವಾಗ ದಂಡ ಬೀಳಲ್ಲ?: ಉದಾಹರಣೆಗೆ ನಿಮ್ಮ ಬ್ಯಾಂಕ್‌ನಲ್ಲಿ ₹5 ಸಾವಿರ ಕಾಯ್ದುಕೊಳ್ಳಬೇಕು ಎಂಬ ನಿಯಮ ಇರುತ್ತದೆ ಎಂದುಕೊಳ್ಳಿ. ಆದರೆ, ನಿಮ್ಮ ಖಾತೆಯಲ್ಲಿ ತಿಂಗಳ ಮೊದಲ 10 ದಿನಗಳ ವರೆಗೆ (ಡಿಸೆಂಬರ್ 1 ರಿಂದ ಡಿಸೆಂಬರ್ 10ರ ವರೆಗೆ) ಯಾವುದೇ ಬ್ಯಾಲೆನ್ಸ್ ಇರುವುದಿಲ್ಲ ಎಂದು ಭಾವಿಸಿ. ಆದರೆ, ನಂತರದ 21 ದಿನಗಳಲ್ಲಿ (ಡಿಸೆಂಬರ್ 11 ರಿಂದ ಡಿಸೆಂಬರ್ 31 ರ ವರೆಗೆ) ₹15 ಸಾವಿರ ಇರುತ್ತದೆ ಎಂದುಕೊಳ್ಳಿ. ಹೀಗಿದ್ದಾಗ ₹5 ಸಾವಿರ ಕನಿಷ್ಠ ಸರಾಸರಿ ಮೊತ್ತ ಕಾಯ್ದುಕೊಳ್ಳಬೇಕಾದ ಜಾಗದಲ್ಲಿ ನೀವು ₹10,161 ಬ್ಯಾಲೆನ್ಸ್ ನಿರ್ವಹಿಸಿದಂತಾಗುತ್ತದೆ. ಇಂತಹ ಸಂದರ್ಭದಲ್ಲಿ ಬ್ಯಾಂಕ್ ದಂಡ ವಿಧಿಸುವುದಿಲ್ಲ.

ಕಿವಿಮಾತು: ಖಾತೆಯಲ್ಲಿ ಕನಿಷ್ಠ ಸರಾಸರಿ ಮೊತ್ತ ಕಾಯ್ದುಕೊಳ್ಳದಿದ್ದರೆ ಬ್ಯಾಂಕ್‌ಗಳು ದಂಡ ವಿಧಿಸುವ ಜೊತೆಗೆ ಕೆಲ ಬ್ಯಾಂಕಿಂಗ್ ಸೇವೆಗಳ ಮೇಲೆ ಗ್ರಾಹಕರಿಗೆ ನಿರ್ಬಂಧ ಹೇರಬಹುದು. ಚೆಕ್ ಪುಸ್ತಕ, ಡೆಬಿಟ್ ಕಾರ್ಡ್, ಆನ್‌ಲೈನ್ ಬ್ಯಾಂಕಿಂಗ್ ಸೇವೆಗಳನ್ನು ನೀಡದೆ ಹೋಗಬಹುದು. ಕೆಲ ಗಂಭೀರ ಸಂದರ್ಭಗಳಲ್ಲಿ ಬ್ಯಾಂಕ್ ಖಾತೆಯನ್ನೇ ರದ್ದುಪಡಿಸಬಹುದು. ಹಾಗಾಗಿ, ಖಾತೆಯಲ್ಲಿ ಬ್ಯಾಂಕ್ ನಿಗದಿಪಡಿಸಿರುವ ಕನಿಷ್ಠ ಸರಾಸರಿ ಮೊತ್ತವನ್ನು ಕಾಯ್ದುಕೊಳ್ಳಿ. ಒಂದು ಅಥವಾ ಹೆಚ್ಚೆಂದರೆ ಎರಡು ಬ್ಯಾಂಕ್ ಖಾತೆಗಳನ್ನು ಇಟ್ಟುಕೊಂಡಾಗ ಕನಿಷ್ಠ ಸರಾಸರಿ ಮೊತ್ತ ಕಾಯ್ದುಕೊಳ್ಳುವುದು ಸುಲಭ.

(ಲೇಖಕ: ಚಾರ್ಟರ್ಡ್ ಅಕೌಂಟೆಂಟ್)

ಷೇರುಪೇಟೆ



ಮತ್ತೆ ಏರಿಕೆ ಕಂಡ ಸೂಚ್ಯಂಕಗಳು

ಡಿಸೆಂಬರ್ 6ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಉತ್ತಮ ಗಳಿಕೆ ದಾಖಲಿಸಿವೆ. ಸತತ ಮೂರನೇ ವಾರ ಸೆನ್ಸೆಕ್ಸ್ ಮತ್ತು ನಿಫ್ಟಿ ಜಿಗಿತ ಕಂಡಿವೆ. 81,709 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿದ ಸೆನ್ಸೆಕ್ಸ್ ವಾರದ ಅವಧಿಯಲ್ಲಿ ಶೇ 2.39ರಷ್ಟು ಗಳಿಸಿಕೊಂಡಿದೆ. 24,677 ಅಂಶಗಳಲ್ಲಿ ವಹಿವಾಟು ಮುಗಿಸಿದ ನಿಫ್ಟಿ ಶೇ 2.27ರಷ್ಟು ಹೆಚ್ಚಳ ದಾಖಲಿಸಿದೆ.

ಜೂನ್ 7ರ ಬಳಿಕ ಷೇರುಪೇಟೆ ಸೂಚ್ಯಂಕಗಳು ವಾರದ ಅವಧಿಯಲ್ಲಿ ಕಂಡಿರುವ ಉತ್ತಮ ಗಳಿಕೆ ಇದಾಗಿದೆ. ವಿದೇಶಿ ಸಾಂಸ್ಥಿಕ ಹೂಡಿಕೆದಾರರಿಂದ ಖರೀದಿ ಹೆಚ್ಚಳ, ದೇಶೀಯ ಹೂಡಿಕೆದಾರರಲ್ಲಿ ಖರೀದಿ ಉತ್ಸಾಹ, ನಗದು ಮೀಸಲು ಅನುಪಾತ ಕಡಿತ ನಿರ್ಧಾರದ ಹಲವು ಅಂಶಗಳು ಮಾರುಕಟ್ಟೆಯ ಮೇಲೆ ಪರಿಣಾಮ ಬೀರಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಎಫ್‌ಎಂಸಿಜಿ ಹೊರತುಪಡಿಸಿ ಇನ್ನುಳಿದ ಎಲ್ಲ ವಲಯಗಳು ಗಳಿಕೆ ಕಂಡುಕೊಂಡಿವೆ. ರಿಯಲ್ ಎಸ್ಟೇಟ್ ಶೇ 5.27, ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಶೇ 5.01, ಲೋಹ ಶೇ 4.02, ಮಾಧ್ಯಮ ಶೇ 4.02, ಮಾಹಿತಿ ತಂತ್ರಜ್ಞಾನ ಶೇ 3.64, ಫೈನಾನ್ಸ್ ಶೇ 2.89, ಬ್ಯಾಂಕ್ ಶೇ 2.79, ಆಟೊ ಶೇ 2.53, ಅನಿಲ ಮತ್ತು ತೈಲ ಶೇ 1.97, ಎನರ್ಜಿ ಶೇ 0.96 ಮತ್ತು ಫಾರ್ಮಾ ಸೂಚ್ಯಂಕ ಶೇ 0.87ರಷ್ಟು ಗಳಿಸಿಕೊಂಡಿವೆ.

ಇಳಿಕೆ–ಗಳಿಕೆ: ನಿಫ್ಟಿಯಲ್ಲಿ ಸಿಪ್ಲಾ ಶೇ 3.42, ಎಚ್‌ಡಿಎಫ್‌ಸಿ ಲೈಫ್ ಇನ್ಶೂರೆನ್ಸ್ ಶೇ 2.85, ಹೀರೊ ಮೊಟೊಕಾರ್ಪ್ ಶೇ 2.76, ಏಷ್ಯನ್ ಪೇಂಟ್ಸ್ ಶೇ 2.03, ಐಟಿಸಿ ಶೇ 1.87, ಬ್ರಿಟಾನಿಯಾ ಇಂಡಸ್ಟ್ರೀಸ್ ಶೇ 1.47, ಐಟಿಸಿ ಶೇ 1.22, ಇಂಡಸ್‌ಇಂಡ್ ಬ್ಯಾಂಕ್ ಶೇ 0.58, ಹಿಂದುಸ್ತಾನ್ ಯುನಿಲಿವರ್ ಶೇ 0.41 ಮತ್ತು ಪವರ್ ಗ್ರಿಡ್ ಶೇ 0.15ರಷ್ಟು ಕುಸಿದಿವೆ.

ಟ್ರೆಂಟ್ ಶೇ 6.6, ಅಲ್ಟ್ರಾಟೆಕ್ ಸಿಮೆಂಟ್ ಶೇ 5.94, ಅದಾನಿ ಪೋರ್ಟ್ಸ್ ಶೇ 5.93, ಅಪೋಲೊ ಹಾಸ್ಪಿಟಲ್ ಶೇ 5.77, ಟೆಕ್ ಮಹೀಂದ್ರ ಶೇ 4.43, ಎಸ್‌ಬಿಐ ಲೈಫ್ ಶೇ 4.34, ಬಜಾಜ್ ಫೈನಾನ್ಸ್ ಶೇ 4.27, ಡಾ.ರೆಡ್ಡೀಸ್ ಲ್ಯಾಬ್ಸ್ ಶೇ 4.26, ಟಿಸಿಎಸ್ ಶೇ 4.05, ಜೆಎಸ್‌ಡಬ್ಲ್ಯು ಸ್ಟೀಲ್ ಶೇ 3.88 ಮತ್ತು ಟಾಟಾ ಮೋಟರ್ಸ್ ಶೇ 3.80ರಷ್ಟು ಗಳಿಸಿಕೊಂಡಿವೆ.

ಮುನ್ನೋಟ: ಭಾರತೀಯ ಷೇರುಪೇಟೆಗೆ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಲಗ್ಗೆ ಇಟ್ಟಿದ್ದಾರೆ. ಡಿಸೆಂಬರ್ 5ರ ವರೆಗೆ ₹13,763 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ಈ ಮಧ್ಯೆ ಭಾರತೀಯ ರಿಸರ್ವ್ ಬ್ಯಾಂಕ್ ನಗದು ಮೀಸಲು ಅನುಪಾತವನ್ನು (ಸಿಆರ್‌ಆರ್) ಶೇ 4ಕ್ಕೆ ಇಳಿಸಿದೆ. ರೆಪೊ ದರ ಇಳಿಕೆ ಮಾಡದಿದ್ದರೂ ನಾಲ್ಕು ವರ್ಷದ ಬಳಿಕ ನಗದು ಮೀಸಲು ಅನುಪಾತದಲ್ಲಿ ಸುಧಾರಣೆ ತಂದಿರುವುದನ್ನು ಹೂಡಿಕೆದಾರರು ಸಕಾರಾತ್ಮಕವಾಗಿ ಪರಿಗಣಿಸಿದ್ದಾರೆ. ಈ ಎಲ್ಲಾ ಅಂಶಗಳು ಮುಂದಿನ ದಿನಗಳಲ್ಲಿ ಮಾರುಕಟ್ಟೆ ವಹಿವಾಟಿನ ಮೇಲೆ ಪರಿಣಾಮ ಬೀರಲಿವೆ.





‘ಲಂಚ ನೀಡಿದರಷ್ಟೇ ವಹಿವಾಟಿಗೆ ಅನುಮತಿ’

ನವದೆಹಲಿ (ಪಿಟಿಐ): ಸರ್ಕಾರಿ ಸೇವೆಯು ಡಿಜಿಟಲೀಕರಣಗೊಂಡಿದೆ. ವಿಳಂಬ ತಪ್ಪಿಸಲು ಏಕ ಗವಾಕ್ಷಿ ಪದ್ಧತಿ ಅನುಷ್ಠಾನಗೊಂಡಿದೆ. ಕ್ಲೇಮು ಪಡೆಯಲು ಅಮೌಖಿಕ ಮೌಲ್ಯಮಾಪನ (ಫೇಸ್‌ಲೆಸ್ ಅಸೆಸ್‌ಮೆಂಟ್) ವ್ಯವಸ್ಥೆ ರೂಪಿಸಲಾಗಿದೆ. ಆದರೂ ಕಚೇರಿಗಳಲ್ಲಿ ಭ್ರಷ್ಟಾಚಾರ ಮುಂದುವರಿದಿದೆ ಎಂದು ಲೋಕಲ್ ಸರ್ಕಲ್ ಸಂಸ್ಥೆ ವರದಿ ತಿಳಿಸಿದೆ.

ಲಂಚದ ಹಾವಳಿ ತಡೆಗೆ ಹಲವು ಕ್ರಮ ಕೈಗೊಂಡಿದ್ದರೂ ಕಳೆದ ಒಂದು ವರ್ಷದ ಅವಧಿಯಲ್ಲಿ ಮೂವರು ಉದ್ಯಮಿಗಳ ಪೈಕಿ ಇಬ್ಬರು ಉದ್ಯಮಿಗಳು ತಮ್ಮ ಯೋಜನೆಗಳಿಗೆ ಒಪ್ಪಿಗೆ ಪಡೆಯಲು ಸರ್ಕಾರಿ ಅಧಿಕಾರಿಗಳಿಗೆ ಲಂಚ ನೀಡಿದ್ದಾರೆ ಎಂದು ಹೇಳಿದೆ.

ಸಂಸ್ಥೆಯು ದೇಶದ 159 ಜಿಲ್ಲೆಗಳಲ್ಲಿ ನಡೆಸಿರುವ ಸಮೀಕ್ಷೆಯಲ್ಲಿ ಈ ಸಂಗತಿ ಬಯಲಿಗೆ ಬಂದಿದೆ. ಸಮೀಕ್ಷೆಯಲ್ಲಿ 18 ಸಾವಿರ ಪ್ರತಿಕ್ರಿಯೆಗಳನ್ನು ಸ್ವೀಕರಿಸಲಾಗಿದೆ.

ಸಮೀಕ್ಷೆಯಲ್ಲಿ ಪಾಲ್ಗೊಂಡಿರುವ ಕಂಪನಿಗಳ ಪೈಕಿ ಶೇ 66ರಷ್ಟು ಕಂಪನಿಗಳು ಸರ್ಕಾರಿ ಅಧಿಕಾರಿಗಳಿಗೆ ಲಂಚ ನೀಡಿವೆ. ಈ ಪೈಕಿ ಶೇ 41ರಷ್ಟು ಕಂಪನಿಗಳು ಕಚೇರಿಗಳಲ್ಲಿ ಸರಾಗವಾಗಿ ತಮ್ಮ ಕೆಲಸ ಮಾಡಿಸಿಕೊಳ್ಳಲು ಹಲವು ಬಾರಿ ಲಂಚ ನೀಡಿವೆ. ಶೇ 21ರಷ್ಟು ಕಂಪನಿಗಳು ಒಂದು ಅಥವಾ ಎರಡು ಬಾರಿ ಲಂಚ ನೀಡಿವೆ ಎಂದು ವಿವರಿಸಿದೆ.

ಸರ್ಕಾರಿ ಕಚೇರಿಗಳಲ್ಲಿ ಯೋಜನೆಗೆ ಒಪ್ಪಿಗೆ, ವಹಿವಾಟಿಗೆ ಅನುಮತಿ ಪಡೆಯಲು, ಸಂಬಂಧಪಟ್ಟ ಇಲಾಖೆಯಿಂದ ಪರವಾನಗಿಯ ನಕಲಿ ಪ್ರತಿ ಪಡೆಯಲು ಲಂಚ ನೀಡಿವೆ ಎಂದು ಹೇಳಿದೆ.

ಕಾನೂನು, ಮಾಪನಶಾಸ್ತ್ರ, ಆಹಾರ, ಔಷಧ, ಆರೋಗ್ಯ ಇಲಾಖೆ, ಜಿಎಸ್‌ಟಿ ಅಧಿಕಾರಿಗಳು, ವಾಯುಮಾಲಿನ್ಯ ನಿಯಂತ್ರಣ ಮಂಡಳಿ, ಪುರಸಭೆ ಮತ್ತು ವಿದ್ಯುತ್ ಕಚೇರಿಗಳ ಅಧಿಕಾರಿಗಳಿಗೆ ಲಂಚ ನೀಡಲಾಗಿದೆ ಎಂದು ಹೇಳಿದೆ.

ಸುರಕ್ಷತಾ ಕ್ರಮ: ಪೆಟ್ರೋಲ್ ಬಂಕ್‌ಗಳಿಗೆ ಸೂಚನೆ

ನವದೆಹಲಿ (ಪಿಟಿಐ): ಎಲ್ಲಾ ಪೆಟ್ರೋಲ್ ಬಂಕ್‌ಗಳು ತಮ್ಮ ವ್ಯಾಪ್ತಿಯ 100 ಮೀಟರ್ ಸುತ್ತಮುತ್ತ ಸುರಕ್ಷತಾ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಕೇಂದ್ರ ಪೆಟ್ರೋಲಿಯಂ ಮತ್ತು ನೈಸರ್ಗಿಕ ಅನಿಲ ನಿಯಂತ್ರಣ ಮಂಡಳಿಯು (ಪಿಎನ್‌ಜಿಆರ್‌ಬಿ) ಸೂಚಿಸಿದೆ.



ಮೇ ತಿಂಗಳಿನಲ್ಲಿ ಮುಂಬೈನ ಘಾಟ್ಕೋಪರ್ ಪೆಟ್ರೋಲ್ ಬಂಕ್ ಮೇಲೆ ಬೃಹತ್ ಜಾಹೀರಾತು ಫಲಕ ಉರುಳಿ ಬಿದ್ದು ಹಲವು ಮಂದಿ ಮೃತಪಟ್ಟಿದ್ದರು. ಈ ಘಟನೆ ಕುರಿತು ತನಿಖೆ ನಡೆಸಲು ಮಂಡಳಿಯಿಂದ ಸಮಿತಿ ರಚಿಸಲಾಗಿತ್ತು.

ಸಮಿತಿಯು ಮಂಡಳಿಗೆ ಅಂತಿಮ ವರದಿ ಸಲ್ಲಿಸಿದೆ. ಸಮಿತಿಯ ಶಿಫಾರಸಿನಂತೆ ಎಲ್ಲ ಇಂಧನ ಮಾರಾಟಗಾರರು ಮತ್ತು ಷೇರುದಾರರು ಒಂದು ತಿಂಗಳೊಳಗೆ ಬಂಕ್‌ನ ಆವರಣದ ಸುತ್ತಮುತ್ತ ಸುರಕ್ಷತಾ ಕ್ರಮ ಕೈಗೊಳ್ಳಬೇಕು ಎಂದು ಹೇಳಿದೆ.

ಆದರೆ, ಸಮಿತಿಯು ಘಟನೆ ಕುರಿತು ತನಿಖೆ ಮೂಲಕ ಪತ್ತೆ ಹಚ್ಚಿರುವ ವಿವರವನ್ನು ಮಂಡಳಿಯು ಬಹಿರಂಗಪಡಿಸಿಲ್ಲ.

ಬಂಕ್‌ನ ಆವರಣ ಹಾಗೂ ಸುತ್ತಮುತ್ತ ಇರುವ ಅಪಾಯಕಾರಿ ಜಾಹೀರಾತು ಫಲಕಗಳು, ಬಿಲ್ ಬೋರ್ಡ್, ಕಟ್ಟಡಗಳನ್ನು ಗುರುತಿಸಬೇಕು. ಇವುಗಳನ್ನು ತೆರವುಗೊಳಿಸಬೇಕು ಎಂದು ಸೂಚಿಸಿದೆ.

₹24,454 ಕೋಟಿ ವಿದೇಶಿ ಬಂಡವಾಳ ಒಳಹರಿವು

ನವದೆಹಲಿ (ಪಿಟಿಐ): ವಿದೇಶಿ ಬಂಡವಾಳ ಹೂಡಿಕೆದಾರರು (ಎಫ್‌ಪಿಐ) ಡಿಸೆಂಬರ್ ಮೊದಲ ವಾರದಲ್ಲಿ ದೇಶದ ಈಕ್ವಿಟಿ ಮಾರುಕಟ್ಟೆಯಲ್ಲಿ ₹24,454 ಕೋಟಿ ಹೂಡಿಕೆ ಮಾಡಿದ್ದಾರೆ.

ಅಕ್ಟೋಬರ್‌ನಲ್ಲಿ ₹94,017 ಕೋಟಿ ಮತ್ತು ನವೆಂಬರ್‌ನಲ್ಲಿ ₹21,612 ಕೋಟಿ ಬಂಡವಾಳ ವಾಪಸ್ ಪಡೆದಿದ್ದರು. ಸಾಲಪತ್ರ ಮಾರುಕಟ್ಟೆಯಲ್ಲಿ ಈ ವರ್ಷದ ಆರಂಭದಿಂದ ಇಲ್ಲಿಯವರೆಗೆ ₹1.07 ಲಕ್ಷ ಕೋಟಿ ಬಂಡವಾಳ ಹೂಡಿಕೆಯಾಗಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100ಕ್ಕೆ	₹635
12 ಕ್ಕೆ	₹82
ಮೈಸೂರು	
100ಕ್ಕೆ	₹637

ಕೇರಳದಲ್ಲಿದೆ ‘ಮೆಣಸಿನಕಾಯಿ ಗ್ರಾಮ’

ಶುದ್ಧ ಮೆಣಸಿನಪುಡಿ ತಯಾರಿಕೆಗಾಗಿ ಮೆಣಸಿನ ಕೃಷಿ ಆರಂಭಿಸಿದ ಪಂಚಾಯಿತಿ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೇರಳದ ಕೊಟ್ಟಾಯಂ ಜಿಲ್ಲೆಯ ತಿರುವಾರ್ಪ್ ಗ್ರಾಮಕ್ಕೀಗ ‘ಮುಳಗು ಗ್ರಾಮ’ (ಮೆಣಸಿನಕಾಯಿ) ಎಂಬ ಹೆಸರು ಅನ್ವರ್ಥವಾಗಿದೆ. ಕಲಬೆರಕೆ ಮೆಣಸಿನ ಪುಡಿಯಿಂದ ಬೇಸತ್ತಿರುವ ಜನರು ನೈಸರ್ಗಿಕವಾದ, ಆರೋಗ್ಯಪೂರ್ಣ ಮೆಣಸಿನಪುಡಿ ತಯಾರಿಸಲು ಯೋಜನೆ ರೂಪಿಸಿದ್ದಾರೆ.

ಇದರ ಮೊದಲ ಹಂತವಾಗಿ ಮೆಣಸಿನಕಾಯಿ ಕೃಷಿಯನ್ನು ಆರಂಭಿಸಿದ್ದಾರೆ. ವಿಶೇಷವೇನೆಂದರೆ, ನರೇಗಾ ಯೋಜನೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಮೆಣಸಿನಕಾಯಿ ಕೃಷಿ ಮಾಡಲಾಗುತ್ತಿದ್ದು, ತಿರುವಾರ್ಪ್ ಗ್ರಾಮ ಪಂಚಾಯಿತಿಯ ಈ ಕಾರ್ಯ ದೇಶಕ್ಕೆ ಮಾದರಿ ಎನಿಸಿದೆ.

2.5 ಎಕರೆ ಬರಡು ಭೂಮಿಯನ್ನು ಹದಮಾಡಿ ಕೃಷಿ ಮಾಡಲಾಗುತ್ತಿದೆ. 16ನೇ ಹಣಕಾಸಿನ ಆಯೋಗದ ಸದಸ್ಯರು ಸೋಮವಾರದಿಂದ ಮೂರು ದಿನ ರಾಜ್ಯ ಪ್ರವಾಸ ಮಾಡಲಿದ್ದಾರೆ. ಮೊದಲ ದಿನವೇ ಆಯೋಗದ ಸದಸ್ಯರು ಇಲ್ಲಿಗೆ ಆಗಮಿಸಲಿದ್ದು, ಅವರಿಗೆ ಗ್ರಾಮದ ಯಶಸ್ಸಿನ ಕಥೆಯನ್ನು ಹೇಳಲು ತಿರುವಾರ್ಪ್ ಪಂಚಾಯಿತಿಯು ಸಿದ್ಧತೆ ನಡೆಸಿದೆ.



ನರೇಗಾ ಕಾರ್ಮಿಕರು ತಾವು ಬೆಳೆದ ಮೆಣಸಿನಕಾಯಿಯನ್ನು ತೋರಿಸಿದರು

ಕೊಟ್ಟಾಯಂ ನಗರಕ್ಕೆ ಹೊಂದಿಕೊಂಡಿರುವಂತೆ ತಿರುವಾರ್ಪ್ ಗ್ರಾಮವಿದೆ. 2024ರ ಆರಂಭದಲ್ಲಿ ಗ್ರಾಮ ಪಂಚಾಯಿತಿಯು ‘ಮುಳಗು ಯೋಜನೆ’ಯನ್ನು ಆರಂಭಿಸಿತು. ಮೊದಲಿಗೆ ಗ್ರಾಮದಲ್ಲಿನ ಬರಡು ಭೂಮಿಗಳನ್ನು ಗುರುತಿಸಲಾಯಿತು. ನಂತರ, ಗ್ರಾಮದ ಬೇರೆ ಬೇರೆ ಜಾಗದಲ್ಲಿರುವ ಐದು ಪುಟ್ಟ ಪುಟ್ಟ ಬರಡು ಜಮೀನನ್ನು ಈ ಯೋಜನೆಗಾಗಿ ಬಳಸಿಕೊಳ್ಳಲು ನಿರ್ಧರಿಸಲಾಯಿತು.

ಈ ಐದು ಜಮೀನುಗಳಲ್ಲಿ ನಾಲ್ಕರಲ್ಲಿ ಮಹಿಳೆಯರ ಗುಂಪು ಕೃಷಿ ಮಾಡುತ್ತಿದ್ದರೆ, ಒಂದು ಕಡೆಯಲ್ಲಿ ಪುರುಷರ ಗುಂಪು ಕೃಷಿ ಮಾಡುತ್ತಿದೆ. ಈ ಯೋಜನೆಯಲ್ಲಿ ಈ ಗ್ರಾಮದ ಒಟ್ಟು 70 ನರೇಗಾ ಕಾರ್ಮಿಕರು ತಮ್ಮನ್ನು ತೊಡಗಿಸಿಕೊಂಡಿದ್ದಾರೆ.

ಇಷ್ಟೇ ಅಲ್ಲದೇ, ಹಣಕಾಸು ಆಯೋಗದಿಂದ ಅನುದಾನ ಪಡೆದುಕೊಂಡು ಅಭಿವೃದ್ಧಿಪಡಿಸಿದ ವಿವಿಧ ಕಾರ್ಯಕ್ರಮಗಳನ್ನೂ ಆಯೋಗದ ಸದಸ್ಯರಿಗೆ ತೋರಿಸಲು ಪಂಚಾಯಿತಿ ತುದಿಗಾಲಿನಲ್ಲಿದೆ.

ಕಸ ಸಂಸ್ಕರಣೆ ಘಟಕವೊಂದನ್ನು ಪಂಚಾಯಿತಿ ಸ್ಥಾಪಿಸಿದೆ. ನರ್ಸರಿ ಯೋಜನೆಯಡಿ ಗ್ರಾಮದ 8 ಸಾವಿರಕ್ಕೂ ಅಧಿಕ ಮನೆಗಳಲ್ಲಿ ತೆಂಗಿನ ಸಸಿಗಳನ್ನು ನೆಡಲಾಗಿದೆ. ಜೊತೆಗೆ, ಹಾಲು ಉತ್ಪನ್ನ ತಯಾರಿಕೆ ಕೇಂದ್ರ ಹಾಗೂ ಮಹಿಳೆಯರಿಗಾಗಿ ಕ್ಷೇಮ ಕೇಂದ್ರವೊಂದನ್ನೂ ಪಂಚಾಯಿತಿ ಸ್ಥಾಪಿಸಿದೆ.

ಕೇರಳ ಸರ್ಕಾರದ ‘ಕುಟುಂಬಶ್ರೀ’ ಕಾರ್ಯಕ್ರಮದಡಿ ಪತ್ತನಂತಿಟ್ಟ ಜಿಲ್ಲೆಯಾದ್ಯಂತ ‘ಮುಳಗು ಯೋಜನೆ’ಯನ್ನು ಜಾರಿ ಮಾಡಲಾಗಿತ್ತು. ‘ಪತ್ತನಂತಿಟ್ಟ ರೆಡ್ ಚಿಲ್ಲೀಸ್’ ಬ್ರ್ಯಾಂಡ್‌ನಲ್ಲಿ ಈ ಮೆಣಸಿನಪುಡಿಯು ಕಳೆದ ವರ್ಷವೇ ಮಾರುಕಟ್ಟೆಗೆ ಲಗ್ಗೆ ಇಟ್ಟಿದೆ.

ತಿರುವಾರ್ಪ್ ಬ್ರ್ಯಾಂಡ್’ನಲ್ಲಿ ಪುಡಿ ಮಾರಾಟ

ಪರಿಣಾಮಕಾರಿಯಾದ ಅಧಿಕಾರ ವಿಕೇಂದ್ರೀಕರಣದಿಂದಾಗುವ ಲಾಭಗಳನ್ನು ವಿವರಿಸಲು ನಮ್ಮ ಪಂಚಾಯಿತಿ ಉತ್ತಮ ಉದಾಹರಣೆಯಾಗಬಲ್ಲದು. ‘ಮುಳಗು ಯೋಜನೆ’ಯನ್ನೇ ತೆಗೆದುಕೊಳ್ಳಿ, ಮೆಣಸಿನಕಾಯಿ ಕೃಷಿ ಆರಂಭಿಸಿದಾಗಿನಿಂದಲೂ ಉತ್ತಮ ಇಳುವರಿ ಬಂದಿದೆ. ಸ್ಥಳೀಯ ಮಾರುಕಟ್ಟೆಯಲ್ಲಿಯೂ ನಾವು ಇಲ್ಲಿ ಬೆಳೆದ ಮೆಣಸಿನಕಾಯಿಗಳನ್ನು ಮಾರಾಟ ಮಾಡುತ್ತಿದ್ದೇವೆ. ಮುಂದಿನ ವರ್ಷ ಪುಡಿ ತಯಾರಿಕೆಗಾಗಿ ಡ್ರಯರ್‌ಗಳು , ಗ್ರೈಂಡರ್‌ಗಳನ್ನು ಖರೀದಿಸುತ್ತೇವೆ. ಈ ಮೆಣಸಿನ ಪುಡಿಯು ‘ತಿರುವಾರ್ಪ್ ಬ್ರ್ಯಾಂಡ್’ ಅಡಿ ಮಾರುಕಟ್ಟೆಗೆ ಬರಲಿದೆ.

ಅಜಯನ್ ಕೆ. ಮೆನನ್, ಅಧ್ಯಕ್ಷ, ತಿರುವಾರ್ಪ್ ಗ್ರಾಮ ಪಂಚಾಯಿತಿ

ಹೈಕಮಿಷನ್ ಕಚೇರಿ ಮೇಲಿನ ದಾಳಿ: ಬಿಎನ್‌ಪಿ ಪ್ರತಿಭಟನೆ

ಢಾಕಾ (ಪಿಟಿಐ): ಅಗರ್ತಲಾದಲ್ಲಿರುವ ಬಾಂಗ್ಲಾದೇಶದ ಕಾನ್ಸುಲೇಟ್ ಮೇಲಿನ ದಾಳಿಯನ್ನು ಖಂಡಿಸಿ ಮಾಜಿ ಪ್ರಧಾನಿ ಖಲೀದಾ ಜಿಯಾ ಅವರ ಬಾಂಗ್ಲಾದೇಶ ನ್ಯಾಷನಲಿಸ್ಟ್ ಪಾರ್ಟಿಯ (ಬಿಎನ್‌ಪಿ) ಮೂರು ಘಟಕಗಳು ಭಾನುವಾರ ಪ್ರತಿಭಟನಾ ಜಾಥಾ ನಡೆಸಿವೆ.

ಘಟನೆ ಬಗ್ಗೆ ಕ್ರಮ ಕೈಗೊಳ್ಳುವಂತೆ ಢಾಕಾದಲ್ಲಿರುವ ಭಾರತದ ಹೈ ಕಮಿಷನ್‌ಗೆ ಪ್ರತಿಭಟನಕಾರರು ಜ್ಞಾಪನಾಪತ್ರ ಸಲ್ಲಿಸಿದ್ದಾರೆ. ಹಿಂದೂ ಅರ್ಚಕ ಚಿನ್ಮಯಿ ಕೃಷ್ಣದಾಸ್ ಬಂಧನವನ್ನು ಖಂಡಿಸಿ ಪ್ರತಿಭಟನೆ ನಡೆಸುತ್ತಿದ್ದವರು ಅಗರ್ತಲಾದಲ್ಲಿದ್ದ ಉಪ ಹೈಕಮಿಷನ್ ಮೇಲೆ ದಾಳಿ ನಡೆಸಿದ್ದರು. ಈ ಘಟನೆಯನ್ನು ಬಾಂಗ್ಲಾ ಖಂಡಿಸಿತ್ತು.

ಬಿಎನ್‌ಪಿಯ ವಿದ್ಯಾರ್ಥಿ, ಯುವ ಮತ್ತು ಸ್ವಯಂಸೇವಕ ಘಟಕಗಳ ಕಾರ್ಯಕರ್ತರು ಬ್ಯಾನರ್ ಹಿಡಿದು ಕೊಂಡು ಪಕ್ಷದ ಕಚೇರಿಯಿಂದ ಭಾರತದ ಹೈಕಮಿಷನ್ ಕಚೇರಿವರೆಗೆ ಮೆರವಣಿಗೆ ನಡೆಸುತ್ತಿದ್ದರು. ಅವರನ್ನು ರಾಮಪುರ ಪ್ರದೇಶದ ಬಳಿ ಪೊಲೀಸರು ತಡೆದರು. ಪೊಲೀಸರ ಅನುಮತಿಯ ಮೇರೆಗೆ 6 ಜನರು ಹೈಕಮಿಷನ್ ಒಳಗೆ ಹೋಗಿ ಮನವಿಪತ್ರ ಸಲ್ಲಿಸಿದರು.

ಬಿಕ್ಕಟ್ಟು ನಿವಾರಣೆ ಸಾಧ್ಯತೆ: ಬಾಂಗ್ಲಾದೇಶ ಮತ್ತು ಭಾರತದ ನಡುವೆ ಇತ್ತೀಚೆಗೆ ಉಂಟಾಗಿರುವ ಬಿಕ್ಕಟ್ಟು ಪರಿಹಾರವಾಗಲಿದೆ ಎಂದು ಬಾಂಗ್ಲಾದ ವಿದೇಶಾಂಗ ಇಲಾಖೆಯ ಸಲಹೆಗಾರ ಎಂ.ಡಿ ತೌಹಿದ್ ಹುಸೇನ್ ಭಾನುವಾರ ತಿಳಿಸಿದ್ದಾರೆ.



ಬಿಎನ್‌ಪಿ ಪಕ್ಷದ ಕಾರ್ಯಕರ್ತರು ಮತ್ತು ಮಾಜಿ ಪ್ರಧಾನಿ ಖಲೀದಾ ಜಿಯಾ ಬೆಂಬಲಿಗರು ಭಾರತೀಯ ಹೈಕಮಿಷನ್ ಕಚೇರಿಯ ಬಳಿ ಪ್ರತಿಭಟನೆ ನಡೆಸಿದರು — ಎಪಿ ಚಿತ್ರ

ಕೋಲ್ಕತ್ತದ ಇಸ್ಕಾನ್ ವಕ್ತಾರ ರಾಧಾರಮಣ್ ದಾಸ್ ಆರೋಪ

‘ಇಸ್ಕಾನ್ ಅನುಯಾಯಿಗಳ ಹತ್ಯೆಗೆ ಮೂಲಭೂತವಾದಿಗಳಿಂದ ಸಂಚು’

ಕೋಲ್ಕತ್ತ (ಪಿಟಿಐ): ಇಸ್ಕಾನ್ ಭಕ್ತರು ಮತ್ತು ಬೆಂಬಲಿಗರ ನರಮೇಧಕ್ಕೆ ಬಾಂಗ್ಲಾದೇಶದ ಮೂಲಭೂತವಾದಿ ಗುಂಪುಗಳು ಬಹಿರಂಗವಾಗಿ ಕರೆ ನೀಡುತ್ತಿವೆ ಎಂದು ಕೋಲ್ಕತ್ತದ ಇಸ್ಕಾನ್‌ನ ವಕ್ತಾರ ರಾಧಾರಮಣ್ ದಾಸ್ ಭಾನುವಾರ ಆರೋಪಿಸಿದ್ದಾರೆ.

‘ಬಾಂಗ್ಲಾದೇಶದ ಮೂಲಭೂತವಾದಿಗಳು ಖಾಸಗಿ ವಿಮಾನಗಳಲ್ಲಿ ಸಂಚರಿಸುತ್ತಾ, ಇಸ್ಕಾನ್ ಭಕ್ತರು ಮತ್ತು ಬೆಂಬಲಿಗರನ್ನು ಹತ್ಯೆ ಮಾಡುವಂತೆ ಪ್ರಚೋದನಕಾರಿ ಭಾಷಣ ಮಾಡುತ್ತಿದ್ದಾರೆ. ಆದರೆ, ಇಲ್ಲಿನ ಸರ್ಕಾರ ಮಾತ್ರ ಯಾವುದೇ ಕ್ರಮ ಜರುಗಿಸುತ್ತಿಲ್ಲ’ ಎಂದು ‘ಎಕ್ಸ್’ನಲ್ಲಿ ಹೇಳಿದ್ದಾರೆ.

ಬಾಂಗ್ಲಾದೇಶದ ಮೂಲಭೂತವಾದಿಯೊಬ್ಬರು, ‘ಇಸ್ಕಾನ್ ಒಂದು ಕ್ಯಾನ್ಸರ್. ದೇಶದಲ್ಲಿರುವ ಎಲ್ಲಾ ಇಸ್ಕಾನ್ ದೇಗುಲಗಳನ್ನು ಬುಡಮೇಲು ಮಾಡಿ’ ಎಂದು ಹೇಳಿರುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಇಂತಹ ಭಾಷಣಗಳು ಅಲ್ಪಸಂಖ್ಯಾತರ ಮೇಲಿನ ಹಿಂಸಾಚಾರಕ್ಕೆ ಕಾರಣವಾಗುತ್ತವೆ. ಇಂಥವರನ್ನು ಕೂಡಲೇ ಬಂಧಿಸಬೇಕು. ಜಗತ್ತು ಎಚ್ಚರಗೊಳ್ಳಲಿ ಎಂದು ದಾಸ್ ಆಗ್ರಹಿಸಿದ್ದಾರೆ.

ಬಾಂಗ್ಲಾ ಸೀರೆಗಳಿಗೆ ಬೆಂಕಿ ಹಚ್ಚಿ ಆಕ್ರೋಶ

ಕೋಲ್ಕತ್ತ (ಪಿಟಿಐ): ಬಾಂಗ್ಲಾದೇಶದಲ್ಲಿ ಹಿಂದೂ ಅಲ್ಪಸಂಖ್ಯಾತರ ಮೇಲಿನ ದೌರ್ಜನ್ಯವನ್ನು ಖಂಡಿಸಿ ಕೋಲ್ಕತ್ತದಲ್ಲಿ ಭಾನುವಾರ ನಡೆದ ಪ್ರತಿಭಟನೆಯಲ್ಲಿ, ಬಾಂಗ್ಲಾದ ‘ಢಾಕಾಯ್ ಜಾಮದಾನಿ ಸೀರೆ’ಗಳನ್ನು ಸುಟ್ಟು ಆಕ್ರೋಶ ವ್ಯಕ್ತಪಡಿಸಲಾಯಿತು.

ಬಂಗಾಳ ಹಿಂದೂ ಸುರಕ್ಷಾ ಸಮಿತಿಯು, ಸಾಲ್ಟ್ ಲೇಕ್ ಅಂತರರಾಷ್ಟ್ರೀಯ ಬಸ್ ಟರ್ಮಿನಸ್ ಬಳಿ ಪ್ರತಿಭಟನೆಯನ್ನು ಆಯೋಜಿಸಿತ್ತು.

ಬಾಂಗ್ಲಾದೇಶಿ ಸರಕುಗಳನ್ನು ಬಹಿಷ್ಕರಿಸಲು ಪ್ರತಿಭಟನಕಾರರು ಕರೆ ನೀಡಿದರು.

ತ್ರಿವರ್ಣ ಧ್ವಜವನ್ನು ಅಗೌರವಿಸಿದರೆ ಮತ್ತು ಹಿಂದೂಗಳ ಮೇಲೆ ದಾಳಿ ಮುಂದುವರಿದರೆ ಭಾರತೀಯರು ಸುಮ್ಮನಿರುವುದಿಲ್ಲ ಎಂದು ಎಚ್ಚರಿಕೆ ನೀಡಿದರು.



ಸೇನೆಯ ನಡೆಯಿಂದ ನಮಗೆ ಜುಗುಪ್ಸೆ ಉಂಟಾಗಿತ್ತು. ಭಾರಿ ಅನ್ಯಾಯವಾಗಿತ್ತು. ಸಿರಿಯಾ ಈಗ ಸೇನೆಯಿಂದ ಮುಕ್ತವಾಗಿದೆ. ನಾವು ಹೆಮ್ಮೆ, ಖುಷಿಯಿಂದ ದೇಶಕ್ಕೆ ಮರಳುತ್ತೇವೆ

ಬೈರೂತ್‌ನಲ್ಲಿರುವ ಸಿರಿಯಾ ನಿರಾಶ್ರಿತರು

ಸಿರಿಯಾದ ಎಲ್ಲ ವರ್ಗಗಳ ಜನರಿಗೆ ನಮ್ಮ ಸಂದೇಶವೆಂದರೆ ಸಿರಿಯಾ ಎಲ್ಲರಿಗೂ ಸೇರಿದ್ದಾಗಿದೆ. ಅಸಾದ್ ಕುಟುಂಬವು ಏನು ಮಾಡಿತೊ, ಅದನ್ನು ನಾವು ಮಾಡುವುದಿಲ್ಲ

ಅನಾಸ್ ಸಲ್ಖಾಡಿ, ಹೋರಾಟಗಾರರ ಗುಂಪಿನ ಕಮಾಂಡರ್

ಸಿರಿಯಾ ಅಧ್ಯಕ್ಷರಿಗೆ ಆಶ್ರಯ ನೀಡುವ ಆಸಕ್ತಿ ರಷ್ಯಾಗೆ ಇದ್ದಂತಿಲ್ಲ. ಉಕ್ರೇನ್ ಯುದ್ಧದಲ್ಲಿ 6 ಲಕ್ಷ ಯೋಧರು ಗಾಯಗೊಂಡಿದ್ದಾರೆ ಅಥವಾ ಸತ್ತಿದ್ದಾರೆ. ಹೀಗಾಗಿ ಪುಟಿನ್ ಅವರು ಸಿರಿಯಾ ಮೇಲೆ ಆಸಕ್ತಿ ಕಳೆದುಕೊಂಡಿದ್ದಾರೆ

ಡೊನಾಲ್ಡ್ ಟ್ರಂಪ್, ಅಮೆರಿಕದ ಚುನಾಯಿತ ಅಧ್ಯಕ್ಷ

ಮೂಲಭೂತವಾದಿಗಳ ಹಿಡಿತಕ್ಕೆ ಸಿರಿಯಾ ಸಿಲುಕದಿರಲಿ. ಅಧ್ಯಕ್ಷ ಅಸಾದ್ ತನ್ನದೇ ಜನರ ಕೊಂದಿದ್ದಾರೆ. ವಿಷಯುಕ್ತ ಅನಿಲ ಪ್ರಯೋಗಿಸಿದ್ದಾರೆ. ಕಿರುಕುಳ ನೀಡಿದ್ದಾರೆ. ಇದಕ್ಕಾಗಿ ಅವರನ್ನು ಹೊಣೆ ಮಾಡಬೇಕು

ಅನ್ನಾಲೆನಾ ಬೇರ್ಬೋಕ್, ವಿದೇಶಾಂಗ ಸಚಿವೆ, ಜರ್ಮನಿ

ಅಸಾದ್ ಕುಟುಂಬದ 50 ವರ್ಷಗಳ ಆಡಳಿತ ಅಂತ್ಯ ● ದೇಶ ತೊರೆದ ಬಶರ್

ಸಿರಿಯಾದಲ್ಲಿ ಸಂಭ್ರಮಾಚರಣೆ

ಡಮಾಸ್ಕಸ್ (ಎ.ಪಿ): 'ಡಮಾಸ್ಕಸ್ ದಿಗ್ವಿಜಯ' ಹೆಸರಿನಲ್ಲಿ ಸರ್ಕಾರದ ವಿರುದ್ಧ ಬಂಡಾಯ ಎದ್ದಿದ್ದ ವಿರೋಧಿಗಳ ಗುಂಪು, ಹೇಳಿಕೆ ಓದುವ ಮೂಲಕ ಸರ್ಕಾರದ ಪತನವನ್ನು ಘೋಷಿಸಿದೆ. 'ಎಲ್ಲ ನಾಗರಿಕರು, ಹೋರಾಟಗಾರರು ಸ್ವತಂತ್ರ ಸಿರಿಯಾ'ವನ್ನು ರಕ್ಷಿಸಿಕೊಳ್ಳಬೇಕು' ಎಂದು ಕರೆ ನೀಡಿದರು.

ಈಗ ಪದಚ್ಯುತಗೊಂಡಿರುವ ಬಶರ್ ಅಸಾದ್ 2000ರಲ್ಲಿ ಅಧಿಕಾರಕ್ಕೆ ಏರಿದ್ದರು. ಅವರ ತಂದೆ ಹಿರಿಯ ಮಗ ಬಸಿಲ್‌ನನ್ನು ಉತ್ತರಾಧಿಕಾರಿಯಾಗಿ ಬಿಂಬಿಸಿದ್ದರು. ಆದರೆ, ಬಸಿಲ್ ಕಾರು ಅಪಘಾತದಲ್ಲಿ ಮೃತಪಟ್ಟರು. ಆಗ ಲಂಡನ್‌ನಲ್ಲಿ ಓದುತ್ತಿದ್ದ ಬಶರ್ ಅವರನ್ನು ಕರೆತಂದು ಸೇನಾ ತರಬೇತಿ ನೀಡಲಾಗಿತ್ತು.

ತಂದೆ ಹಫೇಜ್ ಅಸಾದ್ 2000ರಲ್ಲಿ ಮೃತಪಟ್ಟಾಗ, ತರಾತುರಿಯಲ್ಲಿ 34 ವರ್ಷದ ಬಶರ್‌ರನ್ನು ಅಧ್ಯಕ್ಷರಾಗಿ ನೇಮಿಸಲಾಗಿತ್ತು. ಅಧ್ಯಕ್ಷರಾಗಲು ಕನಿಷ್ಠ 40 ವರ್ಷ ಆಗಿರಬೇಕು ಎಂಬ ನಿಯಮವನ್ನು ಸಡಿಲಿಸಿ, ಮಿತಿಯನ್ನು 34 ವರ್ಷಕ್ಕೆ ನಿಗದಿಪಡಿಸಲಾಗಿತ್ತು. ನಂತರ ಬಶರ್ ಜನಾದೇಶವನ್ನೂ ಪಡೆದಿದ್ದರು. ಆದರೆ, ಆಗ ಚುನಾವಣೆಯಲ್ಲಿ ಕಣದಲ್ಲಿದ್ದುದು ಬಶರ್ ಮಾತ್ರ. ಅದಕ್ಕೂ ಹಿಂದೆ ಅವರ ತಂದೆ ಹಫೇಜ್ ಅಸಾದ್ ಸಿರಿಯಾದಲ್ಲಿ ನಿರಂತರ 30 ವರ್ಷ ಆಡಳಿತ ನಡೆಸಿದ್ದರು.

'ಅಧ್ಯಕ್ಷ ಅಸಾದ್ ದೇಶ ತೊರೆದಿದ್ದು, ತಲೆಮರೆಸಿಕೊಂಡಿದ್ದಾರೆ. ರಾಜಧಾನಿ ಡಮಾಸ್ಕಸ್‌ಗೆ ನಾವು ಲಗ್ಗೆ ಹಾಕಿದ ಹಿಂದೆಯೇ ಪಲಾಯನ ಮಾಡಿದರು' ಎಂದು ಹೋರಾಟಗಾರರ ಗುಂಪು ಹೇಳಿದೆ.

ಅಸಾದ್ ಸರ್ಕಾರದ ವಿರುದ್ಧ ನಾಗರಿಕ ಸಂಘರ್ಷ ನಡೆದ ಅವಧಿಯಲ್ಲಿ ಪ್ರಾಂತೀಯ ಮತ್ತು ಅಂತರರಾಷ್ಟ್ರೀಯ ಶಕ್ತಿ ರಾಷ್ಟ್ರಗಳಿಗೆ ಯುದ್ಧ ಭೂಮಿಯಾಗಿಯೂ ಸಿರಿಯಾ ಪರಿವರ್ತನೆಗೊಂಡಿತ್ತು. ಸಂಘರ್ಷದ ಅವಧಿಯಲ್ಲಿ ಸಾವಿರಾರು ಜನ ಸತ್ತಿದ್ದರು. ಜನಸಂಖ್ಯೆಯ ಅರ್ಧದಷ್ಟು ಮಂದಿ ಅತಂತ್ರರಾಗಿದ್ದರು.

ಸಂಭ್ರಮ: ಭಾನುವಾರ ಸೂರ್ಯೋದಯ ವಾದದ್ದೇ ರಾಜಧಾನಿ ಡಮಾಸ್ಕಸ್‌ನಲ್ಲಿ ಜನರ ಸಂಭ್ರಮ ಗರಿಗೆದರಿತು. ಹಬ್ಬದ ವಾತಾವರಣ ಕಂಡುಬಂತು. ಜನರು ಮಸೀದಿಗಳಿಗೆ ತೆರಳಿ ಪ್ರಾರ್ಥನೆ ಸಲ್ಲಿಸಿದರು. ವಾಹನಗಳ ಹಾರ್ನ್ ಮೊಳಗಿಸಿ ಸಂಭ್ರಮಿಸಿದರು. ಅಸಾದ್ ವಿರೋಧಿ ಘೋಷಣೆಗಳೂ ಕೇಳಿಬಂದವು. ಭದ್ರತಾ ಪಡೆಗಳವರು ಅಲ್ಲಲ್ಲಿ ಅನಾಥವಾಗಿ ಬಿಟ್ಟುಹೋಗಿದ್ದ ಶಸ್ತ್ರಾಸ್ತ್ರಗಳನ್ನೇ ಎತ್ತಿಕೊಂಡಿದ್ದ ತರುಣರು ದಿಗಂತದತ್ತ ಗುಂಡು ಹಾರಿಸಿ ವಿಜಯೋತ್ಸವ ಆಚರಿಸಿದರು.

ರಕ್ಷಣಾ ಸಚಿವಾಲಯದ ಕೇಂದ್ರ ಸ್ಥಾನವೂ ಆಗಿದ್ದ ರಾಜಧಾನಿಯ ಉಮಯ್ಯದ್ ಸ್ಕ್ವೇರ್‌ನಲ್ಲಿ ಜನ ಗುಂಪುಗೂಡಿದ್ದರು. ಕೆಲವರು ತ್ರಿನಕ್ಷತ್ರಗಳಿದ್ದ ಧ್ವಜವನ್ನು ಗಾಳಿಯಲ್ಲಿ ಬೀಸಿದರು. ತುಸುವೇ ದೂರದಲ್ಲಿದ್ದ ಅಧ್ಯಕ್ಷರ ಅರಮನೆಗೂ ಲಗ್ಗೆಹಾಕಿದ ಜನರು, ಪದಚ್ಯುತ ಅಧ್ಯಕ್ಷರ ಭಾವಚಿತ್ರಗಳಿದ್ದ ಬೃಹತ್ ಪಟಗಳನ್ನು ಹರಿದು ಆಕ್ರೋಶ ಹೊರಹಾಕಿದರು.

ಸರ್ಕಾರದ ಪದಚ್ಯುತಿಯ ಹಿಂದೆಯೇ ಅನೇಕ ಯೋಧರು, ಪೊಲೀಸರು ಅಧಿಕಾರಿಗಳು ಹುದ್ದೆ ತೊರೆದು ಪಲಾಯನ ಮಾಡಿದ್ದಾರೆ.

ಯಾರಿದು ಗೊಲಾನಿ?



ಅಬು ಮೊಹಮ್ಮದ್ ಅಲ್ ಗೊಲಾನಿ –ಇವರು, ಸಿರಿಯಾದ ಬಶರ್ ಅಸಾದ್ ನೇತೃತ್ವದ ಆಡಳಿತಕ್ಕೆ ಕೊನೆಯಾಡಿದ ಹೋರಾಟಗಾರರ ಗುಂಪಿನ ನಾಯಕ.

ಸಾರ್ವಜನಿಕವಾಗಿ ವರ್ಚಸ್ಸು ರೂಪಿಸಿಕೊಳ್ಳಲು ಹಲವು ವರ್ಷಗಳಿಂದ ಶ್ರಮಿಸಿದ್ದ ಗೊಲಾನಿ ಅಲ್ ಖೈದಾ ಜೊತೆಗೆ ದೀರ್ಘಕಾಲದಿಂದ ಸಂಪರ್ಕದಲ್ಲಿದ್ದವರು.

ಸ್ವತಃ ತನ್ನನ್ನು ಬಹುತ್ವದ ನಾಯಕ, ತಾಳ್ಮೆಯ ಪ್ರತೀಕ ಎಂದು ಬಣ್ಣಿಸಿಕೊಂಡಿದ್ದವರು.

ಇತ್ತೀಚಿನ ದಿನಗಳಲ್ಲಿ ತನ್ನ ನಿಜವಾದ 'ಅಹ್ಮದ್ ಅಲ್ ಶಾರಾ' ಹೆಸರಿನಿಂದಲೇ ಗುರುತಿಸಿಕೊಳ್ಳುತ್ತಿದ್ದರು.

42 ವರ್ಷ ವಯಸ್ಸಿನ ಗೊಲಾನಿ 'ಜಿಹಾದಿ ಮೂಲಭೂತ'ವಾದಿ ಸ್ಥಾನದಿಂದ ದೇಶದ ಆಡಳಿತ ಹಿಡಿತಕ್ಕೆ ಪಡೆಯುವ ಹಂತ ತಲುಪಿದ್ದಾರೆ. ಅಮೆರಿಕ ಈತನನ್ನು ಭಯೋತ್ಪಾದಕ ಎಂದು ಘೋಷಿಸಿದೆ. ಭಾನುವಾರ ಬಶರ್ ಅಸಾದ್ ಸರ್ಕಾರ ಪತನಗೊಳ್ಳುವವರೆಗೆ ಈತ ಸಾರ್ವಜನಿಕವಾಗಿ ಕಾಣಿಸಿಕೊಂಡಿರಲಿಲ್ಲ.

ಈತ ಎಚ್‌ಟಿಎಸ್ ಎಂದು ಗುರುತಿಸುವ ಹಯಾತ್ ತಾಹಿರ್ ಅಲ್ ಶಾಮ್ ಬಂಡುಕೋರ ಪಡೆಯ ನಾಯಕ. 2003ರಿಂದಲೂ ಅಲ್‌ಖೈದಾ ನಿಕಟವರ್ತಿ. ಎಚ್‌ಟಿಎಸ್ ಗುಂಪಿನವರು ಬಹುತೇಕ ಜಿಹಾದಿಗಳು.

ಸಿಎನ್‌ಎನ್ ಸುದ್ದಿವಾಹಿನಿಗೆ ಕಳೆದ ವಾರವಷ್ಟೇ ನೀಡಿದ್ದ ಸಂದರ್ಶನದಲ್ಲಿ ಗೊಲಾನಿ, 'ಮಾತುಗಳಿಂದ ಅಲ್ಲ, ಕೃತಿಗಳಿಂದ ನಮ್ಮನ್ನು ಅಳೆಯಿರಿ' ಎಂದು ಹೇಳಿಕೊಂಡಿದ್ದರು.

2018ರಿಂದ ರಾಜಧಾನಿ ಪ್ರವೇಶ ಸಾಧ್ಯವಾಗಿರಲಿಲ್ಲ

ಸರ್ಕಾರದ ವಿರುದ್ಧ ಬಂಡಾಯ ಎದ್ದಿದ್ದ ಹೋರಾಟಗಾರರು 2018ರಿಂದ ರಾಜಧಾನಿ ಪ್ರವೇಶಿಸಲು ಆಗಿರಲಿಲ್ಲ. ಸೇನೆ ರಾಜಧಾನಿ ಹೊರವಲಯದಲ್ಲಿ ದಿಗ್ಬಂಧನ ಹೇರಿತ್ತು.

ಹೋರಾಟಗಾರರು ಕೆಲ ದಿನದ ಹಿಂದೆ ಸಿರಿಯಾದ 3ನೇ ಅತಿದೊಡ್ಡ ನಗರ ಹೊಮ್ಸ್ ಅನ್ನು ತಮ್ಮ ಹಿಡಿತಕ್ಕೆ ತೆಗೆದುಕೊಂಡಿದ್ದರು. ಈ ನಗರ ರಾಜಧಾನಿ ಡಮಾಸ್ಕಸ್ ಮತ್ತು ಲಟಾಕಿಯ ನಡುವೆ ಸಂಪರ್ಕಸೇತುವಾಗಿದೆ. ಇಲ್ಲಿಯೇ ಸಿರಿಯಾ ನಾಯಕರ ನೆಲೆ,ರಷ್ಯಾದ ನೌಕಾಪಡೆ ನೆಲೆ ಇದೆ.

ನ.27 ಬಳಿಕ ರಾಜಧಾನಿ ಡಮಾಸ್ಕಸ್ ಸುಪರ್ದಿಗೆ ಪಡೆಯುವ ಯತ್ನ ಚುರುಕಾಗಿತ್ತು.

ಇಸ್ರೇಲ್ ವಾಯು ದಾಳಿ

ಬಶರ್ ಅಸಾದ್ ಸರ್ಕಾರ ಪತನಗೊಂಡ ಬೆನ್ನಲ್ಲೇ ಇಸ್ರೇಲ್ ಸೇನೆಯು ಡಮಾಸ್ಕಸ್‌ನ ಭದ್ರತಾ ಸಂಕೀರ್ಣವನ್ನು ಗುರಿಯಾಗಿಸಿ ವಾಯು ದಾಳಿ ನಡೆಸಿದೆ.

'ಸೇನೆಯ ಕೇಂದ್ರ ಕಚೇರಿ, ಗುಪ್ತಚರ ಸಂಸ್ಥೆ ಮತ್ತು ಕಸ್ಟಮ್ಸ್‌ನ ಕಚೇರಿಗಳನ್ನು ಒಳಗೊಂಡ ಕಟ್ಟಡದ ಮೇಲೆ ದಾಳಿ ನಡೆದಿದೆ' ಎಂದು ಸಿರಿಯಾದಲ್ಲಿನ ಬ್ರಿಟನ್ ಮೂಲದ ಮಾನವ ಹಕ್ಕುಗಳ ವೀಕ್ಷಣಾಲಯ ತಿಳಿಸಿದೆ. ಇರಾನ್‌ನ ವಿಜ್ಞಾನಿಗಳು ಇದೇ ಸಂಕೀರ್ಣದಲ್ಲಿ ಕ್ಷಿಪಣಿಗಳನ್ನು ಅಭಿವೃದ್ಧಿಪಡಿಸಿದ್ದರು ಎಂದು ಇಸ್ರೇಲ್ ಈ ಹಿಂದೆ ಹೇಳಿತ್ತು.

ಇನ್ನು ಇದು ಹೋರಾಟಗಾರರ ಸರ್ಕಾರ: ಪ್ರಧಾನಿ

'ವಿರೋಧಿ ಹೋರಾಟಗಾರರ ಗುಂಪಿಗೆ 'ಪೂರ್ಣ ಸಹಕಾರ' ನೀಡುತ್ತೇವೆ. ನನ್ನ ಸರ್ಕಾರ ಇನ್ನು ಹೋರಾಟಗಾರರ ಸರ್ಕಾರವಾಗಿ ಬದಲಾಗಲಿದೆ' ಎಂದು ಸಿರಿಯಾ ಪ್ರಧಾನಿ ಮೊಹಮ್ಮದ್ ಘಾಜಿ ಜಲಾಲಿ ಅವರು ವಿಡಿಯೊ ಹೇಳಿಕೆ ನೀಡಿದ್ದಾರೆ.

ಸ್ಥಳೀಯ ವಾಹಿನಿ 'ಅಲ್ ಅರೇಬಿಯಾ' ಜೊತೆಗೂ ಮಾತನಾಡಿದ ಅವರು, 'ಅಧ್ಯಕ್ಷ ಅಸಾದ್ ಮತ್ತು ರಕ್ಷಣಾ ಸಚಿವ ಎಲ್ಲಿದ್ದಾರೆಂದು ತಿಳಿದಿಲ್ಲ. ಶನಿವಾರವೇ ಅವರ ಜೊತೆಗೆ ಸಂಪರ್ಕ ತಪ್ಪಿತ್ತು' ಎಂದರು.

ಅಧ್ಯಕ್ಷ ಬಶರ್ ಅಸಾದ್ ಅವರ ವಿರುದ್ಧ ಯುದ್ಧ ಅಪರಾಧಗಳು ಮತ್ತು ಯುದ್ಧದ ಅವಧಿಯಲ್ಲಿ ಮನುಕುಲದ ಮೇಲೇ ಅಪರಾಧ ಎಸಗಿರುವ ಗಂಭೀರ ಆರೋಪಗಳಿವೆ. 2013ರಲ್ಲಿ ರಾಜಧಾನಿಯ ಹೊರವಲಯದಲ್ಲಿ ರಾಸಾಯನಿಕ ಶಸ್ತ್ರಾಸ್ತ್ರ ಬಳಸಿದ್ದ ಆರೋಪವು ಅವರ ಮೇಲಿದೆ.

ಅಸಾದ್‌ಗೆ ಬೆಂಬಲವಾಗಿದ್ದ ಇರಾನ್, ಸಿರಿಯಾ ಬೆಳವಣಿಗೆ ಕುರಿತು ತಕ್ಷಣಕ್ಕೆ ಪ್ರತಿಕ್ರಿಯೆ ನೀಡಿಲ್ಲ. ಡಮಾಸ್ಕಸ್‌ನ ಇರಾನ್ ರಾಯಭಾರ ಕಚೇರಿಯಲ್ಲಿ ದಾಂದಲೆ ನಡೆದಿದೆ.



ಟರ್ಕಿಯ ಇಸ್ತಾಂಬುಲ್‌ನಲ್ಲಿ ನೆಲೆಸಿರುವ ಸಿರಿಯಾ ದೇಶದ ಪ್ರಜೆಗಳು ಬಶರ್ ಅಸಾದ್ ಆಡಳಿತ ಅಂತ್ಯಗೊಂಡ ಕಾರಣ ಸಂಭ್ರಮಿಸಿದರು – ಎಎಫ್‌ಪಿ ಚಿತ್ರ

ಸಿರಿಯಾಗೆ ಮರಳಲು ಧಾವಂತ

ಆಡಳಿತ ವಿರೋಧಿಗಳ ಗುಂಪಿನ ಪ್ರಾಬಲ್ಯದ ಹಿಂದೆಯೇ, ಸೇನೆ ಪ್ರಧಾನಿ ಮೊಹಮ್ಮದ್ ಘಾಜಿ ಜಲಾಲಿ ಅವರನ್ನು ಬಿಗಿ ರಕ್ಷಣೆಯಲ್ಲಿ ಹೋಟೆಲ್‌ವೊಂದಕ್ಕೆ ಕರೆದೊಯ್ದಿದೆ. ಈ ಕುರಿತ ವಿಡಿಯೊವನ್ನು ಮಾಧ್ಯಮಗಳು ಪ್ರಸಾರ ಮಾಡಿವೆ.

ಇನ್ನೊಂದೆಡೆ, ಸಂಘರ್ಷ ಆರಂಭವಾದ ಬಳಿಕ ದೇಶವನ್ನು ತೊರೆದಿದ್ದ ಅಸಂಖ್ಯಾತ ಸಿರಿಯನ್ನರು, ಬಶರ್ ಆಡಳಿತ ಪತನದ ಹಿಂದೆಯೇ ದೇಶಕ್ಕೆ ಮರಳಲು ಮುಂದಾಗಿದ್ದಾರೆ. ಇದರಿಂದಾಗಿ ಲೆಬನಾನ್‌ಗೆ ಹೊಂದಿಕೊಂಡ ಗಡಿಯಲ್ಲಿ ನೂಕುನುಗ್ಗಲು ಉಂಟಾಗಿತ್ತು.

ಲೆಬನಾನ್ ಗಡಿಭದ್ರತಾ ಪಡೆ ಭಾನುವಾರ ಬೆಳಿಗ್ಗೆಯೇ ಗಡಿಯನ್ನು ಮುಕ್ತಗೊಳಿಸಿದ್ದು, ಮುಕ್ತವಾಗಿ ಸಿರಿಯಾಗೆ ಮರಳಲು ಅವಕಾಶ ಕಲ್ಪಿಸಿಕೊಟ್ಟಿದೆ. 'ಲೆಬನಾನ್ ವಲಸಿಗರಿಂದ ತುಂಬಿದೆ' ಎಂಬುದು ಅಲ್ಲಿನ ಅಧಿಕಾರಿಗಳ ಸಾಮಾನ್ಯ ದೂರಾಗಿತ್ತು.

ಪದಗ್ರಹಣ ವೇಳೆ ₹12 ಲಕ್ಷ ಮೌಲ್ಯದ ವಸ್ತುಗಳ ಕಳವು

ಮುಂಬೈ (ಪಿಟಿಐ): ದಕ್ಷಿಣ ಮುಂಬೈನ ಆಜಾದ್ ಮೈದಾನದಲ್ಲಿ ಡಿ.5ರಂದು ನಡೆದ ಮಹಾರಾಷ್ಟ್ರದ 'ಮಹಾಯುತಿ' ಸರ್ಕಾರದ ಪದಗ್ರಹಣ ಸಮಾರಂಭದಲ್ಲಿ ₹12 ಲಕ್ಷ ಮೌಲ್ಯದ ಚಿನ್ನದ ಸರ, ಮೊಬೈಲ್‌ಗಳನ್ನು ಕಳವು ಮಾಡಲಾಗಿದೆ.

'ಅಪರಿಚಿತ ವ್ಯಕ್ತಿಗಳ ವಿರುದ್ಧ ಎಫ್‌ಐಆರ್ ದಾಖಲಾಗಿದ್ದು, ಆರೋಪಿಗಳನ್ನು ಶೀಘ್ರದಲ್ಲಿ ಬಂಧಿಸಲಾಗುವುದು' ಎಂದು ಆಜಾದ್ ಮೈದಾನ್ ಪೊಲೀಸ್ ಠಾಣೆಯ ಅಧಿಕಾರಿಗಳು ತಿಳಿಸಿದ್ದಾರೆ.

ಬಿಜೆಪಿಯ ನಾಯಕ ದೇವೇಂದ್ರ ಫಡಣವೀಸ್ ಮುಖ್ಯಮಂತ್ರಿಯಾಗಿ, ಶಿವಸೇನಾದ ಏಕನಾಥ ಶಿಂದೆ, ಎನ್‌ಸಿಪಿಯ ಅಜಿತ್ ಪವಾರ್ ಉಪಮುಖ್ಯಮಂತ್ರಿಯಾಗಿ ಅಂದು ನಡೆದ ಸಮಾರಂಭದಲ್ಲಿ ಪ್ರಮಾಣವಚನ ಸ್ವೀಕರಿಸಿದ್ದರು. ಅದ್ದೂರಿಯಾಗಿ ನಡೆದ ಸಮಾರಂಭದಲ್ಲಿ ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಕೈಗಾರಿಕೋದ್ಯಮಿಗಳು, ಸಿನಿತಾರೆಯರು ಪಾಲ್ಗೊಂಡಿದ್ದರು. ಭದ್ರತೆಗಾಗಿ 4 ಸಾವಿರ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು.

'ಗೇಟ್ ನಂ.2ರಲ್ಲಿ ಜನರು ಹೊರಗೆ ಬರುತ್ತಿದ್ದ ವೇಳೆ ಕಳ್ಳರು ಚಿನ್ನದ ಸರ, ಮೊಬೈಲ್ ಫೋನ್, ಪರ್ಸ್‌ಗಳನ್ನು ಕಳವು ಮಾಡಿದ್ದಾರೆ. ಕ್ರೈಂ ಬ್ರಾಂಚ್, ಸ್ಥಳೀಯ ಠಾಣೆಯ ಪೊಲೀಸರು ಆರೋಪಿಗಳ ಬಂಧನಕ್ಕೆ ಕ್ರಮ ಕೈಗೊಂಡಿದ್ದಾರೆ. ಸಿ.ಸಿ.ಟಿ.ವಿ. ಕ್ಯಾಮೆರಾದಲ್ಲಿ ದಾಖಲಾಗಿರುವ ದೃಶ್ಯಾವಳಿಗಳನ್ನು ಪರಿಶೀಲಿಸಲಾಗಿದೆ. ಇದುವರೆಗೂ ಯಾರನ್ನೂ ಬಂಧಿಸಿಲ್ಲ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪುದುಚೇರಿ ಮಾಜಿ ಸಿ.ಎಂ ರಾಮಚಂದ್ರನ್ ನಿಧನ

ಪುದುಚೇರಿ (ಪಿಟಿಐ): ಕೇಂದ್ರಾಡಳಿತ ಪ್ರದೇಶ ಪುದುಚೇರಿಯ ಮಾಜಿ ಮುಖ್ಯಮಂತ್ರಿ ಎಂ.ಡಿ.ಆರ್. ರಾಮಚಂದ್ರನ್ (90) ಅವರು ವಯೋಸಹಜ ಅನಾರೋಗ್ಯದಿಂದ ಭಾನುವಾರ ನಿಧನರಾದರು ಎಂದು ಕಾಂಗ್ರೆಸ್ ಪಕ್ಷದ ಮೂಲಗಳು ತಿಳಿಸಿವೆ.

ರಾಮಚಂದ್ರನ್ ಅವರು ಡಿಎಂಕೆ ಪಕ್ಷದಲ್ಲಿದ್ದಾಗ ಎರಡು ಸಲ ಪುದುಚೇರಿಯ ಮುಖ್ಯಮಂತ್ರಿಯಾಗಿ ಕಾರ್ಯನಿರ್ವಹಿಸಿದ್ದರು. 1980ರಲ್ಲಿ ಡಿಎಂಕೆ– ಕಾಂಗ್ರೆಸ್ ಮೈತ್ರಿ ಸರ್ಕಾರ ಇದ್ದಾಗ ಮೂರು ವರ್ಷ ಮುಖ್ಯಮಂತ್ರಿಯಾಗಿದ್ದರು. ಆ ಬಳಿಕ 1990ರಲ್ಲಿ ಮತ್ತೆ ಮುಖ್ಯಮಂತ್ರಿಯಾದರು. ಡಿಎಂಕೆ–ಜನತಾ ದಳ ಸಮ್ಮಿಶ್ರ ಸರ್ಕಾರವನ್ನು ಒಂದು ವರ್ಷದವರೆಗೆ ಮುನ್ನಡೆಸಿದ್ದರು.

2000ದಲ್ಲಿ ಡಿಎಂಕೆ ತೊರೆದು ಕಾಂಗ್ರೆಸ್ ಸೇರಿದ ಅವರು 2001ರಲ್ಲಿ ಎನ್.ರಂಗಸ್ವಾಮಿ ನೇತೃತ್ವದ ಕಾಂಗ್ರೆಸ್ ಸರ್ಕಾರದಲ್ಲಿ ಸ್ಪೀಕರ್ ಆದರು. ಆ ಬಳಿಕ ಪುದುಚೇರಿ ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು.

ಭಾರತೀಯರು ಸುರಕ್ಷಿತ

ನವದೆಹಲಿ (ಪಿಟಿಐ): ಸಿರಿಯಾದಲ್ಲಿರುವ ಭಾರತದ ಎಲ್ಲ ಪ್ರಜೆಗಳು ಸುರಕ್ಷಿತವಾಗಿದ್ದಾರೆ ಎಂದು ಸರ್ಕಾರದ ಮೂಲಗಳು ಭಾನುವಾರ ಹೇಳಿವೆ.

'ಡಮಾಸ್ಕಸ್‌ನಲ್ಲಿರುವ ಭಾರತದ ರಾಯಭಾರ ಕಚೇರಿ ಕಾರ್ಯನಿರ್ವಹಿಸುವುದನ್ನು ಮುಂದುವರಿಸಿದ್ದು,ಭಾರತದ ಎಲ್ಲ ಪ್ರಜೆಗಳೊಂದಿಗೆ ಸಂಪರ್ಕದಲ್ಲಿದೆ' ಎಂದು ಮೂಲಗಳು ಹೇಳಿವೆ. ಅಧಿಕೃತ ಅಂಕಿ–ಅಂಶಗಳ ಪ್ರಕಾರ, ಭಾರತದ ಸುಮಾರು 90 ಮಂದಿ ಸಿರಿಯಾದಲ್ಲಿ ನೆಲೆಸಿದ್ದು, ಇದರಲ್ಲಿ 14 ಮಂದಿ ವಿಶ್ವಸಂಸ್ಥೆಯ ವಿವಿಧ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿದ್ದಾರೆ.

ನಷ್ಟದಲ್ಲಿವೆ ಕೋಟಾದ ಕೋಚಿಂಗ್ ಕೇಂದ್ರಗಳು

ಕೋಟಾ (ಪಿಟಿಐ): ವಿದ್ಯಾರ್ಥಿಗಳ ಆತ್ಮಹತ್ಯೆ ಮತ್ತು ಕೋಚಿಂಗ್ ಕೇಂದ್ರಗಳ ನೂತನ ಮಾರ್ಗಸೂಚಿಗಳಿಂದಾಗಿ ಕೋಟಾದಲ್ಲಿ ಕೋಚಿಂಗ್ ಕೇಂದ್ರಗಳು ಮತ್ತು ಹಾಸ್ಟೆಲ್ ಉದ್ಯಮ ನಷ್ಟದಲ್ಲಿವೆ.

ಸಾಮಾನ್ಯವಾಗಿ ಇಲ್ಲಿ ವಾರ್ಷಿಕ 2 ಲಕ್ಷದಿಂದ 2.5 ಲಕ್ಷದಷ್ಟು ವಿದ್ಯಾರ್ಥಿಗಳು ಕೋಚಿಂಗ್ ಪಡೆಯುತ್ತಿದ್ದರು. ಆದರೆ, ಪ್ರಸಕ್ತ ವರ್ಷ ಈ ಸಂಖ್ಯೆ 85,000ದಿಂದ ಒಂದು ಲಕ್ಷಕ್ಕೆ ಇಳಿಕೆಯಾಗಿದೆ.

ಇದರಿಂದಾಗಿ ವಾರ್ಷಿಕ ಆದಾಯವು ₹7000 ಕೋಟಿಯಿಂದ ₹3,500 ಕೋಟಿಗೆ ಇಳಿಕೆಯಾಗಿದೆ. ಕೋಚಿಂಗ್ ಕೇಂದ್ರಗಳ ನೂತನ ಮಾರ್ಗಸೂಚಿಯು 16 ವರ್ಷಕ್ಕಿಂತ ಕಡಿಮೆ ವಯಸ್ಸಿನವರ ದಾಖಲಾತಿಯನ್ನು ನಿಷೇಧಿಸಿದೆ. ಇದರಿಂದಾಗಿಯೂ ವಿದ್ಯಾರ್ಥಿಗಳ ಸಂಖ್ಯೆ ಕಡಿಮೆಯಾಗಿದೆ' ಎಂದು ಕೋಚಿಂಗ್ ಕೇಂದ್ರದವರು ಹೇಳಿಕೊಂಡಿದ್ದಾರೆ.

ಸೀನಿಯರ್ ರಾಷ್ಟ್ರೀಯ ಚಾಂಪಿಯನ್‌ಷಿಪ್‌ಗೆ ತೆರೆ

ಮಹಿಳಾ ಕುಸ್ತಿ: ಹರಿಯಾಣಕ್ಕೆ ಏಳು ಚಿನ್ನ

ಬೆಂಗಳೂರು: ಹರಿಯಾಣದ ಮಹಿಳಾ ಕುಸ್ತಿಪಟುಗಳು ಸೀನಿಯರ್ ರಾಷ್ಟ್ರೀಯ ಕುಸ್ತಿ ಚಾಂಪಿಯನ್‌ಷಿಪ್‌ನ ಕೊನೆಯ ದಿನವಾದ ಭಾನುವಾರ ಏಳು ಚಿನ್ನದ ಪದಕಗಳನ್ನು ಗೆದ್ದು ಪಾರಮ್ಯ ಮೆರೆದರು.

ಇಲ್ಲಿನ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ಕೂಟದಲ್ಲಿ ಮಹಿಳೆಯರ 10 ತೂಕ ವಿಭಾಗಗಳ 8 ಚಿನ್ನದ ಪದಕಗಳು ಹರಿಯಾಣದ ಪಾಲಾದವು. 50 ಕೆ.ಜಿ ಮತ್ತು 72 ಕೆ.ಜಿ ವಿಭಾಗದ ಸ್ಪರ್ಧೆಗಳು ಶನಿವಾರ ನಡೆದಿತ್ತು.

ಮಹಿಳೆಯರ ವಿಭಾಗದಲ್ಲಿ ಹರಿಯಾಣ ತಂಡವು 235 ಅಂಕಗಳೊಂದಿಗೆ ಟೀಂ ರ‍್ಯಾಂಕಿಂಗ್‌ನಲ್ಲಿ ಅಗ್ರಸ್ಥಾನ ಪಡೆಯಿತು. ಮಹಾರಾಷ್ಟ್ರ (150), ದೆಹಲಿ (106) ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನ ಗಳಿಸಿತು.

ಏಪ್ರಿಲ್‌ನಲ್ಲಿ ನಡೆದ ಏಷ್ಯನ್ ಕುಸ್ತಿ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಪದಕ ಗೆದ್ದಿದ್ದ ಹರಿಯಾಣದ ರಾಧಿಕಾ 68 ಕೆ.ಜಿ ವಿಭಾಗದ ಫೈನಲ್‌ನಲ್ಲಿ 7–1ರಿಂದ ದೆಹಲಿಯ ಸೃಷ್ಟಿ ಅವರನ್ನು ಮಣಿಸಿ ಚಿನ್ನ ಗೆದ್ದರು. 76 ಕೆ.ಜಿ ವಿಭಾಗದಲ್ಲಿ ಹರಿಯಾಣದ ಪ್ರೀತಿ, ಫೈನಲ್ ಹಣಾಹಣಿಯಲ್ಲಿ 10–0ಯಿಂದ ಒಲಿಂಪಿಯನ್ ರಿತಿಕಾ (ಎಸ್‌ಎಸ್‌ಸಿಬಿ) ಅವರನ್ನು ಮಣಿಸಿ ಚಾಂಪಿಯನ್ ಆದರು.



ಮಹಿಳೆಯರ 76 ಕೆಜಿ ವಿಭಾಗದ ಕುಸ್ತಿ ಫೈನಲ್‌ನಲ್ಲಿ ಹರಿಯಾಣದ ಪ್ರಿಯಾ (ನೀಲಿ) ಮತ್ತು ಎಸ್‌ಎಸ್‌ಸಿಬಿಯ ರಿತಿಕಾ (ಕೆಂಪು) ಸೆಣಸಾಟ ನಡೆಸಿದರು –ಪ್ರಜಾವಾಣಿ ಚಿತ್ರ: ಕಿಶೋರ್ ಕುಮಾರ್ ಬೋಳಾರ್

ಫಲಿತಾಂಶ: 53 ಕೆ.ಜಿ: ಜ್ಯೋತಿ (ಹರಿಯಾಣ)–1, ಕವಿತಾ ಮಾಲಿ (ರಾಜಸ್ಥಾನ)–2, ಸ್ವಾತಿ (ಮಹಾರಾಷ್ಟ್ರ)–3, ಸುಷ್ಮಾ ಶೋಕೀನ್ (ದೆಹಲಿ)–3; 55 ಕೆ.ಜಿ: ಮೀನಾಕ್ಷಿ (ಹರಿಯಾಣ)–1, ಜ್ಯೋತಿ (ಎಸ್‌ಎಸ್‌ಸಿಬಿ)–2, ಭಾವಿಕಾ ಪಟೇಲ್ (ಗುಜರಾತ್)–3, ಧನಶ್ರೀ (ಮಹಾರಾಷ್ಟ್ರ)–3; 57 ಕೆ.ಜಿ: ತಪ್ಸ್ಯಾ (ಹರಿಯಾಣ)–1, ಆಶ್ಲೇಷಾ (ಮಹಾರಾಷ್ಟ್ರ)–2, ನೀದು (ಚಂಡೀಗಢ)–3, ಹಂಸಬೆನ್ ರಾಥೋಡ್ (ಮಧ್ಯಪ್ರದೇಶ)–3; 59 ಕೆ.ಜಿ: ಅಂಜಲಿ (ಹರಿಯಾಣ)–1, ತನು (ಪಂಜಾಬ್)–2, ತನ್ವಿ (ಮಹಾರಾಷ್ಟ್ರ)–3, ಮಂಜು (ದೆಹಲಿ)–3.

62ಕೆ.ಜಿ: ಭಾಗ್ಯಶ್ರೀ (ಮಹಾರಾಷ್ಟ್ರ)–1, ಖುಷಿ ಠಾಕೂರ್ (ಹಿಮಾಚಲ ಪ್ರದೇಶ)–2, ಕಲ್ಪನಾ (ಹರಿಯಾಣ)–3, ಸ್ವಪ್ನಾ ಕುಮಾರಿ (ಪಂಜಾಬ್)–3; 65 ಕೆ.ಜಿ: ಮನೀಷಾ (ಹರಿಯಾಣ)–1, ಮೋನಿಕಾ (ರಾಜಸ್ಥಾನ)–2, ಜಸ್‌ಪ್ರೀತ್ ಕೌರ್ (ಪಂಜಾಬ್)–3, ಶಿಕ್ಷಾ (ದೆಹಲಿ)–3; 68 ಕೆ.ಜಿ: ರಾಧಿಕಾ (ಹರಿಯಾಣ)–1, ಸೃಷ್ಟಿ (ದೆಹಲಿ)–2, ಪ್ರಿಯಾಂಕಾ (ಎಸ್‌ಎಸ್‌ಸಿಬಿ)–3, ಸೋನಿಕಾ ಕುಮಾರಿ (ಹಿಮಾಚಲ ಪ್ರದೇಶ)–3; 76 ಕೆ.ಜಿ: ಪ್ರಿಯಾ (ಹರಿಯಾಣ)–1, ರಿತಿಕಾ (ಎಸ್‌ಎಸ್‌ಸಿಬಿ)–2, ನವಜೋತ್ ಕೌರ್ (ಪಂಜಾಬ್)–3, ಅಮೃತಾ (ಮಹಾರಾಷ್ಟ್ರ)–3.

ಸತೀಶ್‌ಗೆ ಸಿಂಗಲ್ಸ್ ಕಿರೀಟ

ಗುವಾಹಟಿ (ಪಿಟಿಐ): ಭಾರತದ ಉದಯೋನ್ಮುಖ ಆಟಗಾರ ಸತೀಶ್ ಕರುಣಾಕರನ್ ಅವರು ಗುವಾಹಟಿ ಮಾಸ್ಟರ್ಸ್ ಸೂಪರ್ 100 ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಪುರುಷರ ಸಿಂಗಲ್ಸ್ ಕಿರೀಟ ಮುಡಿಗೇರಿಸಿಕೊಂಡರು. ಮಹಿಳೆಯರ ಡಬಲ್ಸ್‌ನಲ್ಲಿ ತನಿಶಾ ಕ್ರಾಸ್ಟೊ– ಅಶ್ವಿನಿ ಪೊನ್ನಪ್ಪ ಜೋಡಿಯು ಪ್ರಶಸ್ತಿಯನ್ನು ತಮ್ಮಲ್ಲೇ ಉಳಿಸಿಕೊಂಡಿತು.

2023ರ ಒಡಿಶಾ ಮಾಸ್ಟರ್ ಚಾಂಪಿಯನ್, ಚೆನ್ನೈನ 23 ವರ್ಷ ವಯಸ್ಸಿನ ಸತೀಶ್ ಭಾನುವಾರ ನಡೆದ ಫೈನಲ್‌ನಲ್ಲಿ 21-17, 21-14ರಿಂದ ಚೀನಾದ ಝು ಕ್ಸುವಾನ್ ಚೆನ್ ಅವರನ್ನು ಮಣಿಸಿ ಟೂರ್ನಿಯಲ್ಲಿ ಭಾರತಕ್ಕೆ ಎರಡನೇ ಪ್ರಶಸ್ತಿಯನ್ನು ತಂದುಕೊಟ್ಟರು.



ಸತೀಶ್ ಕರುಣಾಕರನ್

ಇದಕ್ಕೂ ಮೊದಲು ಅಗ್ರ ಶ್ರೇಯಾಂಕದ ತನಿಶಾ–ಕನ್ನಡತಿ ಅಶ್ವಿನಿ ಜೋಡಿಯು ಫೈನಲ್ ಹಣಾಹಣಿಯಲ್ಲಿ 21-18, 21-12ರಿಂದ ಚೀನಾದ ಲಿ ಹುವಾ ಝೌ ಮತ್ತು ವಾಂಗ್ ಝಿ ಮೆಂಗ್ ಅವರನ್ನು ಹಿಮ್ಮೆಟ್ಟಿಸಿ ಪ್ರಶಸ್ತಿಯನ್ನು ಗೆದ್ದುಕೊಂಡಿತು.

ಅಥ್ಲೆಟಿಕ್ಸ್: ಸುಧೀಕ್ಷಾ, ಸುಚಿತ್ರಾಗೆ ಬೆಳ್ಳಿ



ವಿ.ಸುಧೀಕ್ಷಾ

ಬೆಂಗಳೂರು: ಕರ್ನಾಟಕದ ವಿ.ಸುಧೀಕ್ಷಾ ಅವರು ಭುವನೇಶ್ವರದ ಕಳಿಂಗಾ ಕ್ರೀಡಾಂಗಣದಲ್ಲಿ ನಡೆಯುತ್ತಿರುವ 39ನೇ ರಾಷ್ಟ್ರೀಯ ಜೂನಿಯರ್ ಅಥ್ಲೆಟಿಕ್ಸ್ ಚಾಂಪಿಯನ್‌ಷಿಪ್‌ನಲ್ಲಿ 20 ವರ್ಷದೊಳಗಿನವರ ಮಹಿಳೆಯರ 100 ಮೀಟರ್ ಓಟದಲ್ಲಿ ಬೆಳ್ಳಿ ಪದಕ ಗೆದ್ದರು.ಸುಧೀಕ್ಷಾ ಅವರು 12 ಸೆಕೆಂಡ್‌ನಲ್ಲಿ ಗುರಿ ತಲುಪಿದರು. ಗುಜರಾತ್‌ನ ಸಾಕ್ಷಿ ಚೌಹಾಣ್ (11.86ಸೆ) ಮತ್ತು ಪಶ್ಚಿಮ ಬಂಗಾಳದ ಅನುಷಾ ಬಿಸ್ವಾಸ್ (12.06ಸೆ) ಕ್ರಮವಾಗಿ ಚಿನ್ನ ಮತ್ತು ಕಂಚು ಗೆದ್ದರು.

ಸುಚಿತ್ರಾಗೆ ಬೆಳ್ಳಿ: ಕರ್ನಾಟಕದ ಸುಚಿತ್ರಾ ಎಸ್. ಅವರು 16 ವರ್ಷದೊಳಗಿನ ಬಾಲಕಿಯರ 60 ಮೀಟರ್ ಓಟದಲ್ಲಿ ಬೆಳ್ಳಿ ಗೆದ್ದರು. ಅವರು 7.77 ಸೆಕೆಂಡ್‌ನಲ್ಲಿ ಗುರಿ ಮುಟ್ಟಿದರು.ಮಹಾರಾಷ್ಟ್ರದ ಶೌರ್ಯಾ ಅಂಬುರೆ (7.60ಸೆ) ಮತ್ತು ಭೂಮಿಕಾ ಎನ್. (7.83ಸೆ) ಕ್ರಮವಾಗಿ ಚಿನ್ನ ಮತ್ತು ಕಂಚು ಗೆದ್ದರು. ಸ್ಪರ್ಧೆಯಲ್ಲಿದ್ದ ಕರ್ನಾಟಕದ ಮತ್ತೊಬ್ಬ ಸ್ಪರ್ಧಿ ನಿಧೀಕ್ಷಾ ನಾಯ್ಕ್ (8.10) ಎಂಟನೇ ಸ್ಥಾನ ಗಳಿಸಿದರು.

ಮಹಿಳಾ ಏಕದಿನ: ಹರ್ಮನ್‌ಪ್ರೀತ್ ಬಳಗಕ್ಕೆ ನಿರಾಶೆ

ಎಲಿಸ್, ಜಾರ್ಜಿಯಾ ಶತಕ; ಆಸ್ಟ್ರೇಲಿಯಾಕ್ಕೆ ಸರಣಿ

ಬ್ರಿಸ್ಬೇನ್ (ಪಿಟಿಐ): ನಾಯಕಿ ಎಲಿಸ್ ಪೆರಿ ಮತ್ತು ಜಾರ್ಜಿಯಾ ವೊಲ್ ಅವರ ಶತಕಗಳ ಬಲದಿಂದ ಆತಿಥೇಯ ಆಸ್ಟ್ರೇಲಿಯಾ ಮಹಿಳಾ ತಂಡವು ಭಾರತ ಎದುರಿನ ಏಕದಿನ ಕ್ರಿಕೆಟ್ ಸರಣಿಯಲ್ಲಿ ಜಯಭೇರಿ ಬಾರಿಸಿತು.

ಭಾನುವಾರ ಆ್ಯಲನ್ ಬಾರ್ಡರ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು 122 ರನ್‌ಗಳಿಂದ ಜಯಿಸಿತು. 3 ಪಂದ್ಯಗಳ ಸರಣಿಯನ್ನು 2–0ಯಿಂದ ಕೈವಶ ಮಾಡಿಕೊಂಡಿತು.

ಟಾಸ್ ಗೆದ್ದ ಆಸ್ಟ್ರೇಲಿಯಾ ತಂಡವು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡಿತು. ಫೋಬಿ ಲಿಚ್‌ಫೀಲ್ಡ್ (60; 63ಎ) ಮತ್ತು ಜಾರ್ಜಿಯಾ (101; 87ಎ, 4X12) ಅವರು ಮೊದಲ ವಿಕೆಟ್ ಜೊತೆಯಾಟದಲ್ಲಿ 130 ರನ್ ಸೇರಿಸಿ ಉತ್ತಮ ಆರಂಭ ನೀಡಿದರು.

20ನೇ ಓವರ್‌ನಲ್ಲಿ ಲಿಚ್‌ಫೀಲ್ಡ್ ಅವರ ವಿಕೆಟ್ ಪಡೆಯುಲ್ಲಿ ಸೈಮಾ ಠಾಕೂರ್ ಯಶಸ್ವಿಯಾದರು. ಆದರೆ ಕ್ರೀಸ್‌ಗೆ ಬಂದ ಎಲಿಸಾ (105; 75ಎ) ಅವರು ಜಾರ್ಜಿಯಾ ಅವರೊಂದಿಗೆ ಎರಡನೇ ವಿಕೆಟ್ ಜೊತೆಯಾಟದಲ್ಲಿ 92 ರನ್ ಸೇರಿಸಿದರು.

ಎಲಿಸ್ ಅವರು 6 ಸಿಕ್ಸರ್ ಮತ್ತು 7 ಬೌಂಡರಿ ಬಾರಿಸಿದರು.



ನಾಯಕಿ ಎಲಿಸ್ ಪೆರಿ ಅವರ ಬ್ಯಾಟಿಂಗ್ –ಪಿಟಿಐ ಚಿತ್ರ

ಜಾರ್ಜಿಯಾ ಔಟಾದ ನಂತರ ಕ್ರೀಸ್‌ಗೆ ಬಂದ ಬೆತ್ ಮೂನಿ ಕೂಡ (56 ರನ್) ಅರ್ಧಶತಕ ಗಳಿಸಿದರು. ಇದರಿಂದಾಗಿ ಬೃಹತ್ ಮೊತ್ತ ದಾಖಲಾಯಿತು.

ಗುರಿ ಬೆನ್ನಟ್ಟಿದ ಭಾರತ ತಂಡದ ಆರಂಭಿಕ ಬ್ಯಾಟರ್ ರಿಚಾ ಘೋಷ್ (54; 72) ಅರ್ಧಶತಕ ಗಳಿಸಿದರು.

ನಾಯಕಿ ಹರ್ಮನ್‌ಪ್ರೀತ್ ಕೌರ್ (38 ರನ್), ಜೆಮಿಮಾ ರಾಡ್ರಿಗಸ್ (43; 39ಎ) ಮತ್ತು ಮಿನು ಮಣಿ (ಔಟಾಗದೆ 46) ಅವರ ಹೋರಾಟಕ್ಕೆ ಗೆಲುವಿನ ಫಲ ಸಿಗಲಿಲ್ಲ. ತಂಡವು 44.5 ಓವರ್‌ಗಳಲ್ಲಿ 249 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 50 ಓವರ್‌ಗಳಲ್ಲಿ 8ಕ್ಕೆ371 (ಫೋಬಿ ಲಿಚ್‌ಫೀಲ್ಡ್ 60, ಜಾರ್ಜಿಯಾ ವೊಲ್ 101, ಎಲಿಸ್ ಪೆರಿ 105, ಬೆತ್ ಮೂನಿ 56, ತಹಿಲಿಯಾ ಮೆಕ್‌ಗ್ರಾ ಔಟಾಗದೆ 20, ಸೈಮಾ ಠಾಕೂರ್ 62ಕ್ಕೆ3, ಮಿನು ಮಣಿ 71ಕ್ಕೆ2) ಭಾರತ: 44.5 ಓವರ್‌ಗಳಲ್ಲಿ 249 (ರಿಚಾ ಘೋಷ್ 54, ಹರ್ಮನ್‌ಪ್ರೀತ್ ಕೌರ್ 38, ಜೆಮಿಮಾ ರಾಡ್ರಿಗಸ್ 43, ಮಿನು ಮಣಿ ಔಟಾಗದೆ 46, ಅನಾಬೆಲ್ ಸದರ್ಲೆಂಡ್ 39ಕ್ಕೆ4) ಫಲಿತಾಂಶ:ಆಸ್ಟ್ರೇಲಿಯಾ ತಂಡಕ್ಕೆ 122 ರನ್‌ಗಳ ಜಯ. ಸರಣಿಯಲ್ಲಿ 2–0 ಮುನ್ನಡೆ.

ಕಬಡ್ಡಿ: ಪಟ್ನಾ ಪೈರೇಟ್ಸ್‌ಗೆ ಜಯ

ಪುಣೆ (ಪಿಟಿಐ): ದೇವಾಂಕ್ ಅವರ ಅಮೋಘ ದಾಳಿಯ ಬಲದಿಂದ ಪಟ್ನಾ ಪೈರೇಟ್ಸ್ ತಂಡವು ಇಲ್ಲಿ ನಡೆಯುತ್ತಿರುವ ಪ್ರೊ ಕಬಡ್ಡಿ ಟೂರ್ನಿಯ ಪಂದ್ಯದಲ್ಲಿ ಜೈಪುರ ಪಿಂಕ್ ಪ್ಯಾಂಥರ್ಸ್ ಎದುರು ಜಯಿಸಿತು.

ಬಾಲೆವಾಡಿ ಒಳಾಂಗಣ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯದಲ್ಲಿ ಪಟ್ನಾ ತಂಡವು 38–28ರಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ಎದುರು ಜಯಿಸಿತು. ದೇವಾಂಕ್ ಅವರು 4 ಬೋನಸ್ ಸಹಿತ 14 ಅಂಕಗಳನ್ನು ಗಳಿಸಿದರು. ಜೈಪುರ ತಂಡದ ಅರ್ಜುನ್ ದೇಶ್ವಾಲ್ 7 ಅಂಕಗಳನ್ನು ಗಳಿಸಿದರು.

ಜೈಂಟ್ಸ್‌ಗೆ ರೋಚಕ ಜಯ: ಇನ್ನೊಂದು ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ತಂಡವು 34–33ರಿಂದ ಯು ಮುಂಬಾ ಎದುರು ರೋಚಕ ಜಯ ಸಾಧಿಸಿತು. ಗುಮಾನ್ ಸಿಂಗ್ (10 ಅಂಕ) ಮತ್ತು ರಾಕೇಶ್ ಸಂಗ್ರೋಯಾ (10 ಅಂಕ) ಅವರು ತಂಡದ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ಮುಂಬಾ ತಂಡದ ಅಜಿತ್ ಚವ್ಹಾಣ್ (14) ಅವರ ಆಟ ಅಮೋಘವಾಗಿತ್ತು.

ಶಾರ್ಟ್ ಕೋರ್ಸ್ ಈಜು: ನೆಟ್ಟಕಲ್ಲಪ್ಪ ಈಜು ಕೇಂದ್ರ ರನ್ನರ್ಸ್ ಅಪ್

ಬಸವನಗುಡಿ ಈಜು ಕೇಂದ್ರ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸವನಗುಡಿ ಈಜು ಕೇಂದ್ರವು (ಬಿಎಸಿ) ಕರ್ನಾಟಕ ರಾಜ್ಯ ಈಜು ಸಂಸ್ಥೆಯ ಆಶ್ರಯದಲ್ಲಿ ನಡೆದ ರಾಜ್ಯ ಶಾರ್ಟ್ ಕೋರ್ಸ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿತು.

ಬಸವನಗುಡಿ ಈಜು ಕೇಂದ್ರದಲ್ಲಿ ಭಾನುವಾರ ಮುಕ್ತಾಯವಾದ ಕೂಟದಲ್ಲಿ ಬಿಎಸಿ ತಂಡವು 1047 ಅಂಕ ಗಳಿಸಿತು. ನೆಟ್ಟಕಲ್ಲಪ್ಪ ಈಜು ಕೇಂದ್ರವು (428 ಅಂಕ) ಎರಡನೇ ಸ್ಥಾನ ಪಡೆಯಿತು. ಬಾಲಕರ ಗುಂಪು 1ರಲ್ಲಿ ಬಿಎಸಿಯ ಸೂರ್ಯ ಜೆ.ಟಿ (34), ಗುಂಪು 2ರಲ್ಲಿ ಬಿಎಸಿಯ ಯಶ್ ಎಚ್. ಪಾಲ್ (42), ಗುಂಪು 3ರಲ್ಲಿ ಮತ್ಸ್ಯ ಕೇಂದ್ರದ ಅರಿತ್ ಚಂದ್ರಶೇಖರ್ (33), ಬಾಲಕಿಯರ ಗುಂಪು 1ರಲ್ಲಿ ಬಿಎಸಿಯ ರಿಶಿಕಾ ಯು.ಎಂ (42), ಎನ್‌ಎಸಿಯ ಹಿತಾಶ್ರೀ ಎನ್ (34), ಮಂಗಳಾ ಕೇಂದ್ರದ ಆರಾಧ್ಯಾ ಆಚಾರ್ (33) ಅವರು ವೈಯಕ್ತಿಕ ಚಾಂಪಿಯನ್‌ಗಳಾಗಿ ಹೊರಹೊಮ್ಮಿದರು.



ಕರ್ನಾಟಕ ರಾಜ್ಯ ಈಜು ಸಂಸ್ಥೆಯ ಆಶ್ರಯದಲ್ಲಿ ನಡೆದ ರಾಜ್ಯ ಶಾರ್ಟ್ ಕೋರ್ಸ್ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಗೆದ್ದ ಬಸವನಗುಡಿ ಈಜು ಕೇಂದ್ರದ ಈಜುಪಟುಗಳು ಮತ್ತು ಕೋಚ್‌ಗಳು –ಪ್ರಜಾವಾಣಿ ಚಿತ್ರ: ಎಸ್‌.ಕೆ. ದಿನೇಶ್

ಫಲಿತಾಂಶ: ಚಿನ್ನ ವಿಜೇತರು: ಪುರುಷರು: 25 ಮೀ. ಫ್ರೀಸ್ಟೈಲ್: ಆ್ಯಮಿ ಪಾಟೀಲ್ (ಅಕ್ವಾ ಈಜು ಕೇಂದ್ರ); 100 ಮೀ ಫ್ರೀಸ್ಟೈಲ್: ಆ್ಯಮಿ ಪಾಟೀಲ. ಬಾಲಕರು: ಗುಂಪು–1: 100 ಮೀ. ಫ್ರೀಸ್ಟೈಲ್: ಅನೀಶ್ ಅನಿರುದ್ಧ ಕೋರೆ (ಎನ್‌ಎಸಿ); 800 ಮೀ. ಫ್ರೀಸ್ಟೈಲ್: ಧ್ರುವ ಬಿ. (ಡಿವಿಕೆ ಅಕ್ವಾಟಿಕ್ ಸೆಂಟರ್); 200 ಮೀ ಬ್ಯಾಕ್‌ಸ್ಟ್ರೋಕ್: ಆರ್ಯನ್ ಪಾಟೀಲ (ಎಬಿಬಿಎ). ಗುಂಪು 2: 100 ಮೀ. ಫ್ರೀಸ್ಟೈಲ್: ಅಗಸ್ತ್ಯ ಮಂಜುನಾಥ್ (ಏಕಲವ್ಯ ಸ್ಪೋರ್ಟ್ಸ್ ಅಕಾಡೆಮಿ); 800 ಮೀ. ಫ್ರೀಸ್ಟೈಲ್: ಅಥರ್ವ ಪಾಲ್ ಸಿಂಗ್ ರಾಥೋಡ್ (ಎಸಿಇ). ಗುಂಪು 3: 100 ಮೀ. ಫ್ರೀಸ್ಟೈಲ್: ಪವನ್ ಕೃಷ್ಣ ಎನ್. (ಬಿಎಸಿ), 400 ಮೀ. ಫ್ರೀಸ್ಟೈಲ್: ಪವನ್ ಕೃಷ್ಣ ಎನ್.

ಮಹಿಳೆಯರು: 25 ಮೀ. ಫ್ರೀಸ್ಟೈಲ್: ಮೇಘಾಂಜಲಿ (ಗ್ಲೋಬಲ್ ಸ್ವಿಮ್ ಸೆಂಟರ್); 100 ಮೀ. ಫ್ರೀಸ್ಟೈಲ್: ನೈಶಾ ಶೆಟ್ಟಿ (ಎನ್‌ಎಸಿ). ಬಾಲಕಿಯರು: ಗುಂಪು 1: 100 ಮೀ. ಫ್ರೀಸ್ಟೈಲ್: ರಿಶಿಕಾ ಯು.ಎಂ. (ಬಿಎಸಿ); 800 ಮೀ. ಜನ್ಯಾ ಬಿ.ಎಸ್. (ಬಿಎಸಿ); 200 ಮೀ. ಬ್ಯಾಕ್‌ಸ್ಟ್ರೋಕ್: ಸಿದ್ಧಿ ಜಿ ಶಾ (ಡಾಲ್ಫಿನ್ ಅಕ್ವಾಟಿಕ್ಸ್). 4x50 ಮೀ. ಮೆಡ್ಲೆ: ಬಿಎಸಿ ಎ. ಗುಂಪು 2: 100 ಮೀ. ಫ್ರೀಸ್ಟೈಲ್: ಶಾಮಣಿ ಎಚ್. ಗೌಡ (ಗ್ಲೋಬಲ್ ಸ್ವಿಮ್ ಸೆಂಟರ್); 800 ಮೀ.ಫ್ರೀಸ್ಟೈಲ್: ಹಿತಶ್ರೀ (ಎನ್‌ಎಸಿ); 4x50 ಮೀ. ಮೆಡ್ಲೆ: ಎನ್‌ಎಸಿ 1. ಗುಂಪು 3: 100 ಮೀ. ಫ್ರೀಸ್ಟೈಲ್ (ಶರಣ್ಯಾ ಪಿ.ವಿ. (ಎನ್‌ಎಸಿ), 400 ಮೀ. ಫ್ರೀಸ್ಟೈಲ್: ಸಾನ್ವಿ ಜೈನ್ (ಬೆಂಗಳೂರು ಸ್ವಿಮ್ಮಿಂಗ್ ಅಕಾಡೆಮಿ); 4x25 ಮೀ. ಮೆಡ್ಲೆ: ಬಿಎಸಿ ಎ.

ಕಿವೀಸ್ ವಿರುದ್ಧ ಇಂಗ್ಲೆಂಡ್‌ಗೆ ಜಯ

ರಾಹುಲ್ ದ್ರಾವಿಡ್ ಶತಕಗಳ ದಾಖಲೆ ಸರಿಗಟ್ಟಿದ ರೂಟ್

ವೆಲ್ಲಿಂಗ್ಟನ್ (ಎಎಫ್‌ಪಿ): ಇಂಗ್ಲೆಂಡ್‌ನ ಅನುಭವಿ ಬ್ಯಾಟರ್ ಜೋ ರೂಟ್ (106;130ಎ, 4x11) ಟೆಸ್ಟ್ ಕ್ರಿಕೆಟ್‌ನಲ್ಲಿ 36ನೇ ಶತಕ ಸಿಡಿಸಿದರು. ಈ ಮೂಲಕ ಅವರು ಭಾರತದ ರಾಹುಲ್ ದ್ರಾವಿಡ್ ದಾಖಲೆಯನ್ನು ಸರಿಗಟ್ಟಿದರು.

ನ್ಯೂಜಿಲೆಂಡ್ ವಿರುದ್ಧ ಎರಡನೇ ಟೆಸ್ಟ್ ಪಂದ್ಯದ ಎರಡನೇ ಇನಿಂಗ್ಸ್‌ನಲ್ಲಿ 34 ವರ್ಷ ವಯಸ್ಸಿನ ರೂಟ್ ಸಾಧನೆ ಮೆರೆದು, ಟೆಸ್ಟ್ ಕ್ರಿಕೆಟ್‌ನಲ್ಲಿ ಅತಿ ಹೆಚ್ಚು ಶತಕ ದಾಖಲಿಸಿದ ಪಟ್ಟಿಯಲ್ಲಿ ದ್ರಾವಿಡ್ ಜೊತೆ ಐದನೇ ಸ್ಥಾನವನ್ನು ಹಂಚಿಕೊಂಡರು.

ಇಂಗ್ಲೆಂಡ್ ತಂಡವು ಈ ಪಂದ್ಯವನ್ನು 323 ರನ್‌ಗಳಿಂದ ಗೆದ್ದುಕೊಂಡಿತು. ಮೂರು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಇನ್ನೂ ಒಂದು ಪಂದ್ಯ ಬಾಕಿ ಇರುವಂತೆ 2-0 ಅಂತರದಲ್ಲಿ ವಶ ಮಾಡಿಕೊಂಡಿತು.

ಆಂಗ್ಲರ ಪಡೆಯು 16 ವರ್ಷಗಳ ಬಳಿಕ ಕಿವೀಸ್ ನೆಲದಲ್ಲಿ ಮೊದಲ ಬಾರಿ ಟೆಸ್ಟ್ ಸರಣಿ ಗೆದ್ದಿದೆ. 2008ರಲ್ಲಿ ಕೊನೆಯ ಬಾರಿ 2-1 ಅಂತರದಿಂದ ಸರಣಿ ಜಯಿಸಿತ್ತು. ಮತ್ತೊಂದೆಡೆ ನ್ಯೂಜಿಲೆಂಡ್ ತಂಡವು, ತವರಿನಲ್ಲಿ ಸತತ ನಾಲ್ಕು ಪಂದ್ಯಗಳ ಸೋಲಿನ ಮುಖಭಂಗ ಅನುಭವಿಸಿದೆ.

ಮೊದಲ ಇನಿಂಗ್ಸ್‌ನಲ್ಲಿ 157 ರನ್‌ಗಳ ಮುನ್ನಡೆ ಪಡೆದಿದ್ದ ಪ್ರವಾಸಿ ತಂಡವು ಎರಡನೇ ಇನಿಂಗ್ಸ್‌ನಲ್ಲಿ ರೂಟ್, ಬೆನ್ ಡಕೆಟ್ (92;112ಎ) ಮತ್ತು ಜೇಕಬ್ ಬೆಥೆಲ್ (96;118) ಅವರ ಬ್ಯಾಟಿಂಗ್ ನೆರವಿನಿಂದ 82.3 ಓವರ್‌ಗಳಲ್ಲಿ 6 ವಿಕೆಟ್‌ಗೆ 427 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು.

ಗೆಲುವಿಗೆ 583 ರನ್‌ಗಳ ಕಠಿಣ ಗುರಿಯನ್ನು ಪಡೆದ ಆತಿಥೇಯ ತಂಡವು 54.2 ಓವರ್‌ಗಳಲ್ಲಿ 259 ರನ್ ಗಳಿಸಿ ಹೋರಾಟ ಮುಗಿಸಿತು. ಕಿವೀಸ್ ಪರ ವಿಕೆಟ್ ಕೀಪರ್ ಟಾಮ್ ಬ್ಲಂಡೆಲ್ (115;102ಎ, 4x13, 6x5) ಏಕಾಂಗಿ ಹೋರಾಟ ನಡೆಸಿದರೂ ಗೆಲುವಿಗೆ ಸಾಕಾಗಲಿಲ್ಲ. ಇಂಗ್ಲೆಂಡ್ ನಾಯಕ ಬೆನ್ ಸ್ಟೋಕ್ಸ್ ಮೂರು ವಿಕೆಟ್ ಪಡೆದು ಮಿಂಚಿದರು.



ಶತಕ ದಾಖಲಿಸಿದ ಸಂಭ್ರಮದಲ್ಲಿ ಜೋ ರೂಟ್ –ಎಪಿ/ ಪಿಟಿಐ ಚಿತ್ರ

ಸರಣಿಯ ಕೊನೆಯ ಟೆಸ್ಟ್ ಪಂದ್ಯ ಹ್ಯಾಮಿಲ್ಟನ್‌ನಲ್ಲಿ ಶನಿವಾರ ಆರಂಭವಾಗಲಿದೆ.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಇಂಗ್ಲೆಂಡ್: 54.4 ಓವರ್‌ಗಳಲ್ಲಿ 280. ನ್ಯೂಜಿಲೆಂಡ್: 34.5 ಓವರ್‌ಗಳಲ್ಲಿ 125. ಎರಡನೇ ಇನಿಂಗ್ಸ್: ಇಂಗ್ಲೆಂಡ್: 82.3 ಓವರ್‌ಗಳಲ್ಲಿ 6 ವಿಕೆಟ್‌ಗೆ 427 ಡಿಕ್ಲೇರ್ (ಬೆನ್ ಡಕೆಟ್ 92, ಜೇಕಬ್ ಬೆಥೆಲ್ 96, ಜೋ ರೂಟ್ 106, ಹ್ಯಾರಿ ಬ್ರೂಕ್ 55, ಬೆನ್ ಸ್ಟೋಕ್ಸ್ ಔಟಾಗದೇ 49; ಟಿಮ್ ಸೌಥಿ 72ಕ್ಕೆ 2). ನ್ಯೂಜಿಲೆಂಡ್: 54.2 ಓವರ್‌ಗಳಲ್ಲಿ 259 (ಡ್ಯಾರಿಲ್ ಮಿಚೆಲ್ 32, ಟಾಮ್ ಬ್ಲಂಡೆಲ್ 115, ನೇಥನ್ ಸ್ಮಿತ್ 42; ಕ್ರಿಸ್ ವೋಕ್ಸ್ 20ಕ್ಕೆ 2, ಬೆನ್ ಸ್ಟೋಕ್ಸ್ 5ಕ್ಕೆ 3). ಫಲಿತಾಂಶ: ಇಂಗ್ಲೆಂಡ್‌ಗೆ 323 ರನ್‌ಗಳ ಜಯ. ಪಂದ್ಯದ ಆಟಗಾರ: ಹ್ಯಾರಿ ಬ್ರೂಕ್

ವಿಶ್ವ ಚೆಸ್ ಚಾಂಪಿಯನ್‌ಷಿಪ್: 11ನೇ ಪಂದ್ಯ ಗೆದ್ದ ಭಾರತದ ಗ್ರ್ಯಾಂಡ್‌ಮಾಸ್ಟರ್

ಲಿರೆನ್ ಪ್ರಮಾದ; ಗುಕೇಶ್‌ಗೆ ಮುನ್ನಡೆ

ಭಾರತದ ಕ್ರೀಡಾಪ್ರೇಮಿಗಳಿಗೆ ಭಾನುವಾರ ಸಾಲು ಸಾಲು ಸೋಲಿನ ಸುದ್ದಿಗಳು ನಿರಾಶೆ ಮೂಡಿಸಿದವು. ಆಸ್ಟ್ರೇಲಿಯಾ ಎದುರಿನ ಟೆಸ್ಟ್, ಮಹಿಳಾ ಏಕದಿನ ಕ್ರಿಕೆಟ್ ಮತ್ತು 19 ವರ್ಷ-ದೊಳಗಿನವರ ಏಷ್ಯಾ ಕಪ್ ಕ್ರಿಕೆಟ್‌ನಲ್ಲಿ ಭಾರತ ತಂಡಗಳು ಸೋತವು. ಆದರೆ ಮುಸ್ಸಂಜೆಯಲ್ಲಿ ಈ ಎಲ್ಲ ನಿರಾಶೆಗಳನ್ನು ಮರೆಸಿದ್ದು ಚೆಸ್ ತಾರೆ ಡಿ. ಗುಕೇಶ್. ವಿಶ್ವ ಚಾಂಪಿಯನ್‌ಷಿಪ್ ಫೈನಲ್‌ನಲ್ಲಿ 11ನೇ ಸುತ್ತಿನ ಪಂದ್ಯದಲ್ಲಿ ಚೀನಾದ ಡಿಂಗ್ ಲಿರೆನ್ ಅವರನ್ನು ಮಣಿಸಿದರು...

ಸಿಂಗಪುರ (ಪಿಟಿಐ): ಅತಿ ಕಿರಿಯ ವಿಶ್ವ ಚೆಸ್ ಚಾಂಪಿಯನ್ ಎಂಬ ಹಿರಿಮೆಗೆ ಪಾತ್ರರಾಗುವ ಹಾದಿಯಲ್ಲಿ ಗ್ರ್ಯಾಂಡ್ ಮಾಸ್ಟರ್ ಡಿ.ಗುಕೇಶ್ ದಾಪುಗಾಲು ಇಟ್ಟರು. ಭಾನುವಾರ ನಡೆದ ವಿಶ್ವ ಚಾಂಪಿಯನ್‌ಷಿಪ್ ಫೈನಲ್‌ನ 11ನೇ ಪಂದ್ಯದಲ್ಲಿ ಹಾಲಿ ಚಾಂಪಿಯನ್, ಚೀನಾದ ಡಿಂಗ್ ಲಿರೆನ್ ಅವರನ್ನು 29 ನಡೆಗಳಲ್ಲಿ ಮಣಿಸಿದ ಗುಕೇಶ್ ಮೊದಲ ಬಾರಿ ಮುನ್ನಡೆ ಪಡೆದರು.

14 ಪಂದ್ಯಗಳ ಫೈನಲ್‌ನಲ್ಲಿ ಇನ್ನು ಮೂರೇ ಪಂದ್ಯಗಳು ಉಳಿದಿರುವಂತೆ, 18 ವರ್ಷ ವಯಸ್ಸಿನ ಭಾರತದ ಆಟಗಾರ 6-5 ರಲ್ಲಿ ಮುನ್ನಡೆ ಸಾಧಿಸಿದ್ದಾರೆ. ಗುಕೇಶ್ ಈ ಪಂದ್ಯದಲ್ಲಿ ಗೆಲುವಿನ ಮೂಲಕ ಹೊಸದೊಂದು ದಾಖಲೆ ಬರೆದರು. ಇದುವರೆಗೆ ವಿಶ್ವ ಚೆಸ್ ಚಾಂಪಿಯನ್‌ಷಿಪ್ ಇತಿಹಾಸದಲ್ಲಿ 10 ಪಂದ್ಯಗಳ ನಂತರ ಸ್ಕೋರ್ 5-5 ರಲ್ಲಿ ಸಮನಾದ ನಂತರ ಯಾವುದೇ ಚಾಲೆಂಜರ್ ಜಯ ಸಾಧಿಸಿರಲಿಲ್ಲ. ಈ ನಿರ್ಣಾಯಕ ಫಲಿತಾಂಶದ ಮೂಲಕ ಸತತ ಏಳು ಆಟಗಳ ಡ್ರಾ ಸರಪಣಿ ಮುರಿಯಿತು.

ಲಿರೆನ್‌ಗೆ ಈಗ ಇರುವ ಒಂದು ವಿಶ್ವಾಸದ ಎಳೆ ಎಂದರೆ- ಈ ಹಿಂದಿನ (2023ರ) ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಅವರು ರಷ್ಯಾದ ಇಯಾನ್ ನಿಪೊಮ್‌ನಿಷಿ ವಿರುದ್ಧ 12ನೇ ಪಂದ್ಯದಲ್ಲಿ ಜಯಗಳಿಸಿದ ಹಿನ್ನೆಲೆ ಹೊಂದಿರುವುದು. ನಂತರ ಆ ಫೈನಲ್ ಟೈಬ್ರೇಕರ್‌ಗೆ ಹೋಗಿತ್ತು.



11ನೇ ಪಂದ್ಯದಲ್ಲಿ ಸೋತ ನಂತರ ಲಿರೆನ್ ಅವರು ಗುಕೇಶ್ ಅವರಿಗೆ ಹಸ್ತಲಾಘವ ನೀಡಿದರು. ಫಿಡೆ ವೆಬ್‌ಸೈಟ್ ಚಿತ್ರ

ಗುಕೇಶ್ ಈ ಪಂದ್ಯದಲ್ಲಿ ಬಿಳಿ ಕಾಯಿಗಳಲ್ಲಿ ಆಡಿದರು. ಐದು ನಡೆಗಳ ನಂತರ ಗುಕೇಶ್ ಅವರಿಗೆ ಕ್ಲಾಕ್‌ನಲ್ಲಿ ಚೀನಾ ಎದುರಾಳಿಗಿಂತ ಒಂದು ಗಂಟೆ ಹೆಚ್ಚು ಸಮಯ ಉಳಿದಿತ್ತು.

ಲಿರೆನ್ ಆರಂಭದಲ್ಲಿ ಕೊಂಚ ಅನುಕೂಲಕರ ಸ್ಥಿತಿಯಲ್ಲಿದ್ದಂತೆ ಕಂಡರು. ಆದರೆ ಅವರ 15ನೇ ನಡೆ (ಜಿ6) ಉತ್ತಮವಾಗಿರಲಿಲ್ಲ. ಇದರಿಂದ ಮೇಲುಗೈ ಹೋಗಿ ಆಟ ಸಮಬಲದ ಸ್ಥಿತಿಗೆ ತಲುಪಿತು. ಈ ಹಂತದಲ್ಲಿ (ಮಿಡ್ಲ್ ಗೇಮ್) ಗುಕೇಶ್ ಕೂಡ ನಡೆಗಳಿಗೆ ಮೊದಲಿಗಿಂತ ಸ್ವಲ್ಪ ಹೆಚ್ಚೇ ಸಮಯ ಬಳಸಿ ಚೇತರಿಸಿಕೊಂಡರು.

ಆದರೆ, ಫೈನಲ್‌ನ ಕೆಲ ಪಂದ್ಯಗಳಂತೆ ಈ ಪಂದ್ಯದಲ್ಲೂ ಲಿರೆನ್ ಸಮಯದ ಒತ್ತಡಕ್ಕೆ ಒಳಗಾದರು. ಏಳು ನಿಮಿಷದಲ್ಲಿ 12 ನಡೆಗಳನ್ನು ಇರಿಸಬೇಕಾದ ಒತ್ತಡಕ್ಕೆ ಅವರು ಸಿಲುಕಿದರು. ಕ್ಲಾಸಿಕಲ್ ಮಾದರಿಯ ಆಟದ ನಿಯಮದಂತೆ ಮೊದಲ ಎರಡು ಗಂಟೆಗಳಲ್ಲಿ ಆಟಗಾರರು 40 ನಡೆಗಳನ್ನು ಪೂರೈಸಿರಬೇಕಾಗುತ್ತದೆ. ಈ ಒತ್ತಡದಲ್ಲಿ ಲಿರೆನ್ ಪ್ರಮಾದ ಎಸಗಿದರು. ಅವರು 28ನೇ ನಡೆಯಲ್ಲಿ 'ಕ್ವೀನ್ ಸಿ8' ಆಡಿದ್ದು ದುಬಾರಿಯಾಯಿತು. ಆ ವೇಳೆ ಎನ್‌ಬಿ4 (ಅಶ್ವದ) ನಡೆ ಸೂಕ್ತವಾಗಿರುತಿತ್ತು. ಆ ತಪ್ಪಿನಿಂದ ಗುಕೇಶ್‌ಗೆ ಗೆಲುವಿನ ಅವಕಾಶ ಹೆಚ್ಚಾಯಿತು. ನಿರಾಶರಾದ ಲಿರೆನ್ ಮುಂದಿನ ನಡೆ ಇರಿಸದೇ ಪಂದ್ಯ ಬಿಟ್ಟುಕೊಟ್ಟರು.

'ನನ್ನ ಪಾಲಿಗೆ ಈ ಪಂದ್ಯ ತುಂಬಾ ಕಠಿಣವಾಯಿತು. ಕೆಲಸಕ್ಕೆ ಬಾರದ ವೇರಿಯೇಷನ್‌ಗಳ ಬಗ್ಗೆ ಯೋಚಿಸಿ ನಾನು ಸಮಯ ವ್ಯರ್ಥ ಮಾಡಿದೆ' ಎಂದು ಬೇಸರದಲ್ಲಿದ್ದ ಲಿರೆನ್ ಪಂದ್ಯದ ನಂತರ ಪ್ರತಿಕ್ರಿಯಿಸಿದರು.

ಮುಂದಿನ ಮೂರು ಪಂದ್ಯಗಳಲ್ಲಿ ಲಿರೆನ್‌ಗೆ ಎರಡರಲ್ಲಿ ಬಿಳಿ ಕಾಯಿಗಳಲ್ಲಿ ಆಡುವ ಅವಕಾಶವಿದೆ. ಪುನರಾಗಮನ ಮಾಡಲು ಅವರಿಗೆ ಇದು ಅವಕಾಶ. ಮೂರು ಪಂದ್ಯ ಡ್ರಾ ಮಾಡಿಕೊಂಡರೂ ಗುಕೇಶ್ ಮೊದಲ ಬಾರಿ ಚಾಂಪಿಯನ್ ಆಗಲಿದ್ದಾರೆ. ಸೋಮವಾರ 12ನೇ ಪಂದ್ಯ ನಡೆಯಲಿದೆ.

ಮಹಿಳಾ ಜೂನಿಯರ್ ಹಾಕಿ: ಭಾರತ ಶುಭಾರಂಭ

ಮಸ್ಕತ್ (ಪಿಟಿಐ): ಮುಮ್ತಾಜ್ ಖಾನ್, ಕನಿಕಾ ಸಿವಾಚ್ ಮತ್ತು ದೀಪಿಕಾ ಅವರ ಅಮೋಘ ಆಟದ ಬಲದಿಂದ ಹಾಲಿ ಚಾಂಪಿಯನ್ ಭಾರತ ತಂಡವು ಮಹಿಳೆಯರ ಜೂನಿಯರ್ ಏಷ್ಯಾ ಕಪ್ ಹಾಕಿ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಭಾನುವಾರ ನಡೆದ 'ಎ' ಗುಂಪಿನ ಮೊದಲ ಪಂದ್ಯದಲ್ಲಿ ಭಾರತದ ವನಿತೆಯರು 13-1ರಿಂದ ಬಾಂಗ್ಲಾದೇಶ ತಂಡವನ್ನು ಮಣಿಸಿದರು.

ಮುಮ್ತಾಜ್ (27ನೇ, 32ನೇ, 53ನೇ ಮತ್ತು 58ನೇ ನಿಮಿಷ) ನಾಲ್ಕು ಗೋಲು ಗಳಿಸಿದರೆ, ಕನಿಕಾ (12ನೇ, 51ನೇ ಮತ್ತು 52ನೇ ನಿ.) ಹಾಗೂ ದೀಪಿಕಾ (7ನೇ, 20ನೇ ಮತ್ತು 55ನೇ ನಿ) ಹ್ಯಾಟ್ರಿಕ್ ಸಾಧನೆ ಮಾಡಿದರು.

ಉಳಿದಂತೆ ಮನೀಷಾ (10ನೇ ನಿ), ಬ್ಯೂಟಿ ಡಂಗ್ ಡಂಗ್ (33ನೇ ನಿ), ಉಪನಾಯಕಿ ಸಾಕ್ಷಿ ರಾಣಾ (43ನೇ) ತಲಾ ಒಂದು ಬಾರಿ ಚೆಂಡನ್ನು ಗುರಿ ಸೇರಿಸಿದರು. ಬಾಂಗ್ಲಾ ಪರ ಏಕೈಕ ಗೋಲನ್ನು ಒರ್ಪಿತಾ ಪಾಲ್ (12ನೇ ನಿ) ಗೋಲು ದಾಖಲಿಸಿದರು.

ಭಾರತ ಸೋಮವಾರ ಎರಡನೇ ಪಂದ್ಯದಲ್ಲಿ ಮಲೇಷ್ಯಾ ತಂಡವನ್ನು ಎದುರಿಸಲಿದೆ.

ಭಾರತ ತಂಡವು ಪ್ರಶಸ್ತಿ ಉಳಿಸಿಕೊಳ್ಳುವ ಜೊತೆಗೆ ಮುಂದಿನ ವರ್ಷ ಚಿಲಿಯ ಸ್ಯಾಂಟಿಯಾಗೊದಲ್ಲಿ ನಡೆಯಲಿರುವ ಜೂನಿಯರ್ ವಿಶ್ವಕಪ್‌ಗೆ ನೇರವಾಗಿ ಅರ್ಹತೆ ಪಡೆಯುವ ಪ್ರಯತ್ನದಲ್ಲಿದೆ.

ಟೂರ್ನಿಯಲ್ಲಿ ಸೆಮಿಫೈನಲ್ ಪ್ರವೇಶಿಸುವ ನಾಲ್ಕು ತಂಡಗಳು ವಿಶ್ವಕಪ್‌ಗೆ ಪ್ರವೇಶ ಪಡೆಯಲಿವೆ.

ಬಾರ್ಡರ್–ಗಾವಸ್ಕರ್ ಟ್ರೋಫಿ: ಪ್ಯಾಟ್ ಕಮಿನ್ಸ್ ಬಳಗಕ್ಕೆ ಸುಲಭ ಜಯ: ಭಾರತಕ್ಕೆ ನಿರಾಸೆ

ಪಿಂಕ್ ಬಾಲ್ ಟೆಸ್ಟ್: ಆಸ್ಟ್ರೇಲಿಯಾ ಬೆಸ್ಟ್

• ಮಧು ಜವಳಿ

ಅಡಿಲೇಡ್: ಭಾರತ ತಂಡವು ಈ ಸಲ ಇಲ್ಲಿ ಮೂವತ್ತಾರು ರನ್‌ಗಳಿಗೆ ಆಲೌಟ್ ಆಗಲಿಲ್ಲ. ಆದರೆ ಈಗ ಅನುಭವಿಸಿರುವ ಸೋಲು ಆ ದಿನಕ್ಕಿಂತ ಭಿನ್ನವೇನಲ್ಲ. ಇಲ್ಲಿ ಹೋದ ಬಾರಿ ಆಡಿದಂತೆಯೇ ಈಗಲೂ ಆಡಿದರು. ಇದರಿಂದಾಗಿ ಪಿಂಕ್ ಬಾಲ್ ಟೆಸ್ಟ್ ಪಂದ್ಯದ ಮೂರನೇ ದಿನದ ಬೆಳಿಗ್ಗೆಯೇ ಭಾರತ ತಂಡ ಸೋಲನುಭವಿಸಿತು. ಆಸ್ಟ್ರೇಲಿಯಾ ತಂಡವು ಬಾರ್ಡರ್ ಗಾವಸ್ಕರ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ 1-1ರ ಸಮಬಲ ಸಾಧಿಸಿತು.

ಪಂದ್ಯದ ಎರಡನೇ ದಿನವಾದ ಶನಿವಾರ ಆತಿಥೇಯ ಆಸ್ಟ್ರೇಲಿಯಾ 157 ರನ್‌ಗಳ ಮೊದಲ ಇನಿಂಗ್ಸ್ ಮುನ್ನಡೆ ಸಾಧಿಸಿತ್ತು. ಅದಕ್ಕುತ್ತರವಾಗಿ ದಿನದಾಟದ ಅಂತ್ಯಕ್ಕೆ ರೋಹಿತ್ ಪಡೆಯು 128 ರನ್‌ಗಳಿಗೆ 5 ವಿಕೆಟ್ ಕಳೆದುಕೊಂಡು ಸಂಕಷ್ಟಕ್ಕೊಳಗಾಗಿತ್ತು. ಮೂರನೇ ದಿನವಾದ ಭಾನುವಾರ ಬೆಳಿಗ್ಗೆ ಆರ್. ಅಶ್ವಿನ್ ಔಟಾದಾಗ ತಂಡದ ಮೊತ್ತ 7ಕ್ಕೆ 148 ಆಗಿತ್ತು. ಈ ಸಂದರ್ಭದಲ್ಲಿ ನಿತೀಶ್ ರೆಡ್ಡಿ ಒಂದಿಷ್ಟು ಬೀಸಾಟವಾಡಿದರು. ಅದರಿಂದಾಗಿ ಭಾರತದ ಇನಿಂಗ್ಸ್ 175 ರನ್‌ಗಳವರೆಗೂ ಬೆಳೆಯಿತು. ಆಸ್ಟ್ರೇಲಿಯಾಕ್ಕೆ 19 ರನ್‌ಗಳ ಗೆಲುವಿನ ಗುರಿಯೊಡ್ಡಿತು. ನೇಥನ್ ಮೆಕ್‌ಸ್ವೀನಿ (ಔಟಾಗದೆ 10) ಮತ್ತು ಉಸ್ಮಾನ್ ಖ್ವಾಜಾ (ಔಟಾಗದೆ 9) ತಂಡವನ್ನು ಗೆಲುವಿನ ದಡ ಸೇರಿಸಿದರು.

ಅಡಿಲೇಡ್ ಓವಲ್ ಕ್ರೀಡಾಂಗಣದಲ್ಲಿ ಆತಿಥೇಯ ನಾಯಕ ಪ್ಯಾಟ್ ಕಮಿನ್ಸ್ (57ಕ್ಕೆ5) ಐದು ವಿಕೆಟ್ ಗೊಂಚಲು ಗಳಿಸಿದರು. ಅದರೊಂದಿಗೆ ಈಚೆಗೆ ಪರ್ತ್ ಟೆಸ್ಟ್‌ನಲ್ಲಿ ತಮ್ಮ ತಂಡ ಅನುಭವಿಸಿದ್ದ 295 ರನ್‌ಗಳ ಸೋಲಿನ ಕಹಿ ಮರೆಸಿದರು.

ಹಾಗೆ ನೋಡಿದರೆ; ಈ ಪಂದ್ಯದ ಎರಡನೇ ದಿನವಾದ ಶನಿವಾರವೇ ಆಸ್ಟ್ರೇಲಿಯಾ ತಂಡವು ಭಾರತದ ಕೈಯಿಂದ ಗೆಲುವನ್ನು ಕಸಿದುಕೊಂಡಿತ್ತು. ದಿನದಾಟ ಮುಗಿಯುವಷ್ಟರಲ್ಲಿ ಪ್ರವಾಸಿ ತಂಡದ ಎಲ್ಲ ಪ್ರಮುಖ ಬ್ಯಾಟರ್‌ಗಳ ವಿಕೆಟ್‌ಗಳನ್ನು ಆತಿಥೇಯರು ತಮ್ಮ ಬುಟ್ಟಿಗೆ ಹಾಕಿಕೊಂಡಿದ್ದರು.



ಆಸ್ಟ್ರೇಲಿಯಾ ನಾಯಕ ಪ್ಯಾಟ್ ಕಮಿನ್ಸ್ ಮತ್ತು ಮಿಚೆಲ್ ಸ್ಟಾರ್ಕ್ ಸಂಭ್ರಮ – ಎಎಫ್‌ಪಿ ಚಿತ್ರ

ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ ಪಾಯಿಂಟ್‌ಪಟ್ಟಿ

ಸ್ಥಾನ	ತಂಡ	ಪಂದ್ಯ	ಗೆಲುವು	ಸೋಲು	ಡ್ರಾ	ಪಾಯಿಂಟ್ಸ್	%
1	ಆಸ್ಟ್ರೇಲಿಯಾ	14	9	4	1	102	60.71
2	ದಕ್ಷಿಣ ಆಫ್ರಿಕಾ	9	5	3	1	64	59.26
3	ಭಾರತ	16	9	6	1	110	57.29
4	ಶ್ರೀಲಂಕಾ	10	5	5	0	60	50.00
5	ಇಂಗ್ಲೆಂಡ್	21	11	9	1	114	45.25

ಪರಿಣತ ಬ್ಯಾಟರ್ ರೂಪದಲ್ಲಿ ರಿಷಭ್ ಪಂತ್ (28 ರನ್) ಪಂತ್ ಮತ್ತು ಕೊನೆಯಲ್ಲಿ ಅಬ್ಬರಿಸುವ ಆಲ್‌ರೌಂಡರ್ ನಿತೀಶ್ ರೆಡ್ಡಿ (42; 47ಎ, 4X6, 6X1) ಅವರಿಬ್ಬರೇ ಮೂರನೇ ದಿನದಾಟದಲ್ಲಿ ತಮ್ಮ ಹಾದಿಗೆ ಅಡ್ಡಿಯಾಗುವ ಆಟಗಾರರು ಎಂಬುದು ಕಮಿನ್ಸ್ ಬಳಗಕ್ಕೂ ಅರಿವಿತ್ತು.

ತಾವು ಕ್ರೀಸ್‌ಗೆ ಬಂದು ಎದುರಿಸಿದ ಮೊದಲ ಎಸೆತವನ್ನೇ ಪಂತ್ ಮುನ್ನುಗ್ಗಿ ಬೌಂಡರಿಗೆರೆ ದಾಟಿಸಿದ್ದರು. ನಂತರ ತಮ್ಮ ಅಚ್ಚುಮೆಚ್ಚಿನ ರೋಲ್ ಓವರ್ ರಿವರ್ಸ್ ಸ್ಲ್ಯಾಪ್ ಕೂಡ ಆಡಿದ್ದರು. ಕ್ರೀಸ್‌ನಲ್ಲಿ ಒಂದು ಗಂಟೆಗೂ ಹೆಚ್ಚು ಕಾಲ ಅವರಿದ್ದರು. ಹೊನಲು ಬೆಳಕಿನಲ್ಲಿ ಪಿಂಕ್ ಬಾಲ್ ಎದುರಿಸುವ ಕಠಿಣ ಸವಾಲಿಗೆ ಎದೆಯೊಡ್ಡಿದ್ದರು. ಆದರೆ 26 ವರ್ಷದ ಪಂತ್ ಅವರು ಮೂರನೇ ದಿನ ಹೆಚ್ಚು ಹೊತ್ತು ನಿಲ್ಲಲಿಲ್ಲ.

ಇದಾದ ಮೇಲೆ ಕಮಿನ್ಸ್ ಅವರು ಬೌನ್ಸರ್ ಎಸೆತಗಳನ್ನು ಸಾಲುಸಾಲಾಗಿ ಪ್ರಯೋಗಿಸಿದರು.

ಅಶ್ವಿನ್ ಹಾಗೂ ರಾಣಾ ಅವರ ವಿಕೆಟ್‌ಗಳನ್ನು ಕಬಳಿಸಿದರು. ಇನ್ನೊಂದೆಡೆ ಸ್ಕಾಟ್ ಬೋಲ್ಯಾಂಡ್ (51ಕ್ಕೆ3) ಅವರ ಎಸೆತದಲ್ಲಿ ಸಿರಾಜ್ ಅವರು ಟ್ರಾವಿಸ್ ಹೆಡ್‌ಗೆ ಕ್ಯಾಚ್ ಆಗುವುದರೊಂದಿಗೆ ಇನಿಂಗ್ಸ್‌ಗೆ ತೆರೆಬಿತ್ತು. ಆಸ್ಟ್ರೇಲಿಯಾ ತಂಡವು ಪಕ್ಕಾ ವೃತ್ತಿಪರವಾಗಿ ಆಡಿ ಗಮನ ಸೆಳೆಯಿತು. ಅಡಿಲೇಡ್‌ಗೆ ಬರುವ ಮುನ್ನ ಸೋಲಿನ ಕಹಿ ಮತ್ತು ಟೀಕೆಗಳ ಬಿಸಿ ಅನುಭವಿಸಿತ್ತು. ಇಲ್ಲಿ ಏನಾದರೂ ಸೋತಿದ್ದರೆ ತಂಡವು ಮತ್ತಷ್ಟು ಪಾತಾಳಕ್ಕೆ ಇಳಿಯುವ ಅತಂಕದಲ್ಲಿತ್ತು. ಆದರೆ ಶುಕ್ರವಾರ ಮಧ್ಯಾಹ್ನ ಆರಂಭವಾದ ಪಂದ್ಯದ ಮೊದಲ ಎಸೆತದಿಂದಲೇ ತನ್ನ ಸಾಮರ್ಥ್ಯವನ್ನು ಅಚ್ಚುಕಟ್ಟಾಗಿ ತೋರಿಸಿತು.

ಆದರೆ ಭಾರತ ತಂಡವು ಬ್ಯಾಟಿಂಗ್ ಮತ್ತು ಬೌಲಿಂಗ್ ಎರಡಕ್ಕೂ ಅನುಕೂಲಕರವಾದ ವಾತಾವರಣ ಸಿಕ್ಕರೂ ಸದುಪಯೋಗಪಡಿಸಿಕೊಳ್ಳುವಲ್ಲಿ ವಿಫಲವಾಯಿತು.

ಪಿಂಕ್ ಬಾಲ್ ಕ್ರಿಕೆಟ್‌ನಲ್ಲಿ ಭಾರತದ ಆಟಗಾರರ ಅನುಭವದ ಕೊರತೆ ಮತ್ತು ತಂತ್ರಗಾರಿಕೆಯ ವೈಫಲ್ಯ ಎದ್ದುಕಂಡಿತು. ಬ್ಯಾಟರ್‌ಗಳು ತಮ್ಮ ಸಾಮರ್ಥ್ಯಕ್ಕೆ ತಕ್ಕ ಆಟವಾಡಲಿಲ್ಲ. ಬೌಲರ್‌ಗಳೂ ಅಷ್ಟೇನೂ ಶಿಸ್ತಾಗಿ ಇರಲಿಲ್ಲ.

ಸರಣಿಯಲ್ಲಿ ಇನ್ನೂ ಬಹಳಷ್ಟು ಕ್ರಿಕೆಟ್ ಉಳಿದಿದೆ. ಮೂರನೇ ಪಂದ್ಯವು ಬ್ರಿಸ್ಬೇನ್‌ನಲ್ಲಿ ನಡೆಯಲಿದೆ. ಅದೇ ತಾಣದಲ್ಲಿ ಭಾರತ ತಂಡವು ವರ್ಷಗಳ ಹಿಂದೆ ಸರಣಿ ಗೆಲುವಿನ ಸಿಹಿ ಸವಿದಿತ್ತು.


ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ: 180 (44.1 ಓವರ್‌ಗಳಲ್ಲಿ)
ಆಸ್ಟ್ರೇಲಿಯಾ: 337 (87.3 ಓವರುಗಳಲ್ಲಿ): ಎರಡನೇ ಇನಿಂಗ್ಸ್: ಭಾರತ 175 (36.5 ಓವರ್‌ಗಳಲ್ಲಿ) (ಶನಿವಾರ 24 ಓವರ್‌ಗಳಲ್ಲಿ 5 ವಿಕೆಟ್‌ಗೆ 128)
ಪಂತ್ ಸಿ ಸ್ಮಿತ್ ಬಿ ಸ್ಟಾರ್ಕ್ 28 (31ಎ, 4x5)
ನಿತೀಶ್ ರೆಡ್ಡಿ ಸಿ ಮೆಕ್‌ಸ್ವೀನಿ ಬಿ ಕಮಿನ್ಸ್ 42 (47ಎ, 4x6, 6x1)
ಅಶ್ವಿನ್ ಸಿ ಕ್ಯಾರಿ ಬಿ ಕಮಿನ್ಸ್ 7 (14ಎ)
ಹರ್ಷಿತ್ ಸಿ ಖ್ವಾಜಾ ಬಿ ಕಮಿನ್ಸ್ 0 (12)
ಬೂಮ್ರಾ ಔಟಾಗದೇ 2 (5ಎ)
ಸಿರಾಜ್ ಸಿ ಹೆಡ್ ಬಿ ಬೋಲ್ಯಾಂಡ್ 7 (8ಎ, 4x1)
ಇತರೆ: 13 (ಬೈ 5, ಲೆಗ್‌ಬೈ 2, ನೋಬಾಲ್ 3, ವೈಡ್ 3)
ವಿಕೆಟ್ ಪತನ: 6-128 (ರಿಷಭ್ ಪಂತ್, 24.6), 7-148 (ರವಿಚಂದ್ರನ್ ಅಶ್ವಿನ್, 29.4), 8-153 (ಹರ್ಷಿತ್ ರಾಣಾ, 33.3), 9-166 (ನಿತೀಶ್ ಕುಮಾರ್ ರೆಡ್ಡಿ, 35.2), 10-175 (ಮಹಮ್ಮದ್ ಸಿರಾಜ್, 36.5)
ಬೌಲಿಂಗ್: ಮಿಚೆಲ್ ಸ್ಟಾರ್ಕ್ 14-1-60-2; ಪ್ಯಾಟ್ ಕಮಿನ್ಸ್ 14-0-57-5; ಸ್ಕಾಟ್ ಬೋಲ್ಯಾಂಡ್ 8.5-0-51-3.
ಆಸ್ಟ್ರೇಲಿಯಾ: ವಿಕೆಟ್ ನಷ್ಟವಿಲ್ಲದೆ 19 (3.2 ಓವರ್‌ಗಳಲ್ಲಿ)
ಮೆಕ್‌ಸ್ವೀನಿ ಔಟಾಗದೇ 10 (12ಎ, 4x2)
ಖ್ವಾಜಾ ಔಟಾಗದೇ 9 (8ಎ. 4x1)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 1-0-2-0, ಮೊಹಮ್ಮದ್ ಸಿರಾಜ್ 1.2-0-9-0, ನಿತೀಶ್ ಕುಮಾರ್ ರೆಡ್ಡಿ 1-0-8-0
ಪಂದ್ಯದ ಆಟಗಾರ: ಟ್ರಾವಿಸ್ ಹೆಡ್

ಫಲಿತಾಂಶ: ಆಸ್ಟ್ರೇಲಿಯಾಕ್ಕೆ 10 ವಿಕೆಟ್ ಜಯ, ಸರಣಿ 1-1 ಸಮ

'ಎರಡೂ ಕಡೆಯಿಂದ ಬೂಮ್ರಾ ಬೌಲಿಂಗ್ ಅಸಾಧ್ಯ'

ಅಡಿಲೇಡ್ (ಪಿಟಿಐ): ಜಸ್‌ಪ್ರೀತ್ ಬೂಮ್ರಾ ಅವರೂ ಮನುಷ್ಯ. ಪ್ರತಿಬಾರಿಯೂ ತಂಡಕ್ಕೆ ಗೆಲುವು ತಂದುಕೊಡುವ ಹೊಣೆ ಅವರೊಬ್ಬರೇ ಹೊರಬೇಕಿಲ್ಲ. ಪಿಚ್‌ನ ಎರಡೂ ಕಡೆಯಿಂದ ಅವರೊಬ್ಬರೇ ಬೌಲಿಂಗ್ ನಿರ್ವಹಿಸಲು ಸಾಧ್ಯವಿಲ್ಲ. ಉಳಿದವರೂ ಜವಾಬ್ದಾರಿ ನಿಭಾಯಿಸಬೇಕು ಎಂದು ಭಾರತ ತಂಡದ ನಾಯಕ ರೋಹಿತ್ ಶರ್ಮಾ ಖಾರವಾಗಿ ಪ್ರತಿಕ್ರಿಯಿಸಿದ್ದಾರೆ.



ನಾಯಕ ರೋಹಿತ್ ಶರ್ಮಾ

ಭಾರತ ತಂಡವು ಭಾನುವಾರ ಆಸ್ಟ್ರೇಲಿಯಾ ಎದುರು 10 ವಿಕೆಟ್‌ಗಳಿಂದ ಟೆಸ್ಟ್ ಪಂದ್ಯ ಸೋತ ನಂತರ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

'ತಂಡದಲ್ಲಿ ಕೇವಲ ಒಬ್ಬ ಬೌಲರ್ ಅಲ್ಲ . ಬೇರೆ ಬೌಲರ್‌ಗಳೂ ಇದ್ದಾರೆ. ಅವರೂ ಜವಾಬ್ದಾರಿ ನಿಭಾಯಿಸಬೇಕು. ಅದು ಸಿರಾಜ್, ಹರ್ಷಿತ್ ರಾಣಾ, ನಿತೀಶ್ ರೆಡ್ಡಿ, ಆಕಾಶ್ ದೀಪ್ ಅಥವಾ ಪ್ರಸಿದ್ಧ (ಕೃಷ್ಣ) ಅವರೆಲ್ಲರೂ ಇದ್ದಾರೆ' ಎಂದು ಬೌಲಿಂಗ್ ವಿಭಾಗಕ್ಕೆ ಸ್ಪಷ್ಟ ಸಂದೇಶ ರವಾನಿಸಿದರು.

'ಇದರಲ್ಲಿ ಕೆಲವರು ಈಗ ಟೆಸ್ಟ್ ಕ್ರಿಕೆಟ್‌ಗೆ ಬಂದಿದ್ದಾರೆ. ಅವರಿಗೆ ಅನುಭವ ಕಡಿಮೆ ಇದೆ. ಅವರಿಗೆ ಆತ್ಮವಿಶ್ವಾಸ ಬೆಳೆಯುವಂತೆ ಮಾಡಬೇಕು. ಅವರು ಪಂದ್ಯ ಆಡಲು ಕಣಕ್ಕಿಳಿದಾಗ ವಿಶ್ವಾಸವಿಟ್ಟು ನಡೆಸಿಕೊಳ್ಳಬೇಕು. ನಾವು ಸತತವಾಗಿ ಅವರೊಂದಿಗೆ ಯೋಜಿಸುತ್ತೇವೆ ಮತ್ತು ಚರ್ಚಿಸುತ್ತೇವೆ. ಆದರೆ ಬೂಮ್ರಾ ಅವರೊಬ್ಬರಿಂದಲೇ ಎಲ್ಲವನ್ನೂ ಬಯಸುವುದು ಸಾಧ್ಯವಿಲ್ಲ. ಬೆಳಿಗ್ಗೆ ಮತ್ತು ಸಂಜೆ, ಎರಡೂ ಬದಿಗಳಿಂದ ಅವರೇ ಬೌಲಿಂಗ್ ಮಾಡಲು ಆಗದು' ಎಂದು ರೋಹಿತ್ ಹೇಳಿದರು. 'ಕಾರ್ಯಭಾರ ನಿರ್ವಹಣೆ ಕುರಿತು ಹೆಚ್ಚು ನಿಗಾ ವಹಿಸುತ್ತೇವೆ. ಬೂಮ್ರಾ ಪ್ರತಿ ಸ್ಪೆಲ್ ಮುಗಿಸಿದಾಗಲೂ ಅವರೊಂದಿಗೆ ಮಾತನಾಡುತ್ತೇನೆ.

ದೈಹಿಕ ಸ್ಥಿತಿಯ ಕುರಿತು ಅವರಿಂದಲೇ ಮಾಹಿತಿ ಪಡೆಯುತ್ತೇನೆ. ಇದು ಐದು ಪಂದ್ಯಗಳ ಸರಣಿ. ಬೂಮ್ರಾ ಎಲ್ಲ ಪಂದ್ಯಗಳಲ್ಲಿಯೂ ಆಡಬೇಕು. ಆದ್ದರಿಂದ ಅವರು ಹೆಚ್ಚು ಉಲ್ಲಸಿತರಾಗಿ ಮತ್ತು ಫಿಟ್ ಆಗಿ ಉಳಿಯಬೇಕು' ಎಂದರು. ಈ ಪಂದ್ಯದಲ್ಲಿ ಹರ್ಷಿತ್ ರಾಣಾ 16 ಓವರ್‌ಗಳಲ್ಲಿ 86 ರನ್ ನೀಡಿ ದುಬಾರಿಯಾದರು.

ಈ ಹಿಂದೆ ಅಂತಹದನ್ನು ನಾವು ಮಾಡಿದ್ದೇವೆ. ಉತ್ತಮ ಸ್ಕೋರ್ ಗಳಿಸಿದಾಗ ಎದುರಾಳಿಯ ಮೇಲೆ ಒತ್ತಡ ಹೆಚ್ಚಿಸಲು ಸಾಧ್ಯವಾಗುತ್ತದೆ' ಎಂದರು.

'ನಾವು ಈ ಪಂದ್ಯದಲ್ಲಿ ಉತ್ತಮವಾಗಿ ಬ್ಯಾಟಿಂಗ್ ಮಾಡಿಲ್ಲ. ಅದು ಅತೀವ ಬೇಸರದ ಸಂಗತಿಯಾಗಿದೆ.

ಮೊದಲ ಇನಿಂಗ್ಸ್‌ನಲ್ಲಿ ಇನ್ನೂ 30-40 ರನ್‌ಗಳನ್ನಾದರೂ ಹೆಚ್ಚು ಗಳಿಸಬೇಕಾಗಿತ್ತು' ಎಂದರು.

ಶಮಿ ಫಿಟ್‌ನೆಸ್ ?

ಅಡಿಲೇಡ್ (ಪಿಟಿಐ): ಬಾರ್ಡರ್-ಗಾವಸ್ಕರ್ ಟ್ರೋಫಿ ಕ್ರಿಕೆಟ್ ಸರಣಿಯ ಕೊನೆಯ ಎರಡು ಟೆಸ್ಟ್‌ಗಳಿಗೆ ಭಾರತ ತಂಡದ ವೇಗಿ ಮೊಹಮ್ಮದ್ ಶಮಿ ಲಭ್ಯರಾಗಲಿದ್ದಾರೆ ಎಂದು ವರದಿಯಾಗಿತ್ತು. ಆದರೆ ಈಗ ಮತ್ತೆ ಅವರ ಫಿಟ್‌ನೆಸ್ ಕುರಿತು ಅನುಮಾನಗಳು ವ್ಯಕ್ತವಾಗುತ್ತಿವೆ.


ರೋಹಿತ್ ಶರ್ಮಾ ನೀಡಿರುವ ಹೇಳಿಕೆ ಇದಕ್ಕೆ ಕಾರಣವಾಗಿವೆ. 'ಶಮಿ ಅವರಿಗಾಗಿ ಭಾರತ ತಂಡದ ದ್ವಾರ ಸದಾ ತೆರೆದಿದೆ. ಆದರೆ ಅವರು ಈಚೆಗೆ ಸೈಯದ್ ಮುಷ್ತಾಕ್ ಅಲಿ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಆಡುವಾಗ ಮಂಡಿಯಲ್ಲಿ ಊತ ಕಾಣಿಸಿಕೊಂಡಿತ್ತು. ಅವರ ಬಗ್ಗೆ ನಮ್ಮ ವೈದ್ಯಕೀಯ ತಂಡ ಕಾಳಜಿ ವಹಿಸಿದೆ. ಅವರ ಫಿಟ್‌ನೆಸ್ ಬಗ್ಗೆ ಬಹಳಷ್ಟು ಎಚ್ಚರಿಕೆ ವಹಿಸುತ್ತಿದ್ದೇವೆ' ಎಂದರು.

19 ವರ್ಷದೊಳಗಿನವರ ಕ್ರಿಕೆಟ್: ಬಾಂಗ್ಲಾಕ್ಕೆ ಏಷ್ಯಾ ಕಪ್

ದುಬೈ (ಪಿಟಿಐ): ಕಳಪೆ ಬ್ಯಾಟಿಂಗ್‌ನಿಂದಾಗಿ ಭಾರತ 19 ವರ್ಷದೊಳಗಿನವರ ತಂಡವು ಏಷ್ಯಾ ಕಪ್ ಗೆಲುವನ್ನು ಕೈಚೆಲ್ಲಿತು.

ಭಾನುವಾರ ಇಲ್ಲಿ ನಡೆದ 19 ವರ್ಷದೊಳಗಿನವರ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಬಾಂಗ್ಲಾದೇಶ ತಂಡವು 59 ರನ್ ಜಯಸಾಧಿಸಿ ಟ್ರೋಫಿಗೆ ಮುತ್ತಿಕ್ಕಿತ್ತು.

ಟಾಸ್ ಗೆದ್ದ ಭಾರತ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಯುದ್ಧಜೀತ್ ಗುಹಾ, ಚೇತನ್ ಶರ್ಮಾ ಮತ್ತು ಹಾರ್ದಿಕ್ ರಾಜ್ ಅವರು ತಲಾ ಎರಡು ವಿಕೆಟ್ ಗಳಿಸಿದರು. ಒಟ್ಟಾರೆ ಭಾರತದ ಬೌಲರ್‌ಗಳು ಸಂಘಟಿತ ಪ್ರದರ್ಶನ ನೀಡಿದರು. ಇದರಿಂದಾಗಿ ಬಾಂಗ್ಲಾ ತಂಡವು 49.1 ಓವರ್‌ಗಳಲ್ಲಿ 198 ರನ್ ಗಳಿಗೆ ಕುಸಿಯಿತು.



ಇಕ್ಬಾಲ್ ಹುಸೇನ್ ಎಮೊನ್

ಆದರೆ ಈ ಸಾಧಾರಣ ಗುರಿಯನ್ನು ಮುಟ್ಟುವಲ್ಲಿ ಭಾರತ ತಂಡದ ಬ್ಯಾಟರ್‌ಗಳು ಎಡವಿದರು. ಬಾಂಗ್ಲಾದ ಇಕ್ಬಾಲ್ ಹುಸೇನ್ ಎಮೊನ್ (24ಕ್ಕೆ3) ಮತ್ತು ಮೊಹಮ್ಮದ್ ಅಜಿಬುಲ್ ಹಕೀಮ್ ತಮೀಮ್ (8ಕ್ಕೆ3) ಅವರಿಬ್ಬರ ಉತ್ತಮ ಬೌಲಿಂಗ್‌ನಿಂದಾಗಿ ಭಾರತ ತಂಡವು 35.2 ಓವರ್‌ಗಳಲ್ಲಿ 139 ರನ್‌ಗಳಿಗೆ ಎಲ್ಲ ವಿಕೆಟ್ ಕಳೆದುಕೊಂಡಿತು.

ಟೂರ್ನಿಯುದ್ದಕ್ಕೂ ಮಿಂಚಿದ್ದ 13 ವರ್ಷ ವಯಸ್ಸಿನ ವೈಭವ್ ಸೂರ್ಯವಂಶಿ (9; 7ಎಸೆತ, 4X2) ಅವರೂ ಬೇಗನೆ ನಿರ್ಗಮಿಸಿದರು. ಉಳಿದ ಬ್ಯಾಟರ್‌ಗಳೂ ವೈಫಲ್ಯ ಅನುಭವಿಸಿದರು. ಕನ್ನಡಿಗ, ಆಲ್‌ರೌಂಡರ್ ಹಾರ್ದಿಕ್ ರಾಜ್ 24 ರನ್ ಗಳಿಸಿದರು. ಮೊಹಮ್ಮದ್ ಅಮನ್ 26 ರನ್ ಹೊಡೆದರು.

ಸಂಕ್ಷಿಪ್ತ ಸ್ಕೋರು: ಬಾಂಗ್ಲಾದೇಶ: 49.1 ಓವರ್‌ಗಳಲ್ಲಿ 198 (ಝುವಾದ್ ಅಬ್ರಾರ್ 20, ಮೊಹಮ್ಮದ್ ಶಿಹಾಬ್ ಜೇಮ್ಸ್ 40, ಮೊಹಮ್ಮದ್ ರಿಝಾನ್ ಹುಸೇನ್ 47, ಫರೀದ್ ಹಸನ್ ಫೈಸಲ್ 39, ಯುದ್ಧಜೀತ್ ಗುಹಾ 29ಕ್ಕೆ2, ಚೇತನ್ ಶರ್ಮಾ 48ಕ್ಕೆ2, ಹಾರ್ದಿಕ್ ರಾಜ್ 41ಕ್ಕೆ2) ಭಾರತ: 35.2 ಓವರ್‌ಗಳಲ್ಲಿ 139 (ಆ್ಯಂಡ್ರೆ ಸಿದ್ಧಾರ್ಥ್ 20, ಕೆಪಿ. ಕಾರ್ತಿಕೇಯ 21, ಮೊಹಮ್ಮದ್ ಅಮನ್ 26, ಹಾರ್ದಿಕ್ ರಾಜ್ 24, ಅಲ್ ಫಹಾದ್ 34ಕ್ಕೆ2, ಇಕ್ಬಾಲ್ ಹುಸೇನ್ ಎಮೊನ್ 24ಕ್ಕೆ3, ಮೊಹಮ್ಮದ್ ಅಜಿಜುಲ್ ಹಕೀಮ್ ತಮೀಮ್ 8ಕ್ಕೆ3) ಫಲಿತಾಂಶ: ಬಾಂಗ್ಲಾದೇಶ ತಂಡಕ್ಕೆ 59 ರನ್‌ಗಳ ಜಯ. ಪಂದ್ಯಶ್ರೇಷ್ಠ: ಇಕ್ಬಾಲ್ ಹುಸೇನ್ ಎಮೊನ್.